ಕಸ್ತೂರಿ



ಮಾರ್ಚ್, ೧೯೬೨

ಬೆಲೆ : ೭೫ ನ.ಪೈ.

ಇಂದಿನ ವಿಶ್ವಕ್ಕೊಂದು ಬೆಳಕಿಂಡಿ

ಪ್ರತಿವಾರವೂ ಹೊಸದರಲ್ಲಿ ಹೊಸದು!

ವಿವಿಧ ವಿಷಯಗಳ ಮೇಲೆ ವಿಚಾರ ಪ್ರಚೋದಕ ಲೇಖನಗಳು ನಿಮಗೆ ಬೇಕಲ್ಲವೆ?
ವಿಷಯ ವೈವಿಧ್ಯದೊಂದಿಗೆ ಲೇಖನಗಳು ನಿಮಗೆ ಮನೋರಂಜನೆಯನ್ನೂ ನೀಡಬೇಕಲ್ಲವೆ?

ಹಾಗಾದರೆ

ಖ್ಯಾತ ಕಾದಂಬರಿಕಾರರಾದ
ತ್ರಿವೇಣಿ ಅವರ
ಸರಸ ಸಾಮಾಜಿಕ ಕಾದಂಬರಿ
" ಕಾಶೀ ಯಾತ್ರೆ "

ಹಾಗಾದರೆ

ಸಚಿತ್ರ ಸಾಪ್ತಾಹಿಕ

ಕರ್ಮವೀರ

ನೀವು ಅವಶ್ಯ ಓದಬೇಕು

ಕೆಲ ವೈಶಿಷ್ಟ್ಯಗಳು :

ನಾನಾ ವಿಷಯಗಳ ಮೇಲೆ ವಿಚಾರ ಪ್ರಚೋದಕ ಮತ್ತು ಮನೋರಂಜಕ ಲೇಖನಗಳು.

ಮುಂಬಯಿ—ಮದ್ರಾಸಗಳ ನಮ್ಮ ವಿಶೇಷ ಪ್ರತಿನಿಧಿಗಳು ಕಳಿಸುವ ತಾಜಾ ಸಿನೇಮಾ ಸುದ್ದಿಗಳು.

ಮಹಿಳೆಯರಿಗೆ, ಬಾಲಕರಿಗೆ ಪ್ರತ್ಯೇಕ ಪುಟಗಳು. ಬಾಲಕರಿಗಾಗಿ "ಎಳೆಯರ ಬಳಗ"

ಮನೋರಂಜಕವಾಗಿರುವ ಸಚಿತ್ರ ಕಥೆ.

ಘ್ಯಾಂಟಮನ ಸಾಹಸ

ದೇಶದ ರಾಜಕಾರಣದ ಪರಿಚಯ ಮಾಡಿಕೊಡುವ ರಾಜ್ಯಗಳ ರಾಜಕಾರಣ, ದಿಲ್ಲಿಯ ಪತ್ರ, ರಾಜ್ಯದ ರಾಜಧಾನಿಯಿಂದ ಮೊದಲಾಗಿ ಸ್ಥಿರಶೀರ್ಷಿಕೆಗಳು.

ರವಿವಾರದ ಸಂಚಿಕೆ ಹಿಂದಿನ ಬುಧವಾರವೇ ನಿಮ್ಮ ಕೈಸೇರುವುದು.

೨೦ ನಯೆ ಪೈಸೆ

೨೪ ಪುಟಗಳು :

ಲೋಕ ಶಿಕ್ಷಣ ಟ್ರಸ್ಟಿನ ಪ್ರಕಟನೆ

ಬಿಳಿಗೂದಲ ಬಲೆಯಿಂದ ಬಿಡಿಸಿಕೊಳ್ಳಿ
ಯಶಸ್ಸಿನ ಆವರಣದ ಒಳಬನ್ನಿ

ಉಪಯೋಗಿಸಿರಿ ವಾಸ್ಮಾಲ್

ಬಿಳಿಗೂದಲನ್ನು ಪುನಃ ನಿಮ್ಮ ಸ್ವಾಭಾವಿಕ ಮಿರುಗುವ ಕಪ್ಪು ಕೂದಲಾಗಿಸಿ **ವಾಸ್ಮಾಲ್** ನಿಮ್ಮನ್ನು ಕಿರಿಯರಂತೆ ಕಾಣಿಸುವಂತೆ, ಭಾವಿಸುವಂತೆ, ಅಧಿಕ ಆಕರ್ಷಕರನ್ನಾಗಿ ಮಾಡುವದಲ್ಲದೆ, ಹೆಚ್ಚಿನ ಪ್ರಗತಿಪಥದಲ್ಲಿ ಮುನ್ನಡೆಸುತ್ತದೆ. ಒಂದು ಪ್ರಾಮಾಣಿಕ ಕಪ್ಪು ಕೂದಲಾಗಿಸುವ, ಕೇಶ ಶಕ್ತಿವರ್ಧಕ ಮತ್ತು ಪರಿಪೂರ್ಣ ಕೇಶಶೃಂಗಾರ,

ವಾಸ್ಮಾಲ್
ಕೇಶ ಕ್ಷೇಮಕ್ಕೆ
ಒಂದೇ ಆದ
ಸಮಗ್ರ ಸೂತ್ರ



ಎಲ್ಲ ಕೆಮಿಸ್ಟರುಗಳಲ್ಲಿ ಮತ್ತು
ಅಂಗಡಿಗಳಲ್ಲಿ ವಿಶೇಷ
ತೈಲ ರೂಪದಲ್ಲಿ ಮತ್ತು
ಘೃತ ರೂಪದಲ್ಲಿ, ಕೆಡಿಸಲವಕಾಶವಿಲ್ಲದ
ಸೀಸೆಗಳಲ್ಲಿ ದೊರೆಯುತ್ತದೆ.

ಹೈಜೀನಿಕ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಪೋ.ಆ. ಬಾಕ್ಸ 1192, ಮುಂಬಯಿ-1

ಕಳೆದ 55 ವರ್ಷಗಳಿಂದಲೂ ಜನಾದರಣೆಯನ್ನು ಕಾಯ್ದಿಟ್ಟುಕೊಂಡು,
ಏಳಿಗೆಯ ಪಥದಲ್ಲಿ-ದಿನದಿಂದ ದಿನಕ್ಕೆ ಮುನ್ನಡೆಯುತ್ತಿರುವ ದಕ್ಷಿಣ
ಕನ್ನಡದ, ಏಕೆ? ದಕ್ಷಿಣ ಭಾರತದ ಮೊದಲನೇ ಸಂಸ್ಥೆ....
ಮತ್ತದರ ಬೃಹತ್ ಉದ್ಯಮದ ಉತ್ಪಾದನೆಗಳು



Manufacturers : **P. V. S. BEEDIES PRIVATE LTD.**
Post Box No. 7, Kodiyalbail MANGALORE - 3
Telegrams: "PUTHUBIDIS" PHONE: 83, 83 A RESIDENCE: 593,

ಕಸ್ತೂರಿ

ಕನ್ನಡ ಡೈಜೆಸ್ಟ್

ಪ್ರತಿತಿಂಗಳ ೧ ನೇ ದಿನಾಂಕ
ಪ್ರಕಟವಾಗುವುದು.

ಮುಖ್ಯ ಸಂಪಾದಕರು :
ರಂಗನಾಥ ದಿವಾಕರ
ಸಹಾಯಕ ಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಸಂಯುಕ್ತ ಕರ್ನಾಟಕ ಕಾರ್ಯಾಲಯು
ಹುಬ್ಬಳ್ಳಿ

ಮುದ್ರಕರು :
ಸಂಯುಕ್ತಕರ್ನಾಟಕಮುದ್ರಣಾಲಯು
ಹುಬ್ಬಳ್ಳಿ

ಮುಖಚಿತ್ರ :
ಪತ್ರಿಕಾಪ್ರಿಯು
ಕೃಷ್ಣ ಪೋತದಾರ

ಚಂದಾ ದರ :

ವಾರ್ಷಿಕ (ಅಂಚೆಸೇರಿ).		ರೂ.೮.೦೦
ಅರ್ಧ ವರ್ಷ	—	ರೂ.೪.೫೦
ಬಿಡಿಸಂಚಿಕೆ	—	ರೂ.೦.೭೫

Kasturi, March 1962

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗು ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ ಲೇಖಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯಬೀಳುವಷು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತ್ತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ" ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾತಿಂಗಳ ೧ನೇ ದಿನಾಂಕದೊಳಗೇ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಪುಸ್ತಕವಿಭಾಗ

ಕಸ್ತೂರಿ

ಸಂಚಿಕೆ ೭ | ಮಾರ್ಚ್, ೧೯೬೨ | ವರ್ಷ ೬

ಅಹಂಕಾರ ಮರ್ದನ

ಎರಡು ನೀತಿಕಥೆಗಳು

ರಾಜಾ ಉದಯನನ ಆಳಿಕೆಯ ಕಾಲ. ಒಬ್ಬ ಗೃಹಸ್ಥ ಮತ್ತು ಆತನ ಬಾಗಿಲಲ್ಲಿ ಒಬ್ಬ ಸಂನ್ಯಾಸಿ ಇದ್ದರು.

"ಯತಿವರ್ಯರೇ, ಆಸನವನ್ನು ಸ್ವೀಕರಿಸಿರಿ" ಎಂದ ಗೃಹಸ್ಥ. "ದಕ್ಷಿಣೆ ಕೊಡದೆ ನಾನು ಏನನ್ನೂ ಸ್ವೀಕರಿಸುವುದಿಲ್ಲ" ಎಂದು ಸನ್ಯಾಸಿ ಹೇಳಿದ. "ಯತಿಗಳು ದಕ್ಷಿಣೆತೆಗೆದುಕೊಳ್ಳುವುದು ಸರಿಯಾಗದು." "ನಾನು ದಕ್ಷಿಣೆಗೆ ಪ್ರತಿಯಾಗಿ ಜ್ಞಾನ ಕೊಡುವೆ. ನಾನು ನ್ಯಾಯಶಾಸ್ತ್ರಿಯಿರುವೆನು."

"ಅದಕ್ಕೂ ಹೆಚ್ಚಿನದು ನಿಮ್ಮಲ್ಲುಂಟೇನು?"

"ಇಲ್ಲ. ಆದರೆ ನಾನು ವ್ಯಾಕರಣಜ್ಞನೂ ಇದ್ದೇನೆ."

"ಮಹಾಭಾಷ್ಯಕಾರರಿಗಿಂತ ಹೆಚ್ಚು ತಿಳಿದಿರುವಿರಾ?"

"ಇಲ್ಲ. ಆದರೆ ಜ್ಞಾನದರ್ಶನಗಳಲ್ಲಿಯೂ ನಾನು ಪಾರಂಗತನಿರುವೆನು."

"ಅವುಗಳನ್ನು ಬರೆದವರಿಗೂ ಹೆಚ್ಚು?"

"ಇಲ್ಲ. ಆದರೆ ಉಳಿದ ಎಲ್ಲ ವಿದ್ಯೆಗಳ ಜೊತೆಗೆ ನಾನು ಇವನ್ನೂ ಬಲ್ಲೆನು."

ಯತಿ ತಾನು ತಿಳಿದ ವಿದ್ಯೆಗಳನ್ನು ಹೇಳುತ್ತಾ ನಡೆದ. ಗೃಹಸ್ಥ ಮನೆಯ ವಸ್ತುಗಳನ್ನು ಒಂದೊಂದಾಗಿ ಆ ಬಗ್ಗೆ ತಂದಿರಿಸುತ್ತಾ ಬಂದು ಕೊನೆಗೆ ಕೇಳಿದ:

"ಯತಿವರ್ಯ, ತಮ್ಮ ಒಂದೊಂದು ವಿದ್ಯೆಗೆ ಇಲ್ಲಿ ಒಂದೊಂದು ವಸ್ತು ಇದೆ. ಇವನ್ನು ಒಮ್ಮೆಯೇ ತೆಗೆದುಕೊಂಡು ಹೋಗಬಲ್ಲಿರೇನು?"

"ಒಂದು ರಥವಿದ್ದರೆ ಎಲ್ಲವನ್ನೂ ಒಯ್ಯಬಲ್ಲೆ."

"ಆದರೆ ಮಹಾತ್ಮಾ, ತಮ್ಮ ವಿದ್ಯೆಯನ್ನು ಹೊರಲು ಬೇಕಾದ ರಥವು ತಮ್ಮಲ್ಲಿದೆಯೆ? ಮತ್ತು ತಮ್ಮಲ್ಲಿರುವ ವಿದ್ಯೆಯನ್ನು ನನ್ನ ಬಳಿಗೆ ತಲುಪಿಸಲು ಸಾಧ್ಯವಾಗುವಂಥ ರಥವೂ ಇದೆಯೇ?"

ಯತಿಯ ತಲೆ ಬಾಗುತ್ತ ಬಂದಿತು. ಈ ಹಲವಾರು ವಿದ್ಯೆಗಳನ್ನು ಹೊತ್ತುಕೊಳ್ಳಲು ಜ್ಞಾನ ರಥವು ಅವನಲ್ಲಿರಲಿಲ್ಲ. ಆತ ಎಲ್ಲ ಅಹಂಕಾರವನ್ನುಬಿಟ್ಟುಕೊಟ್ಟು ಜ್ಞಾನಸಾಧನೆಗಾಗಿ ಅಲ್ಲಿಂದ ಹಿಂತಿರುಗಿದ.

*

ಒಂದು ದಿನ ಒಬ್ಬನು ಒಬ್ಬಳೊಡನೆ ಹೀಗೆ ಕೇಳಿದ:

"ನೀನು ಯಾವಾಗಲೂ ಗಂಡಸರನ್ನು ಅನುರಾಗದ ಪಾಶದಲ್ಲಿ ಬಿಗಿಯಲು ಹವಣಿಸುವುದೇಕೆ? ಇಂಥ ಮಹಾವಿಶ್ವದಲ್ಲಿ ಮನ ತಣಿಸುವಂಥ ಬೇರಾವ ಉದ್ಯೋಗವೂ ನಿನಗೆ ದೊರೆಯಲಿಲ್ಲವೆ?"

ಅವಳಲ್ಲಿ ಅವನ ತಿರಸ್ಕಾರದ ಮಾತುಗಳಿಂದ ಯಾವ ಪರಿಣಾಮವೂ ಉಂಟಾಗಲಿಲ್ಲ.

"ನಾನು ಹೀಗೆ ಮಾಡದಿದ್ದರೆ ನಿನ್ನ ಅಹಂಕಾರವು ಮೇರೆ ಮೀರಿ ಇಡೀ ವಿಶ್ವವನ್ನೇ ಆವರಿಸುತ್ತಿತ್ತು. ಮತ್ತು ಪೃಥ್ವಿಯ ಅಣುರೇಣುಗಳನ್ನು ಅದು ತನ್ನ ಕಾಲಕೆಳಗೆ ಕೆಡೆದುಬಿಡುತ್ತಿತ್ತು."

ಅವನಿಗೆ ಅವಳ ಈ ಉತ್ತರದಿಂದ ಕೋಪ ಬಂತು.

"ಓಹೋ; ಗಂಡಸಿನ ದರ್ಪಹರಣ ಮಾಡಲೆಂದೇ ನೀನು ಜಗತ್ತಿನಲ್ಲಿ ಅವತರಿಸಿದವಳೋ?" ಅವನು ಕೇಳಿದ.

"ಹೌದು. ಅಹಂಕಾರವನ್ನು ತೊಡೆದು ಹಾಕಲಷ್ಟೇ ಅಲ್ಲ. ಗಂಡಸರ ಒಣ ಎದೆಯಲ್ಲಿ ಕೋಮಲತೆಯ ರಸವೊಸರುವಂತೆ ಮಾಡಲೂ ನಾನು ಅವತರಿಸಿರುವೆನು. ಇಲ್ಲವಾದರೆ ತಮ್ಮ ಪಾಶವೀ ಭಾವಗಳಿಂದುಂಟಾದ ಸೆಕೆ ಅವರ ಎದೆಯನ್ನು ಸುಡುಗಾಡಾಗಿಸುತ್ತಿರಲಿಲ್ಲವೆ?" ಆ ಹೆಣ್ಣು ಸ್ವಲ್ಪ ಉತ್ತೇಜಿತಳಾಗಿ ಮರುಪ್ರಶ್ನೆ ಹಾಕಿದಳು.

ಆ ಗಂಡು ಒಂದು ಕ್ಷಣ ಅಂತರ್ಮುಖಿಯಾದ. ಅವಳ ಪ್ರಶ್ನೆಗೆ ಅವನಲ್ಲಿ ಉತ್ತರವಿರಲಿಲ್ಲ. ಪುರುಷನಾದರೂ ವೀರನಾದರೂ ಸ್ವಾಮಿಯಾದರೂ ಧನಿಕನಾದರೂ ಹೆಣ್ಣಿನ ಹೊರತು ಗತಿಯಿಲ್ಲದೆ ಸೋತು ದಾಸನಾಗಿ ಭಿಕ್ಷುಕನಿಗೂ ಕೀಳಗಿನ ಅವಸ್ಥೆಯನ್ನು ಹೊಂದಿದ್ದ. ✶

ಈಶ್ವರಚಂದ್ರ ವಿದ್ಯಾಸಾಗರರಿಗೆ ಒಮ್ಮೆ ಅವರ ಜತೆಯ ಮೇಲಿನ ಅಧಿಕಾರಿಯಾಗಿದ್ದ ಯೌರೋಪ್ಯ ತರುಣನು ಕರೆಕಳಿಸಿದನು. ಮಹತ್ವದ ಕೆಲಸವಿರಬಹುದೆಂದು ಲಗುಬಗೆಯಿಂದ ವಿದ್ಯಾಸಾಗರರು ಆ ತರುಣನ ಮನೆಗೆ ಹೋದರು. ಅಲ್ಲಿ ಆ ತರುಣ ಅಧಿಕಾರಿ ಕುರ್ಚಿಯ ಮೇಲೆ ಕುಳಿತುಕೊಂಡು ಮೇಜಿನ ಮೇಲೆ ಕಾಲುಗಳನ್ನಿರಿಸಿ ವಿದ್ಯಾಸಾಗರರನ್ನು ಮಾತನಾಡಿಸಿದನು. ಅಲ್ಲಿ ಮತ್ತೆ ಯಾವ ಆಸನವೂ ಇರಲಿಲ್ಲವಾದ್ದರಿಂದ ವಿದ್ಯಾಸಾಗರರು ನಿಂತುಕೊಂಡು ಮಾತನಾಡಬೇಕಾಯಿತು. ಈ ಘಟನೆಯಾದ ಕೆಲವು ದಿನಗಳ ಮೇಲೆ ಮತ್ತೆ ಆ ತರುಣನು ಇವರಿಗೆ ಹೇಳಿ ಕಳಿಸಿದನು. ಆದರೆ ಈ ಸಾರೆ ವಿದ್ಯಾಸಾಗರರು ಹೋಗಲಿಲ್ಲವಾದ್ದರಿಂದ ಆ ತರುಣನೇ ವಿದ್ಯಾಸಾಗರರ ಮನೆಯವರೆಗೂ ಬಂದನು. ವಿದ್ಯಾಸಾಗರರೂ ಕೂಡ ಕುರ್ಚಿಯ ಮೇಲೆ ಕುಳಿತು ಕಾಲುಗಳನ್ನು ಮೇಜಿನ ಮೇಲೆ ಇರಿಸಿ ಯುರೋಪ್ಯ ತರುಣನಿಗೆ ಕುಳಿತುಕೊಳ್ಳಲು ಯಾವ ಆಸನವೂ ಇಲ್ಲದಂತೆ ಮಾಡಿ ಮಾತನಾಡಿಸಿದರು. ಇದು ಜಗಳದಲ್ಲಿ ಪ್ರಾರಂಭವಾಗಿ ಮೇಲಕ್ಕೆ ಹೋಯಿತು. ನ್ಯಾಯಾಧೀಶರು ವಿದ್ಯಾಸಾಗರರಿಗೆ ಕೇಳಿದರು. "ನಿನಗಿಂತಲೂ ಹೆಚ್ಚಿನ ಅಧಿಕಾರಿಯಾದ ಯುರೋಪ್ಯ ತರುಣನನ್ನು ನೀನೇಕೆ ಅವಮಾನಿಸಿದೆ?"

ವಿದ್ಯಾಸಾಗರರು ಸಹಜವಾಗಿ ಹೇಳಿದರು: "ಇದು ವರೆಗೆ ಯೌರೋಪ್ಯರ ರೀತಿ ನನಗೆ ಅರ್ಥವಾಗಿತ್ತು. ಆದರೆ ಈ ಹೊಸತಾಗಿ ಬಂದ ತರುಣನು ತೋರಿಸಿದ ನಡತೆ ನನಗೂ ಅಚ್ಚರಿಯನ್ನುಂಟು ಮಾಡಿದೆ. ಬಹುಶಃ ಇತ್ತೀಚೆಗೆ ಯುರೋಪಿನ ಹೊಸ ವಿನಯ ಹೀಗೆ ಇರಬಹುದೆಂದು ಅವರು ನನಗೆ ತೋರಿಸಿದ ವಿನಯದಂತೆ ನಾನೂ ಕೂಡ ಅವರಿಗೆ ಅದೇ ಮರ್ಯಾದೆಯನ್ನು ತೋರಿಸಿದೆನು"

—"ಅಂಬಿಕೆ" ಪರ್ವತೀಕರ

ಅವರು ಕರ್ನಾಟಕದ ಪಂಜು ಹೊತ್ತಿಸಿದರು

ಕರ್ನಾಟಕತ್ವ ಅರ್ಥಾತ್ ಆಲೂರ ವೆಂಕಟರಾಯರು

ದ. ಬಾ. ಕುಲಕರ್ಣಿ

"ಜಡೆಬೀಳಲವರು ಇವರಾರು ಎಂಬರೆ ಮಂಕೆ!
ಕಲ್ಲೆದೆಯ ಸೀಳಿ ಎರಡಕ್ಷರವ ಕಂಡವರು
ಪ್ರಾಯಂದೆದೆಯಲಿ ಬಿತ್ತಿ ಅದರ ಬೆಳೆ ಉಂಡವರು
ಇವರು ಆಲೂರವರು! ಏಕೆ ಬೇಕೀ ಶಂಕೆ?" —ಅಂಬಿಕಾತನಯ ದತ್ತ

ಕಳೆದ ವರ್ಷಾರಂಭದಲ್ಲಿ ಹಿರಿಯರಾದ ಗೋವಿಂದ ಪೈಗಳನ್ನು ಕಂಡಾಗ ಮಾತಿನೆಡೆಯಲ್ಲಿ "ಈಗ, ಕನ್ನಡ ನುಡಿಯಾಳುಗಳಲ್ಲಿ ಉಳಿದ ಹಿರಿಯನೆಂದರೆ ನಾನೇ"— ಎಂದರು.

ನಾನು ತಟ್ಟನೆ "ಯಾಕೆ, ಆಲೂರವರು?" ಎಂದೆ.

"ಹೌದು ಸ್ವಾಮಿ. ಅವರು ನನಗೆ ಹಿರಿಯರು. ಮುಂಬಯಿ ಸಾಹಿತ್ಯ ಸಮ್ಮೇಳನದಲ್ಲಿ ನಾನು ಅಧ್ಯಕ್ಷ ಭಾಷಣ ಮಾಡುವ ಮೊದಲು ಅವರಿಗೆ ಬಾಗಿ ನಮಸ್ಕರಿಸಿದ್ದೆ" ಎಂದು ಅವರು ಗಲ್ಲ ಮುಟ್ಟಿಕೊಂಡರು.

ಆಲೂರ ವೆಂಕಟರಾಯರಿಗೆ ಈಗ ಎಂಬತ್ತೆರಡಕ್ಕೆ ಏರಿದ ಪ್ರಾಯ. ನಾವು ಅವರನ್ನು ಕಂಡಾಗ ಮುದುಕರಾದರಲ್ಲಾ— ಎಂದು ಕೂಗಿ ಮಾತಾಡುತ್ತೇವೆ. ಆದರೆ ಅವರ ಕಿವಿ ಚುರುಕಾಗಿದೆ. ದೃಷ್ಟಿ ನಿಚ್ಚಳವಾಗಿದೆ. ನೆನಪು ಅಷ್ಟಾಗಿ ಮಾಜಿಲ್ಲ. ತುಂಬ ಹರಡಿದ ಗಡ್ಡ–ಮೀಸೆಗಳೆಡೆಯಲ್ಲಿ ಕಾಣುವ ಮುಖ ನಿರಿಗೆಗಟ್ಟಿದ್ದು ಒಮ್ಮೆಲೆ ಲಕ್ಷಕ್ಕೆ ಬರುವುದಿಲ್ಲ. ಖಡಖಡ ಮಾತಾಡುತ್ತಾರೆ. ಹಲ್ಲುಗಳೂ ಕಾಣುತ್ತವೆ. ಅವರ ಎಡೆಯಾಟಕ್ಕೆ— ಅದೇಕೆ ನಡೆದಾಟಕ್ಕೆ ಯಾರದೂ ನೆರೆ–ನೆರವು ಬೇಕಾಗಿಲ್ಲ. ಸಂಜೆ ಒಬ್ಬರೇ ಬ್ಯಾಟಿ, ಹಿಡಿದುಕೊಂಡು ತಿರ-ಗಾಡಹೋಗುತ್ತಾರೆ, ಕತ್ತಲಾಗುವದಾದರೂ ತಾನು ಒಬ್ಬನೇ ಮರಳಿ ಮನೆಗೆ ಬರಬಲ್ಲೆ—ಎಂಬಂತೆ. ಇಂದಿಗೂ ವೇದಿಕೆಯ ಭಾಷಣ ನಿಂತೇ ಮಾಡುತ್ತಾರೆ.

ಮೊನ್ನೆ ಬೆಂಗಳೂರಿನ ಕಾರ್ಪೊರೇಶನ್ನಿನವರು ಇವರಿಗೆ ಮಾನಪತ್ರ ಅರ್ಪಿಸಿದರು. ಅದು ರಾಜಧಾನಿಯ ಗೌರವ.

ಶಿವರಾಮ ಕಾರಂತರು ಮೈಸೂರಿನ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆಯಾದಾಗ ಆಲೂರವರಿಗೆ ಮೊದಲು ಪತ್ರ ಬರೆದು ಗೌರವ ಸೂಚಿಸಿ, 'ಪಂಜು ಹಿಡಿದು ಹೋಗುತ್ತೇನೆ'— ಎಂದು ಬರೆದರು.


ಇಪ್ಪತ್ತೈದು ವರುಷಗಳಿಗೆ ಮೊದಲು(೧೯೩೦) ಆಲೂರವರು ಮೈಸೂರಿನದೇ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು— ಎಂದೇನಲ್ಲ. ಅವರ 'ಗತವೈಭವ' ಪುಸ್ತಕದಿಂದಲೇ ಇಂದು ಪ್ರಸಿದ್ಧರಾದ ಲೇಖಕರು ಮೊದಲು ಸ್ಫೂರ್ತಿ ಪಡೆದದ್ದು.

ಅ. ನ. ಕೃ ತಮ್ಮ ಮೊದಲ ಬರಹದ ದಿನಗಳ ನೆನಪನ್ನು ಸೂಚಿಸುತ್ತ "ನನಗೆ ಕನ್ನಡದಲ್ಲಿ ಓದಲು–ಬರೆಯಲು ಪ್ರೇರಿಸಿದ ಗ್ರಂಥವೆಂದರೆ 'ಕರ್ನಾಟಕ ಗತವೈಭವ'"— ಎಂದು ಸ್ಮರಿಸಿದ್ದಾರೆ.

'ಕರ್ನಾಟಕ ಗತವೈಭವ' ಪರಿಪೂರ್ಣ ಇತಿಹಾಸಗ್ರಂಥವಲ್ಲ — ಎಂದು ಆಲೂರವರೇ ಹೇಳುತ್ತಾರೆ. "ಇಗೋ, ಇದೇ ಆ ಪವಿತ್ರವಾದ ದೇವಾಲಯವು. ಇದೋ, ಈ ಬಾಗಿಲು ಕಿಂಡಿಯೊಳಗಿಂದ ಆ ದೇವತೆಯ ದರ್ಶನವನ್ನು ಈಗ ತೆಗೆದುಕೊಳ್ಳಿರಿ" ಎಂದು ಬೊಟ್ಟು ಮಾಡಿ ತೋರಿಸುವದಷ್ಟೆ ನಮ್ಮ ಕೆಲಸವು—ಎನ್ನುತ್ತಾರೆ.

೪-೫-೧೯೦೫ ರಂದು ಆಲೂರರು ಆನೆಗೊಂದಿಯಲ್ಲಿ ಒಂದು ಆಕಸ್ಮಿಕವಾದ ದರ್ಶನ ಪಡೆದರು. ಅದು ಅವರೆದುರು ಕನ್ನಡತಾಯಿಯ ಉಜ್ವಲ ಕಾಂತಿಯನ್ನು ಮಿಂಚಿಸಿತು. ಅವರು ಸ್ಫುರಣಗೊಂಡರು.

ಆ ಮೊದಲು ಅವರಿಗೆ ಕರ್ನಾಟಕದ ಇತಿಹಾಸ ಗೊತ್ತಿದ್ದಿಲ್ಲ. ವಿಜಯನಗರವೆಂದರೆ ಆನೆಗೊಂದಿಯ ಬದಿಗಿರುವ ಹಾಳು ಹಂಪೆಯೆಂದೂ ತಿಳಿಯದು. ನೆಲದಲ್ಲಿ ಹೂತಿದ್ದ ಹಂಪೆಯ ವೈಭವವನ್ನು ಕರ್ಜನ್ ದೊರೆ ಅಗೆಸಿ ತೆಗೆಸುತ್ತಿದ್ದ ಕಾಲವದು. ಆದರೆ ಆಲೂರವರಿಗೆ ಕಂಡ ದರ್ಶನ—ಆ ಪ್ರೇರಣೆ ಅವರನ್ನು ಇತಿಹಾಸಕ್ಕೆ ಕರೆದೊಯ್ದು ಊರೂರು—ಗುಡಿ-ಗುಂಡಾರಗಳನ್ನು ಸುತ್ತಿಸಿತು. ಶಿಲಾಲಿಪಿಗಳನ್ನು, ತಾಮ್ರಶಾಸನಗಳನ್ನು ಹುಡುಕಹಚ್ಚಿತು. ಅದನ್ನು ಓದಲು ಕಲಿಸಿತು. ಒಂದು ಸಾವಿರ ವರುಷದ ಕನ್ನಡಿಗರ ಭವ್ಯ ಜೀವನವನ್ನು ಕಣ್ಮುಂದೆ ನಿಲ್ಲಿಸಿತು. ಅದರ ಹಿಂದೆ ಸರಿದು ಕ್ರಿಸ್ತಶಕಾರಂಭದವರೆಗೆ ಕನ್ನಡಿಗರ ಕಥೆ ಇವರ ಕಣ್ಣೆದುರು ಕುಣಿಯಿತು.



ಇದೇ ಆ ಗತವೈಭವ ಗ್ರಂಥ. "ಅದು ಅಪೂರ್ಣವಾಗಿದೆ, ಅವಸರದಲ್ಲಿ ಬರೆದದ್ದಾಗಿದೆ. ಇದನ್ನು ಮತ್ತೆ ಮುದ್ರಿಸುವ ಪ್ರಸಂಗವನ್ನೇ ತಾರದೆ, ಕನ್ನಡಿಗರು ಮುಂದುವರಿದು ಒಂದು ದೋಷವರ್ಜಿತವಾದ ನೂತನ ಗ್ರಂಥವನ್ನು ರಚಿಸಿ ಇದನ್ನು(ಕರ್ನಾಟಕ ಗತವೈಭವ) ಮೂಲೆಗುಂಪು ಮಾಡಬೇಕೆಂಬುದೇ ನಮ್ಮ ಮನಃಪೂರ್ವಕವಾದ ಪ್ರಾರ್ಥನೆ" ಎನ್ನುತ್ತಾರೆ ವೆಂಕಟರಾಯರು.

ಇದೊಂದು ಬರೀ ಗ್ರಂಥವಲ್ಲ; ಕೇವಲ ಇತಿಹಾಸವಲ್ಲ. ಕನ್ನಡಿಗರ ಮುಂಬೆಳಗಿನ ಕೋಳಿ ಕೂಗು! ನವೋದಯದ ಸೂರ್ಯಬಿಂಬವಾಗಿ ಬಂದದ್ದು ಇದು.

ಕನ್ನಡದ ಜನ ಎಚ್ಚರಾಗಿರುವಷ್ಟು ಕಾಲ ಈ ಗ್ರಂಥವನ್ನು, ಇದರ ಕರ್ತೃವನ್ನು ಮರೆಯಬಾರದು. ಮೂಲೆಗುಂಪು ಮಾಡಬಾರದು. ಯಾವುದೋ ತಾಮಸೀಕಾಲಮಾನಬಂದು ಇದು ನಮ್ಮಅರಿವಿನಿಂದ ಮರೆಯಾದರೆ ಮುಂದೆ ನಾವು ಸುದೀರ್ಘವಾದ ಕತ್ತಲೆಯನ್ನೇ ಎದುರಿಸಬೇಕಾಗುವುದು.

ಅಂದು—ಆಲೂರವರು ಬಿ. ಎ. ಎಲ್. ಎಲ್. ಬಿ. ಪದವಿ ಪಡೆದು ಪುಣೆಯ ಜಾಗೃತ ಲೋಕದಿಂದ ಕರ್ನಾಟಕಕ್ಕೆ ಬಂದಾಗ ಅವರು ಕಂಡ ಕತ್ತಲೆ ಹರಿಯಲು ಅರ್ಧ ಶತಮಾನ ಬೇಕಾಯಿತು.

ಸ್ವದೇಶೀ-ಬಹಿಷ್ಕಾರದ ಆ ಘಟ್ಟಗಳಲ್ಲಿ ಲೋಕಮಾನ್ಯರ ನಿಕಟವರ್ತಿಯಾಗಿದ್ದು-ಸಾವರಕರರ ಸ್ನೇಹದಲ್ಲಿದ್ದ ಆಲೂರವರು ಭಾರತವ್ಯಾಪ್ತವಾದ ಕಾರ್ಯಕ್ಷೇತ್ರವನ್ನು ಬಿಟ್ಟು ಕರ್ನಾಟಕದ ಕತ್ತಲುಭೂಮಿಗೇ ಅಂಟಿಕೊಂಡರು. ರಾಷ್ಟ್ರೀಯತೆಯ ಮಾತು ಬಂದಾಗ ಅದನ್ನನುಸರಿಸಿದರೂ ಇವರ ಜಾಗ್ರತ ಚೇತನ ಅದಕ್ಕೂ ಮೂಲಭೂತವಾದ ಒಂದು ಸತ್ಯವನ್ನು ಕಂಡುಕೊಂಡಿತು. ಅದೇ ಕರ್ನಾಟಕತ್ವ!

ವೆಂಕಟರಾಯರ ಕರ್ನಾಟಕತ್ವವೆಂದರೆ ಇಂದಿನ 'ಇಝಂ' ಗಳಂಥ ಪರಿಮಿತವ್ಯಾಪ್ತಿಯ ಲೋಕಕಲ್ಯಾಣದ ನಾಟಕ ಸೂತ್ರವಲ್ಲ. ಅದು

ರಾಷ್ಟ್ರೀಯತೆಯನ್ನು ಜಾಗೃತಗೊಳಿಸಿ ಮುನ್ನಡೆಸುವ, ಅದಕ್ಕೆ ಪೂರಕವಾದ, ಪರಮ ಪೋಷಕವಾದ, ಮೂಲಭೂತವಾದ ಒಂದು ನಿಶ್ಚಿತ, ನಿರಾಡಂಬರವಾದ ನಿರಾಕಾರ ಸಂಕೇತ. ಆಲೂರವರಿಗೆ ಅದು ಸಾಕಾರ ಬ್ರಹ್ಮ.

ಕರ್ನಾಟಕತ್ವವೆಂದರೆ ಕರ್ನಾಟಕ ಏಕೀಕರಣ ಮಾತ್ರವಲ್ಲ–ಕರ್ನಾಟಕದ ಸರ್ವಾಂಗೀಣ ಉನ್ನತಿಯ ಸೂತ್ರ— ಮಂತ್ರವದು. ಒಂದು ಇತಿಹಾಸಪ್ರಜ್ಞೆಯಲ್ಲ, ಒಂದು ಸಂಸ್ಕೃತಿಯ ನಾಮರೂಪವಲ್ಲ, ಸಾಹಿತ್ಯದ ಚೆಲುವು ಮಾತ್ರವಲ್ಲ—ವಾಣಿಜ್ಯ, ಕಲೆ, ಇನ್ನೆಲ್ಲ ಕ್ಷೇತ್ರವ್ಯಾಪ್ತಿಯನ್ನು ಪಡೆದ ಧರ್ಮಸೂತ್ರ—ವೆಂಕಟರಾಯರ ಕರ್ನಾಟಕತ್ವ!

ಅದು ತಮಗೆ ಮಾತ್ರ ಕಂಡ ದರ್ಶನವೆಂಬ ಅಭಿಮಾನ ವೆಂಕಟರಾಯರಿಗೆ ಅಂದಿನ ಕಾಲದಲ್ಲಿ ಇದ್ದಿರಬಹುದು. ಆದರೆ ಅದು ಕನ್ನಡಿಗರ ಸಾರ್ವತ್ರಿಕ ದರ್ಶನವಾಗಬೇಕೆಂಬ ಅವರ ಹಟವೇ ಅವರನ್ನು ಭಾರತದ ವಿಶಾಲ ಕ್ಷೇತ್ರದಿಂದ ತಳ್ಳಿದ್ದು.

ವೆಂಕಟರಾಯರಿಗೆ ಭಾರತದರ್ಶನಕ್ಕೆ ದಾರಿ, ಶ್ರೀಕಾರವೆಂದರೇ ಕರ್ನಾಟಕದರ್ಶನ— ಅದೇ ಕರ್ನಾಟಕತ್ವ!

ಆದರೂ ಅವರು ಎಂದಿಗೂ ರಾಷ್ಟ್ರೀಯ ವಾದಿಗಳೇ. ಮ. ಗಾಂಧಿಯವರ ಅಸಹಕಾರ ಚಳವಳಿಯನ್ನು ಅವರು ಮನಸಾ ಅಂಗೀಕರಿಸಿ ತಮ್ಮ ವಕೀಲಿಗೆ ಶರಣು ಹೊಡೆದರು. (೧೯೨೦). ಅರವಿಂದ ಘೋಷರು No Control, No Co-operation ಎಂದು ಆ ಮೊದಲೇ ಸಾರಿದ್ದರು. ಅದನ್ನು ಆಲೂರವರು ಮೆಚ್ಚಿಕೊಂಡಿದ್ದರು. ಅದೇ ಕಾರಣದಿಂದ ಹೋಂ ರೂಲ್ ಲೀಗಿನವರು ಕರ್ನಾಟಕದಿಂದ ಕಾಯ್ದೆ ಕೌನ್ಸಿಲಿಗೆ ನಿಲ್ಲಬೇಕೆಂದು ಒತ್ತಾಯದ ತಂತಿ ಕಳಿಸಿದಾಗ ತಟ್ಟನೆ ನಿರಾಕರಿಸಿದ್ದರು.

ಅಸಹಕಾರ ಯುಗದಲ್ಲಿ ಅವರ ಸುತ್ತುವರಿದ ತರುಣರೇ 'ಗೆಳೆಯರ ಗುಂಪು'. ಅವರಿಗೆ ಅರವಿಂದರ ತಾತ್ವಿಕ ವಿಚಾರ ತಿಳಿಸಿ ಹೇಳಿದವರು ಆಲೂರರು.

೧೯೨೧ ರ ಧಾರವಾಡ ಗೋಳಿಬಾರು ನಡದಾಗ— ಎಲ್ಲಾ ಸಂಪಾದಕರ ಕೈಸೆರೆಯಾಯಿತು. "ಭೂ ರಕ್ಕಸಾಯ ಸ್ವಾಹಾ", "ಧೃತ–ರಾಷ್ಟ್ರರೆಲ್ಲರೂ ಕುರುಡರೇ" ಮುಂತಾದ ಪ್ರಸಿದ್ಧ ಅಗ್ರಲೇಖಗಳು ಆಲೂರವರ ಆಗಿನ ಬೆಂಕಿ ಬರಹಗಳು. ಸಂಪಾದಕರು ಸೆರೆಯಾದರೂ ಕೆಲವು ತಿಂಗಳು ಆಲೂರರೇ ನಾಲ್ಕು ಪತ್ರಿಕೆಗಳನ್ನು ನಡೆಸಿದರು.

ಮುಂದೆ ಇವರು ಕಾಂಗ್ರೆಸ್ಸಿನ ಅಧಿಕಾರ ಸ್ಥಾನದಲ್ಲಿದ್ದಿಲ್ಲವಾದರೂ ರಾಜಕೀಯ ಸಂಪರ್ಕದಿಂದ ದೂರವಾಗಿದ್ದಿಲ್ಲ. ಇವರಿಗೆ ಮೂವರು ಸಿ.ಆಯ್. ಡಿ. ಕಾವಲುಗಾರರ 'ಬೆಂಬಲ'ವಿದ್ದೇ ಇತ್ತು. ಆಲೂರವರಿಲ್ಲದಾಗ ಅವರ ಮನೆ ಮೂರು ಸಲ ಝಡತಿಯಾಯಿತು. ಇವರಿಗೆ ಬರುವ ಪತ್ರಗಳು ಸೆನ್ಸಾರ್ ಆಗದೆ ಕೈಸೇರುತ್ತಿದ್ದಿಲ್ಲ. ಮುಂದೆ ಹಿಂಡಲಗಿಯ ವಾಸ ತಪ್ಪಿದರೂ ಕಲಘಟಗಿಯ ದಿಗ್ಬಂಧನ ಒದಗಿಬಂತು. (೧೯೩೨) ಅದೇ ಕಾಲಕ್ಕೆ ಅವರಿಗೆ ಗೀತಾಭ್ಯಾಸಕ್ಕೆ ಸಮಯ ಸಿಕ್ಕಿದ್ದು. ಜಯಕರ್ನಾಟಕವನ್ನು ಬೇಂದ್ರೆಯವರಿಗೆ ಒಪ್ಪಿಸಿದ ನಂತರ (೧೯೩೦) ಅವರು ತಮಗೆ ಪ್ರಿಯವಾದ ಅಧ್ಯಾತ್ಮ— ತತ್ವ ಚಿಂತನೆಯ ಸಾಧನೆಗಳಿಗೆ ತಮ್ಮನ್ನು ಹೂಡಿಕೊಂಡರು. ಗೀತಾರಹಸ್ಯದ ಅನುವಾದದ ತರುವಾಯ ೧೫ ವರ್ಷಗಳ ನಂತರ ಗೀತೆಯ ಮೇಲೆ ಸ್ವಂತವಾಗಿ ಐದು ಪುಸ್ತಕ ಬರೆಯಲು ಕಲಘಟಗಿ ನಜರಬಂದಿಯೆ ಕಾರಣವಾಯಿತು. (೧೯೩೨).

ಆದರೆ ಮನೆ ಗೆದ್ದು ಮಾರು ಗೆಲ್ಲುವ ಯತ್ನ ಆಲೂರರದು. ಕರ್ನಾಟಕದ ಏಕೀಕರಣ ನಂತರ ಆಗಿರಬಹುದು; ಆದರೆ ಅವರ ಅಂತರಂಗ ಅದನ್ನು ಅಂದೇ ಕಂಡಿತ್ತು. ಅದೇ ತಳಪಾಯದ ಮೇಲೆ ಅವರು ಸ್ವಾತಂತ್ರ್ಯದ ಕನಸನ್ನು ಕಟಿ ನನಸನ್ನು ಕಂಡರು.

ಅಂತೇ ವೆಂಕಟರಾಯರೆನ್ನುವುದು:

" ಕರ್ನಾಟಕವು ನನ್ನ ಕರ್ಮಭೂಮಿ;
ಭಾರತವು ನನ್ನ ಧರ್ಮಭೂಮಿ! "

ಅವರ ಆತ್ಮಚರಿತ್ರೆ, 'ನನ್ನ ಜೀವನ ಸ್ಮೃತಿಗಳು' ೧೯೪೦ ರಲ್ಲಿ ನಾಡು ಅವರ ಅರುವತ್ತರ

ಉತ್ಸವ ಆಚರಿಸಿದಾಗ ಬರೆದದ್ದು. ಅದು ಅವರ ವ್ಯಷ್ಟಿದೃಷ್ಟಿಯ ಬರಹವಲ್ಲ, ನಾಡಿನ ಸಮಷ್ಟಿ ದೃಷ್ಟಿಯ ವಿಕಾಸದ ಚರಿತ್ರಾಂಶ.

ಆಲೂರರವರು ಸಮಾಜ ಸೇವಕರಲ್ಲ. ಇತಿಹಾಸ ಸಂಶೋಧಕರಲ್ಲ; ರಾಜಕಾರಣಿಯಲ್ಲ; ಕವಿಯಲ್ಲ; ಸಾಹಿತಿಯಲ್ಲ– ನಾನು ಏನೂ ಅಲ್ಲ– ಎಂದು ಅವರೇ ಹೇಳಿಕೊಳ್ಳುತ್ತಾರೆ.

ಅಂತೇ ಅವರು ಪದ್ಮಭೂಷಣ–ಶ್ರೀಯೂ ಆಗಲಿಲ್ಲ; ಮಂತ್ರಿಯಾಗಲಿಲ್ಲ; ಯಾವ ವಿಶ್ವ ವಿದ್ಯಾಲಯಗಳೂ ಅವರಿಗೆ ಡಾಕ್ಟರೇಟ್ ಪದವಿ ಕೊಡಲಿಲ್ಲ ಅಕಾಡೆಮಿಯ ಅವಾರ್ಡೂ ಇಲ್ಲ. ಯಾವದೂ ಇಲ್ಲ.

ಆದರೆ ಅವರು ಕರ್ನಾಟಕದ ಭವ್ಯದೇಹದ ಯಜಮಾನರು! ಅವರ ಎತರಕ್ಕೆ ಈ ಯಾವ ಶ್ರೀಯ ಲಾಂಛನಗಳೂ ಬೇಕಾಗಿಲ್ಲ.

ಸ್ವದೇಶೀ ಚಳವಳಿ ಬಂತು. ಹಂಚಿನ ಕಾರ್ಖಾನೆಯಿಂದ ಹಿಡಿದು ಪೆನ್ಸಿಲು, ಬಳೆ, ಕಡ್ಡೀಪೆಟ್ಟಿಗೆಯ ವರೆಗೆ ಉದ್ಯಮ ಕ್ಷೇತ್ರ ರಚಿಸಿದರು. ಸಕ್ಕರೆ ಬಿಟ್ಟರು. ಚಿಮಣಿಯೆಣ್ಣೆ ಉರಿಸುವುದನ್ನು ತಾವು ಬಿಟ್ಟರಲ್ಲದೆ ರೊದ್ದರಾಯರ ಟ್ರೇನಿಂಗ್ ಕಾಲೇಜು ಹಾಸ್ಟೆಲಿನ ದೀಪಗಳೆಲ್ಲ ಹೊಗೆಯೆಣ್ಣೆಯ ಸಮೆಗಳಾದವು.

ರಾಜಕೀಯ ಪರಿಷತ್ತಿನ ಪುಣೆ ಅಧಿವೇಶನ ದಲ್ಲಿ ಕನ್ನಡ ಮಾತಾಡಿದರು. ಟಿಳಕರು 'ಹೋಂ ರೂಲ್' ವಿಚಾರಧಾರೆಯ ಮುಂಗಾಣಿಕೆಯಂತೆ ಸಮ್ಮತಿಸಿದರು. ಅಲ್ಲಿ ರಾಷ್ಟ್ರೀಯ ಶಾಲೆಗಳು ಹುಟ್ಟಿಕೊಂಡವು. ಇವರನ್ನು ಅಧ್ಯಾಪಕರಾಗಿ ಅಲ್ಲಿನವರು ಕರೆದರು. ಇವರು ಧಾರವಾಡದಲ್ಲೇ ರಾಷ್ಟ್ರೀಯ ಶಾಲೆ ತೆರೆದರು.

ಆದರೆ ಅವರ ಚುಕ್ಕಾಣಿ ಕರ್ನಾಟಕತ್ವ

ಎಲ್ಲಾ ಅಖಿಲ ಕರ್ನಾಟಕವೇ ಆಗಬೇಕ ವರೆಗೆ.

ಲೇಖಕರ ಪರಿಷತ್ತು, ವಾಚನಾಲಯ ಪರಿಷತ್ತು, ಆದವು

ವಿದ್ಯಾರಣ್ಯ ಉತ್ಸವ, ಬಸವ ಜಯಂತಿ, ನಿಜಗುಣಶಿವಯೋಗಿ ಉತ್ಸವಗಳು ನಡೆದವು.

"ಆಡಿ ಮುಟ್ಟದ ಗಿಡವಿಲ್ಲ; ವೆಂಕಟರಾಯರು ಹಿಡಿಯದ ಕೆಲಸವಿಲ್ಲ" ಎಂದರು ಬೇಂದ್ರೆಯವರು.

ಆದರೆ ವೆಂಕಟರಾಯರು ಎಲ್ಲೆಲ್ಲೂ ವೈಯಕ್ತಿಕ ಸೋಲನ್ನೇ ಅನುಭವಿಸಿದರು. ಅವರು ಸಂಸ್ಥೆಗಳನ್ನು ಕಟ್ಟಿದ್ದೆಷ್ಟೋ—ಆದರೆ ಅದರ ಮುನ್ನಡೆಯ ನೊಗವನ್ನು ಇತರರ ಮೇಲೆ ಹೊರಿಸಿ ಬೇರೆ ಕೆಲಸ ಹುಡುಕುವುದು ಅವರ ಸ್ವಭಾವ. ಅವರೇ ತಮ್ಮ ಈ ಸ್ವಭಾವಕ್ಕೆ 'ವಿಕ್ಷಿಪ್ತ ಮನೋವೃತ್ತಿ' ಎಂದುಕೊಳ್ಳುತ್ತಾರೆ. ಅಂತೇ ಬೇಂದ್ರೆಯವರು ಇವರು "ನಾಯಕರಾಗದೆ ನೇತ್ರವಾದರು" ಎಂದದ್ದು.

ತನ್ನ ವೈಯಕ್ತಿಕ ಸೋಲು ಕರ್ನಾಟಕದ ಗೆಲುವಿಗೆ ದಾರಿಯಾಗಲಿ–ಎಂಬುದಿವರ ಸೊಲ್ಲು.

ಅಸಹಕಾರದಲ್ಲಿ ಅಹಿಂಸೆಯ ತೀವ್ರ ವಿಧಾನ ವೆಂಕಟರಾಯರಿಗೆ ಸಮ್ಮತವಾಗಲಿಲ್ಲ. ಅಲ್ಲದೆ ಸಮಾಜ ಸುಧಾರಣೆಯಂಥ ವಿಷಯಗಳನ್ನು ರಾಜಕೀಯ ಕಾರ್ಯಕ್ರಮದಲ್ಲಿ ಹೊಗಿಸುವುದು—ಸೆರೆಮನೆಗಾಗಿಯೇ ರಾಜಕೀಯ ಮುಂತಾದವು ಬಾಹ್ಯಾಡಂಬರವೆಂಬುದು ಆಲೂರವರ ಮತ ಧಾರ್ಮಿಕ ವಿಷಯದಲ್ಲೂ ಮಹಾತ್ಮರೊಡನೆ ಮತಭೇದವಾಗಿ ಅವರಿಗೆ ರಿಜಿಸ್ಟರ್ಡ್ ಪತ್ರ ಬರೆದು, ಧರ್ಮದಲ್ಲಿ ಪ್ರಳಯ ಮಾಡುವುದಕ್ಕಿಂತ ಪುನಃ ಸೃಷ್ಟಿ ಮಾಡುವುದು ಅತ್ಯಂತ ಕಠಿಣ. ಇದರ ಬಗ್ಗೆ ಏನಾದರೂ ವಿಚಾರ ಮಾಡಿರುವಿರಾ ?– ಎಂದು ಕೇಳಿದರು. ಹಾಗೇ ಈ ಮತಭೇದದ ಕಾರಣದಿಂದ ಅವರ ನೇತೃತ್ವದಲ್ಲಿ ಕೆಲಸಮಾಡಬೇಕಾದ ಅಧಿಕಾರ ಸ್ಥಾನದಲ್ಲಿರುವುದು ಬೇಡವೆಂದು ಕರ್ನಾಟಕ ಕಾಂಗ್ರೆಸ್ ಉಪಾಧ್ಯಕ್ಷಪದಕ್ಕೆ ತ್ಯಾಗಪತ್ರ ಅರ್ಪಿಸಿದರು.

ಕಾಂಗ್ರೆಸ್ಸಿನ ಪಲ್ಲು ಹರಿದುಕೊಂಡ ಆಲೂರವರು ಕರ್ನಾಟಕತ್ವದ ಅಖಂಡ ಪ್ರಸಾರಕ್ಕಣಿಯಾದರು.

ಬೆಳಗಾವಿ ಕಾಂಗ್ರೆಸ್ ಕರ್ನಾಟಕದ ಕಾಂಗ್ರೆಸ್ ಆಗಬೇಕೆಂದು ಗಂಗಾಧರರಾಯರಿಂದ ವಚನ ತಕ್ಕೊಂಡರು.

ಬೆಂಗಳೂರು—ಮೈಸೂರಿಗೆ ಎಡತಾಕಿ ಅಲ್ಲಿಯೂ ಕಂಠಶೋಷಣೆ ಮಾಡಿಕೊಂಡು ಸಾರ್ವಜನಿಕ ಸಂಸ್ಥೆಗಳಿಲ್ಲದ್ದನ್ನು ಕಂಡು ತಳ

ಮಳಿಸಿದರು.

'ಕರ್ನಾಟಕ' ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಕಾರಣರಾದರು. ಮುಂದೆ ಪರಿಷತ್ತು ಗಡಿಪ್ರದೇಶಗಳಲ್ಲಿ ಕನ್ನಡ ಪ್ರಚಾರ ನಡೆಸಲಾಗದ್ದಕ್ಕೂ ಅಖಿಲ ಕರ್ನಾಟಕದ ಧ್ವನಿಯನ್ನು ಪ್ರತಿಧ್ವನಿಸಲಾಗದ್ದಕ್ಕೂ ಬೇಸತ್ತು ಅದಕ್ಕೂ ತ್ಯಾಗ ಪತ್ರ ಒಪ್ಪಿಸಿದರು. ಮುಂದದು 'ಕನ್ನಡ' ಸಾಹಿತ್ಯ ಪರಿಷತ್ತಾಯಿತು.

ವೆಂಕಟರಾಯರ ಲೆಕ್ಕದಲ್ಲಿ ನುಡಿ ಒಂದೇ ಸಾಲದು. ಕರ್ನಾಟಕತ್ವದ ವಿಶಾಲಮತಿ ಪ್ರತಿಫಲಿತವಾಗದ ಸ್ಥಳ ಅವರಿಗೆ ಬರಷಣ.

ಅವರಿಗೆ 'ವಿಕ್ಷಿಪ್ತತನ,' 'ಮತಭೇದ'ಗಳು ಸಾಮಾನ್ಯ. ಈ ಮತಭೇದಗಳದೂ ಅಖಂಡ ವ್ಯಾಪ್ತಿ. ಮತ ಇರುವಲ್ಲೆಲ್ಲ ಭಿನ್ನಮತ, ಅವರದೇ ನವೀನ ವಿಚಾರಧಾರೆ. ಆದರೆ ಅವರು ನಾಡಿನ ಯಾವ ಕಾರ್ಯಗಳಲ್ಲೂ ಅಸಹಕಾರ ಯೋಗ ತಾಳಿದವರಲ್ಲ.

ಇಂದಿನ ಭಾವೈಕ್ಯ ಚಳವಳಿಯನ್ನು ಅವರೆಂದೋ ಯೋಚಿಸಿದ್ದಾರೆ. ಅವರೆನ್ನುವುದು: "ನನ್ನ ದೃಷ್ಟಿಯಲ್ಲಿ ಐಕ್ಯವೆಂದರೆ ಏಕರೂಪತೆಯಲ್ಲ; ವೈವಿಧ್ಯದಲ್ಲಿ ಏಕತಾನವನ್ನು ಹುಟ್ಟಿಸುವುದೇ ನಿಜವಾದ ಐಕ್ಯ."

ಅವರು ಕರ್ನಾಟಕವನ್ನೇ ಕರ್ಮಭೂಮಿ ಮಾಡಿಕೊಂಡಾಗ ನುಡಿಯ ವಿಶ್ವವ್ಯಾಪಕತೆಯ ಪೃಥಕ್ಕರಣವೆಂದು 'ಜಯಕರ್ನಾಟಕ' ಪತ್ರಿಕೆ ಹೊರಡಿಸಿದರು.

'ಜಯಕರ್ನಾಟಕ' ಒಂದು ಪತ್ರಿಕೆಯಲ್ಲ. ಅದೊಂದು ಮಂತ್ರ ಎಂದರವರು. ಅವರ ಕರ್ನಾಟಕತ್ವದ ತಪಸ್ಸಿನ ಜಪಮಂತ್ರವದು. ಅದರ ವ್ಯಾಪ್ತಿಗೆ ಶ್ರದ್ಧೆಯೇ ಮೂಲ.

ಕನ್ನಡ ಲೇಖಕರನ್ನು ಕಂಡರೆ ಅವರಿಗೆ ಬಹಳ ಸಂತೋಷ. ಇಂದಿಗೂ ಮೂಲೆಯ ಒಂದು ಕನ್ನಡ ಪತ್ರಿಕೆಯನ್ನಾಗಲಿ, ಕೇಂದ್ರದ ಒಂದು ಪತ್ರಿಕೆಯ ಮೂಲೆಯನ್ನಾಗಲಿ, ಅವರ ಹದ್ದಿನ ಕಣ್ಣು ನೋಡಿಯೇ ಇರುತ್ತದೆ.

ನನ್ನನ್ನು ಕಂಡಾಗಲೆಲ್ಲ "—ಹಾಂ! ನಿನ್ನದು ಆ ಲೇಖ ಛಲೋ ಅದ. ನೀ ಛಲೋ ಬರೀತೀ. ನಾ ನಿನಗೆ ಎಂದೋ ಹೇಳೇನಿ" ಎನ್ನುತ್ತಾರೆ.

ಶ್ರೀ ಸೇಡಿಯಾಪು ಕೃಷ್ಣಭಟ್ಟರು ಕರ್ನಾಟಕ ಕವಿತಾಪ್ರಪಂಚ ಎಂಬ ಲೇಖನ ರಚಿಸಿದ್ದರು. ಆಲೂರವರು ಅದನ್ನು ಪ್ರಕಟಿಸಿದ್ದರು. ಮುಂದೆ ಕಾರ್ಕಳಕ್ಕೆ ಆಲೂರವರು ಭಾಷಣಕ್ಕೆ ಹೋದಾಗ ಸೇಡಿಯಾಪು ಬಂದು ವಂದಿಸಿ ತಮ್ಮ ಪರಿಚಯ ಹೇಳಿಕೊಂಡರು. ಆಗ ಅವರಿಗೆ ೨೨ ರ ಪ್ರಾಯ. "ನಿಮ್ಮ ಲೇಖನ ನೋಡಿದಾಗ ನೀವಿಷ್ಟು ಚಿಕ್ಕಪ್ರಾಯದವರೆಂದು ಕೊಂಡಿರಲಿಲ್ಲ ನಾನು" ಎಂದು ಆಲೂರವರು ಕೃಷ್ಣಭಟ್ಟರನ್ನು ಅಪ್ಪಿಕೊಂಡರು.

ಜಿ. ಪಿ. ರಾಜರತ್ನಂ ಒಂದು ಪ್ರಥಮ ಪ್ರಯತ್ನದ ಕವಿತೆಯನ್ನು ಆಲೂರವರ ಜಯಕರ್ನಾಟಕಕ್ಕೆ ಕಳಿಸಿದರು. ಇವರು ಅದನ್ನು ಪ್ರಥಮ ಪುಟದಲ್ಲಿ ಪ್ರಕಟಿಸಿ ಗೌರವಿಸಿದರು.

ರಾಜರತ್ನರಿಗೆ ನಾಚಿಕೆಯಾಯಿತು. ಮುಂದೆ ನಾನು ಅಹರ್ನಿಶಿ ತಪಸ್ಸು ಮಾಡಿ ಪ್ರಥಮ ಪುಟದ ಗೌರವಕ್ಕೆ ತಕ್ಕುದಾದ ಅರ್ಹತೆಗಳಿಸಿ ಕವಿಯಾದೆ ಎನ್ನುತ್ತಾರೆ ನಮ್ಮ ಕವಿರತ್ನ!

'ಜಯಕರ್ನಾಟಕ' ಕನ್ನಡದ 'ಮಾಡರ್ನ್-ರಿವ್ಯೂ' ಆಗಿತ್ತು— ಎಂದು ಇಂದಿನವರು ಅದರ ಗತವೈಭವವನ್ನು ನೆನಸುತ್ತಾರೆ. ಮರಾಠಿ ಜ್ಞಾನ-ಕೋಶದ ಶ್ರೀ. ಕೇತಕರರು ಜಾಗೃತ ಮಹಾರಾಷ್ಟ್ರದಲ್ಲೂ ಇಂಥ ಒಂದು ಪತ್ರಿಕೆ ಇಲ್ಲ— ಎಂದದ್ದು ಯಥಾರ್ಥವಾದ ಮಾತು.

ಯಾವುದೇ ಒಂದು ದೊಡ್ಡ ಪ್ರಕಾಶನ ಸಾಹಸವಾಗಲಿ, ಅವರಿಗದು ಬಹಳ ಹೆಮ್ಮೆ. "ನಡೆದು ಬಂದ ದಾರಿ" ಯ ಮೂರು ಸಂಪುಟಗಳನ್ನು ಕಂಡು ಅವರು ಹಿಗ್ಗಿ ಹೀರೇಕಾಯಿಯಾದರು.

ಆಲೂರವರ ವ್ಯಾಪ್ತಜೀವನ ಶ್ರದ್ಧೆಗೆ ಅವರ ವಿವಿಧ ಚಟುವಟಿಕೆಗಳಿಗೆ ಅರವಿಂದರ "ಯಾವುದಕ್ಕೂ ಧಾರ್ಮಿಕ, ತಾತ್ವಿಕ ದೃಷ್ಟಿಯೇ ತಳಪಾಯ" ಎಂಬ ಮಾತು ಪ್ರಾಣಸೂತ್ರವಾಯಿತು.

ಯುದ್ಧಕಾಲದ ಕಾಗದದ ಮುಗ್ಗಟ್ಟಿನ ನೆಪದಿಂದ ಅವರ ಸ್ವಂತ ಪ್ರಕಾಶನಕ್ಕೆ ತಡೆ ಬಂತು. ಆಗವರು ಶ್ರೀಮದಾಚಾರ್ಯರ ೩೭ ಗ್ರಂಥಗಳನ್ನೂ ಅವಲೋಕಿಸಿದರು. ಮುಂಚೆಯೇ ಶಾಂತಿಪಾಠ

ಹಾಕಿ ೩-೪ ಗುರುಗಳ ಹತ್ತಿರ ಸೂತ್ರ ಭಾಷ್ಯ ಓದಿದರು. ಅದರದೇ ಫಲ 'ಮಧ್ವ ಸಿದ್ಧಾಂತ ಪ್ರವೇಶಿಕೆ' ಮತ್ತು 'ಮಧ್ವರ ಪೂರ್ಣಬ್ರಹ್ಮ ಫಿಲಾಸಫಿ' (ಇಂಗ್ಲೀಷಿನಲ್ಲಿ). ಕರ್ನಾಟಕ ರಾಜ್ಯೋದಯದ ನಂತರ (೧೯೫೮) ಅವರು ಬರೆದ ವಿವರಣೆಯ ಗ್ರಂಥವೆಂದರೆ 'ಕರ್ನಾಟಕತ್ವ ವಿಕಾಸ'!

ಗಡಿಯಾರದ ತಾಸಿನ ಮುಳ್ಳು ಮಾತ್ರ ಕಾಣುತ್ತದೆ. ಆದರೆ ಅದರ ಅಂತರಂಗ ಚಕ್ರಗತಿ ಯಾರಿಗೆ ತಿಳಿಯುತ್ತದೆ? ಹಾಗೆ ತಮ್ಮ ಜೀವನದ ಅವ್ಯಕ್ತ ಸುಳಿಗಳನ್ನವರು ಯಾವಾಗಲೂ ತಮ್ಮ ಮಾತಿನಲ್ಲಿ, ಬರಹಗಳಲ್ಲಿ ಮತ್ತೆ ಮತ್ತೆ ಹೇಳುತ್ತಾರೆ.

ಶ್ರೀ ಆಲೂರವರನ್ನು ಕನ್ನಡಿಗರು ತಮ್ಮ ಕುಲ ಪುರೋಹಿತರೆಂದು ಗೌರವಿಸಿದ್ದಾರೆ. ಕರ್ನಾಟಕ ರಾಜ್ಯೋದಯದ ದಿನದಂದು ಅವರು ಕಂಡ ದಿವ್ಯಸ್ವಪ್ನದ ಹಂಪೆಯಲ್ಲಿ ಕನ್ನಡಿಗರು ಈ ಪುರೋಹಿತರಿಂದಲೇ ಕುಂಭ ಪೂಜೆ ಮಾಡಿಸಿದರು.

ತಾವು ಕಂಡ ಕನಸನ್ನು ನನಸಾಗಿ ಕಾಣುವ ಭಾಗ್ಯ ಎಷ್ಟು ಜನಕ್ಕಿರುತ್ತದೆ? ಈ ಐಕ್ಯಯೋಗ ರಾಷ್ಟ್ರಜೀವನಕ್ಕೆ ಅನ್ವಯಿಸುವಂಥದು. ಒಂದು ವ್ಯಕ್ತಿ ಜೀವನ ರಾಷ್ಟ್ರಜೀವನದ ಶ್ವಾಸೋಚ್ಛ್ವಾಸದಲ್ಲಿ ತನ್ನ ಮಾತನ್ನುಸಿರಿ, ಅದರ ಎಲ್ಲಾ ಯತ್ನಗಳಲ್ಲಿ ತನ್ನನು ತೇಯ್ದುಕೊಂಡು ಬಾಳಿ-ಬದುಕಿ ಅದರ ಯಶಸ್ಸನ್ನೂ ಐಕ್ಯವನ್ನೂ ಕಾಣುವುದಕ್ಕೆ ಸಾಕ್ಷಿಯಾಗಿರುವುದೇನು ಸುಮ್ಮನೆ ಘಟಿಸುವ ಮಾತಲ್ಲ. ಮನುಷ್ಯನ ಯತ್ನಗಳ ಹಿಂದೆ ಒಂದು ದೈವೀಸಂಕಲ್ಪವೂ ಇರುತ್ತದೆನ್ನುತ್ತಾರೆ.

ಇವರ ಮಡದಿ ಸೌ. ಲಕ್ಷ್ಮೀಬಾಯಿಯವರು ಪತಿಯ ಎಲ್ಲ ಚಟುವಟಿಕೆಗಳಿಗೂ ತಮ್ಮ ತಟಸ್ಥ ಧೋರಣೆಯಿಂದ ನೆರವಾದರು. ಅವರು ಹಳೆಯ ಕಾಲದ ಶ್ರದ್ಧಾಜೀವಿ. ಪತಿಯನ್ನು ಅನುಸರಿಸುವುದು— ಅದೇ ಧರ್ಮವೆಂದು ನಂಬಿದವರು. ಹಾಗೇ ನಡೆದುಕೊಂಡರು.

ಇವರ ಸುತ್ತಾಟ, ದಿಗ್ಬಂಧನಗಳ ಕಾಲವನ್ನೆಲ್ಲ ಅವರು ಒಂಟಿಯಾಗಿ, ಧೈರ್ಯದಿಂದ ಎದುರಿಸಿದರು. ಗಂಡನ ಪುಣ್ಯಕಾರ್ಯದ ಅರ್ಧ ಫಲ ಹೆಂಡತಿಗೆ ಯಾಕೆ ಹೋಗುತ್ತದೆಂಬುದನ್ನು ಆಲೂರವರು ತಮ್ಮ ಮಡದಿಯ ಅಚಲನಿಷ್ಠೆಯಿಂದ ಅರಿತುಕೊಂಡರು.

ಚಲೇಜಾವ್ ಚಳವಳಿಯಲ್ಲಿ ಇವರ ಹಿರಿಯ ಮಗ ಭೀಮರಾಯ, ನಂತರದ ಮೂರನೆಯ ಮಗ ಕೃಷ್ಣರಾಯ ತಂದೆಯ ಪಾಲಿನ ಸೇವೆಯನ್ನು ಸಕ್ರಿಯವಾಗಿ ಸಲ್ಲಿಸಿದರು.

ಇದಕ್ಕೂ ಅವರ ತಾಯಿಯ ಸಹಕಾರವಿತ್ತು.

ಈಗ ಹತ್ತು ವರುಷವಾಯಿತು ವೆಂಕಟರಾಯರಿಗೆ ಮಡದಿಯ ನೆರೆ ತಪ್ಪಿ. ಅವರು ಪುಣ್ಯ ಭಾಜನರಾದರು.

ಅವರ ನಾಲ್ವರು ಗಂಡು ಮಕ್ಕಳು ಸುಶೀಲರಾಗಿ ಕಾರ್ಯತತ್ಪರರಾಗಿ ಒಳ್ಳೆಯ ಬದುಕನ್ನು ಬಾಳುತ್ತ ತಂದೆಯನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ. ಇವರಿಗೆ ಒಬ್ಬಳೇ ಮಗಳು. ಆಕೆ, ಒಬ್ಬ ಸಾಹಿತಿ-ಶಿಕ್ಷಕನ ಮಡದಿಯಾಗಿ ಪುತ್ರವತಿಯಾಗಿ ಎರಡೂ ಮನೆಯ ಕರುಳಿನ ಬಳ್ಳಿಯಾಗಿದ್ದಾಳೆ.

ಆಲೂರವರಿಗೆ ಭಾರತದ ರಾಜಕೀಯ ಸ್ವಾತಂತ್ರ್ಯದಿಂದ ತೃಪ್ತಿಯಿಲ್ಲ. ಇನ್ನು ಬರಬೇಕಾದದ್ದು ಧರ್ಮಸಾಮ್ರಾಜ್ಯ-ಎನ್ನುತ್ತಾರವರು. ಅದಕ್ಕೆ ಅವತಾರಪುರುಷನೇ ಬರಬೇಕು- ಎಂದವರ ಮತ. ಮಾನವನ ಪೌರುಷವನ್ನು ಮೀರಿದ ಕಾರ್ಯವದು. ದೇವರೇ ಅವತರಿಸಬೇಕು!

ಕರ್ನಾಟಕ ಹಿಂದೆ ಅಂಥ ದೈವಯೋಗವನ್ನು ಕಂಡಿತ್ತು. ಮುಂದೆಯೂ ಈ ನಾಡಿನಿಂದಲೇ ರಾಷ್ಟ್ರದ ಧರ್ಮಜಾಗ್ರತಿಯಾಗಲಿ ಎಂದವರು ಹಾರೈಸುತ್ತಾರೆ.

ಅಲ್ಲಿಯೂ ಅವರು ಕರ್ನಾಟಕದ ಗುರಿಯನ್ನು ಬಿಟ್ಟವರಲ್ಲ ನಮ್ಮ ಯಜಮಾನರದು ಇನ್ನೊಂದು ಸಣ್ಣ ಆಕಾಂಕ್ಷೆಯಿದೆ. ಹೆಸರಿನಲ್ಲೇನಿದೆ? ಎಂಬುದು ಆತ್ಮಘಾತಕ ಧೋರಣೆ. ಕರ್ನಾಟಕ —ಎಂಬುದು ಹೆಸರು ಮಾತ್ರವಲ್ಲ ಅದು ನಮ್ಮ ಬದುಕಿನ ಗಾಯತ್ರಿ. ನಮ್ಮ ನಾಡನ್ನು ಹೀಗೆ ಕರೆಯುವ ಬುದ್ಧಿ ಇಂದಿನ ರಾಜಕಾರಣಿಗಳಿಗೆ ಉಂಟಾಗಲಿ—ಎಂಬುದೇ ಅವರ ಆಸೆ. *

ಅಮೃತ ಬಿಂದುಗಳು

ಸಂಗ್ರಹ: ಹೆಬ್ಬಾರ್

ಧರ್ಮವಿಲ್ಲದ ಮನುಷ್ಯನು ಚುಕ್ಕಾಣಿಯಿಲ್ಲದ ಹಡಗಿನಂತೆ. —ಗಾಂಧೀಜಿ

ಹೊಗಳು ಭಟ್ಟರ ನಡುವೆ ಬೀಳುವುದಕ್ಕಿಂತ ಕಾಗೆಗಳ ನಡುವೆ ಬೀಳುವುದೇ ಲೇಸು. ಯಾಕೆಂದರೆ ಕಾಗೆಗಳು ಸತ್ತವರನ್ನು ಮಾತ್ರ ತಿನ್ನುತ್ತವೆ. ಆದರೆ ಹೊಗಳು ಭಟ್ಟರು ಜೀವಂತ ವ್ಯಕ್ತಿಗಳನ್ನೇ ನಾಶ ಮಾಡುತ್ತಾರೆ. —ಆಂಟಿಸ್ಥಿನಿಸ್

ಮೂರ್ಖರನ್ನು ಅವರವರ ಮೂರ್ಖತನಕ್ಕನುಸಾರವಾಗಿ ಉಪಯೋಗಿಸಿಕೊಳ್ಳಬೇಕು. —ಜೋಸೆಫ್ ಕೊನ್ರಾಡ್

ಮನೆಯ ಕದನವನು ಪರರೊಳು ಪೇಳದವ ಕಡುಜಾಣ. —ನಿಜಲಿಂಗ ಕವಿ

ದುಷ್ಟನು ಸಾಧುವಿನಂತೆ ನಟಿಸುವಾಗ ಅತಿ ದುಷ್ಟನಾಗುವನು. —ಬೇಕನ್

ಭಿಕ್ಷೆ ಬೇಡಿ ಜಗತ್ಪತಿ ವಿಷ್ಣು ವಾಮನನಾದ. ಬೇಡಿ ಕೀಳೆನಿಸದಿರುವಷ್ಟು ಶ್ರೇಷ್ಠನಾರು? —ಭಾಗವತ

"ಜಾಣೆ ಜಾಣನು ಕೂಡಲದು ತಂತಿಗೂಡಿದ
ವೀಣೆಯು ನುಡಿಸಿದಂತಿಹುದು
ಜಾಣೆ ಹೆಡ್ಡನ ಕೂಡಲಿಹುದದು ವೀಣೆಗೆ
ನೇಣು ಬಿಗಿದು ಮಿಡಿದಂತೆ"

—ಭರತೇಶ ವೈಭವ

ದುರ್ಜನನು ವಿದ್ಯಾಭೂಷಿತನಾದರೂ ಅವನನ್ನು ನಾಗಮಣಿ ಭೂಷಿತನಾದ ಸರ್ಪದಂತೆ ಕಾಣಬೇಕು. —ಭರ್ತೃಹರಿ

ನಾನು ದಾಸನಾಗಿರಲು ಯಾವ ರೀತಿ ಒಪ್ಪಲಾರೆನೋ ಹಾಗೆಯೇ ಪ್ರಭುವಾಗಿರಲೂ ಒಪ್ಪಲಾರೆ. ಇದೇ ಪ್ರಜಾಪ್ರಭುತ್ವವೆಂದು ನನ್ನ ಅಭಿಪ್ರಾಯ. —ಅಬ್ರಹಾಂ ಲಿಂಕನ್

ಯುಗದ ಆದರ್ಶಗಳು ದೈನಂದಿನ ಚಟುವಟಿಕೆಗಳಲ್ಲಿ ಪ್ರತಿಬಿಂಬಿತವಾಗಿರುತ್ತವೆ. —ಸ. ರಾಧಾಕೃಷ್ಣನ್

ಶಾಶ್ವತ ಶಾಂತಿಯನ್ನು ನಂಬದಿರುವುದೆಂದರೆ ಮಾನವ ಸ್ವಭಾವದಲ್ಲಿಯ ದೈವೀ ಗುಣವನ್ನು ನಂಬದಂತೆಯೇ ಸರಿ. —ಗಾಂಧೀಜಿ



ಅಮರ ನಗರ: ವೆನಿಸ್

ವಿವಿಧ ಮೂಲಗಳಿಂದ

ಗತವೈಭವದ ಮೇಲೆಯೆ ಯಾರಿಗೂ ಬದುಕಲು ಬಾರದು ಎಂದು ಹೇಳುತ್ತಾರೆ. ಆದರೆ ಒಂದು ನಗರ ಕೇವಲ ಗತವೈಭವದಿಂದಲೇ ಬದುಕನ್ನು ಸಾಗಿಸುತ್ತಿದೆ. ಅದೇ ವೆನಿಸ್.

ಯುರೋಪನ್ನು ಕಾಣಲು ಯೋಜಿಸುವವರಾರೂ ತಮ್ಮ ಪಟ್ಟಿಯಲ್ಲಿ ವೆನಿಸನ್ನು ಸೇರಿಸಲು ಮರೆಯುವಂತಿಲ್ಲ. ಇಟಲಿಯ ಪೂರ್ವಕ್ಕೆ ಅಡ್ರಿಯಾಟಿಕ್ ಸಮುದ್ರದಲ್ಲಿ ಕರಾವಳಿಯಿಂದ ಎರಡೂವರೆ ಮೈಲು ದೂರದಲ್ಲಿರುವ ಕೆಸರಿನ ದ್ವೀಪದ ಮೇಲೆ ನಿಂತ ಈ ಪಟ್ಟಣವನ್ನು ನೋಡಲು ಪ್ರತಿ ವರ್ಷ ಶರತ್, ವಸಂತ ಕಾಲಗಳಲ್ಲಿ ಲಕ್ಷೋಪಲಕ್ಷ ಜನರು ಬರುತ್ತಾರೆ. ಪ್ರತಿಯೊಬ್ಬನೂ ಅದರ ಸೌಂದರ್ಯದಿಂದ, ವೈಲಕ್ಷಣ್ಯದಿಂದ ಮುಗ್ಧನಾಗುತ್ತಾನೆ

ವೆನಿಸಿನಂಥ ಪಟ್ಟಣ ಜಗತ್ತಿನಲ್ಲೆಲ್ಲಿಯೂ ಇಲ್ಲ. ಹದಿನೆಂಟು ವರ್ಷದ ತರುಣಿಯೊಬ್ಬಳು ಪೌರಸ್ತ್ಯ ಪಾಶ್ಚಾತ್ಯ ಸಂಸ್ಕೃತಿ ಕಲೆಗಳ ಅಸಂಖ್ಯ ಒಡವೆ ತೊಡವೆಗಳಿಂದ ನಖಶಿಖಾಂತವಾಗಿ ಅಲಂಕರಿಸಿಕೊಂಡು ನೀರಲ್ಲಿ ಬಿದ್ದ ತನ್ನ ಪ್ರತಿಬಿಂಬವನ್ನು ನೋಡುತ್ತ ಪರವಶಳಾಗಿ, ಕಾಲದ ಗಮನವನ್ನು ಸ್ಥಗಿತಗೊಳಿಸಿ ನಿಂತು ಬಿಟ್ಟಹಾಗಿದೆ ವೆನಿಸಿನ ದೃಶ್ಯ. ಆಧುನಿಕ ನಾಗರಿಕತೆ ಇಲ್ಲಿ ರೇಲ್ವೆ ರೂಪದಲ್ಲಿ ದೂರದಿಂದ ನಿಂತು ನೋಡುತ್ತದೆ. ಹಡಗುಗಳಾಗಿ ಪಕ್ಕದಿಂದ ಸಾಗಿ ಹೋಗುತ್ತದೆ. ವಿಮಾನಗಳಾಗಿ ತಲೆಯ ಮೇಲಿಂದ ಹಾರಿ ಹೋಗುತ್ತದೆ— ಆದರೆ ಅದರೊಳಗೆ ಪ್ರವೇಶ ಪಡೆಯುವುದಿಲ್ಲ.


ವೆನಿಸಿನಲ್ಲಿ ಮೋಟಾರು ಕಾರುಗಳಿಲ್ಲ. ಬಸ್ಸುಗಳಿಲ್ಲ, ಟ್ರಕ್ಕುಗಳಿಲ್ಲ. ಇಟಲಿಯ ಭೂಖಂಡದಿಂದ ನೀವು ಇಲ್ಲಿಯ ಹೊರ ವಲಯದವರೆಗೆ ಮಾತ್ರ ಎರಡೂವರೆ ಮೈಲಿನ ಕಾಜ್‌ವೇ ಮೂಲಕ ರೈಲಿನಲ್ಲಿ ಬರಬಹುದು. ಅಥವಾ ಕಾರಿನಲ್ಲಿ ಬರಬಹುದು. ಆದರೆ ದೇವರನ್ನು ಕಾಣಹೋಗುವವನು ತನ್ನ ಅಹಂಕಾರವನ್ನು ದೂರಬಿಟ್ಟು ಹೋಗುವಂತೆ ನಿಮ್ಮ ಕಾರನ್ನು ರೇಲ್ವೆ ನಿಲ್ದಾಣದ ಬಳಿ ಬಿಟ್ಟು ತಾನೆ ವೆನಿಸಿನ ಅಂತರಂಗವನ್ನು ಪ್ರವೇಶಿಸಬೇಕು.

ಕಾರಣ ಬೇರೇನೂ ಅಲ್ಲ. ವೆನಿಸು ರಸ್ತೆಗಳೇ ಇಲ್ಲದ ನಗರ— ಆದ್ದರಿಂದ (ಚಿಕ್ಕ ಟ್ರಾಲಿಗಳನ್ನು ಬಿಟ್ಟರೆ) ಚಕ್ರಗಳೇ ಇಲ್ಲದ ನಗರ. ಇಲ್ಲಿ ಕಾಲುವೆಗಳೇ ರಸ್ತೆಗಳು. "ಗೊಂಡೋಲ"ಗಳೆಂಬ ಇಲ್ಲಿ ಮಾತ್ರವೇ ಕಟ್ಟಲಾಗುವ ಒಂದು ಪಕ್ಕ ಕಿರಿದಾದ ದೋಣಿಗಳೇ ಇಲ್ಲಿನ ಕಾರು

ಗಳು, ಬಸ್ಸುಗಳು, ಟ್ಯಾಕ್ಸಿಗಳು. (ಇಪ್ಪತ್ತನೇ ಶತಮಾನಕ್ಕೆ ರಿಯಾಯತಿ ಕೊಡಲಾಗಿದೆಯೋ ಎಂಬಂತೆ ಅವುಗಳಲ್ಲಿ ಮೋಟಾರ್ ಬೋಟುಗಳೂ ಈಗ ಲಾಂಚುಗಳೂ ಓಡಾಡುತ್ತವೆ) ವೆನಿಸು ಪಟ್ಟಣದ ಸಮ್ಮೋಹನ ಶಕ್ತಿಗೆ ಇದೂ ಒಂದು ಕಾರಣವಾಗಿರಬೇಕು. ಎಲ್ಲೆಲ್ಲಿಯೂ ಕಾಲುವೆಗಳಲ್ಲಿ ಕಾಣುವ ಸೌಧಗಳ ಪ್ರತಿಬಿಂಬಗಳು ಪ್ರೇಕ್ಷಕನನ್ನು ಯಾವುದೋ ಮಾಯಾ ನಗರದಲ್ಲಿ ಹಿಡಿದುಬಿಟ್ಟಂತೆ ಮಾಡುತ್ತವೆ.

ವೆನಿಸಿನ ಕಥೆ ೧೫ ಶತಮಾನ ಹಿಂದೆ ಪ್ರಾರಂಭವಾಗಿ ಎರಡು ಶತಮಾನ ಹಿಂದೆ ಥಕ್ಕನೆ ನಿಂತುಹೋಗುತ್ತದೆ. ೧೫೦೦ ವರ್ಷಗಳ ಹಿಂದೆ ಉತ್ತರದಿಂದ ಇಟಲಿಯ ಮೇಲೆ ಅನಾಗರಿಕ ತಂಡಗಳ ದಾಳಿಯಾಗಿ ಸಮೃದ್ಧವಾದ ರೋಮನ್ ಸಾಮ್ರಾಜ್ಯ ನೆಲಸಮವಾದಾಗ ಓಡಿ ಬಂದವರು ಈ ಕೆಸರಿನ ಕುದುರಿನಲ್ಲಿ ತಳವೂರಿದರು. ಕಾಲಾಂತರದಲ್ಲಿ ಅದು ಒಂದು ಸ್ವತಂತ್ರ ನಗರ ರಾಜ್ಯವಾಗಿ ಬೆಳೆಯಿತು. ಭೂಮಧ್ಯ ಸಮುದ್ರದ ಅತಿ ಪ್ರಬಲವಾದ ನೌಕಾಶಕ್ತಿಯನ್ನು ಸಂಪಾದಿಸಿತು. ಅದರ ೩೩೦೦ ಹಡಗುಗಳು ಭೂಮಧ್ಯ ಸಮುದ್ರವನ್ನೇ ತಮ್ಮ ವಶದಲ್ಲಿಟ್ಟುಕೊಂಡಿದ್ದವು. ಭಾರತಾದಿ ಪೂರ್ವ ದೇಶಗಳ ವ್ಯಾಪಾರವೆಲ್ಲ ಈ ಒಂದು ನಗರದ ವರ್ತಕರಾಜರ ಗುತ್ತಿಗೆಯಾಗಿತ್ತು. ಅದು ಅರ್ಧ ಜಗತ್ತಿಗೇ ಸಾವುಕಾರನಾಗಿತ್ತು.

ಒಂದು ಸಾವಿರ ವರ್ಷಗಳ ವೈಭವ ಕಾಲದಲ್ಲಿ ಅದು ತನ್ನ ಸಂಪತ್ತನ್ನು ಕಲಾ ಪ್ರೋತ್ಸಾಹನಕ್ಕಾಗಿ ಸೂರೆಬಿಟ್ಟಿತು. ಆಯಾ ಕಾಲದ ಶ್ರೇಷ್ಠತಮ ಕಲಾಕಾರರನ್ನು ಕರೆತಂದು ಅದು ನಗರವನ್ನು ಅಲಂಕರಿಸಿತು. ಬೆಳಿ ಬಂಗಾರ ರತ್ನವಜ್ರಗಳು ಕಟ್ಟಡಗಳನ್ನು ಸಿಂಗರಿಸಿದವು.





ಆ ಮೇಲೆ ಒಮ್ಮೆಲೆ ಅದರ ಅವನತಿ ಪ್ರಾರಂಭವಾಯಿತು. ಪೌರಸ್ತ್ಯ ವ್ಯಾಪಾರದ ಪಾಲು ಸಿಗದ ಯುರೋಪಿನ ರಾಷ್ಟ್ರಗಳು ಭೂಮಧ್ಯ ಸಮುದ್ರ ಬಿಟ್ಟು ಬೇರೊಂದು ವ್ಯಾಪಾರ ವರ್ಗಕ್ಕಾಗಿ ಹಂಬಲಿಸುತ್ತಿದ್ದಾಗ ವಾಸ್ಕೊ ದ ಗಾಮನು ಆಫ್ರಿಕವನ್ನು ಸುತ್ತಿ ಭಾರತವನ್ನು ತಲುಪಿದನೆಂದು ವಾರ್ತೆ ಬಂತು. ಭೂಮಧ್ಯ ಸಮುದ್ರಕ್ಕಿದ್ದ ಮಹತ್ವ ಇಳಿದು ಹೋಯಿತು. ಈ ಸುದ್ದಿ ಬಂದ ಕೆಲವೇ ದಿನಗಳಲ್ಲಿ ವೆನಿಸಿನ ಅನೇಕ ಬ್ಯಾಂಕುಗಳು ದಿವಾಳಿಯೆದ್ದು ಹೋದವಂತೆ. ಆ ಮೇಲೆ ಉತ್ತರ ಆಫ್ರಿಕದಲ್ಲಿದ್ದ ವೆನಿಸಿನ ಸಾಮ್ರಾಜ್ಯವನ್ನು ತುರುಕರು ಕಸಿದುಕೊಂಡರು. ಕೆಲ ಕಾಲ ವೆನಿಸು ತನ್ನ ಸಂಚಿತ ಸಂಪತ್ತಿನ ಮೇಲೆ ಹುಚ್ಚು ದುಂದುಗಾರಿಕೆ ವಿಲಾಸಗಳಿಂದ ಬಾಳಿತು. "ಹೆಂಗಸರು ಗಂಡಸರಾದರು; ಗಂಡಸರು ಹೆಂಗಸರಾದರು; ಎಲ್ಲರೂ ಮಂಗಗಳಾದರು."

ಕೊನೆಯದಾಗಿ ನೆಪೋಲಿಯನ್ನನ ಪಡೆಗಳು ಅಜೇಯ ವೆನಿಸನ್ನು ಜಯಿಸಿದವು. ಗಾರಿಬಾಲ್ಡಿಯ ಸಾಹಸದಿಂದ ಇಟಲಿಯ ಏಕೀಕರಣವಾದಾಗ ವೆನಿಸ್ ಇಟಲಿಯ ಅಂಗವಾಗಿ ಹೋಯಿತು. ಆದರೆ ಪೂರ್ವ ಪಶ್ಚಿಮಗಳೆರಡರಿಂದಲೂ ಪ್ರಭಾವಿತವಾದ ಆದರೆ ಎರಡರಿಂದಲೂ ಪ್ರತ್ಯೇಕವಾಗಿ ನಿಂತ ಅದು ನೂತನ ಜಗತ್ತಿನ ಆಗುಹೋಗುಗಳಲ್ಲಿ ಬೆರೆಯಲಾರದೆ ಬೇರೆಯಾಗಿಯೆ ನಿಂತುಬಿಟ್ಟಿದೆ. ವೆನಿಸಿನ ಜನ ಕೂಡ ತಮ್ಮ ಸುತ್ತಲಿನ ಇಟಾಲಿಯನ್ನರಿಂದ ಭಿನ್ನರಾಗಿ ಕಾಣಿಸುತ್ತಾರೆ. ಇಟಾಲಿಯನ್ನರು ಕರಿ ಕೂದಲಿನವರಾದರೆ ಇವ

ರದು ಕೆಂಚು. ಇವರ ಭಾಷೆಯಲ್ಲೂ— ಅದು ಇಟಾಲಿಯನ್ನೇ ಆದರೂ— ಅವರ ಪೂರ್ವ ಪಶ್ಚಿಮ ವಾಣಿಜ್ಯೇತಿಹಾಸದ ಕುರುಹಾಗಿ ಫ್ರೆಂಚ್, ಜರ್ಮನ್, ಗ್ರೀಕ್, ಅರಬ್ಬಿಗಳ ಮಿಶ್ರಣವಿದೆ.

ವೆನಿಸಿನಲ್ಲಿ ಎಲ್ಲವೂ ಪಿಯಾಜಾ ಸಾನ್ ಮಾರ್ಕೋದಿಂದ ಪ್ರಾರಂಭವಾಗಿ ಅಲ್ಲೇ ಮುಕ್ತಾಯವಾಗುತ್ತದೆ ಮೂರೆಕರೆ ವಿಸ್ತಾರ ವಾದ ವೆನಿಸಿನ ಈ ಮುಖ್ಯ ಚೌಕದಲ್ಲಿ ಕ್ರೈಸ್ತ ಧರ್ಮದ ಮಹಾ ಗುರುಗಳಲ್ಲೊಬ್ಬನಾದ ಸಂತ ಮಾರ್ಕನ ಸಮಾಧಿ ಇದೆ. ವೆನಿಸಿನ ವರ್ತಕರು ಕ್ರಿ. ಶ ೯ ನೇ ಶತಮಾನದಲ್ಲಿ ಅಲೆಗ್ಸಾಂಡ್ರಿಯ ದಲ್ಲಿದ್ದ ಸಂತ ಮಾರ್ಕನ ಕಳೇವರವನ್ನು ಕಳವು ಮಾಡಿ ತಂದು ಇಲ್ಲಿ ಹುಗಿದು ಸಮಾಧಿ ಸ್ಥಾಪಿಸಿದರು.

ಆ ದಿನಿಂದ ಹತ್ತು ಶತಮಾನ ಕಾಲ ಈ ಸಮಾಧಿಯನ್ನು ಬೆಳಸಿ ಸಿಂಗರಿಸುವುದಕ್ಕಾಗಿ ಅಸಂಖ್ಯ ಶಿಲ್ಪಿಗಳು ತಮ್ಮ ಕೌಶಲವನ್ನು ವಿನಿಯೋಗಿಸಿದರು. ಅದು ಸುಂದರವಾದ ಬುರಜುಗಳುಳ್ಳ ಕಟ್ಟಡ. ಅದರ ಕಮಾನುಗಳು ಲೆಕ್ಕವಿಲ್ಲದಷ್ಟು ಕಂಬಗಳು ತಮ್ಮ ಸೌಂದರ್ಯದಿಂದ ರಸ್ಕಿನ್ನನಂಥ ವಿಮರ್ಶಕನನ್ನೂ ಮರುಳುಗೊಳಿಸಿವೆ. ವೆನಿಸಿನ ವರ್ತಕರು ರತ್ನಗಳಿಗಾಗಿ ಜಗತ್ತನ್ನೇ ಬಾಚಿ ತಂದು ಇಲ್ಲಿನ ಅಸಂಖ್ಯ ಮೂರ್ತಿಗಳನ್ನು ರತ್ನಖಚಿತವಾಗಿ ಮಾಡಿದರು. ಎಲ್ಲೆಲ್ಲಿಂದಲೋ ಅಮೂಲ್ಯ ಶಿಲ್ಪಗಳನ್ನು ಕೊಂಡು, ಕದ್ದು ತಂದರು. ಇಲ್ಲಿನ ಮಹಾದ್ವಾರದೆದುರಿರುವ ನಾಲ್ಕು ಕುದುರೆಗಳನ್ನು ಅಲೆಗ್ಸಾಂಡರನ ಕಾಲದಲ್ಲಿ ಎರಕ ಹೊಯ್ಯಲಾಗಿತ್ತು. ೧೨೦೪ ರಲ್ಲಿ ವೆನಿಸಿನವರು ಕಾನ್‌-ಸ್ಟಾಂಟಿನೋಪಲಿನಿಂದ ಅವನ್ನು ಅಪಹರಿಸಿ ತಂದು ಇಲ್ಲಿ ಸ್ಥಾಪಿಸಿದರು

ಅನಂತರ ೧೩ ನೇ ಶತಮಾನದಲ್ಲಿ ರಚಿಸಲಾದ ಸಾನ್ ಮಾರ್ಕೋದ ರತ್ನಖಚಿತ ಮೊಜೈಕ್ ಚಿತ್ರಗಳು ಅನುಪಮವಾಗಿವೆ. ಹತ್ತಿ

ರವೇ ಡೋಗೇ ಅರಮನೆ. ಇದು ವೆನಿಸಿ ಡ್ಯೂಕರ ನಿವಾಸ. ಹೊರನೋಟಕ್ಕೆ ಇದ ಉನ್ನತ ಪ್ರಾಕಾರಗಳಿಂದ ಆವೃತವಾದ ಕೋಟೆ ಒಳಗೆ ಮಾತ್ರ ಶಿಲ್ಪ ಚಿತ್ರಕಲೆಗಳ ಮಾಯಾ ಜಾಲ. ಗಾಥಿಕ್ ಶೈಲಿಯ ಇಲ್ಲಿಯ ಕಮಾನು ಗಳು ಸಾನ್ ಮಾರ್ಕೋದ ಮುಸ್ಲಿಂ ಪ್ರಭಾವದ ಬುರುಜುಗಳಿಗಿಂತ ವಿಪರೀತವಾದೊಂದು ಶೋ ಭೆಯನ್ನು ಪ್ರಕಟಿಸುತ್ತವೆ. ಮೂವತ್ತು ದೊಡ್ಡ ಕೊಟಡಿಗಳಲ್ಲಿ ಇಲ್ಲಿನ ಗೋಡೆ–ಮುಚ್ಚಿಗೆಗಳಲ್ಲಿ ಪಾವ್‌ಲೋ ವೆರೊನೀಸ್, ಟಿಂಟರೆಟೋ, ಟೈಟ ನರ ಚಿತ್ರಕಲಾಸಂಪತ್ತು ಕೆದರಿಬಿದ್ದಿದೆ. ಕೆಲ ವಿಶ್ವಪ್ರಸಿದ ಚಿತ್ರಗಳು ಇಲ್ಲಿವೆ.

ಈ ಅರಮನೆ ಅಧಿಕಾರ, ಕುತಂತ್ರ, ಸಂ-ಪತ್ತು, ಕೊಲೆ, ಕ್ರಾಂತಿಗಳ ಇತಿಹಾಸ ಭಾ ವನ್ನು ಹೊತ್ತಿದೆ. ಇದರ ಸಮೀಪವೇ ಇರುವ "ದುಃಖಸೇತು" ವಿನಾಚೆಗಿರುವ ಸೆರೆಮನೆಗಳ



ಅಮಾನುಷ ಚಿತ್ರಹಿಂಸೆಯ ಬೀಡುಗಳಾಗಿದ್ದವು.

ಹತ್ತಿರವೇ ೧೫ ನೇ ಶತಮಾನದಲ್ಲಿ ತಲೆಯೆತ್ತಿದ ಗಡಿಯಾರ ಗೋಪುರದಲ್ಲಿ ಪ್ರಚಂಡ ಗಂಟೆಯೊಂದನ್ನು ಕಂಚಿನ ದೈತ್ಯಮೂರ್ತಿಯೊಂದು ತಾಸಿಗೊಮ್ಮೆ ಸುತ್ತಿಗೆಯಿಂದ ಬಾರಿಸುತ್ತದೆ. ಗೋಪುರದ ತುದಿಯಲ್ಲಿ ರೆಕ್ಕೆಯುಳ್ಳ ಸಿಂಹದ ಮೂರ್ತಿ ನೆಲದಿಂದ ೩೨೩ ಅಡಿ ಎತ್ತರದಲ್ಲಿ ಆಕಾಶವನ್ನು ಭೇದಿಸಿದೆ.

ಮಧ್ಯಾಹ್ನದ ೧೨ ಬಾರಿಸಲಾಗುವಾಗ ಇಲ್ಲೊಂದು ಅಪೂರ್ವ ದೃಶ್ಯ ಕಂಗೊಳಿಸುತ್ತದೆ. ಬಾನಿನಲ್ಲಿ ಪಾರಿವಾಳಗಳ ಸಂತೆಯೊಂದು ನೆರೆದು ಕೊಡೆಯನ್ನು ಹಿಡಿದಂತೆ ಮಾಡುತ್ತವೆ. ಗಂಟೆ ಬಾರಿಸುವುದೇ ತಡ, ಅವು ಕೆಳಗಿಳಿಯುತ್ತವೆ. ಅಲ್ಲಿ ಅವಕ್ಕೆ ಕಾಳುಗಳನ್ನು ಉಣಿಸುತ್ತಾರೆ. ಇಷ್ಟು ನಿರ್ಭಯ ಪಾರಿವಾಳಗಳು ಸಿಗುವುದು ಕಷ್ಟ. ಅವು ಗುರುತಿಲ್ಲದವರ ಕೈಯಿಂದಲೂ ಕಾಳು ಉಣ್ಣಲು ಹೆದರುವುದಿಲ್ಲ.

ಸಾನ್ ಮಾರ್ಕೊ ಚೌಕದಲ್ಲಿರುವ ಮ್ಯೂಜಿಯಂನಲ್ಲಿ ೧೩, ೧೪ನೇ ಶತಮಾನಗಳ ನೂರಾರು ಸುಂದರ ಚಿತ್ರಗಳಿವೆ. ಅವು ವೆನಿಸಿನ ಪ್ರಾಚೀನ ವೈಭವವನ್ನೆಲ್ಲ ಚಿತ್ರಿಸುತ್ತವೆ.

ವೆನಿಸಿನಲ್ಲಿ ನೂರಾರು ಪ್ರೇಕ್ಷಣೀಯ ಕಟ್ಟಡಗಳಿವೆ. ಸುಮಾರು ೭೦ ನೋಡಲೇಬೇಕಾದವೆಂದು ಇಲ್ಲಿನ ಮಾರ್ಗದರ್ಶಕರು ಹೇಳುತ್ತಾರೆ. ವೆನಿಸಿನ ಅಧಿಕೃತ ಮಾರ್ಗದರ್ಶಕರಿಗೆ ಬಿಗಿಯಾದ ಪರೀಕ್ಷೆಗಳಿವೆ–ಅವರಿಗೆ ಇಲ್ಲಿಯ ಕಲ್ಲು ಕಲ್ಲಿನ ಕಥೆ ಗೊತ್ತಿರಬೇಕು. ವೆನಿಸಿನ ಪ್ರಾಚೀನ ಪ್ರಮುಖರ ಚರಿತ್ರೆ ತುದಿಬೆರಳಲ್ಲಿರಬೇಕು. ಇಲ್ಲಿಯ ರೇವಿನಲ್ಲಿ ಹಿಂದೆ ಜಗತ್ತಿನ ಅತಿ ಪ್ರಚಂಡ ಹಡಗು ಕಟ್ಟುವ ಕೇಂದ್ರವಿತ್ತೆಂದೂ ಅಲ್ಲಿ ದಿನಕ್ಕೊಂದು ಹಡಗು ಕಟ್ಟುತ್ತಿದ್ದರೆಂದೂ ಅವರು ಹೇಳುತ್ತಾರೆ. ಶೇಕ್ಸ್ಪಿಯರನ ಪ್ರಸಿದ್ಧ ಪಾತ್ರವಾದ ಯಹೂದ್ಯ ಶೈಲಾಕನ ಅಂಗಡಿ ಇಲ್ಲೇ ಇತ್ತೆಂದು ರಿಯಾಲ್ಟೋ ಸೇತುವೆಯ ಬಳಿ ಒಂದು ಸ್ಥಳವನ್ನು ತೋರಿಸುತ್ತಾರೆ. ಟೈಟಿಯನ್, ಜಿಯೋವನಿ ಬೆಲ್ಲಿನಿ, ಜಾರ್ಜಿಯನ್, ಕನಲೆಟ್ಟೋ, ವಿರೊನಿಸ್ ಮೊದಲಾದ ಕಲಾಬ್ರಹ್ಮರು ಇಲ್ಲಿ ಸೃಷ್ಟಿಸಿದ ವಿಶೇಷಗಳನ್ನು ತೋರಿಸುತ್ತಾರೆ. ಡೋಗೇ ಅರಮನೆಯಲ್ಲಿರುವ ಟಿಂಟರೆಟ್ಟೋನ "ಸ್ವರ್ಗ" ಎಂಬ ಚಿತ್ರವನ್ನು ತೋರಿಸಿ, ೩೦×೯ ಅಡಿ ಗಾತ್ರದ ಈ ಚಿತ್ರದಲ್ಲಿ ಆ ಕಲಾವಿದ ೮೦೦ ಮಾನವ ರೂಪಗಳನ್ನು ಚಿತ್ರಿಸಿದ ಕೌಶಲವನ್ನು ನಿಮ ಗಮನಕ್ಕೆ ತರುತ್ತಾರೆ. ೨೪ ವರ್ಷಗಳಲ್ಲಿ ಪ್ರಪಂಚ ಪ್ರದಕ್ಷಿಣೆ ಮಾಡಿದ ೧೩ ನೇ ಶತಮಾನದ ಪ್ರವಾಸಿ ಮಾರ್ಕೊ ಪೋಲೋ ಎಲ್ಲಿದ್ದನೆಂದು ತೋರಿಸಿ ದ್ವೀಪದಾಚೆಗೆ ಇಟಲಿಯ ಭೂಖಂಡದಲ್ಲಿ ಸ್ಥಾಪಿತವಾದ ವಿಮಾನ ನಿಲ್ದಾಣಕ್ಕೆ ಮಾರ್ಕೊ ಪೋಲೋ ನಿಲ್ದಾಣವೆಂದು ಹೆಸರಿಡಲಾಗಿದೆಯೆಂದೂ ಹೇಳುತ್ತಾರೆ



ವೆನಿಸು ನಗರದವರಂತೂ ಈ ಗತವೈಭವದ ನಿದ್ರಾಸಂಚಾರಿಗಳೇ ಆಗಿರುವಂತೆ ಕಾಣುತ್ತದೆ. ಆದರೆ ಅದನ್ನು ಮೆಚ್ಚಿ ಮಾರುಹೋದ ಅಸಂಖ್ಯ ವಿದೇಶಿಯರಿದ್ದಾರೆ. "ಇತರ ನಗರಗಳನ್ನ ಮೆಚ್ಚಿದವರಿರಬಹುದು. ಪ್ರೀತಿಸುವವರಿರುವುದು ವೆನಿಸಿಗೆ ಮಾತ್ರ" ಎಂದೊಬ್ಬ ಹೇಳಿದ್ದಾನಂತೆ. ಕವಿ ಲಾರ್ಡ್ ಬೈರನ್ ಇಲ್ಲಿ ಬಂದು ವೆನಿಸನೂ ಅಲ್ಲಿಯ ಶ್ರೀಮಂತನೊಬ್ಬನ ಮಡದಿಯನೂ

ಸೇರಿಯೇ ಪ್ರೀತಿಸಿದ. ಸಂಗೀತಗಾರ ವಾಗ್ನರ್ ಹಾಡು ಕಟ್ಟಲು ಇಲ್ಲೀ ಬರುತ್ತಿದ್ದ; ಬ್ರೌನಿಂಗ್ ಕವಿ ಇಲ್ಲಿಯೇ ಸತ್ತ; ಮಹಾಕವಿ ಡಾಂಟೆಗೆ ಇದು ಪ್ರಿಯ ಭೂಮಿಯಾಗಿತ್ತು; ಚರ್ಚಿಲ್ಲರು ಚಿತ್ರ ತೆಗೆಯಲು ಇಲ್ಲಿ ಬರುತ್ತಿದ್ದರು. ಶಿವರಾಮ ಕಾರಂತರು "ಇಲ್ಲಿ ಬಂದವ ಕಾಲಾತೀತನಾಗುತ್ತಾನೆ" ಎಂದಿದ್ದಾರೆ.

ಇಂದು ಈ ಗತವೈಭವದ ನಗರದ ಜನಸಂಖ್ಯೆ ೩,೪೦,೦೦೦ ಎನಿಸಿದ್ದರೂ ಅದರ ದ್ವೀಪಭಾಗದಲ್ಲಿ ಅದರ ಅರ್ಧವಾಸಿ ಜನ ಮಾತ್ರ ಇದ್ದಾರೆ. "ಅಡ್ರಿಯಾಟಿಕಿನ ರಾಣಿಯ" ಜನಸಂಖ್ಯೆ ಹುಬ್ಬಳ್ಳಿಯಷ್ಟೆ! ಉಳಿದರ್ಧ ಸಮುದ್ರದಾಚೆ ಭೂಖಂಡದಲ್ಲಿರುವ ವೆನಿಸಿನ ಬಡಾವಣೆಯಲ್ಲಿ ವಾಸಿಸುತ್ತಾರೆ. ಅಲ್ಲಿ ಕಾರಖಾನೆಗಳಿವೆ, ಉದ್ಯಮಗಳಿವೆ. ದ್ವೀಪದಲ್ಲಿರುವ ಜನ ಮಾತ್ರ ತಮ್ಮ ಗತವೈಭವದ ಮೇಲೆ, ಕಲಾಕೌಶಲದ ಮೇಲೆ ಬಾಳುತ್ತಿದ್ದಾರೆ.



ಹಾಗೆ ಕೇಳಿದರೆ ವೆನಿಸ್ ಒಂದು ದ್ವೀಪವಲ್ಲ, ೧೧೮ ಕುದುರುಗಳ ಸ್ತೋಮ. ಅದರಿಂದಲೇ ಅಲ್ಲಿ ರಸೆಯ ಬದಲು ಕಾಲುವೆಗಳಿವೆ. ಈ ಕಾಲುವೆಗಳಿಂದಲೇ ಪೌರಸ್ತ್ಯ ಸಂಪತ್ತು ಇಲ್ಲಿನ ವಣಿಕ್ ಪ್ರಭುಗಳ ವಿಶಾಲ ಸೌಧಗಳಿಗೆ ಗೊಂಡೋಲಗಳ ಮೂಲಕ ಹರಿದು ಬಂದದ್ದು. ಕೆನಾಲಾ ಗ್ರಾಂಡಾ— ಮಹಾ ಕಾಲುವೆ— ನಗರವನ್ನು ಇಬ್ಭಾಗಿಸಿ ಶೋಭೆಯನ್ನು ಕೊಡುತ್ತದೆ. ಈ ಕಾಲುವೆಯನ್ನು ಕತ್ತರಿಸಿ ಮತ್ತು ಅದಕ್ಕೆ ಸಮದೂರವಾಗಿ ನಗರದಲ್ಲೆಲ್ಲ ಬಲೆಯಂತೆ ಹೆಣೆದಿರುವ ಉಪಕಾಲುವೆಗಳ ಸಂಖ್ಯೆ ೧೫೦.

ಹಿಂದೆ ಈ ಕಾಲುವೆಗಳಲ್ಲಿ ಜನರನ್ನೂ ಸರಕನ್ನೂ ಸಾಗಿಸಲು ೫,೦೦೦ ಗೊಂಡೋಲಗಳಿದ್ದವು. ಪ್ರತಿಯೊಂದು ಹಿರಿಯ ಸೌಧದ ಮುಂದೆಯೂ ಗೊಂಡೋಲಗಳನ್ನು ಕಟ್ಟಲು ಕಂಬಗಳಿರುವುದನ್ನು ಇಂದಿಗೂ ಕಾಣಬಹುದು. ಇಂದು ಅವನತಿ ಕಾಲವೂ ಮೋಟಾರ್ ಬೋಟುಗಳೂ ಸೇರಿಯೇ ಗೊಂಡೋಲಗಳನ್ನು ೫೦೦ ಕ್ಕಿಳಿಸಿವೆ.

ವೆನಿಸಿಗೆ ಅದರದೇ ವಾಹನ ಸಮಸ್ಯೆಗಳಿವೆ. ಒಮ್ಮೊಮ್ಮೆ ಕಾಲುವೆಗಳು ಕೂಡುವಲ್ಲಿ "ವಾಹನ ತೊಡಕು"ಗಳಾಗುತ್ತವೆ. ಇದಕ್ಕಾಗಿ ಆಶ್ಚರ್ಯ ಪಡಬೇಕಿಲ್ಲ. ವೆನಿಸಿನ ಕಾಲುವೆಗಳಲ್ಲಿ ಓಡಾಡುವ ಮೋಟಾರ್ ಬೋಟುಗಳೇ ವರ್ಷಕ್ಕೆ ಐದು ಕೋಟಿ ಟಿಕೇಟುಗಳನ್ನು ಮಾರುತ್ತವೆಂಬುದರಿಂದ ಇಲ್ಲಿನ ಸಂಚಾರದ ದಟ್ಟಣೆಯನ್ನೂಹಿಸಬಹುದು.

ವೆನಿಸಿನವರು ಕೂಡ—ಮನುಷ್ಯರು ನೆಲದ ಮೇಲೆ ನಡೆಯಬೇಕಾಗುತ್ತದೆ. ಆದ್ದರಿಂದ ಅಲ್ಲಿ ಕಾಲ್ನಡಿಗೆಯ ದಾರಿಗಳೂ ಇವೆ. ಇವು ಎಷ್ಟು ಇಕ್ಕಟ್ಟಾಗಿವೆಯೆಂದರೆ ಕೆಲವು ದಾರಿಗಳಲ್ಲಿ ಇಬ್ಬರು ಎದುರುಬದುರು ಕೊಡೆ ಹಿಡಿದುಕೊಂಡು ಹೊರಟಿದ್ದರೆ ಒಬ್ಬರು ಕೊಡೆಯನ್ನಿಳಿಸಬೇಕು, ಇನ್ನೊಬ್ಬರು ಏರಿಸಬೇಕು.

ಕಾಲುವೆಗಳಿದ್ದ ಮೇಲೆ ಸೇತುವೆಗಳು ಅನಿವಾರ್ಯ. ಕಾಲುವೆಯ ಆಚೆಯಿಂದ ಈಚೆ ದಾಟಿಸಲು ವೆನಿಸಿನಲ್ಲಿ ೪೦೦ ಸೇತುವೆಗಳಿವೆ. ಕಾಲುವೆಗಳ ಮೇಲೆ ಕಮಾನಿನಾಕೃತಿಯಲ್ಲಿ ರಚಿತವಾದ ಸೇತುವೆಗಳನ್ನು ಏರಿಳಿಯಲು ಮೆಟ್ಟಿಲುಗಳಿವೆ. ವೆನಿಸಿನಲ್ಲಿ ಪ್ರತಿಯೊಂದಕ್ಕೂ ಇರುವ ಹಾಗೆ ಈ ಸೇತುವೆಗಳಲ್ಲಿ ಒಂದೊಂದಕ್ಕೂ ಒಂದೊಂದು ಕಥೆ ಇದೆ. ಡೋಗೆ ಅರಮನೆಯಿಂದ ಬಂದಿಖಾನೆಗಳಿಗೆ ಹೋಗುವುದಕ್ಕಿರುವ ಇಕ್ಕಟ್ಟಾದ ಕತ್ತಲಿಡಿದ ಸೇತುವೆಯನ್ನು ಕಂಡೇ ಕವಿ ರಾಬರ್ಟ್ ಬ್ರಿಜಸ್ "ದುಃಖಸೇತು" ಎಂದೊಂದು ಕವಿತೆಯನ್ನು ಬರೆದನು. ಸೇತುವೆಗಳ ಕೆಳಗಿಂದ ಗೊಂಡೋಲಗಳು ಸಾಗಬೇಕು. ಕೆಲವು ಎಷ್ಟು ತಗ್ಗಾಗಿವೆಯೆಂದರೆ ದೋಣಿಗಾರರು ಅವುಗಳ ಕೆಳಗೆ ಬಗ್ಗಿ ಮುದುಡಿ ಸಾಗಬೇಕಾಗುತ್ತದೆ.

ವೆನಿಸಿಯನ್ ಗ್ಲಾಸುಗಳನ್ನು ಪ್ರತಿಯೊಬ್ಬ



ಕಲಾಪ್ರೇಮಿಯೂ ಕೇಳಿದ್ದಾನೆ. ಅದು ವೆನಿಸಿನ ನೆರೆ ದ್ವೀಪವಾದ ಮುರಾನೋದ ವೈಶಿಷ್ಟ್ಯ. ಇಲ್ಲಿನ ಗಾಜು ಊದುವವರು ಅಸಂಖ್ಯ ಮಾದರಿಗಳ ಚಿತ್ರವಿಚಿತ್ರ ವರ್ಣಗಳಲ್ಲಿ ನಂಬಲಾರದಷ್ಟು ವೇಗವಾಗಿ ಗಾಜಿನ ಕಲಾಕೃತಿಗಳನ್ನು ತಯಾರಿಸುತ್ತಾರೆ. ಪುಷ್ಪಪಾತ್ರಗಳು, ವಿಗ್ರಹಗಳು, ಪಶುಗಳು, ಪಕ್ಷಿಗಳು ಮತ್ತೇನೇನೋ. ಈ ಕಲೆಯಲ್ಲಿ ಕೌಶಲ ಸುಲಭವಲ್ಲ: ಹತ್ತು ವರ್ಷಕ್ಕೂ ಹೆಚ್ಚು ಕಾಲ ತರಬೇತಿ ಹೊಂದಬೇಕಾಗುವುದು ಮತ್ತು ಸಾಧಕನಲ್ಲಿ ಕಲಾವಿದನ ಹೃದಯವೂ ಇರಬೇಕಾಗುವುದು. ಪ್ರತಿಫಲವೂ ಹಾಗೆಯೇ. ಗಾಜಿನ ಕಲಾಕುಶಲರು ತಿಂಗಳಿಗೆ ಸರಾಸರಿ ರೂ. ೧೦೦೦ ವರೆಗೆ ಗಳಿಸುತ್ತಾರೆ ವೆನಿಸಿನ ಇನ್ನೊಂದು ಪ್ರಸಿದ್ಧ ಪದಾರ್ಥ ಅಲ್ಲಿಯ ಲೇಸುಗಳು. ಲೇಸಿನಿಂದ ತಯಾರಿಸಿದ ಒಂದು ಟೇಬಲ್‌ಕ್ಲಾತಿಗೆ ರೂ. ೨೦,೦೦೦ ದ ವರೆಗೂ ಬೆಲೆ ಬರುತ್ತದೆಂದರೆ ಅವುಗಳ ಯೋಗ್ಯತೆಯನ್ನು ಊಹಿಸಬಹುದು. ಗಾಜು ಗಂಡಸರ ಕೈವಾಡವಾದರೆ ಲೇಸುಗಳು ಹೆಂಗಸರವು.

ವಿದೇಶಿ ಯಾತ್ರಿಕರು ವೆನಿಸಿನಲ್ಲಿ ಪ್ರತಿವರ್ಷ ರೂ. ೧೬೦ ಕೋಟಿಯಷ್ಟು ವೆಚ್ಚ ಮಾಡುತ್ತಾರೆ. ಕೆಲವೊಮ್ಮೆ ವೆನಿಸಿನವರು ಸುಲಿಯುವ ಪಂಡಾಗಳೇ ಎನಿಸುತ್ತದೆ. ಇಲ್ಲಿನ ಹೋಟೆಲುಗಳಲ್ಲಿ ಸ್ಥಳಿಕರಿಗೆ ಕಾಫಿ ಆರಾಣೆಗೆ ಸಿಕ್ಕಿದರೆ ಪ್ರವಾಸಿಕರಿಗೆ ಎರಡು ರೂಪಾಯಿ!

ಆದರೆ ಗತವೈಭವವನ್ನು ಕಾಪಾಡಿಕೊಳ್ಳುವುದು ವೆನಿಸಿನವರಿಗೆ ಸುಲಭವಾಗಲಿ ಅಗ್ಗವಾಗಲಿ ಎನಿಸುತ್ತಿಲ್ಲ. ಅವರ "ನೀರಿನ ರಸ್ತೆ"ಗಳಿಗೂ ದುರಸ್ತಿ ಬೇಕು. ಅದು ನಡೆದೇ ಇರುತ್ತದೆ. ಪ್ರತಿ ಹತ್ತು ವರ್ಷಗಳಿಗೊಮ್ಮೆ ಪ್ರತಿ ಕಾಲುವೆಯಲ್ಲಿ ತುಂಬಿದ ಕೆಸರನ್ನು ತೆಗೆದು ಸಾಗಿಸಬೇಕು. ಇದಕ್ಕೇ ವರ್ಷಕ್ಕೆ ರೂ. ೨೫ ಲಕ್ಷ ವೆಚ್ಚ ಬರುತ್ತದೆ.

ವೆನಿಸಿನ ಸಜೀವ ವೈಭವ ಹದಿನೆಂಟನೇ ಶತಮಾನದಲ್ಲಿ ಇಳಿಯತೊಡಗಿದ್ದರೆ ಅದರ ಮೃತ ವೈಭವವೂ ಇಪ್ಪತ್ತನೇ ಶತಮಾನದಲ್ಲಿ ಅಕ್ಷರಶಃ "ಇಳಿ"ಯುತ್ತಲಿದೆ. ಅರುವತ್ತು ವರುಷ ಹಿಂದೆ ಸಾನ್ ಮಾರ್ಕೋದ ಗಡಿಯಾರದ ಗೋಪುರ ಕುಸಿದು ಬಿತ್ತು. ಅದನ್ನು ಮೊದಲಿದ್ದಂತೆ ವೆನಿಸಿನವರು ಪುನಃ ಕಟ್ಟಿದರೆನ್ನಿ. ಕಳೆದ ಅರ್ಧ ಶತಮಾನದಲ್ಲಿ ಹೀಗೆ ಅನೇಕ ಗೋಪುರಗಳು ಉರುಳಿವೆ. ಅವು ಉರುಳಿದಾಗ ಕಾಲುವೆಗಳು ಮುಚ್ಚಿ ಹೋಗಿ ಸಂಚಾರಕ್ಕೆ ಆತಂಕವಾಗುತ್ತವೆ. ಎಲ್ಲವನ್ನೂ ಪುನರ್ನಿರ್ಮಿಸುವುದು ಸಾಧ್ಯವಾಗುವುದಿಲ್ಲ. ಎಲ್ಲಕ್ಕೂ ಹೆಚ್ಚಾಗಿ ವೆನಿಸಿನ ಹಳೇ ನಗರವಾದ ಅಮೂಲ್ಯ ಸೆಂಟ್ರೊಸ್ಟೋರಿಕೋ ಕಟ್ಟಡ ಹನ್ನೆರಡು ವರ್ಷಕ್ಕೆ ಒಂದಿಂಚಿನಂತೆ ಕೆಸರಿನಲ್ಲಿ ಕೆಳಗಿಳಿಯುತ್ತಿರುವುದು ಎಂಜಿನಿಯರರಿಗೆ ಸಿದ್ದೆಗೇಡಿಗೆ ಕಾರಣವಾಗಿದೆ.

ಕುಸಿಯುತ್ತಿರುವ ವೆನಿಸಿನ ಸಮಸ್ಯೆ ತೀರ ಹೊಸದಲ್ಲ. ಇನ್ನೂರು ವರ್ಷಗಳ ಹಿಂದೆಯೆ ಭಾರಿ ಕಟ್ಟಡವೊಂದು ಕುಸಿದುರುಳಿತ್ತು. ಇದಕ್ಕೆ ಕಾರಣವೂ ಇದೆ. ಇದು ಕೆಸರಿನ ಕುದುರು. ಭಾರಿ ಮರದ ಕಾಂಡಗಳನ್ನು ಕೆಸರಿನೊಳಗೆ

ಜಡಿದು ಮೇಲೆ ಹಲಗೆಯನ್ನು ಹಾಕಿ ಇಟ್ಟಿಗೆ ತಳಕಟ್ಟು ಕಟ್ಟಿ ಮೇಲೆ ಸಾವಿರಗಟ್ಟಳೆ ಟನ್ ತೂಕದ ಕಟ್ಟಡಗಳನ್ನು ಶಿಲ್ಪಿಗಳು ನಿಲ್ಲಿಸಿದ್ದಾರೆ. ಇಂಥ ಆಧಾರದ ಮೇಲೆ ಅವು ನಿರಂತರವಾಗಿ ನಿಂತಾವೆ? ಈ ಶತಮಾನದಲ್ಲಿ ಬಂದ ಮೋಟಾರ್ ಲಾಂಚುಗಳೂ ಬೋಟುಗಳೂ ಕಟ್ಟಡಗಳ ಪಕ್ಕದ ಕಾಲುವೆಗಳಲ್ಲಿ ಭಾರಿ ತೆರೆಗಳನ್ನೂ ನಡುಗಿಸುವ ಸಪ್ಪಳವನ್ನೂ ಹುಟ್ಟಿಸಿ ಪರಿಸ್ಥಿತಿಯನ್ನು ಇನ್ನೂ ಕೆಡಿಸಿವೆ.

ಖಾಸಗಿ ಒಡೆತನದಲ್ಲಿದ್ದ ಹಲವಾರು ಅರಮನೆಗಳನ್ನು ಒಡೆಯರು ಕಾಪಾಡಲು ಶಕ್ತಿ ಸಾಲದೆ ಮ್ಯೂಜಿಯಂಗಳಿಗಾಗಿ ಕೊಟ್ಟಿದ್ದಾರೆ, ಕೆಲವನ್ನು ಅಮೇರಿಕದ ಕೋಟ್ಯಧೀಶರು ಕೊಂಡಿದ್ದಾರೆ. ಅಮೂಲ್ಯವಾದ ವಾಸ್ತುಗಳು ನಷ್ಟವಾಗಿ ಹೋಗಬಾರದಾದರೆ ಅವುಗಳನ್ನು ಬಲಪಡಿಸಬೇಕು. ಇದಕ್ಕೆ ಹಣ--ಲಕ್ಷಗಳಲ್ಲಲ್ಲ, ಕೋಟಿಗಳಲ್ಲಿ ಬೇಕು.

ವೆನಿಸಿನ ಮುಂದಿರುವ ಸಮಸ್ಯೆ ಬಲು ಉಭಯಸಂಕಟದ್ದು. ಅದು ತನ್ನ ಕಾಲುವೆಗಳನ್ನು ಮುಚ್ಚಿ, ರಸ್ತೆಗಳನ್ನು ಮಾಡಿ ಸ್ಥಳವಾಹನಗಳಿಗೆ ಪ್ರವೇಶವಿತ್ತು, ನಗರವನ್ನು ಆಧುನಿಕವಾಗಿ ಮಾಡಿ, ಜನಕ್ಕೆ ಹೊಸ ಜೀವನೋಪಾಯಗಳನ್ನು ಕಲ್ಪಿಸುವ ಉದ್ಯಮಗಳನ್ನು ಬೆಳಸಿ ಸಜೀವ ನಗರವಾಗಬಹುದು; ಆಗ ವೆನಿಸು ವೆನಿಸುತನವನ್ನು ಕಳೆದುಕೊಳ್ಳುವುದು. ಬದಲಿಗೆ ಅದು ಹೀಗೆಯೆ ಉಳಿದು ಶತಮಾನಗಳ ಶ್ರಮದಿಂದ ಶ್ರೇಷ್ಠತಮ ಕಲಾವಿದರು ನಿರ್ಮಿಸಿದ ಕಲಾಸೃಷ್ಟಿ ನಷ್ಟವಾಗುವುದನ್ನು ತಪ್ಪಿಸಲು ಸಾಕಾಶವಾಗಿ ಸೋಲುವ ಕದನದಲ್ಲಿ ನಿರತವಾಗಬೇಕು. ಈ ಪೇಚಿನಿಂದ ಪಾರಾಗಲು ಕೆಲವರು ಇಡೀ ವೆನಿಸನ್ನೆಲ್ಲ ಇಟಲಿಯ ಸರಕಾರ ರಾಷ್ಟ್ರೀಯ ಮ್ಯೂಜಿಯಂ ಎಂದು ಸಾರಿ ಅದರ ರಕ್ಷಣೆಯ ಹೊಣೆ ಹೊರಬೇಕು ಎನ್ನುತ್ತಾರೆ.

ಆದರೆ ವೆನಿಸನ್ನೊಮ್ಮೆ ನೋಡಿದವನು, ಅದರ ಪ್ರತಿಬಿಂಬಗಳ ನಡುವೆ ಗೊಂಡೋಲಗಳಲ್ಲಿ ಸಂಚರಿಸಿದವನು ಅದರ ಸ್ವರೂಪವನ್ನು ಬದಲಿಸಲು ಮತವೀಯಲಾರ. ಅದು ರಾಷ್ಟ್ರೀಯ ಏಕೆ, ಅಂತಾರಾಷ್ಟ್ರೀಯ ಮ್ಯೂಜಿಯಂ ಆಗಿ ಜಗತ್ತೇ ಅದರ ರಕ್ಷಣೆಯ ಹೊರೆಗೆ ಹೆಗಲು ಕೊಟ್ಟರೂ ತಪ್ಪಲ್ಲ. ಏಕೆಂದರೆ ಇಲ್ಲಿ ಪೂರ್ವ ಪಶ್ಚಿಮಗಳ ಕಲಾಸಂಪತ್ತೂ ಕೂಡಿದೆ ಪಶ್ಚಿಮದ ಗಾಥಿಕ್ ಶೈಲಿಯ ನಡುವೆ ಅರಬರ ಬುರುಜಿನ ಶೈಲಿಯ ಶಿಲ್ಪಗಳು ಸೇರಿವೆ. ಬೇರೆಲ್ಲಾದರೂ ಆಗಿದ್ದರೆ ಈ ಕಲಸು ಮೇಲೋಗರ ಅಸಹ್ಯವೆನಿಸಬಹುದಿತ್ತು. ಆದರೆ ಆ ಭೂಮಧ್ಯ ಸಮುದ್ರದ ನೀಲಾಕಾಶದ ಕೆಳಗೆ, ಅಡ್ರಿಯಾಟಿಕ್‌ನ ಮರಕತ ಜಲದ ಆವರಣದಲ್ಲಿ ಇದಕ್ಕೆಲ್ಲ ಏನೋ ಒಂದು ಅನಿರ್ವಚನೀಯವಾದ ಕಲಾತ್ಮಕ ಐಕ್ಯವಿದ್ದಂತೆನಿಸುತ್ತದೆ. ಇಲ್ಲಿ ಗೊಂದಲವನ್ನು ಸುಂದರವಾಗಿ ಮಾಡುವ ಶಕ್ತಿಯೊಂದು ಕೆಲಸ ಮಾಡಿದೆ. *

ಪೋಲೀಸ ಕಚೇರಿಯಲ್ಲಿ ಸಬ್ ಇನ್ಸ್‌ಪೆಕ್ಟರ ಕೇಳಿದ: "ನಿಮ್ಮ ಉದ್ಯೋಗ ಯಾವುದು ?"

"ನಾನೊಬ್ಬ ಉಪಸಂಪಾದಕ."

ಆಗ ಅವನನ್ನು ಹಿಡಿದು ತಂದ ಪೋಲೀಸ ಸಿಪಾಯಿ "ಸರ್, ಇವನು ಸುಳ್ಳು ಹೇಳುತ್ತಾನೆ. ಝಡತಿ ಮಾಡಿದಾಗ ಇವನ ಕಿಸೆಯಲ್ಲಿ ೨೫ ರೂಪಾಯಿಗಳು ಸಿಕ್ಕಿವೆ" ಎಂದ.

ಈ ಸಾಧುವಿಗೆ ೧೩೫ ವರ್ಷ



ಜೆ. ಜಿ. ಬೆನೆಟ್

ಇಂಗ್ಲೀಷ್ ಗೃಹಸ್ಥನೊಬ್ಬ ಇವನನ್ನು ಈಚೆಗೆ ಕಂಡಿದ್ದಾನೆ

೧೮೨೬ ರಲ್ಲಿ ಹುಟ್ಟಿರುವ–ಅಂದರೆ ಈಗ ೧೩೫ ವರ್ಷ ವಯಸ್ಸಾಗಿ ಹೋಗಿರುವ ಒಬ್ಬಾತನ ಚಿತ್ರವನ್ನು ಕಲ್ಪಿಸಿಕೊಳ್ಳಿ. ಬರೀ ವಯಸ್ಸಿನಿಂದ ಮಾತ್ರವಲ್ಲ, ತಮ್ಮ ತಪಸ್ಸಿನಿಂದ, ಜ್ಞಾನ ಸಂಪತ್ತಿನಿಂದ ಇಂದಿನ ಅತಿ ಶ್ರೇಷ್ಠಮುನಿಗಳಲ್ಲೊಬ್ಬ ಎಂದು ಖ್ಯಾತಿವೆತ್ತ ಈ ಮನುಷ್ಯನ ಹಿರಿಮೆಯನ್ನು ಏಶಿಯದ ಜ್ಞಾನ ಸಂಪತ್ತಿನ ಮಹತ್ವವನ್ನರಿತಿರುವ ಪಾಶ್ಚಾತ್ಯರು ಕೂಡ ಒಪ್ಪಿಕೊಳ್ಳುತ್ತಾರೆ.

ಈ ಮಹಾಪುರುಷ ೭೫ ವರ್ಷಗಳ ಕಾಲ ಹಿಮಾಲಯದಲ್ಲಿ ತಪಸ್ಸು ಮಾಡಿದ್ದಾರೆ. ಆ ಮೇಲೆ ೪೦ ವರ್ಷಗಳ ಕಾಲ ಇಡೀ ಜಗತ್ತಿನಲ್ಲಿ ಸಂಚರಿಸಿದ್ದಾರೆ. ೧೮೯೬ ರಲ್ಲಿ ಇಂಗ್ಲೆಂಡಿನ ರಾಣಿ ವಿಕ್ಟೋರಿಯಳ ಸಲಹೆಗಾರರಾಗಿ, ಅವಳ ಜೀವಮಾನವಿಡೀ ಅವಳ ಸಲಹೆಗಾರರಾಗಿಯೆ ಉಳಿದ ಈ ವ್ಯಕ್ತಿ ಈಗ ತಿಬೇಟಿನ ಗಡಿಯಲ್ಲಿ ನೇಪಾಳದ ಒಂದು ಮೂಲೆಯಲ್ಲಿ ಇಬ್ಬರು ತರುಣ ಶಿಷ್ಯರೊಂದಿಗೆ ವಾಸಿಸುತ್ತಿದ್ದಾರೆ.

ಪಾಶ್ಚಾತ್ಯ ವಿಜ್ಞಾನ ಮತ್ತು ಪೌರಸ್ತ್ಯ ಜ್ಞಾನಗಳ ಸಂಗಮಸ್ಥಾನವನ್ನು ಕಂಡುಹಿಡಿಯಲು ಜೀವನವಿಡೀ ಶ್ರಮಿಸಿರುವ ನನ್ನಂಥವನಿಗೆ ಇಂಥ ಅಪೂರ್ವ ವ್ಯಕ್ತಿಯ ದರ್ಶನಕ್ಕಾಗಿ ೧೦,೦೦೦ ಮೈಲುಗಳ ಪ್ರವಾಸವೇನೂ ದೊಡ್ಡ ಮಾತಾಗಿರಲಿಲ್ಲ.

ಇವರ ವಿಷಯವನ್ನು ನಾನು ಕೇಳಿದ್ದು ಸುಮಾರು ೩೦ ವರ್ಷಗಳ ಹಿಂದೆ— ಕೈಲಾಸ ಮತ್ತು ಹಿಮಾಲಯದ ಯಾತ್ರೆಯನ್ನು ಮಾಡಿ ಬಂದ ಸಿಂಹಳದ ಓರ್ವ ಬೌದ್ಧ ಮಿತ್ರರಿಂದ. ಸಂಸ್ಕೃತ ಪಂಡಿತರೂ ಪ್ರಾಚೀನ ಶಾಸ್ತ್ರಪಾರಂಗತರೂ ಆಗಿದ್ದ ಈ ಮಿತ್ರರು ಈ ಸಂನ್ಯಾಸಿ ಕೇವಲ ಬೌದ್ಧಿಕ ವಿಷಯಗಳಲ್ಲಿ ಮಾತ್ರವಲ್ಲ, ಲೌಕಿಕ ವಿಷಯಗಳಲ್ಲೂ ತಾವು ಕಂಡಿದ್ದ ಬುದ್ಧಿವಂತರಲ್ಲೆಲ್ಲ ಬುದ್ಧಿವಂತರು ಎಂದು ನನಗೆ ಹೇಳಿದ್ದರು.

ಅಡವಿಗಳಲ್ಲಿ ವಾಸವಾಗಿ ಚಿಂತನೆಯಲ್ಲಿ ಮಗ್ನರಾಗಿರುವವರಿಗೆಲ್ಲ ಅಲ್ಲಿಯ ವನ್ಯ ಪಶುಗಳು ಮಿತ್ರರಾಗುವುದು ಒಂದು ಸಾಮಾನ್ಯ ನಿಯಮವೇ ಎನ್ನಬಹುದು. ನಾನು ಹೇಳುತ್ತಿರುವ

"ಟುಡೇ" ಯಿಂದ

ಈ ಹಿಮಾಲಯದ ಮುನಿಗೂ ಅನೇಕ ಕಾಡು ಮೃಗಗಳು ಸ್ನೇಹಿತರಾಗಿದ್ದವು. ಪ್ರೊಫೆಸರ್ ರತ್ನಸೂರ್ಯರು ಅವರನ್ನು ಭೆಟ್ಟಿಯಾದಾಗ ಚಿರತೆಯೊಂದು ಅವರ ಮಿತ್ರನಾಗಿತ್ತು. ಅದು ಪ್ರತಿನಿತ್ಯವೂ ಎಂಬಂತೆ ಅವರ ದರ್ಶನಕ್ಕಾಗಿ ಬರುತ್ತಿತ್ತು.

ನಾನೂ ಈ ಮಹಾತ್ಮನ ದರ್ಶನಕ್ಕಾಗಿ ಹಿಮಾಲಯಯಾತ್ರೆಯನ್ನು ಕೈಕೊಳ್ಳಲು ನಿರ್ಧರಿಸಿದೆ. ಆದರೆ ಆ ಕಾಲದಲ್ಲಿ ನೇಪಾಳಕ್ಕೆ ಹೋಗುವುದು ತಿಬೇಟಿಗೆ ಹೋಗುವಷ್ಟೆ ಕಷ್ಟವಾಗಿತ್ತು. ನೇಪಾಳವನ್ನು ಆಳುತ್ತಿದ್ದ ರಾಣಾರ ದಬ್ಬಾಳಿಕೆಯಲ್ಲಿ ವಿದೇಶೀಯರು ಅಲ್ಲಿ ಕಾಲಿಡುವಂತಿರಲಿಲ್ಲ.

ಆದರೆ ಈಗ ನೇಪಾಳಕ್ಕೆ ಹೋಗುವುದು ಸುಲಭ. ಹಾಗಿದ್ದರೂ ಪ್ರಯಾಣಿಕರು ಸಾಮಾನ್ಯವಾಗಿ ಕಾಠಮಂಡುವಿನಿಂದ ಆಚೆ ಹೋಗುವುದಿಲ್ಲ. ನೇಪಾಳದ ಒಳನಾಡಿನಲ್ಲಿ ಜೀವನವಿನ್ನೂ ಕಾಡು ಸ್ಥಿತಿಯಲ್ಲೆ ಇದೆ. ಜನ ಬಟ್ಟೆ ನೇಯಲು ಮಗ್ಗಗಳನ್ನು, ಭೂಮಿಯನ್ನು ಉಳಲು ನೇಗಿಲುಗಳನ್ನು ಕೂಡ ಉಪಯೋಗಿಸುತ್ತಿಲ್ಲ.

ಆಚೆ ವರ್ಷ (೧೯೬೦) ನನ್ನ ಇಬ್ಬರು ಮಿತ್ರರು ನೇಪಾಳಕ್ಕೆ ಹೋದರು. ನನ್ನ ನಿರ್ದೇಶನದಂತೆ ಅವರು ಈ ವೃದ್ಧ ಮುನಿಯನ್ನು ಭೆಟ್ಟಿಯಾದರು. ಬಹುಶಃ ಈ ಮೊದಲು ಹೋಗಿದ್ದ ಯಾರಿಂದಲೊ ಅವರು ನನ್ನ ಹೆಸರು ಕೇಳಿರಬೇಕು. ನನ್ನ ಮಿತ್ರರು ಅವರಿಂದ ನನಗೊಂದು ಸಂದೇಶವನ್ನು ತಂದರು. ತಾವು ನನಗೆ ಏನೋ ಹೇಳಬೇಕಾಗಿದೆಯೆಂದೂ ನಾನು ಸಮಯ ಮೀರುವ ಮೊದಲೇ ಬಂದು ತಮ್ಮನ್ನು ಭೆಟ್ಟಿಯಾಗಬೇಕೆಂದೂ ಶಿವಪುರಿ ಬಾಬಾ ಹೇಳಿ ಕಳಿಸಿದ್ದರು.

ನನ್ನ ಹೆಂಡತಿ ನನ್ನೊಡನೆ ಬರಲು ನಿರ್ಧರಿಸಿದಳು. ಸತ್ಯದ ಶೋಧನೆಯಲ್ಲಿ (ಅಂದರೆ ದೈವೇಚ್ಛೆಗೆ ಅ-ಮಾನಸಿಕವಾಗಿ ಶರಣು ಹೋಗುವ ಆಧ್ಯಾತ್ಮಿಕ ಪಂಥ—ಸುಬುದ್) ಇವಳು ನನ್ನ ಸಂಗಾತಿಯಾಗಿದ್ದಾಳೆ. ನೇಪಾಳವನ್ನು ನೋಡುವ ಹಂಬಲವಿದ್ದ ಅವಳಿಗೆ ಇದೊಂದು ಸುಸಂಧಿಯೇ ಆಗಿತ್ತು.

ನಾನು ಇಂಗ್ಲಂಡಿನಿಂದ ಹೊರಡುವ ಸಮಯದಲ್ಲಿ ಬಾಬಾರವರಿಗಾಗಿ ೨೦೦ ಸಿಗರೇಟುಗಳನ್ನು ತರಬೇಕೆಂದು ನನಗೊಂದು ಕೇಬಲ್ ಬಂತು. ಲಂಡನ್ ವಿಮಾನ ನಿಲ್ದಾಣದಲ್ಲಿ ಸಿಗರೇಟುಗಳನ್ನು ಕೊಂಡು ದಿಲ್ಲಿಗೆ ಹೊರಟೆ.

ನೇಪಾಳದಲ್ಲಿ ನನ್ನ ಆ ಇಬ್ಬರು ಮಿತ್ರರು ಭೆಟ್ಟಿಯಾದರು. ಅವರ ಜೊತೆ ಜೀಪಿನಲ್ಲಿ ಕುಳಿತು ನಾವು ಶಿವಪುರಿ ಬಾಬಾರ ಆಶ್ರಮಕ್ಕೆ ಹೋದೆವು. ಒಂದು ಪ್ರಸಿದ್ಧ ದೇವಾಲಯದ ಬಳಿ ರಸ್ತೆ ಮುಗಿದಿತ್ತು. ಅಲ್ಲಿಂದ ಮುಂದೆ ದಟ್ಟಡವಿಯಲ್ಲಿ ನಡೆಯುತ್ತಲೇ ಹೋದೆವು.

ನಮಗೊಂದು ತಂತಿ ಬೇಲಿ ಸಿಕ್ಕಿತು. ಬಾಗಿಲಿಗೆ ಬೀಗ ಹಾಕಿತ್ತು. ನಮಗೆ ಸಿಕ್ಕಿದ್ದ ಸೂಚನೆಯಂತೆ ನಾವು ನಮ್ಮ ಹೆಸರನ್ನು ಕೂಗಿ ದಾರಿ ಕಾಯ್ದೆವು. ತುಸು ಹೊತ್ತಿನಲ್ಲಿ ಸುಮಾರು ಹನ್ನೆರಡು ವಯಸ್ಸಿನ ನೇಪಾಳಿ ಹುಡುಗನೊಬ್ಬ ಮುಗುಳ್ನಗುತ್ತ ಬಂದು ಬಾಗಿಲು ತೆರೆದ. ತುಸು ದೂರ ಹೋದ ಮೇಲೆ ಬಯಲು ಜಾಗೆ ಬಂತು. ಅಲ್ಲೊಂದು ಚೊಕ್ಕಟವಾದ ಗುಡಿಸಲಿತ್ತು.

ಬೆತ್ತದ ಆಸನವೊಂದರ ಮೇಲೆ ಹೊಳೆಯುವ ಕಣ್ಣುಗಳಿಂದ ಸುಮಧುರ ಮಂದಹಾಸದಿಂದ

ಜಿ. ಜಿ. ಬೆನೆಟ್‌ರು "ದಿ ಡ್ರಾಮಾಟಿಕ್ ಯುನಿವರ್ಸ್," "ದಿ ಕ್ರೈಸಿಸ್ ಇನ್ ಹ್ಯೂಮನ್ ಎಫೇರ್ಸ್," "ವಾಟ್ ಆರ್ ವಿ ಲಿವಿಂಗ್ ಫಾರ್" ಮತ್ತು "ಕನ್‌ಸರ್ನಿಂಗ್ ಸುಬುದ್" ಎಂಬ ಪುಸ್ತಕಗಳನ್ನು ಬರೆದಿದ್ದಾರೆ. ಶ್ರೀ ಬೆನೆಟ್‌ರು ವಿಜ್ಞಾನಿಗಳು. ಅವರು ಬ್ರಿಟನ್ನಿನ ಔದ್ಯೋಗಿಕ ಸಂಶೋಧನೆಯ ಡೈರೆಕ್ಟರರಾಗಿದ್ದರು. ವಿಜ್ಞಾನ ಸಂಶೋಧನೆಯೊಂದಿಗೆ ಅವರು ಏಶಿಯದ ಧರ್ಮ, ವೇದಾಂತ ವಿಚಾರಗಳಲ್ಲಿ ತುಂಬ ಆಸಕ್ತಿಯುಳ್ಳವರಾಗಿದ್ದಾರೆ.

ಬಾಯಿಯ ದುರ್ಗಂಧವನ್ನು ಕಾಲ್ಗೇಟಿನಿಂದ ತೊಲಗಿಸಿರಿ

ಅದರೊಂದಿಗೆ ದಿನವಿಡೀ

ದಂತಕ್ಷಯವನ್ನು ಇದಿರಿಸಿರಿ !

ಏಕೆಂದರೆ : ಕಾಲ್ಗೇಟ್ ಡೆಂಟಲ್ ಕ್ರೀಮ್‌ನೊಂದಿಗೆ ಒನ್ಮೆ ಹಲ್ಲುಜ್ಜುವುದರಿಂದ ಬಾಯಿಯಲ್ಲಿ ದುರ್ಗಂಧವನ್ನುಂಟು ಮಾಡುವ ಹಾಗೂ ಹಲ್ಲುಗಳನ್ನು ಕ್ಷಯಿಸುವ ಶೇಕಡ 85ರಷ್ಟು ಕ್ರಿಮಿಗಳು ನಾಶವಾಗುತ್ತವೆ.

ಊಟವಾದೊಡನೆ ಕಾಲ್ಗೇಟನಿಂದ ಹಲ್ಲುಜ್ಜುವುದರಿಂದ ದಂತ ಮಂಜನಗಳ ಇತಿಹಾಸದಲ್ಲೇ ಹಿಂದೆಂದೂ ಆಗದಷ್ಟು ಅಧಿಕ ಜನರ ದಂತಕ್ಷಯವನ್ನು ಅಧಿಕ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗುತ್ತದೆ. ಇದಲ್ಲದೆ,ಕಾಲ್ಗೇಟನಿಂದ 10ರಲ್ಲಿ 7 ಸಂದರ್ಭಗಳಲ್ಲಿ ಬಾಯಿಯ ದುರ್ಗಂಧವು ಕೂಡಲೇ ನಿವಾರಿಸಲ್ಪಡುತ್ತದೆ. ಈ ಎರಡು ಪ್ರಮಾಣಗಳನ್ನು ಕಾಲ್ಗೇಟ್ ವೈಜ್ಞಾನಿಕ ಪರೀಕ್ಷೆಗಳ ಮುಖೇನ ಸಿದ್ಧಗೊಳಿಸಿರುತ್ತದೆ. ಕಾಲ್ಗೇಟಗೆ ಮಾತ್ರ ಈ ಪ್ರಮಾಣವಿದೆ!

ಊಟವಾದ ಮೇಲೆ ಬರೀ ಬಾಯಿ ಮುಕ್ಕಳಿಸುವುದರಿಂದ ಪ್ರಯೋಜನವಾಗಲಾರದು–ಪ್ರತಿ ಊಟದ ಮೇಲೆ ತಪ್ಪದೆ ನಿಮ್ಮ ಹಲ್ಲುಗಳನ್ನು ಕಾಲ್ಗೇಟನಿಂದ ಉಜ್ಜಿರಿ. ಇದರ ಪ್ರಬಲವಾದ ಸಂದು ಸಂದುಗಳಿಗೆ ಒಳನುಗ್ಗುವ ನೊರೆಯು ಅಗೋಚರವಾದ ಹಲ್ಲುಗಳ ನಡುವಿನ ಸಂದುಗಳಿಗೆ ಹೊಕ್ಕು, ನಿಮ್ಮ ಬಾಯಿಯ ದುರ್ಗಂಧಕ್ಕೂ, ಹಲ್ಲುಗಳ ಕ್ಷಯಿಸುವಿಕೆಗೂ ಕಾರಣವಾದ ಕೊಳೆಯುತ್ತಿರುವ ಆಹಾರ ಕಣಗಳನ್ನು ನಿವಾರಿಸಿ ಸ್ವಚ್ಛಗೊಳಿಸುವುದು.


ಮಕ್ಕಳಿಗೆ ಕಾಲ್ಗೇಟನಿಂದ ಹಲ್ಲುಜ್ಜುವುದೆಂದರೆ ಕುಂಬಾ ಪ್ರೀತಿ ದೀರ್ಘಕಾಲ ಉಳಿಯುವ ಅದರ ನೆಚ್ಚಿನ ಪೆಪರ್‌ಮಿಂಟ್ ಸ್ವಾದವು ಇದರಲ್ಲಿ ಕೂಡಿರುತ್ತದೆ.



ನಿಮಗೆ ಹಲ್ಲುಪುಡಿ ಹೆಚ್ಚು ಇಷ್ಟವಾಗಿದ್ದರೆ ಈ ಎಲ್ಲಾ ಪ್ರಯೋಜನಗಳನ್ನು ಕಾಲ್ಗೇಟ್ ಟೂತ್ ಪೌಡರ್‌ನಿಂದಲೂ ಪಡೆಯಿರಿ...ಒಂದು ಡಬ್ಬಿ ಹಲವು ತಿಂಗಳುಗಳವರೆಗೆ ಸಾಕಾಗುವುದು.

ಕಾಲ್ಗೇಟನಿಂದ ತಪ್ಪದೆ ಹಲ್ಲುಜ್ಜುವುದರಿಂದ

- ✓ ಬಾಯಿಯ ದುರ್ಗಂಧವು ನಿವಾರಿಸಲ್ಪಡುತ್ತದೆ
- ✓ ದಂತಕ್ಷಯವನ್ನು ವಿರೋಧಿಸಲಾಗುವುದು
- ✓ ಹಲ್ಲುಗಳು ಪರಿಶುಭ್ರವಾಗಿ ಉಳಿಯುವವು



DCG. 31

ಬಾಯಿಯ ದುರ್ಗಂಧವನ್ನು ನಿವಾರಿಸಲು ಮತ್ತು ಹಲ್ಲುಗಳು ಶುಭ್ರವಾಗಿರಲು... ಹೆಚ್ಚಿಗೆ ಜನರು ಪ್ರಪಂಚದ ಇನ್ನಿತರ ಡೆಂಟಲ್ ಕ್ರೀಮ್‌ಗಳಿಗಿಂತ ಅಧಿಕವಾಗಿ ಕಾಲ್ಗೇಟನ್ನೇ ಕೊಂಡುಕೊಳ್ಳುತ್ತಾರೆ

ಕೂಡಿದ ಸಾಮಾನ್ಯ ಮೈಕಟ್ಟಿನ ವ್ಯಕ್ತಿಯೊಂದು ಕುಳಿತಿತ್ತು. ಆದರೆ ಅವರ ಚರ್ಯೆ ಅವರ ವಯೋಮಾನದ ಗುಟ್ಟನ್ನು ಬಿಡುವಂಥದಾಗಿರಲಿಲ್ಲ. ಅವರ ನರೆಗೂದಲು ಅವರ ತಲೆಯ ಮೇಲೆ ದೀಪಪ್ರಭೆಯಂತೆ ಪ್ರಕಾಶಿಸುತ್ತಿತ್ತು. ತಿದ್ದಿ ನೀವಿದ ಅವರ ಗಡ್ಡದ ಕೂದಲು ಅಚ್ಚುಕಟ್ಟಾಗಿದ್ದಿತು. ಶುಭ್ರವಸನಧಾರಿಯಾದ ಅವರು ಪ್ರಸನ್ನವದನದಿಂದ ಕುಳಿತಿದ್ದರು.

ಭಾರತೀಯ ಪದ್ಧತಿಯಲ್ಲಿ ನಾವು ಕೈಜೋಡಿಸಿ ಪರಸ್ಪರ ನಮಸ್ಕರಿಸಿದೆವು. ತಂದಿದ್ದ ೨೦೦ ಸಿಗರೇಟುಗಳನ್ನು ಅವರ ಪಾದದ ಬಳಿ ಇಟ್ಟೆ. ಅವರ ಶಿಷ್ಯನೊಬ್ಬ ನಮ ನ್ನು ಅಭಿನಂದಿಸಿ ಸಿಗರೇಟುಗಳನ್ನು ಹೆಕ್ಕಿಕೊಂಡು ಒಂದನ್ನು ಮುನಿಗಳಿಗೂ ಒಂದನ್ನು ನನಗೂ ಕೊಟ್ಟ.

ಸಂಭಾಷಣೆಯ ಸಂಕೇತಕ್ಕಾಗಿ ಕಾಯುತ ನಾವು ಮುನಿಯ ಸುತ್ತ ಕುಳಿತಿದ್ದೆವು. ಅವರ ಪ್ರಸನ್ನ ಮುಖದಲ್ಲಿ ದೈವೀ ತೇಜಸ್ಸಿತ್ತು. ಅವರ ದೇಹದಲ್ಲಿ ಅಥವಾ ಸುತ್ತಲಿನ ಯಾವುದರಲ್ಲೂ ವೃದ್ಧಾಪ್ಯದ ಅಥವಾ ಸವೆತದ ಲಕ್ಷಣಗಳು ಕಾಣಿಸುತ್ತಿರಲಿಲ್ಲ.

ಹೀಗೆ ಮೌನವಾಗಿ ಕುಳಿತಿದ್ದಾಗ ಈ ಮಹಾತ್ಮನ ಬಗ್ಗೆ ಕೇಳಿದ್ದನ್ನೆಲ್ಲ ಮನಸ್ಸಿನಲ್ಲಿಯೇ ಮೆಲುಕು ಹಾಕಿದೆ.

ಶಿವಪುರಿ ಬಾಬಾ ದಕ್ಷಿಣ ಭಾರತದ ಕೇರಳದಲ್ಲಿ ಒಂದು ಸಾಮಾನ್ಯ ಹಿಂದೂ ಕುಟುಂಬದಲ್ಲಿ ಜನ್ಮಿಸಿದ್ದರು. ಚೆನ್ನಾಗಿ ಇಂಗ್ಲಿಷನ್ನು ಕಲಿತ ಇವರು ಸರಕಾರೀ ಕೆಲಸಕ್ಕೆ ಸೇರುವರೆಂದು ಎಣಿಸಲಾಗಿತ್ತು. ಆದರೆ ಇವರಿಗೆ ಧರ್ಮದ ಆಕರ್ಷಣೆ ಬಲವಾಗಿ ಇವರು ಹತ್ತು ವರ್ಷಗಳ ಕಾಲ ಓರ್ವ ಗುರುವಿನಲ್ಲಿ ಅಭ್ಯಾಸ ಮಾಡಿ ಸಂನ್ಯಾಸ ಸ್ವೀಕರಿಸಲು ನಿರ್ಧರಿಸಿದರು.

ಅದರಂತೆ ಮನೆಯನ್ನು ತ್ಯಜಿಸಿ ಹೊರಟ ಬಾಬಾ ನೇಪಾಳ ಮತ್ತು ತಿಬೇಟುಗಳ ನಡುವಿನ ಹಿಮಾಲಯ ಪ್ರದೇಶದಲ್ಲಿ ಜೀವನದ ಅರಿಯಲು ಮತ್ತು ದೇವರ ಬಗ್ಗೆ ಜ್ಞಾನ ಸಂಪಾದಿಸಲೆಂದು ೨೫ ವರ್ಷಗಳ ಕಾಲ ಚಿಂತನೆಯನ್ನು ನಡೆಸಿದರು. ಐವತ್ತನೆಯ ವಯಸ್ಸಿನಲ್ಲಿ ಅವರಿಗೆ ದಿವ್ಯಜ್ಞಾನ ಪ್ರಾಪ್ತಿಯಾಯಿತು. ಆತ್ಮಜ್ಞಾನ ಸಾಧನೆಯಾಗಲು ಅವರು ಮಾನವೀ ಜ್ಞಾನ ಸಂಪಾದನೆಯ ಕಾರ್ಯಕ್ಕೆ ತೊಡಗಿದರು. ಅದಕ್ಕಾಗಿ ಅವರು ೪೦ ವರ್ಷಗಳ ವರೆಗೆ ಜಗತ್ತಿನಲ್ಲೆಲ್ಲ ಸಂಚರಿಸಿದರು. ಮಧ್ಯ ಏಶಿಯದಲ್ಲಿ ಕೆಲ ವರ್ಷ ಕಳೆದು ಅನೇಕಾನೇಕ ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸುತ್ತ ಅವರು ಅಫಗಾನಿಸ್ತಾನದಿಂದ ಯುರೋಪಿಗೆ ಕಾಲ್ನಡಿಗೆಯಲ್ಲಿ ಬಂದರು.

ಆಗ ರಾಣಿ ವಿಕ್ಟೋರಿಯ ತನ್ನ ಹಿಂದೀ ಕಾರ್ಯದರ್ಶಿ ಮುನ್ಶಿ ಅಬ್ದುಲ್ ಕರೀಮರಿಂದ ಪಾಠ ಹೇಳಿಸಿಕೊಳ್ಳುತ್ತಿದ್ದರು. ಅದು ೧೮೯೬ ನೇ ಇಸ್ವಿ ತುರ್ಕರು ಆರ್ಮೇನಿಯನ್ನರನ್ನು ಕಗ್ಗೊಲೆ ಮಾಡಿದ್ದರಿಂದ ಇಂಗ್ಲಂಡಿನಲ್ಲಿ ಜನಾಭಿಪ್ರಾಯ ಕೆರಳಿತ್ತು. ಇದರಿಂದ ತನ್ನ ಮುಸ್ಲಿಂ ಪ್ರಜೆಗಳ ಮೇಲಾಗಬಹುದಾದ ಪರಿಣಾಮದಿಂದ ರಾಣಿ ವಿವಂಚಿತಳಾಗಿದ್ದಳು. ಅವಳು ಅಬ್ದುಲ್ ಕರೀಮನ ಸಲಹೆ ಕೇಳಿದಾಗ ಆತ ಇಂಗ್ಲಂಡಿಗೆ ಬಂದಿದ್ದ ಬಾಬಾರ ವಿಚಾರ ಹೇಳಿ ಅವರನ್ನು ಅವಳಲ್ಲಿಗೆ ಕರೆತಂದರು ಶಿವಪುರಿ ಬಾಬಾ ಒಟ್ಟು ೧೮ ಸಲ ರಾಣಿಯನ್ನು ಭೆಟ್ಟಿಯಾದರು. "ಭಾರತದ ವಿಷಯ ರಾಣಿಯನ್ನು ಬಲವಾಗಿ ಆಕರ್ಷಿಸಿತ್ತು. ಅವಳು ತುಸು ಹಿಂದುಸ್ತಾನಿಯನ್ನೂ ಕಲಿತಳು. ಅವಳು ನೇಮಿಸಿಕೊಂಡ ಕೆಲ ಭಾರತೀಯರು ಅವಳಿಗೆ ಅನಿವಾರ್ಯವಾದ ಸಹಚರರಾದರು. ಮುನ್ಶಿ ಅಬ್ದುಲ್ ಕರೀಮರಂತೂ ಜಾನ್ ಬ್ರೌನ್ (ಈತ ರಾಣಿಯ ಆಪ್ತಾಲೋಚಕನಾಗಿದ್ದ) ನ ಸ್ಥಾನವನ್ನು ಮುಂದೆ ಹೊಂದಿದರು" ಎಂದು ಲಿಟ್ಟನ್ ಸ್ಟ್ರೇಚಿ ತಮ್ಮ "ಲೈಫ್ ಆಫ್ ದಿ ಕ್ವೀನ್" ಪುಸ್ತಕದಲ್ಲಿ ಬರೆದಿದ್ದಾರೆ.

ರಾಣಿಯ ದಿನಚರಿ ಮತ್ತು ಅವಳು ತನ್ನ ಮಂತ್ರಿಗಳಿಗೆ ಬರೆದ ಪತ್ರಗಳ ಮೇಲಿಂದ ಅವ

ಳಿಗೆ ಭಾರತದ ಪರಿಸ್ಥಿತಿ ಅವಳ ಸರಕಾರಕ್ಕಿಂತಲೂ ಚೆನ್ನಾಗಿ ಗೊತ್ತಿತೆಂದು ವೇದ್ಯವಾಗುತ್ತದೆ.

ಅವಳ ಇಚ್ಛೆಯಂತೆ ನಡೆದಿದ್ದರೆ ಬ್ರಿಟಿಶ್ ರಾಜ್ಯದ ಬಗ್ಗೆ ಭಾರತದಲ್ಲಿ ಮೂಡಿದ ಅಸಮಾಧಾನಗಳು ತಲೆದೋರಬೇಕಾಗಿರಲಿಲ್ಲ.

ವರ್ಷಗಳು ಕಳೆದವು. ರಾಣಿಯ ಮರಣಾನಂತರ ಬಾಬಾ ತಮ್ಮ ಜಗತ್ಪ್ರವಾಸ ಮುಂದುವರಿಸಲು ಹೊರಟರು. ೧೯೧೪ ರಲ್ಲಿ ಮೊದಲನೆಯ ಮಹಾಯುದ್ಧ ಆರಂಭವಾಗಲು ಅವರು ಭಾರತಕ್ಕೆ ಮರಳಿದರು. ಈ ಹೊತಿಗೆ ೧೦೦ ವರ್ಷಗಳಾಗಿದ್ದ ಅವರು ಮತ್ತೆ ಅರಣ್ಯವಾಸಕ್ಕೆ ತೆರಳಿದರು. ೧೯೩೦ ರ ವರೆಗೂ ಅವರು ಏಕಾಂತ ವಾಸದಿಂದ ಹೊರಬರಲಿಲ್ಲ.

ಇಷ್ಟೊಂದು ದೀರ್ಘ ವಯಸ್ಸಾಗಿಯೂ ಇವರು ಜೀವನದಲ್ಲಿ ರುಚಿಯನ್ನು ಉಳಿಸಿಕೊಂಡಿರುವುದು ಹೇಗೆ ಎಂದು ನಾನು ಯೋಚಿಸುತ್ತಿದ್ದಂತೆ ಬಾಬಾ ನಕ್ಕು ಮಾತಿಗಾರಂಭಿಸಿದರು: "ಚೆನ್ನಾಗಿ ಬಾಳಬೇಕಾದರೆ ಮನುಷ್ಯ ಮೂರು ಕರ್ತವ್ಯಗಳನ್ನು ನೆರವೇರಿಸಬೇಕು. ಮೊದಲನೆಯದಾಗಿ ಆತ ತನ್ನ ದೇಹವನ್ನೂ ಅದರ ಅಗತ್ಯಗಳನ್ನೂ ಅರಿತುಕೊಂಡು ಅದಕ್ಕೆ ಬೇಕಾದ್ದನ್ನಷ್ಟೆ ಕೊಡಬೇಕು. ಒಂದಿಷ್ಟು ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ. ಎಷ್ಟು ತಿನ್ನಬೇಕು, ಎಷ್ಟು ನಿದ್ದೆ ಮಾಡಬೇಕು, ಮನಸ್ಸನ್ನು ಎಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳಬಹುದು, ಎಷ್ಟು ಕಷ್ಟದ ಕೆಲಸವನ್ನು ಮಾಡಬಹುದು, ಇವನ್ನೆಲ್ಲ ಆತ ತಿಳಿದಿರಬೇಕು. ಅಗತ್ಯಕ್ಕಿಂತ ಹೆಚ್ಚಾಗಿರುವ ಪ್ರತಿಯೊಂದೂ ಅವನ ಶಕ್ತಿಯನ್ನು ಹಾಳುಮಾಡುವುದು. ಆತ ಅಕಾಲ ವೃದ್ಧನಾಗುತ್ತಾನೆ.

"ಎರಡನೆಯದು ಸಾಮಾಜಿಕ ಕರ್ತವ್ಯ: ತನ್ನ ಕುಟುಂಬ ಮತ್ತು ಆಶ್ರಿತರ ಬಗ್ಗೆ ತನ್ನ ಹೊಣೆಯನ್ನರಿತು ಅವನ್ನು ಪೂರೈಸಬೇಕು.

"ಮೂರನೆಯದೆಂದರೆ ತನ್ನ ಬುದ್ಧಿ ಶಕ್ತಿಗಳನ್ನು ಮಾನವಕುಲದ ಕಲ್ಯಾಣಕ್ಕಾಗಿ ವ್ಯಯಿಸಬೇಕು."

"ಹರಿತವಾದ ಬುದ್ಧಿ ಮತ್ತು ದೃಢ ಮನಸ್ಸು" ಎಂಬ ಶಬ್ದಗಳನ್ನು ಅವರು ಹಲವಾರು ಬಾರಿ ಉಪಯೋಗಿಸಿದರು. ಅವರೆಂದರು: "ಮನುಷ್ಯ ತನ್ನ ಜೀವನದಲ್ಲಿ ಎಷ್ಟು ಬೇಗ ಸಾಧ್ಯವೊ ಅಷ್ಟು ಬೇಗ ತನ್ನ ಕರ್ತವ್ಯವನ್ನರಿತುಕೊಳ್ಳಬೇಕು. ಅದಕ್ಕಾಗಿ ಹರಿತವಾದ ಬುದ್ಧಿ ಇರಬೇಕು. ತನ್ನ ಶಕ್ತಿಯನ್ನು ಹಾಳುಮಾಡುವಂಥಾ ಅನಗತ್ಯವಾದ ಕೆಲಸವನ್ನು ಮಾಡಲು ಅವನು ಯಾವಾಗಲೂ ನಿರಾಕರಿಸಬೇಕು. ಅದಕ್ಕಾಗಿ ದೃಢ ಮನಸ್ಸು ಬೇಕಾಗುವುದು."

ತಮ್ಮ ಮಾತನ್ನು ಮುಂದುವರಿಸಿ ಅವರು ಹೇಳಿದರು: "ಪರಿಪೂರ್ಣನಾಗಬೇಕೆನ್ನುವ ಮನುಷ್ಯನು ದೇವರ ಬಗ್ಗೆ ಮತ್ತು ಜೀವನದ ಅರ್ಥದ ಬಗ್ಗೆ ಜ್ಞಾನವನ್ನು ಸಂಪಾದಿಸಲು ತನ್ನೆಲ್ಲ ಶಕ್ತಿ-ಉತ್ಸಾಹಗಳನ್ನು ಮೀಸಲಾಗಿಡಬೇಕಾಗುವುದು. ನಮ್ಮ ಲೌಕಿಕ ಜೀವನವನ್ನು ಚೆನ್ನಾಗಿ ಬಾಳಲು ಬುದ್ಧಿಶಕ್ತಿ ಮತ್ತು ಮನಶ್ಶಕ್ತಿ ಸಹಾಯಕವಾಗುವುದಾದರೂ ಪರಮಾತ್ಮನನ್ನು ಪಡೆಯುವ ಕಾರ್ಯದಲ್ಲಿ ಅವುಗಳಿಂದೇನೂ ಪ್ರಯೋಜನವಿಲ್ಲ. ಪರಮಾತ್ಮನನ್ನು ಕೇವಲ ಶ್ರದ್ಧೆ ಮತ್ತು ಆತನ ಇಚ್ಛೆಗೆ ತಲೆಬಾಗುವುದರಿಂದ ಪಡೆಯಬಹುದು.

"ಈ ಶ್ರದ್ಧೆಯೆನ್ನುವುದು ಯಾವುದು ಸರಿ ಮತ್ತು ಯೋಗ್ಯ ಎಂಬ ತಿಳಿವಳಿಕೆಯಿಂದ ಹುಟ್ಟುವುದು."

ಈ ಹೊತ್ತಿಗೆ ನನ್ನ ಸಿಗರೇಟು ಮುಗಿಯಿತು. ಸುತ್ತಮುತ್ತ ನೋಡಿದೆ ಸುತ್ತಲಿನ ನೆಲವೆಲ್ಲ ಗುಡಿಸಿ ಚೊಕ್ಕಟವಾಗಿತ್ತಾದ್ದರಿಂದ ಸಿಗರೇಟಿನ ತುಂಡನ್ನೆಲ್ಲಿ ಒಗೆಯಲಿ ಎಂದು ಕೇಳಿದೆ.

ಆಗ ಬಾಬಾ "ಇದಕ್ಕೇ ತಾರತಮ್ಯ ಬುದ್ಧಿ ಎನ್ನುವರು. ಅನೇಕರು ಹಿಂದುಮುಂದೆ ಯೋಚಿಸದೆ ಸಿಕ್ಕಲ್ಲಿ ಸಿಗರೇಟಿನ ತುಂಡನ್ನೆಸೆಯುವರು."

"ನೀವು ಸಿಗರೇಟು ಸೇದುತ್ತಿರುವುದು ಯಾಕೆ?" ಎಂದು ಯಾರೋ ಕೇಳಿದರು. "ಈಗ ಕೆಲ ವರ್ಷಗಳ ಮೊದಲು ನಾನೆಂದೂ ಸಿಗರೇಟು ಸೇದುತ್ತಿರ

ಲಿಲ್ಲ. ಆ ಮೇಲೆ ನನ್ನ ಗಂಟಲಲ್ಲಿ ಕ್ಯಾನ್ಸರ್ ಆಗುತ್ತಿದೆಯೆಂದು ನನಗೆ ತಿಳಿಯಿತು. ಅದರ ನಿವಾರಣೆಗಾಗಿ ಸೇದತೊಡಗಿದೆ," ಎಂದರು ಬಾಬಾ.

ನಮ್ಮನ್ನೆಲ್ಲ ಮಂಕು ಮಾಡುತ್ತಿರುವವರಂತೆ ಅವರ ಕಣ್ಣುಗಳಲ್ಲಿ ತುಂಟ ನಗುವಿತ್ತು. ಆದರೆ ಅವರು ಮರುಕ್ಷಣದಲ್ಲಿಯೆ ಗಂಭೀರಭಾವದಿಂದ, "ನಮಗೆ ನಮ್ಮ ದೇಹದ ಬಗ್ಗೆ ಸಂಪೂರ್ಣ ಜ್ಞಾನವುಂಟಾದರೆ ಅದಕ್ಕೆ ಯಾವುದು ಒಳ್ಳೆಯದು ಎಂದು ಗೊತ್ತಾಗುತ್ತದೆ" ಎಂದರು.

ನಾನು ಅನೇಕ ಸಲ ಈ ವೃದ್ಧ ತಪಸ್ವಿಯೊಡನೆ ಸಂಭಾಷಣೆ ನಡೆಸಿದೆ. ಕೆಲವು ಸಲ ಅವರ ಖುರ್ಚಿಯ ಸುತ್ತ ನಾವು ಐದಾರು ಜನ ಕುಳಿತಿರುತ್ತಿದ್ದೆವು. ಇನ್ನು ಕೆಲ ಸಲ ನಾನು ಮತ್ತು ನನ್ನ ಪತ್ನಿ ಇಬ್ಬರೇ ಇರುತ್ತಿದ್ದೆವು. ಇಂಥ ಸಂದರ್ಭಗಳಲ್ಲಿ ನಾನು ನನ್ನ ವೈಯಕ್ತಿಕ ಸಮಸ್ಯೆಗಳನ್ನು ಕುರಿತು ಮಾತಾಡಿದೆ.

ಆಧುನಿಕ ಜೀವನದ ಸಮಸ್ಯೆಗಳನ್ನು ಇಷ್ಟೊಂದು ಸ್ಪಷ್ಟವಾಗಿ ಅರಿತವರೊಡನೆ ಮಾತಾಡುವುದು ಅತ್ಯಂತ ಸಮಾಧಾನಕರವಾದ ವಿಷಯವಾಗಿತ್ತು. ಜಗತ್ತಿನಲ್ಲಿ ನಡೆಯುತ್ತಿರುವುದೆಲ್ಲ ಅವರಿಗೆ ತಿಳಿಯುತ್ತಿರುವಂತಿತ್ತು. ಯಾವುದೊ ಇನ್ನೊಂದು ಶ್ರೇಷ್ಠ ಗ್ರಹದಿಂದ ಬಂದವರಂತೆ ಅವರು ಅದನ್ನು ವೀಕ್ಷಿಸುವಂತಿತ್ತು. ನನ್ನ ಅಗತ್ಯಗಳ ಬಗ್ಗೆ ಮತ್ತು ನನ್ನ ಸ್ವಭಾವದ ಬಗ್ಗೆ ಅವರಿಗೆ ಇದ್ದ ಸಹಜಜ್ಞಾನ ಆಶ್ಚರ್ಯಕರವಾಗಿತ್ತು. ಇನ್ನು ಮುಂದೆ ನನ್ನ ಜೀವನ ಈ ಮೊದಲಿನಂತೆ ಎಂದಿಗೂ ಇರಲಾರದು ಎಂದು ನನಗೆ ಅನಿಸಿಹೋಯಿತು.

ನಾವು ಅನೇಕ ವಿಷಯಗಳ ಬಗ್ಗೆ ಮಾತಾಡಿದೆವು. "ಸುಬುದ್" ಬಗ್ಗೆ ಅವರ ಅಭಿಪ್ರಾಯ ತಿಳಿಯಲಿಚ್ಛಿಸಿದೆ. ಅವರೆಂದರು: "ಪಾಕ್ ಸುಬುದ್-ನಿಮ್ಮನ್ನು ಪರಿಶುದ್ಧ ಪ್ರಜ್ಞೆಗೊಯ್ಯುವುದು. ಅದರಿಂದ ನಿಮಗೆ ಪರಮಾತ್ಮ ಮತ್ತು ಜೀವನದ ಬಗ್ಗೆ ಜ್ಞಾನವಾಗುವುದು."

ಸದ್ಯದ ಜಾಗತಿಕ ಸ್ಥಿತಿಯ ಬಗ್ಗೆ ಅವರನ್ನು ಕೇಳಿದೆ. ಅದಕ್ಕವರು ತೀರ ಸರಳವಾದ ಉತ್ತರವಿತ್ತರು: "ಮಾನವ ತಾತ್ಕಾಲಿಕವಾಗಿ ಸತ್ಯದ ಹಾದಿಯನ್ನು ಕಳೆದುಕೊಂಡಿದ್ದಾನೆ. ಲೌಕಿಕ ಶಕ್ತಿಗಳ ಪ್ರಭುತ್ವಕ್ಕಾತ ಒಳಗಾಗಿದ್ದಾನೆ. ದೊಡ್ಡದೊಂದು ಕ್ರಾಂತಿಯೂ ಭೀಕರ ವಿನಾಶವೂ ಸಂಭವಿಸುವುದು. ಅನಂತರ ಪರಮಾತ್ಮ ಸರ್ವಶಕ್ತ ಎಂಬುದನ್ನು ಮಾನವ ನೆನಪಿಗೆ ತಂದುಕೊಳ್ಳುತ್ತಾನೆ."

ಯುದ್ಧಕ್ಕಿಂತಲೂ ಕ್ರಾಂತಿಯ ಗಂಡಾಂತರವೇ ಹೆಚ್ಚು ಎಂದು ಅವರಂದದ್ದನ್ನು ಗಮನಿಸಿದೆ. ಅವರು ಯಂತ್ರಗಳ ವಿರುದ್ಧ ಮನುಷ್ಯನ ಬಂಡಾಯವನ್ನು ಉದ್ದೇಶಿಸಿ ಮಾತಾಡುತ್ತಿದ್ದಾರೆಂದು ಅರಿತೆ.

ಅವರ ದೀರ್ಘ ಆಯುಸ್ಸಿನ ಬಗ್ಗೆ ಕೆಲ ಪ್ರಶ್ನೆ ಕೇಳಿದೆವು. ಆಯುಷ್ಯವನ್ನು ವರ್ಧಿಸುವ ಪ್ರಾಣಾಯಾಮದ ಗುಟ್ಟನ್ನು ಅವರು ಅರಿತುಕೊಂಡಿದ್ದಾರೆಯೆ ಎಂದು ಕೇಳಿದೆ.

ಯೋಗಿಗಳು ಅಭ್ಯಾಸ ಮಾಡುವ ಪ್ರಾಣಾಯಾಮದ ಬಗೆಯನ್ನು ಅವರು ಪ್ರಸ್ತಾಪಿಸಿ "ಅವು ಕೆಲವೊಂದು ಶಕ್ತಿಗಳನ್ನು ಸಂಪಾದಿಸಲಷ್ಟೆ ಉಪಯುಕ್ತವಾಗುವವು. ಅದರಿಂದ ಆಯುಷ್ಯ ವೃದ್ಧಿಯಾಗುವುದಿಲ್ಲ" ಎಂದರು.

ತಾವು ಬಾಲ್ಯದಿಂದಲೂ ಕಟ್ಟುನಿಟ್ಟಾಗಿ ಮನುಷ್ಯನ ಮೂರು ಕರ್ತವ್ಯಗಳನ್ನು ಪಾಲಿಸಿ, ಶಕ್ತಿಯ ಅಪವ್ಯಯವನ್ನು ಮಾಡಿಲ್ಲವಾದ್ದರಿಂದ ತಮ್ಮೆಲ್ಲ ಇಂದ್ರಿಯ ಶಕ್ತಿಗಳೂ ಸರಿಯಾಗಿವೆ ಎಂದವರು ಹೇಳಿದರು.

"ನಿಮ್ಮ ಜೀವನದ ಕರ್ತವ್ಯಗಳನ್ನೆಲ್ಲ ಪೂರ್ತಿಗೊಳಿಸಿದ್ದೀರಾ?" ಎಂದು ಕೇಳಿದೆ. "ಇಲ್ಲ. ನಾವು ಬದುಕಿರುವವರೆಗೂ ಕರ್ತವ್ಯವಿದ್ದೇ ಇರುತ್ತದೆ. ನಾನು ನನ್ನ ದೇಹದ ಮತ್ತು ನನ್ನನ್ನವಲಂಬಿಸಿರುವವರ ಯೋಗಕ್ಷೇಮ ನೋಡಿಕೊಳ್ಳಬೇಕಾಗುವುದು. ಜ್ಞಾನ ಸಂಪಾದನೆಯ ನಿಜ ಬಯಕೆಯಿಂದ ನನ್ನಲ್ಲಿ ಬರುವವರಿಗೆ ಸಲಹೆ

ಕೊಡುವ ನನ್ನ ಉದ್ಯೋಗವನ್ನೂ ನಾನು ಮಾಡಬೇಕಾಗುತ್ತದೆ.

"ಆದರೆ ನನ್ನ ಕರ್ತವ್ಯಗಳು ಕಡಿಮೆ. ಹೆಚ್ಚು ಕಡಿಮೆ ನನ್ನೆಲ್ಲ ಸಮಯವನ್ನೂ ಈಶ ಚಿಂತನೆಯಲ್ಲಿ ಉಪಯೋಗಿಸಬಲ್ಲೆ. ಇದೇ ಎಲ್ಲಕ್ಕೂ ಹಿರಿದಾದ ಕರ್ತವ್ಯ. ಆತ್ಮಜ್ಞಾನವಾಗಬೇಕಾದರೆ ನಿಮ್ಮ ಕರ್ತವ್ಯ ಹೊಣೆಗಳನ್ನು ಆದಷ್ಟು ಕಡಿಮೆ ಮಾಡಿಕೊಳ್ಳಬೇಕಾಗುವುದು" ಎಂದು ಅವರು ಉತ್ತರವಿತ್ತರು.

ನಾವು ಅಲ್ಲಿಂದ ಹೊರಡುವ ಸಮಯ ಬಂತು. ಅವರು ನಮಗೆ ಕೊಟ್ಟಿದ್ದನ್ನು ನಾವೆಂದೂ ಕಳೆದುಕೊಳ್ಳೆವು ಎಂದು ನಮಗೆ ಗೊತ್ತಿತ್ತು. ಈ ಸಾಧುವಿನ ಅಡವಿಯನ್ನು ಹೊಕ್ಕವರಿಗೆಲ್ಲ ಒಂದು ವಿಧವಾದ ಸಂತೋಷ-ಶಾಂತಿಗಳ ಅನುಭವವಾಗಿ ಅದು ಅವರು ಪುನಃ ಈ ಲೌಕಿಕ ಜಗತ್ತಿನ ಜಂಜಾಟಕ್ಕೆ ಮರಳುವ ವರೆಗೂ ಇರುವುದು.

ಅವರನ್ನು ನಾವು ಸಮೀಪಿಸಿದಾಗಲೆಲ್ಲ ಅವರು ಹೊರಳಿ ನಮ್ಮನ್ನು ನೋಡಿದ್ದರು. ಅವರ ಚಲನವಲನಗಳಲ್ಲಿ ಯೌವನದ ಉತ್ಸಾಹವಿತ್ತು. ಅವರ ದೃಷ್ಟಿ, ಶ್ರವಣಶಕ್ತಿ ಪರಿಪೂರ್ಣವಾಗಿದ್ದವು.

ಇಂಗ್ಲೀಷಿನಲ್ಲಿ ಅವರು ಎಷ್ಟು ಚೆನ್ನಾಗಿ ಮಾತಾಡುತ್ತಿದ್ದರೆಂದರೆ ಪ್ರತಿಯೊಂದು ಶಬ್ದವೂ ಸರಿಯಾದ ಅರ್ಥವನ್ನು ಕೊಡುತ್ತಿತ್ತು. ಹೆಚ್ಚಿನ ಹಿಂದು ಮತ್ತು ಬೌದ್ಧ ಗುರುಗಳಂತೆ ಅವರೆಂದೂ ತಾಂತ್ರಿಕ ಶಬ್ದಗಳನ್ನು ಬಳಸುತ್ತಿರಲಿಲ್ಲ. ತೀರ ಜಟಿಲ ವಿಷಯವನ್ನೂ ಬಲು ಸುಲಭದಲ್ಲಿ ವಿವರಿಸುತ್ತಿದ್ದರು.

ಬಾಬಾ ಶಾಂತಿ ಮತ್ತು ಜ್ಞಾನವನ್ನು ಹರಡುವ ವ್ಯಕ್ತಿಯಾಗಿದ್ದರು. ದಯಾಭಾವದ ಈತ ಜಗತ್ತಿನ ಎಲ್ಲ ಧರ್ಮ-ಕುಲಗಳನ್ನೂ ನಿಷ್ಪಕ್ಷಪಾತತನದಿಂದ ಕಾಣುತ್ತಿದ್ದರು. ಮುಂದಿನ ಯುಗಗಳಲ್ಲಿ, ವಿವಿಧ ಚಟುವಟಿಕೆಗಳಲ್ಲಿ ಅಥವಾ ಸಂಪತ್ತಿನ ಸಂಗ್ರಹದಲ್ಲಿ ನಿಜ ಸುಖವಿಲ್ಲ ಎಂದು ಜನರು ಕಂಡುಕೊಂಡಾಗ ಅವರೆಲ್ಲ ಹೇಗಿರಬಹುದೊ ಅದಕ್ಕೆ ಶಿವಪುರಿ ಬಾಬಾ ಒಂದು ಜೀವಂತ ಉದಾಹರಣೆಯಾಗಿದ್ದಾರೆ.

ಪರಮಾತ್ಮನ ಜ್ಞಾನವೆಂಬ ಅಪಾರ ಸಂಪತ್ತಿಗಾಗಿ ಬದುಕುವ ಕಲೆಯನ್ನು ಅರಿತವರಿಗೆ ಮಾತ್ರ ಅಂಥ ಸುಖ ಪ್ರಾಪ್ತವಾಗುವುದು. ★



ಶ್ರೀಮಂತಿಕೆಯ ಗುಟ್ಟು

ಬಡವರ ಮನೆಗೆ ಶ್ರೀಮಂತರ ಮನೆತನದ ಹೆಣ್ಣೊಂದನ್ನು ಸೊಸೆಯನ್ನಾಗಿ ತಂದಿದ್ದರು. ಒಂದು ದಿನ ಆಕೆ ತನ್ನ ನಾದಿನಿಯೊಂದಿಗೆ ಅಕ್ಕಿಯಿಂದ ಕಲ್ಲು ಭತ್ತಗಳನ್ನು ಬೇರ್ಪಡಿಸುತ್ತಿದ್ದಳು.

ಆಗ ಅಲ್ಲಿಗೆ ಏನೋ ಕಾರ್ಯನಿಮಿತ್ತವಾಗಿ ಬಂದ ಅವಳ ಅತ್ತೆ, ಕ್ಷಣಕಾಲ ನಿಂತು ಅವರಿಬ್ಬರ ಕೆಲಸವನ್ನೊಮ್ಮೆ ಈಕ್ಷಿಸಿದರು.

ಮಗಳು ಅಕ್ಕಿಯಲ್ಲಿರುವ ಭತ್ತವನ್ನು ತೆಗೆದು ತೆಗೆದು ಹೊರಗೆ ಬಿಸಾಡುತ್ತಿದ್ದಾಳೆ. ಸೊಸೆ ಭತ್ತವನ್ನು ಸುಲಿದು ಅಕ್ಕಿಯನ್ನು ರಾಶಿಗೆ ಸೇರಿಸುತ್ತಿದ್ದಾಳೆ.

ಅತ್ತೆಯ ಗಂಭೀರ ವದನದಲ್ಲಿ ತಿಳಿನಗುವೊಂದು ಮಿನುಗಿ ಮಾಯವಾಯಿತು. ಆಗಲೇ ಆಕೆಗೆ ಶ್ರೀಮಂತಿಕೆಯ ಗುಟ್ಟು ಹೊಳೆದುದು. —ಕುಮಾರಿ ಲಲಿತಾ



ಸೋವಿಯತ್ ವಿಜ್ಞಾನಿಗಳ
ಅಪೂರ್ವ ಪ್ರಯೋಗಗಳು

ಪೈಟೊಟ್ರಾನ್: ಸಸ್ಯಗಳ ಮಾಯಾಗೃಹ

ಎಂ. ಕೆ. ಜಯಲಕ್ಷ್ಮಿ

ಒಂದು ಟೊಮ್ಯಾಟೊ ಬೀಜವಾಗಲೀ, ಒಂದು ಗೋದಿಯ ಕಾಳಾಗಲೀ ಆದರ್ಶ ವಾತಾವರಣದಲ್ಲಿ ಬೆಳೆದಾಗ ಪರಾಕಾಷ್ಠೆಯೆಂದರೆ ಎಷ್ಟು ಫಸಲನ್ನು ತೆಗೆಯಬಹುದು—ಎಂಬುದು ವಿಜ್ಞಾನಿಗಳ ನವಶೋಧನೆಯ ಮೂಲ ಪ್ರಶ್ನೆಯಾಗಿದೆ.

ಈ ವರೆಗೂ ಈ 'ಆದರ್ಶ ವಾತಾವರಣ' ಹೇಗಿರಬೇಕೆಂಬ ಬಗ್ಗೆ ಒಮ್ಮತವಿರಲಿಲ್ಲ. ಈಗ ವೈಜ್ಞಾನಿಕವಾಗಿ ಸಸ್ಯಗಳ ಸೂಚನೆಗಳನ್ನು ಗ್ರಹಿಸಿ, ಆದರ್ಶ ವಾತಾವರಣ ಕಲ್ಪಿಸಲು ಸಾಧ್ಯವಾಗಿದೆ.

ಪ್ರಕೃತಿಯ ರೀತಿ-ನೀತಿಗಳು ಚಂಚಲವಾದ ಕಾರಣ 'ಆದರ್ಶ ವಾತಾವರಣ'ವನ್ನು ಕೃತಕವಾಗಿ ಮಾತ್ರ ನಿರ್ಮಿಸಲು ಸಾಧ್ಯ. ಲೆನಿನ್‌ಗ್ರಾಡಿನ ಅಗ್ರೋಫಿಜಿಕ್ಸ್ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿ ಈ ಬಗ್ಗೆ ಪ್ರಯೋಗ ನಡೆದಿದೆ. ಸಸ್ಯಗಳ ಬೆಳವಣಿಗೆಗೆ ನೆಲ, ಜಲ ಹಾಗೂ ಸೂರ್ಯರಶ್ಮಿ ಅಗತ್ಯವೆಂಬುದು ಹಳೆಯ ನಂಬಿಕೆ. 'ವ್ಯವಸಾಯದ ಬಗ್ಗೆ ಪ್ರಯೋಗ ನಡೆಯಬೇಕಾದುದು ಹೊಲಗದ್ದೆಗಳಲ್ಲಲ್ಲ–ಪ್ರಯೋಗಶಾಲೆಯ ಕತ್ತಲು ಕೋಣೆಗಳಲ್ಲಿ' ಎಂದು–ಲೆನಿನ್‌ಗ್ರಾಡ್ ವಿಜ್ಞಾನಿಗಳು ಹೇಳಿದಾಗ ಸಾಮಾನ್ಯ ಜನರು ಅಪಹಾಸ್ಯ ಮಾಡಿದರು. ಸೂರ್ಯರಶ್ಮಿಗೆ ಪ್ರತಿಯಾಗಿ ಸೀಮೆ ಎಣ್ಣೆ ದೀಪಗಳ ಪ್ರಕಾಶದಿಂದ ಸಸ್ಯ ಬೆಳೆಯಲು ಯತ್ನಿಸಿ ವಿಫಲನಾಗಿ ನಗೆಗೀಡಾದ ರಷ್ಯಾದ ವಿಜ್ಞಾನಿ ಪ್ಯಾಮಿನಟ್ಸಿನ್ನನ ಉದಾಹರಣೆಯನ್ನು ನೆನಪಿಸಿಕೊಟ್ಟರು.

ಆದರೆ ವಿಜ್ಞಾನಿಗಳು ತಮ್ಮ ಪ್ರಯೋಗವನ್ನು ಬಿಡಲಿಲ್ಲ. ಅಕುಂಠಿತವಾದ ಸಸ್ಯದ ಬೆಳವಣಿಗೆಗೆ ಆದರ್ಶ ವಾತಾವರಣ ನಿರ್ಮಿಸಲು, ವಿದ್ಯುಚ್ಛಕ್ತಿ ಹಾಗೂ ದ್ರವರೂಪದ ಪೋಷಕಗಳನ್ನು ಬಳಸಿ ಬೆಳೆ ತೆಗೆಯಲು 'ಪೈಟೊಟ್ರಾನ್' ಎಂಬ ವಿಶೇಷ ಕೋಣೆಗಳನ್ನು ನಿರ್ಮಿಸಿ ಪ್ರಯೋಗ ನಡೆಸಿದರು.

ಅವರ ಶ್ರಮ ವ್ಯರ್ಥವಾಗಲಿಲ್ಲ. ಹತ್ತು ಚದುರಡಿ ಪ್ರದೇಶದಲ್ಲಿ ಮೂವತ್ತಾರು ಟೊಮ್ಯಾಟೊ ಗಿಡಗಳನ್ನು ಬೆಳೆಸಿದ್ದಾರೆ. ಇವು ಅರವತ್ತು ದಿನಗಳಿಗೊಮ್ಮೆ ಫಸಲು ಬಿಡುತ್ತವೆ. ಒಂದು ವರ್ಷಕ್ಕೆ ಇನ್ನೂರೈವತ್ತು ಪೌಂಡು ಅತ್ಯುತ್ತಮವಾದ ಟೊಮ್ಯಾಟೊ ಫಸಲು ದೊರಕುತ್ತದೆ. ಸಹಜವಾಗಿ ಬೆಳೆದ ಹಣ್ಣಿಗಿಂತಲೂ ರುಚಿಯಲ್ಲಿ, ಸತ್ವದಲ್ಲಿ ಈ ಕೃತಕ ಹಣ್ಣುಗಳು ಉತ್ತಮವಾಗಿರುತ್ತವೆ.

" ಮೈ ಮ್ಯಾಗಜನ್ ಆಫ್ ಇಂಡಿಯಾ " ಒಂದ

ಅಷ್ಟು ಅಲ್ಪ ಜಾಗದಲ್ಲಿ ಅಷ್ಟು ಫಸಲನ್ನು ಬೆಳೆಯುವುದು ಅದ್ಭುತವೇ ಸರಿ. ಟೊಮ್ಯಾಟೊ ಬೆಳೆಗೆ ಅತಿ ಪ್ರಸಿದ್ಧವಾದ ಬಲ್ಗೇರಿಯದಲ್ಲಿ ಸಹ ಇದರ ನಾಲ್ಕನೇ ಒಂದು ಭಾಗ ಫಸಲು ಮಾತ್ರ ಬರುತ್ತದೆ. ಇಷ್ಟು ಬೆಳೆ ಬಂದಿತೆಂದು ಇವರಿನ್ನೂ ತೃಪ್ತರಾಗಿಲ್ಲ. ಇದರ ಎರಡರಷ್ಟು ಬೆಳೆಯನ್ನು ಧಾರಾಳವಾಗಿ ತೆಗೆಯಬಹುದೆಂದು, ತೆಗೆಯಲು ಸಾಧ್ಯವೆಂದು ಅಲ್ಲಿನ ತಜ್ಞರು ಹೇಳುತ್ತಾರೆ.

ಈ ಪ್ರಯೋಗದಿಂದ ಕೆಲವು ಸ್ವಾರಸ್ಯಾಂಶಗಳು ಹೊರಬಂದಿವೆ. ಮುನ್ನೂರು ವ್ಯಾಟ್ ಶಕ್ತಿಯ ವಿದ್ಯುತ್ ಬಲ್ಬಿಗೆ ನೀರಿನ ಫಿಲ್ಟರನ್ನು ಅಳವಡಿಸಿದರೆ ಸಸ್ಯಗಳಿಗೆ ಅಗತ್ಯವಾದ ಕೃತಕ ಸೂರ್ಯನನ್ನು ಸೃಷ್ಟಿಸಿದಂತಾಗುವುದು. ದೀಪದ ಬೆಳಕು ತೀಕ್ಷ್ಣವಾಗಿದ್ದಾಗ ಸುತ್ತಣ ವಾತಾವರಣಕ್ಕಿಂತಲೂ ಇಪ್ಪತ್ತು ಅಥವಾ ಮೂವತ್ತು ಡಿಗ್ರಿಯಷ್ಟು ಉಷ್ಣಾಂಶ ಸಸ್ಯಗಳಲ್ಲಿ ಹೆಚ್ಚುತ್ತದೆ.

ಒಂದೊಂದು ಸಸ್ಯದ ಅಗತ್ಯವು ಒಂದೊಂದು ರೀತಿಯಾಗಿರುತ್ತದೆ. ಗೋದಿಗೆ ಶಾಖ – ಬೆಳಕುಗಳು ಒಂದೇ ಸಮನಾಗಿರಬೇಕು. ಮೂಲಂಗಿಗೆ ತೀಕ್ಷ್ಣ ಬೆಳಕು ಹಾಗೂ ಛಳಿ ಬೇಕು. ಒಂದೊಂದು ಸಸ್ಯದ ಬೆಳವಣಿಗೆಗೂ ಅದಕ್ಕೆ ಅಗತ್ಯವಾದ ಆದರ್ಶ ವಾತಾವರಣವನ್ನು ನಿರ್ಮಿಸಿಕೊಟ್ಟರೆ, ಪವಾಡವೆನಿಸುವಷ್ಟು ಫಸಲನ್ನು ಬೆಳೆಯಬಹುದು. ವರ್ಷದಲ್ಲಿ ಆರು ಗೋದಿಯ ಬೆಳೆಯನ್ನು ತೆಗೆಯಲೂ ಸಾಧ್ಯ.

ಆದರೆ ಫಸಲಿನ ಅಂದಾಜಿನ ಮೇಲೆ ಸಸ್ಯದ ಬೆಳವಣಿಗೆಯನ್ನು ನಿರ್ಧರಿಸುವುದು ನೇರವಾದ ಮಾರ್ಗವಲ್ಲ. ಇದರಿಂದ ಸಸ್ಯಗಳು ಪರಾಕಾಷ್ಠೆಯ ಬೆಳವಣಿಗೆಯನ್ನು ಪಡೆದಿದ್ದವೇ ಎಂಬ ಬಗ್ಗೆ ಯಾವ ವಿಷಯವೂ ತಿಳಿಯುವುದಿಲ್ಲ. ಆದ್ದರಿಂದ ಲೆನಿನ್‌ಗ್ರಾಡಿನ ಪ್ರಯೋಗಕರು, ಬೆಳೆಯುತ್ತಿರುವ ಸಸ್ಯಗಳಿಂದಲೇ ಅವುಗಳ ಆರೋಗ್ಯದ ಸ್ಥಿತಿಗತಿಗಳ ಬಗ್ಗೆ ನೇರವಾದ, ಅವಿಚ್ಛಿನ್ನವಾದ ಜೀವಂತ ಸೂಚನೆಗಳನ್ನು ಸಂಗ್ರಹಿಸುತ್ತಾರೆ.

ಪ್ರಾಣಿಗಳಲ್ಲಿ 'ಕಂಡಿಷನ್ಡ್ ರಿಫ್ಲೆಕ್ಸ್'* ಇರುವಂತೆಯೇ, ಸಸ್ಯಗಳಲ್ಲೂ ಇದೆ. ಆಹಾರ ಕೊಡುವ ಗಂಟೆ ಸದ್ದು ಕೇಳಿದೊಡನೆ ಪ್ರಾಣಿ ಜಠರರಸವನ್ನು ಸ್ರವಿಸುವಂತೆ, ಸಸ್ಯಗಳು ಸಹ ನಿಯಮಿತ ಕಾಲದಲ್ಲಿ ಆಹಾರೋತ್ಪತ್ತಿ ಮಾಡುವಂತೆ, ಅವುಗಳಿಗೆ ತರಬೇತಿ ಕೊಡಬಹುದು. ಹಸಿರು ಎಲೆಗಳು ಬೆಳಕಿದ್ದಾಗ ಮಾತ್ರ ಆಹಾರವನ್ನು ಉತ್ಪಾದಿಸುತ್ತವೆ. ಇದೇ ಫೋಟೋಸಿನ್ತಿಸಿಸ್. ಆಗ ಸಸ್ಯಗಳ ಹಸಿರು ಭಾಗದಿಂದ ಹಬೆ ಹೊರಡುತ್ತದೆ.

ಪ್ರತಿನಿತ್ಯವೂ ಬೆಳಗಿನ ಎಂಟು ಗಂಟೆಗೆ ದೀಪ ಹೊತ್ತಿಸಿ, ವಿಜ್ಞಾನಿಗಳು ಪ್ರಯೋಗ ಮಾಡಿದರು. ಕೆಲವು ದಿನಗಳ ನಂತರ ಒಂಬತ್ತು ಗಂಟೆಗೆ ಸರಿಯಾಗಿ ಆಹಾರೋತ್ಪತ್ತಿಯಾಗುತ್ತಿರುವ ಸಂಕೇತವೆಂಬಂತೆ ಹಬೆ ಹೊರಡಲಾರಂಭಿಸಿತು. ಅನಂತರ ದೀಪವಿರಲಿ ಇಲ್ಲದಿರಲಿ ಒಂಬತ್ತು ಗಂಟೆಗೆ ಸರಿಯಾಗಿ ಹಬೆ ಹೊರಡುತ್ತಿತ್ತು— ಸಸ್ಯದ ಹಸಿವೆಯ ಸೂಚನೆಯಾಗಿ! ಅತ್ಯಂತ

* 'ಕಂಡಿಷನ್ಡ್ ರಿಫ್ಲೆಕ್ಸ್' ಎಂದರೆ ಅಭ್ಯಸ್ತ ಪ್ರತಿಕ್ರಿಯೆ ಎನ್ನಬಹುದು. ಇದರ ಸಂಶೋಧಕನು ರಶಿಯದ ವಿಜ್ಞಾನಿ ಪಾವ್‌ಲೋವ್. ಅವನು ನಾಯಿಗೆ ಆಹಾರ ಕೊಡುವಾಗ ದಿನಾಲು ಮೊದಲು ಗಂಟೆ ಬಾರಿಸಿದನು. ಕಡೆಗೆ ನಾಯಿಗೆ ಗಂಟೆ ಸಪ್ಪಳಕ್ಕೂ ಆಹಾರಕ್ಕೂ ಇರುವ ಸಂಬಂಧ ಎಷ್ಟು ಅಭ್ಯಾಸವಾಗಿ ಹೋಯಿತೆಂದರೆ, ಬರಿ ಗಂಟೆ ಬಾರಿಸಿದೊಡನೆ ಆಹಾರ ಬಾರದಿದ್ದರೂ ಜೊಲ್ಲು ಸುರಿಸಲಾರಂಭಿಸಿತು. ಇದಕ್ಕೆ ಅವನು ಕಂಡಿಷನ್ಡ್ ರಿಫ್ಲೆಕ್ಸ್ ಎಂದು ಹೆಸರಿಟ್ಟನು. ಇದು ಮಾನವಾದಿ ಸಕಲ ಪ್ರಾಣಿಗಳಲ್ಲೂ ಕಂಡುಬರುವ ಗುಣವಾಗಿದೆ. ತೆನ್ನಾಲಿ ರಾಮನ ಬೆಕ್ಕು ಕೂಡ ಕಂಡೀಷನ್ಡ್ ರಿಫ್ಲೆಕ್ಸಿನ ಒಂದು ಉದಾಹರಣೆ ಎನ್ನಬಹುದು.

ಸೂಕ್ಷ್ಮವಾದ, ನಾಜೂಕಾದ ಯಂತ್ರವನ್ನು ಸಸ್ಯದ ಎಲೆಗೆ ತಗುಲಿಸಿ, ಶಾಖವನ್ನೂ ಹಬೆಯ ಅಂಶವನ್ನೂ ಅಳೆಯುತ್ತಾರೆ. ಸಸ್ಯಗಳ ಭಾವನೆಗಳನ್ನೂ ಸೂಚನೆಗಳನ್ನೂ ಅರ್ಥ ಮಾಡಿಕೊಳ್ಳಲು ಈ ಯಂತ್ರಗಳು ಅನಿವಾರ್ಯ. ಈ ಯಂತ್ರಗಳ ನೆರವಿನಿಂದ 'ಆದರ್ಶ ವಾತಾವರಣ'ವನ್ನು ನಿರ್ಮಿಸಲು ಸಾಧ್ಯ.

ಇಲ್ಲಿ ಒಂದು ಉದಾಹರಣೆಯನ್ನು ನೋಡಿರಿ. —ಪ್ರಯೋಗಶಾಲೆ ನಿಶ್ಶಬ್ದವಾಗಿತ್ತು. ರಾತ್ರಿಯಾದ ಕಾರಣ ಕತ್ತಲು ಕವಿದಿತ್ತು. ಇದ್ದಕ್ಕಿದ್ದಂತೆ ಒಂದು ಪೈಟೊಟ್ರಾನ್ ಕೊಠಡಿಯಲ್ಲಿ ದೀಪ ಹೊತ್ತಿಕೊಂಡಿತು. ಗಡಿಯಾರದ ಸದ್ದಿಲ್ಲ. ದೀಪ ಹೊತ್ತಿಸಲು ಜನರೂ ಇಲ್ಲ. ಹಾಗಾದರೆ ಹೇಗೆ ದೀಪ ಹೊತ್ತಿತು? 'ಪೈಟೊಟ್ರಾನ್'ನಲ್ಲಿದ್ದ ತಿಂಗಳವರೆಗಿಡವೇ ದೀಪವನ್ನು ಹೊತ್ತಿಸಿ ಬೆಳಕು ಮಾಡಿಕೊಂಡಿತೆಂದರೆ ನಂಬುವಿರಾ? ನಂಬಲೇಬೇಕಾದ ಸತ್ಯಸಂಗತಿಯಿದು! ರಾತ್ರಿಯ ಈ ವೇಳೆಯಲ್ಲಿಯೇ ಆಹಾರೋತ್ಪತ್ತಿ ಮಾಡಿಕೊಳುವಂತೆ ಗಿಡಕ್ಕೆ ತರಬೇತು ಕೊಡಲಾಗಿದೆ. ಎಲೆಗಳು ಹಬೆಯನ್ನುಗುಳಹತ್ತಿದೊಡನೆ ಯಂತ್ರಗಳು ಆ ಸೂಚನೆಯನ್ನು ಗ್ರಹಿಸಿ ದೀಪದ ಸ್ವಿಚ್ಚನ್ನು ಹಾಕುತ್ತವೆ 'ತಿಂಗಳವರೆ'ಗೆ ದಿನಕ್ಕೆ ಹದಿನಾಲ್ಕು ಗಂಟೆ ಬೆಳಕು ಬೇಕಂತೆ. ಸಮಯ ಬಂದಾಗ, ಇಂತಹ ಆದರ್ಶ ಸನ್ನಿವೇಶ ದೊರಕಿದಾಗ, ತಮ್ಮಿಚ್ಛೆಯಂತೆ ರಾತ್ರಿಯಿಂದ ಹಗಲಿಗೆ ಹಗಲಿನಿಂದ ರಾತ್ರಿಗೆ ತಮ್ಮವಾತಾವರಣವನ್ನೇ ಬದಲಿಸಿಕೊಳ್ಳಬಲ್ಲವು—ಈ ಸಸ್ಯಗಳು.

ಈಗಿನ ಪ್ರಯೋಗಗಳು ಮುಂದುವರಿದಂತೆ, ಸಸ್ಯಗಳು ತಮಗೆ ಬೇಕಾದ ಉಷ್ಣಾಂಶ, ಬೆಳಕಿನ ಪ್ರಖರತೆ, ಹಾಗೂ ಪೋಷಕ ವಸ್ತುಗಳ ಬಗ್ಗೆ ಸೂಚನೆಕೊಟ್ಟು, ಆದರ್ಶ ವಾತಾವರಣವನ್ನು ಕಲ್ಪಿಸಿಕೊಂಡು ತಮ್ಮ ಬೆಳವಣಿಗೆಯ ಪರಾಕಾಷ್ಠೆಯನ್ನು ಮುಟ್ಟಬಲ್ಲವು.

ಹಾಗೆ ನೋಡಿದಲ್ಲಿ, ವ್ಯವಸಾಯ ಉಳಿದ ಉದ್ಯಮಗಳಂತೆ ಮುಂದುವರಿದಿಲ್ಲ. ಚಂದ್ರಲೋಕದ ಯಾತ್ರೆ ನನಸಾಗಲಿರುವ ಈ ಕಾಲದಲ್ಲಿ, ಅಂತರಿಕ್ಷಯಾನ ಮಾಡುವ ಮಾನವ ಭೂಸಂಪರ್ಕವಿಲ್ಲದೆ ಆಹಾರ ಪಡೆಯುವಂತಿರಬೇಕು. ಈ ನಿಟ್ಟಿನಲ್ಲಿ ಪೈಟೊಟ್ರಾನ್‌ಗಳ ಉಪಯೋಗವನ್ನು ನಾವು ಕಡೆಗಣಿಸುವಂತಿಲ್ಲ.

ಮುಂದೆ ವ್ಯವಸಾಯ ವಿಜ್ಞಾನ ಹೇಗೆ ವಾಸ್ತವರೂಪ ತಾಳುವುದೆಂದು ಕುತೂಹಲವಾಗಬಹುದಲ್ಲವೇ? ಸೋವಿಯತ್ ವ್ಯವಸಾಯ ವಿಜ್ಞಾನಿಗಳು ದೊಡ್ಡ ಯೋಜನೆಯನ್ನು ತಯಾರಿಸಿ, ಅದನ್ನು ಕಾರ್ಯಗತ ಮಾಡಲು ಮಾಸ್ಕೊ ನಗರದ ಬಳಿ ಕಾರ್ಖಾನೆಯನ್ನು ಕಟ್ಟುತ್ತಿದ್ದಾರೆ. ಉಳಿದ ಉದ್ಯಮಗಳಂತೆ ಮುಂದೆ ವ್ಯವಸಾಯವೂ ಒಂದು ಉದ್ಯಮವಾಗಲಿದೆ. ಈ 'ಕಾರ್ಖಾನೆ'ಗಳಲ್ಲಿ ಕೃತಕ ಬೆಳಕು, ಕೃತಕ ನೆಲ ಹಾಗೂ ಕೃತಕ ಪೋಷಕಗಳನ್ನು ಬಳಸಿ ಆಹಾರ ಪದಾರ್ಥಗಳನ್ನು 'ತಯಾರಿಸಲಿದ್ದಾರೆ.' ಅನೇಕ ಮಹಡಿಗಳೇ 'ಹೊಲ'ಗಳಾಗುತ್ತವೆ. ಈ ಕಾರ್ಖಾನೆಗಳಲ್ಲಿ ಬೃಹದಾಕಾರದ ಪೈಟೋಟ್ರಾನ್‌ಗಳನ್ನು ಸ್ಥಾಪಿಸಲಿದ್ದಾರೆ.

ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ, ಅಣೆಕಟ್ಟುಗಳಲ್ಲಿರುವ ಖಾಲಿ ಜಾಗಗಳಲ್ಲಿ ಸಹ ಪೈಟೋಟ್ರಾನ್‌ಗಳನ್ನು ಸ್ಥಾಪಿಸಿ ಆಹಾರವನ್ನು ಬೆಳೆಯಬಹುದು. ರಷ್ಯಾದ ಇರ್‌ಕುಟಸ್ಕ್ ಜಲವಿದ್ಯುತ್ ಕೇಂದ್ರದಲ್ಲಿ ಮೊಟ್ಟಮೊದಲನೆಯದಾಗಿ ಪೈಟೊಟ್ರಾನ್‌ಗಳನ್ನು ಸ್ಥಾಪಿಸಲಿದ್ದಾರೆ. ಇನ್ನೂ ಶೈಶವದಲ್ಲಿರುವ ಈ ವಿಜ್ಞಾನ ಮುಂದೆ ಯಾವ ಅದ್ಭುತ ಸಂಶೋಧನೆಗಳನ್ನು ಹೊರತೋರುವುದೋ ಊಹಿಸಲೂ ಸಾಧ್ಯವಿಲ್ಲ.

ಕೇವಲ ಹತ್ತು ಅಡಿ ಚದುರದ ಜಾಗದಲ್ಲಿ ಓರ್ವ ವ್ಯಕ್ತಿಗೆ ಅಗತ್ಯವಾದ ಹಣ್ಣು ತರಕಾರಿಗಳನ್ನೆಲ್ಲ ಬೆಳೆದುಕೊಳ್ಳಬಹುದೆಂದ ಮೇಲೆ ಆಧುನಿಕ ಮನೆಯಲ್ಲಿ ರಿಫ್ರಿಜಿರೇಟರ್‌ನಂತೆಯೇ ಪೈಟೋಟ್ರಾನ್‌ಗಳೂ ಅನಿವಾರ್ಯ ಅವಶ್ಯಕತೆಯೆಂದು ಒಂದು ಹೆಮ್ಮೆಯ ಸ್ಥಳವನ್ನಾಕ್ರಮಿಸುವ ಕಾಲ ಬರಬಹುದು. *

ತತ್ವಜ್ಞಾನದ ಒಂದು ಸಮೀಕ್ಷೆ

ಬಾಳನ್ನು ನೋಡುವ ದೃಷ್ಟಿ

ರಂ. ರಾ. ದಿವಾಕರ

ಜೀವನ— ಒಂದು ಕಾಟ
ಅಲ್ಲ ಮಾಟ;
ಒಂದು ನೋಟ,
ಅಲ್ಲ ಊಟ;
ಒಂದು ಕೂಟ,
ಅಲ್ಲ ಆಟ; ಅದೇ ಕೊನೆ!

ಮಾನವನು ಕೂಡ ಇತರ ಪ್ರಾಣಿಗಳಂತೆ ಒಂದು ಪ್ರಾಣಿ. ಇತರ ಪ್ರಾಣಿಗಳಿಗೂ ಮನುಷ್ಯ ಪ್ರಾಣಿಗೂ ಒಂದು ದೊಡ್ಡ ಅಂತರ—ಪ್ರಾಣಿಗಳು ಕೋಟ್ಯಂತರ ವರುಷಗಳಿಂದ ಒಂದೇ ಸ್ಥಿತಿಯಲ್ಲಿವೆ. ಮನುಷ್ಯನು ತನ್ನ ಜೀವನವನ್ನು ವಿಧವಿಧದಿಂದ ಮಾರ್ಪಡಿಸಿದ್ದಾನೆ. ಹತ್ತಿಪ್ಪತ್ತು ಸಾವಿರ ವರುಷಗಳಾಚೆಗಿನ ನಾಯಿ, ಕುದುರೆ, ಒಂಟೆ, ಸೊಳ್ಳೆ ಮುಂತಾದವು ಯಾವ ರೀತಿ ಇದ್ದವೊ ಅದೇ ರೀತಿ ಅವು ಈಗ ಜೀವಿಸುತ್ತಿರುವವು. ಆದರೆ ಆಗಿನ ಮನುಷ್ಯನ ಜೀವನ ಈಗಿನ ಮನುಷ್ಯನ ಜೀವನ ಇವುಗಳಲ್ಲಿ ಅಜಗಜಾಂತರವಾಗಿದೆ.

ಇಲ್ಲಿ ಆ ಅಂತರವನ್ನು ಬಣ್ಣಿಸುವುದು ನನ್ನ ಉದ್ದೇಶವಿಲ್ಲ ಆದರೆ ತನ್ನ ಜೀವನದತ್ತ ತಾನೇ ನೋಡುವ ಶಕ್ತಿಯೆಂದು ಮನುಷ್ಯನಲ್ಲಿ ಬೆಳೆದುಕೊಂಡು ಬಂದಿದೆ; ಈಗಲೂ ಆ ಶಕ್ತಿ ಬೆಳೆಯುತ್ತಿದೆ. ಅಲ್ಲದೆ ತನ್ನ ಜೀವನವನ್ನು ವಿಮರ್ಶಿಸುವ ಹಾಗೂ ಅದರ ರಹಸ್ಯವೇನು ಎಂಬುದನ್ನು ತಿಳಿದುಕೊಳ್ಳುವ ಉತ್ಸುಕತೆ ಹಾಗೂ ಶಕ್ತಿ ಇವು ಅವನಲ್ಲಿ ಬೆಳೆಯುತ್ತಿವೆ. ಅನೇಕರು ಈ ರೀತಿ ಜೀವನದ ರಹಸ್ಯವನ್ನು ತಿಳಿದುಕೊಳ್ಳಲು ಯತ್ನಿಸಿದ್ದಾರೆ. ಆ ಬಗ್ಗೆ ಪ್ರಮೇಯಗಳನ್ನು ಕಟ್ಟಲು ಶ್ರಮಪಟ್ಟಿದ್ದಾರೆ. ಆಯಾ ಪ್ರಮೇಯಗಳೇ ಅವರವರ ಜೀವನರಹಸ್ಯ, ತತ್ವಜ್ಞಾನ, ಇಲ್ಲವೇ ಜೀವನಪದ್ಧತಿಯ ತಳಹದಿ ಎನಿಸುವವು. ಅವುಗಳಲ್ಲಿ ಹಲವನ್ನು ಇಲ್ಲಿ ಹೇಳಬಹುದು.

ಜೀವನ ಒಂದು ಕಾಟ, ಅಲ್ಲ ಮಾಟ !

ಜೀವನದಲ್ಲಿ ಸುಖ, ಸಮಾಧಾನ, ಶಾಂತಿ ಇವುಗಳಿಲ್ಲವೆಂದು ಯಾರೂ ಹೇಳಲಾರರು. ಅತ್ಯಂತ ದುಃಖಮಯ ಜೀವನದಲ್ಲಿಯೂ ಸುಖದ ಕ್ಷಣಗಳು ಇದ್ದೇ ತೀರುವವು. ಆದರೆ ಅನೇಕ ವಿಚಾರವಂತರು, ದುಃಖ ಗುಡ್ಡದಷ್ಟು ಸುಖ ಸಾಸಿವೆ ಕಾಳಿನಷ್ಟು, ಎಂದು ಹೇಳಿದ್ದಾರೆ. ಆದುದರಿಂದ ಭಗವಾನ್ ಬುದ್ಧನು ಜೀವನವನ್ನು 'ದುಃಖಂ ದುಃಖಂ' ಎಂದು ಸಾರಿದ್ದಾನೆ. ಹೀಗೆ ಹೇಳಿ, ಆ ದುಃಖದ ಬೀಜವು ಎಲ್ಲಿದೆ. ಎಂಬುದನ್ನು ಅನ್ವೇಸುವಾಗ 'ತೃಷ್ಣೆ' ಯಾವುದೇ ವಸ್ತುವಿನ ಇಚ್ಛೆ, ಕಾಮನೆ, ಅರ್ಥಾತ್ 'ಬೇಕು' ಎಂಬ ಭಾವನೆ, ಇದೇ ದುಃಖದ ಮೂಲ ಎಂದಿದ್ದಾನೆ. 'ಬೇಕು' ಎಂಬುದನ್ನು ಬಿಟ್ಟಾಕ್ಷಣಕ್ಕೆ ಮನುಷ್ಯನು ದುಃಖವನ್ನು ನೀಗಿ ನಿರ್ವಾಣವೆಂಬ ದುಃಖರಹಿತ ಸ್ಥಿತಿಯನ್ನು ಪಡೆಯುವನು ಎಂದು ಅವನು ಹೇಳಿರುವನು.

ಜೀವನ—ಇದೊಂದು 'ಕಾಟ', ಕಷ್ಟದ ಸ್ಥಿತಿ (ಕಷ್ಟ ಎಂಬುದರ ತದ್ಭವವೆ ಕಾಟ, ಇರಬಹುದೆ?) ಎಂದಾದರೆ, ಜೀವನವನ್ನು ನಷ್ಟಪಡಿಸಿದರೆ, ಸತ್ತರೆ, ಇಲ್ಲವೆ ಆತ್ಮಹತ್ಯೆ ಮಾಡಿಕೊಂಡು ಬಿಟ್ಟರೆ ಆಯಿತು. ಬುದ್ಧನು ಹೇಳಿದ ಸಾಧನೆಯನ್ನು ಮಾಡುತ್ತ ಕೂಡುವುದೇಕೆ, ಎಂದು ಹಲವರು ಕೇಳಬಹುದು! ಅದಕ್ಕೆ

ತೃಷ್ಣೆಯ ನಾಶವಾಗುವವರೆಗೆ ಜನ್ಮಜನ್ಮಾಂತರಗಳು ತಪ್ಪಲಾರವು ಎಂಬುದೇ ಬುದ್ಧನ ಉತ್ತರ!

ಜೀವನದ ಕಾಟವನ್ನು ತಪ್ಪಿಸಲು ಬುದ್ಧನೊಂದು ಮಾರ್ಗವನ್ನು ಹೇಳಿದರೆ ಶಂಕರಾಚಾರ್ಯರು ಇನ್ನೊಂದು ಹಾದಿಯನ್ನು ಹೇಳಿದರು ಜೀವನವು ಕಾಟವಲ್ಲ 'ಮಾಟ', ಮಾಯೆ ಎಂದರು. ಜೀವನವು ಸುಖವೂ ಅಲ್ಲ ದುಃಖವೂ ಅಲ್ಲ. ಸುಖ ದುಃಖ ಇವೆರಡೂ ಅನುಭವಕ್ಕೆ ಬರುತ್ತಿದ್ದರೂ ಅವೆರಡೂ ಸುಳ್ಳು. ಬರೀ ಚಮತು, ಚಮತ್ಕಾರ, ಜಾದು. ಹೀಗೆ ಹೇಳುತ್ತ ಅವರ ಒಬ್ಬ ಶಿಷ್ಯನು ಅರಣ್ಯದಲ್ಲಿ ಹಾಯ್ದು ಹೋಗುವಾಗ ಒಂದು ಹುಲಿಯನ್ನು ನೋಡಿ ಓಡಲಾರಂಭಿಸಿದನಂತೆ! ಆಗ ಇನ್ನೊಬ್ಬನು, "ಎಲ್ಲವೂ ಮಾಟ, ಎಂದು ಹೇಳುವವನು ನೀನು ಮಾಟದ ಹುಲಿಯನ್ನು ನೋಡಿ ಓಡುವುದೇಕೆ?" ಎಂದು ಕೇಳಿದನಂತೆ. ಅದಕ್ಕೆ ಆ ನಿಷ್ಠಾವಂತ ಶಿಷ್ಯನು, "ಆ ಹುಲಿಯೂ ಒಂದು ಮಾಟ, ನಾನು ಓಡುವುದೂ ಒಂದು ಮಾಟವೆ", ಎಂದು ಉತ್ತರ ಕೊಟ್ಟನಂತೆ!

ಇದು ಸರಿಯಾದ ಉತ್ತರವಲ್ಲ ಎಂಬುದು ಸ್ಪಷ್ಟ. ಆದರೆ ಮಾಟ ಎಂಬುದರ ಅರ್ಥವು ಬೇರೆ ಇದೆ ವ್ಯವಹಾರದಲ್ಲಿ ಇದು ಮಾಟವಲ್ಲ. ಪರಮಾರ್ಥದ ದೃಷ್ಟಿಯಿಂದ ಮಾತ್ರ ಮಾಟ. ಪರಮಾರ್ಥ ದೃಷ್ಟಿ ನೆಲೆಗೊಂಡು ಪೂರ್ಣ ಜ್ಞಾನವಾದ ಬಳಿಕ ಇದೆಲ್ಲ ಮಾಟ, ಅಂದರೆ ಪರಮಾತ್ಮನ ಯೋಗಮಾಯೆ; ಇದೆಲ್ಲ ಭಂಗುರ, ಕ್ಷಣಿಕ, ಪರಿವರ್ತನಶೀಲ; ಒಂದು ನಾಟಕದಂತೆ. ಇದು ಇಲ್ಲೇ ಇಲ್ಲವೆಂತಲ್ಲ. ಇದಕ್ಕೂ ಆಚೆಗೊಂದು ಸತ್ಯ– ಯಾವಾಗಲೂ ಇರುವಂತಹದು ಇದೆ. ಅದನ್ನು ತಿಳಿದುಕೊಂಡು ಆ ಜ್ಞಾನವನ್ನು ಸ್ಥಿರಗೊಳಿಸಬೇಕು, ಎಂಬುದೇ ಅರ್ಥ.

ಜೀವನ ಒಂದು ನೋಟ, ಅಲ್ಲ ಊಟ!

ಇನ್ನೂ ಒಂದು ರೀತಿ ಹೇಳುವರು: ಇದೊಂದು ನೋಟ; ಮನುಷ್ಯನು ನೋಟಗಾರ, ನೋಡುವವ; ವಿಶ್ವದಲ್ಲಿ ನಡೆದ ನಾಟಕವನ್ನು ಪ್ರೇಕ್ಷಕನಂತೆ ನೋಡುತ್ತಾನಷ್ಟೆ. ನಾಟಕದಲ್ಲಿ ಪಾತ್ರ ವಹಿಸಿದವನಿಗೆ ಆಗುವ ಸುಖದುಃಖಗಳು ಅವನಿಗೆ ಪ್ರತ್ಯಕ್ಷ ತಗಲುವುದಿಲ್ಲ. ಅವನು ಆ ನಾಟಕದ ರಸವನ್ನಷ್ಟೆ ಉಣ್ಣುವನು. ಆದರೆ ಮನುಷ್ಯನು ಕೇವಲ ನೋಟಗಾರನೇ? ಅಲ್ಲ. ಅವನು ಆಟಗಾರನೂ ಅಹುದು. ಈ ವಿಶ್ವನಾಟಕದಲ್ಲಿ ಅವನೂ ಪಾತ್ರ ವಹಿಸಿದವನು. ಬರೀ ಇತರರ ಪಾತ್ರವನ್ನು ಅವನು ನೋಡುವುದಿಲ್ಲ ತಾನು ಮಾಡುತ್ತಿರುವ ಪಾತ್ರವನ್ನು ಅವನು ನೋಡಬೇಕಾಗುವುದು ಆದುದರಿಂದ ಇದು ಬರೀ ನೋಟವಲ್ಲ. ಇದು 'ಊಟವೂ' ಅಹುದು. ಊಟವೆಂದರೆ ಪ್ರತ್ಯಕ್ಷ ಅನುಭವ, ಸ್ವಂತ ಅನುಭವ. ಈ ಎರಡೂ ಮಾತುಗಳನ್ನು ಮನುಷ್ಯನು ಮಾಡಬೇಕಾಗಿದೆ. ವಿಶ್ವದ ನಾಟಕವನ್ನು ನೋಡಬೇಕು, ಅದರಲ್ಲಿ ಒಂದು ಪಾತ್ರಿಯೂ ಆಗಬೇಕು. ಆ ಪಾತ್ರದ ಸುಖದುಃಖಗಳಿಂದ ಅಲಿಪ್ತನಿದ್ದು ತಾನೇ ತನ್ನ ಪಾತ್ರದ ಆಗುಹೋಗುಗಳನ್ನು ನೋಡಬೇಕು. ಈ ರೀತಿ ಅನುಭವ ಹಾಗೂ ನೋಟ ಇವೆರಡೂ ಏಕಕಾಲಕ್ಕೆ ನಡೆಯಬೇಕು. ಆದುದರಿಂದ ಇದು ನೋಟವೂ ಸೈ, ಊಟವೂ ಸೈ. ಈ ಸಂದರ್ಭದಲ್ಲಿ ಆತ್ಮನು ಸಾಕ್ಷಿಯಾಗಿರುವನಲ್ಲದೆ ಗೀತೆಯಲ್ಲಿ ಹೇಳಿದಂತೆ 'ಉಪದ್ರಷ್ಟಾನುಮಂತಾ ಚ ಭರ್ತಾ ಭೋಕ್ತಾ' ಕೂಡ ಅವನೇ ಇರುವನು!

ಒಂದು ಕೂಟ, ಅಲ್ಲ ಆಟ

ತನಗೆ ಇಷ್ಟವಿದ್ದುದನ್ನು, ಪೋಷಕವಾದುದನ್ನು ಯಥೇಚ್ಛವಾಗಿ ಸೇವಿಸಿ, ಅದರ ರಸಾಸ್ವಾದನದಿಂದ ಸುಖಪಡುವುದೇ 'ಊಟ' ಎನಿಸುವದು. 'ಭೋಗ, ಭೋಕ್ತಾ' ಎಂಬ ಶಬ್ದಗಳು ಆ ಅರ್ಥದಲ್ಲಿಯೇ ಉಪಯೋಗಿಸಲ್ಪಡುವವು. ಆದರೆ 'ಭೋಗ'ದಲ್ಲಿ, ಭೋಗಿಸುವವ, ಭೋಗ, ಹಾಗು ಭುಕ್ತವಸ್ತು (ಭೋಜನ) ಹೀಗೆ ವಿವರಗಳಿರುವವು. ಗೀತೆ ಮತ್ತೆ ಹೇಳುವು

ದೇನಂದರೆ, 'ಭರ್ತಾ ಭೋಕ್ತಾ ಮಹೇಶ್ವರಃ' ಪರಮಾತ್ಮೇತಿ ಚಾಪ್ಯುಕ್ತೋ ದೇಹೇsಸ್ಮಿನ್ ಪುರುಷಃ ಪರಃ' ದೇಹದಲ್ಲಿರುವ ಪರಮ ಪುರುಷ ನವನು. ಅವನು ಯಾವಾಗಲೂ ಅಲಿಪ್ತನು. ಆದರೆ ಅವನು ಪರಮಾತ್ಮನ ಅಂಶಮಾತ್ರನು. ಈ ದೇಹದಲ್ಲಿರುವ 'ಪುರುಷಃ ಪರಃ' ಮತ್ತು ಗೀತೆಯಲ್ಲಿ ಇನ್ನೊಂದೆಡೆ ಹೇಳಲಾದ 'ಉತ್ತಮಃ ಪುರುಷಃ ತು ಅನ್ಯಃ ಪರಮಾತ್ಮೇತ್ಯುದಾಹೃತಃ। ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ॥' ಇವರ ಅನ್ಯೋನ್ಯ ಸಂಬಂಧವು ಸಮುದ್ರ—ತರಂಗದಂತೆ. ಅದೊಂದು ಕೂಟ, ಮಹಾಕೂಟ. ಸಮರಸೈಕ್ಯದ ಪರಮಾನಂದವನ್ನು ದಯಪಾಲಿಸುವಂಥ ಕೂಟವದು. ಎರಡೂ ಕಡೆಗೆ 'ಪರಮಾತ್ಮ' ಎಂಬ ಅಭಿಧಾನವು ಉಪಯೋಗಿಸಲ್ಪಟ್ಟಿದ್ದರೂ ಒಂದೆಡೆ 'ದೇಹೇಸ್ಮಿನ್ ಪುರುಷಃ ಪರಃ' ಎಂದೂ ಇನ್ನೊಂದೆಡೆ 'ಯೋ ಲೋಕತ್ರಯಮಾವಿಶ್ಯ ಬಿಭರ್ತಿ' ಎಂದೂ ವರ್ಣಿಸಲಾಗಿದೆ. ಭಕ್ತಿ—ಜ್ಞಾನ—ವೈರಾಗ್ಯಾದಿ ಸಾಧನಗಳಿಂದ ದೇಹದಲ್ಲಿಯ ಪುರುಷ ಹಾಗೂ ಲೋಕತ್ರಯದಲ್ಲಿರುವ ಪುರುಷ ಇವರಿಬ್ಬರ ಒಕ್ಕೂಟದ ಸಮಾಧಿಯ ಅನುಭವವಾಗಬಲ್ಲದು. ಅದೇ ಜೀವನದ ರಹಸ್ಯ ಎಂದು ಅನುಭಾವವಾದಿಗಳು ಹೇಳುವುದುಂಟು.

ಅದೇ ಕೊನೆಯ ಅನುಭವವೇ? ಅಥವಾ ಸಮಾಧಿ ಇಳಿದರೂ ದೇಹ, ಜೀವ, ಜೀವನ ಇವು ಇದ್ದೇ ಇರುವುದರಿಂದ ಮತ್ತೇನಾದರೂ ಅನುಭವವಾಗುವುದುಂಟೊ ಎಂಬ ಪ್ರಶ್ನೆ ಉದ್ಭವಿಸುವುದು. ಕೂಟದಲ್ಲಿ, ಮಹಾಕೂಟದಲ್ಲಿ ತನ್ಮಯನಿದ್ದಾಗಲೆ ಜೀವನದ ಕೊನೆಯಾದರೆ ಮಾತು ಬೇರೆ. ಹಾಗೆ ಆಗದೆ ಇದ್ದ ಪಕ್ಷದಲ್ಲಿ ಈ ಜೀವನ ಒಂದು ಆಟವಾಗಿ, ಒಂದು ಕ್ರೀಡೆಯಾಗಿ (ಆತ್ಮಕ್ರೀಡಃ) ಪರಿಣಮಿಸಬಹುದಲ್ಲವೆ?

ಆಟದಲ್ಲಿ ಜಯ– ಅಪಜಯ ಆಗುವುದುಂಟು. ಆದರೆ ನುರಿತ ಹಾಗೂ ನಿಜವಾದ ಆಟಗಾರನು ಅವುಗಳಿಂದ ವಿಚಲಿತನಾಗುವುದಿಲ್ಲ, ಬದ್ಧನಾಗುವುದಿಲ್ಲ. ಅವನ ಸುಖದುಃಖಗಳು ಆ ಜಯಾಪಜಯಗಳ ಮೇಲೆ ಅವಲಂಬಿಸಿಯೂ ಇರುವುದಿಲ್ಲ. ಅವನು ಆಟದ ಭರದಲ್ಲಿಯೇ ಇರುವನು. ವಿವಿಧ ಶಕ್ತಿಗಳ ಚಲ್ಲಾಟವೆಂದೇ ಜಯಾಪಜಯಗಳತ್ತ ಅವನು ನೋಡುವನು. ಇದಕ್ಕೆ 'ಲೀಲಾಭಾವ' ಎನ್ನುವುದುಂಟು.

ಹೀಗೆ ಜೀವನದತ್ತ ನೋಡುವ ಹಲವಾರು ಭಾವಗಳು ಅಥವಾ ವೃತ್ತಿಗಳಿರುವವು. ಯಾವ ಭಾವಸಾಧನೆಯ ಮೂಲಕ ದ್ವಂದ್ವಗಳಾಚೆಗೆ ಹೋಗುವ ಶಕ್ತಿಯುಂಟಾಗಿ ಆ ದ್ವಂದ್ವಗಳನ್ನೇ ಚಂಡಾಟಿಕೆಯಂತೆ ಆಡಿಸುವ ಆಟಗಾರಿಕೆ ನೆಲೆಸುವುದೋ ಅದೇ ಜೀವನದ ರಹಸ್ಯ. ಮನುಷ್ಯ ಪ್ರಾಣಿ ಆ ಧ್ಯೇಯದತ್ತ ಸಾಗುತ್ತಿರುವನಷ್ಟೇ! *

ಜೀವನ

ಜೀವನವೆಂಬುದು ಆಟದ ಬಯಲೆ
ನೋವಿನ ಬಲೆಯುಲೆ ಜೀವದ ನೆಲೆಯೆ? —ಕಡೆಂಗೋಡ್ಲು ಶಂಕರ ಭಟ್ಟ

ನಿಜವ ಕಂಡವರಿಲ್ಲ
ನಿಜ ಕಾಣವಂತಿಲ್ಲ
ನಿಜವೇನು ಮಳಲ ಹುಡಿಗಿಂತ ಕೀಳೆ? —ಬೇಂದ್ರೆ

ಹಸುರು ನಡುಗಡ್ಡೆಗಳು ಎಷ್ಟೆಷ್ಟೊ ಇರಬೇಕು
ದುಗುಡದೀ ಆಳ-ಅಗಲದ ಕಡಲಲಿ,
ಇಲ್ಲದಿರೆ ಸೋತು ಸುಣ್ಣಾದ ನಾವಿಕ ಹೀಗೆ
ಸಾಗಲಾಪನೆ ಮುಂದೆ ತೊಳಲಿ ತೊಳಲಿ? —ಶೆಲ್ಲಿ



ನಾರಾ ದೇವಾಲಯದ ಸಹಸ್ರಬಾಹು

ಹಿಂದೂ ದೇವತೆಗಳನ್ನಲ್ಲದೆ ಸೂರ್ಯವಂಶದ ರಾಜರನ್ನೂ ಜಪಾನೀಯರು ಪಡೆದರೆ ?

ಜಪಾನಿನ ಹಿಂದು ದೇವತೆಗಳು

ಮೂಲ : ಚಮನಲಾಲ
ಅನುವಾದ: ಕೆ. ಎಲ್. ಎನ್.

ಹಿಂದೂ ಸಾಂಸ್ಕೃತಿಕ ಮತ್ತು ಧಾರ್ಮಿಕ ಪ್ರಭಾವಗಳ ಪುರಾತನ ಇತಿಹಾಸವನ್ನು ಶೋಧಿಸುವುದಕ್ಕೋಸ್ಕರ ನಾನು ಸಂದರ್ಶಿಸಿದ ದೇಶಗಳಲ್ಲೆಲ್ಲ, ಜಪಾನ್ ಭಾರತದ ಸಂಸ್ಕೃತಿಯ ಪ್ರತೀಕದ ಕುರುಹಾಗಿ ಕಂಡುಬಂದಿದೆ. ಜಪಾನಿನ ಪುರಾತನ ಧರ್ಮ 'ಶಿಂಟೋ'ದ ವಿದ್ವಾಂಸರಾದ ರಿಂಗ್ ತಾರೋ ನಾಗಸಾವರವರು ಬಹಳ ವರ್ಷಗಳ ಹಿಂದೆ ಜಪಾನಿನ ಪುರಾತನ ಧರ್ಮವು 'ಬ್ರಹ್ಮನೊಕ್ಯೊ' ಅಂದರೆ ಬ್ರಾಹ್ಮಣ ಧರ್ಮ ಆಗಿತ್ತೆಂದು ನನಗೆ ಹೇಳಿದರು. ಇಂದಿಗೂ ಕೂಡ ಜಪಾನಿನ ಪುರಾತನ ರಾಜಧಾನಿ 'ನಾರಾ' ಕಾಶಿಯಂತೆ ಕಂಗೊಳಿಸುತ್ತದೆ. 'ನಾರ'ದ ಪುರಾತನ ಬೌದ್ಧ ದೇವಾಲಯದ ದ್ವಾರದಲ್ಲಿ ಕೊಳಲನ್ನೂದುತ್ತಿರುವ ಶ್ರೀಕೃಷ್ಣನ ಪ್ರತಿಮೆಯನ್ನು ನೀವು ಇಂದಿಗೂ ಕೂಡ ಕಾಣುವಿರಿ. ಚೀನ, ಕೋರಿಯಾ ಮತ್ತು ಜಪಾನಿನ ಧರ್ಮ ಮತ್ತು ನಾಗರಿಕತೆಯ ಇತಿಹಾಸವನ್ನು ಕೆದರಿದಾಗ, ಹಿಂದೂಧರ್ಮ, ಸಂಸ್ಕೃತಿ, ಸಂಗೀತ, ನೃತ್ಯ ಮತ್ತು ಚಿತ್ರಕಲೆಗಳು, ಬುದ್ಧನ ಉಪದೇಶ ಅಲ್ಲಿಗೆ ಹರಡುವ ಮೊದಲೇ, ತಮ್ಮ ಪ್ರಭಾವವನ್ನು ಬೀರಿದ್ದವೆಂದು ತಿಳಿದುಬರುತ್ತದೆ. ನಾನು ಕೂಡ, 'ಭಾರತ, ನಾಗರಿಕತೆಯ ಮಾತೆ' ಎಂಬ ನನ್ನ ಪುಸ್ತಕದಲ್ಲಿ ಚೀನದ ಬಗ್ಗೆ ಇರುವ ಅಧ್ಯಾಯವಾದ 'ನಲವತ್ತು ದೇಶಗಳ ಸ್ನೇಹಿತ', ಎಂಬುದರಲ್ಲಿ ತಾರೀಖುಗಳೊಂದಿಗೆ ಈ ವಿಷಯವನ್ನು ಪ್ರತಿಪಾದಿಸಿದ್ದೇನೆ.

ಈ ಮಾತು ಜಪಾನಿಗೂ ನಮಗೂ ಇರುವ ಸಂಬಂಧದಲ್ಲಿ ಒಪ್ಪುತ್ತದೆ. ಪ್ರೊ. ನಾಗಸಾವ

ಅವರು, ಜಪಾನಿನ ರಾಜಮನೆತನದವರು ಮಂಗೋಲಿಯಾ ದೇಶದವರಲ್ಲವೆಂದೂ ಭಾರತದ ಸೂರ್ಯವಂಶದ ಸಂಬಂಧಿಗಳೆಂದು ವ್ಯಕ್ತಪಟ್ಟಿದೆಯೆಂದೂ ನನಗೆ ತಿಳಿಸಿದರು. ಹತ್ತು ವರ್ಷಗಳ ಹಿಂದೆ ಅಮೇರಿಕದ ವೃತ್ತಪತ್ರಿಕೆಗಳಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ ಈ ವಿಷಯವನ್ನು, ಅಮೇರಿಕಾದ ಸುದ್ದಿ ಸಂಸ್ಥೆಯು ಪ್ರಕಟಿಸಿದಾಗ ಈ ಸುದ್ದಿ ಜಪಾನಿಯರನ್ನು ಚಕಿತಗೊಳಿಸಿತು. ನೀವು ಜಪಾನಿನ ಮಹಾರಾಜ 'ಮೈಜಿ'ಯವರ ಭಾವಚಿತ್ರವನ್ನು ನೋಡಿದರೆ, ಉಬ್ಬಿದ ಕೆನ್ನೆ ಮತ್ತು ಅದರ ಮೂಳೆಗಳನ್ನು ಕಾಣದೆ, ಸುಪರಿಚಿತ ಆರ್ಯ ಕಣ್ಣು ಮೂಗು ಕಿವಿಗಳನ್ನು ನೋಡುವಿರಿ. ವಸ್ತುತಃ, ನಾಗಪುರದ ಭೋನ್ಸ್ಲೆ ಶಿಕ್ಷಣ ಸಂಸ್ಥೆಯ ಸ್ಥಾಪಕರಾದ ಗತಿಸಿದ ಡಾ|| ಬಿ. ಎಸ್. ಮುಂಜೆಯವರ ಶರೀರ ರಚನೆಯು ಮಹಾರಾಜ ಮೈಜಿಯವರ ಪ್ರತಿರೂಪದಂತಿತ್ತು. ಪ್ರೊ. ನಾಗಸಾವರವರ ಉಕ್ತಿಯಂತೆ ಮತ್ತು ಆರೂವರೆ ವರ್ಷಗಳತನಕ ಜಪಾನಿನಲ್ಲಿದ್ದುದರಿಂದ, ಕೆಲವು ವಿಚಾರಗಳಲ್ಲಿ ಹಿಂದೂಗಳಿಗಿಂತ ಜಪಾನೀಯರೇ 'ಗೀತೆ'ಯಲ್ಲಿ ಹೆಚ್ಚಿನ ಶ್ರದ್ಧಾಭಕ್ತಿಗಳನ್ನಿಟ್ಟಿದ್ದಾರೆಂದು ಅರಿತೆ.

ಜಪಾನಿನ 'ಸಮುರಾಯಿ ಸಂಹಿತೆ', ರಾಣಾ ಸಂಗ, ರಾಣಾ ಪ್ರತಾಪ ಮತ್ತು ಪದ್ಮಿನಿ ಮುಂತಾದ ರಾಜಪೂತರ ಇತಿಹಾಸವನ್ನು ನೆನಪಿಗೆ ತರುತ್ತದೆ.

ಪ್ರತಿ ಜಪಾನೀಯನೂ ಆತ್ಮ ಅಮರ ಮತ್ತು ಸಾವು–ಹೊಸ ಜೀವನದ ಆರಂಭದ ಬುನಾದಿಯೆಂದು ತಿಳಿದಿದ್ದಾನೆ. ಈ ನಂಬಿಕೆಯೇ ಜಪಾನನ್ನು, ಅಮೇರಿಕಾ ಇಂಗ್ಲೆಂಡ್‌ಗಳೊಂದಿಗೆ ಮಾಡಿಕೊಂಡಿದ್ದ ಜಲ ಸೈನ್ಯ ಒಪ್ಪಂದವನ್ನು ಮುರಿಯಲು ಕಾರಣವಾಗಿ, ಎರಡನೇ ಮಹಾಯುದ್ಧಕ್ಕೆ ತಳಹದಿ ಹಾಕಿತು. ವೈಯಕ್ತಿಕವಾಗಿ ನಾನು ಯುದ್ಧವು ಮಾನವತೆಯ ವಿರುದ್ಧ ಒಂದು ದೊಡ್ಡ ಅಪಚಾರ, ಅಪರಾಧವೆಂದು ಪರಿಗಣಿಸಿ, ಶ್ವೇತ, ಕಂದು ಅಥವಾ ಕಪ್ಪು ಜನಾಂಗಗಳ ಯುದ್ಧ ಪ್ರಮುಖರನ್ನು ದ್ವೇಷಿಸುತ್ತೇನೆ.



ಎಮ್ಮಸಾಮ

ಟೋಕಿಯೊದ ಮಧ್ಯಭಾಗದಿಂದ, ಸುಮಾರು ಹದಿನೈದು ಮೈಲಿಗಳ ದೂರದಲ್ಲಿದ್ದ ಸ್ವರ್ಗಾಧಿಪತಿ ಇಂದ್ರನ ದೇವಾಲಯವನ್ನು ನೋಡಿದೆನು. ಎರಡು ಆಂಜನೇಯ ಮೂರ್ತಿಗಳ ಮಧ್ಯೆ ಇದ್ದ ಇಂದ್ರನ ಪ್ರತಿಮೆಯನ್ನು ತೆರೆಯಿಂದ ಮುಚ್ಚಲಾಗಿತ್ತು. ಇಂದ್ರ, ಜಪಾನೀಯರ ಜನಪ್ರಿಯ ಆರಾಧ್ಯದೈವ. ಟೋಕಿಯೋದ ಸರಸ್ವತಿ (ಜಪಾನಿಯಲ್ಲಿ ಬೆಂಟೆನ್ ಸಾಮ) ದೇವಾಲಯದಲ್ಲಿ ಪ್ರತಿದಿನವೂ ತರುಣ ಪ್ರೇಮಿಗಳ ಸಮೂಹವೇ ನೆರೆದಿರುತ್ತದೆ. ಅಲ್ಲಿ ಪ್ರೇಮಿಗಳು, ತಮಗೆ ವರವೀಯುವಂತೆ ಸರಸ್ವತಿಯನ್ನು ಪ್ರಾರ್ಥಿಸುತ್ತಾರೆ. ಸರಸ್ವತಿಯು ಭಕ್ತನೊಬ್ಬನ ಮಗಳಾಗಿ ಹುಟ್ಟಿ ಅನುರೂಪನಾದ

ವರನೊಡನೆ ಮದುವೆಯಾಗಲಿಲ್ಲವೆಂಬ ಕೊರತೆಯಿಂದ ಆ ದೇವಾಲಯದ ಸರೋವರದಲ್ಲಿ ಸರ್ಪವಾಗಿ ಜನಿಸಿದಳೆಂಬ ಒಂದು ದಂತ ಕಥೆ ಅಲ್ಲಿ ಪ್ರಚಾರದಲ್ಲಿದೆ. ಈ ದಂತಕಥೆಯು ಹಿಂದೂ ಪುರಾಣಗಳ ಒಂದು ಹಳೆಯ ಕಥೆಯೆಂದು ಹಿಂದೂ ಧರ್ಮದ ಬಗ್ಗೆ ತಿಳಿದಿರುವವರೊಬ್ಬರು ನನಗೆ ತಿಳಿಸಿದರು. ಬ್ರಹ್ಮ, ಶಿವ, ವಿಷ್ಣು, ಲಕ್ಷ್ಮಿ, ದುರ್ಗೆ, ಗಣೇಶ, ವಿಷ್ಣುವಿನ ಅವತಾರಗಳಾದ ವರಾಹ ಮತ್ತು ಮತ್ಸ್ಯ ಮುಂತಾದ ಹಿಂದೂ ದೇವತೆಗಳು ಜಪಾನಿನ ಕ್ಯಾಟೋ, ನಾರಾ, ಮೌಂಟ್‌ಕೋಯಾ, ಟೋಕಿಯೋ, ಮಿಯಾಜಿ ಮತ್ತು ಇತರ ಊರುಗಳ ದೇವಾಲಯಗಳಲ್ಲಿ ಪೂಜಿಸಲ್ಪಡುತ್ತಾರೆ. ಕೋಯಾಸಾನ್ (ಸತ್ತವರ ಸ್ವರ್ಗ) ಎಂಬಲ್ಲಿ ಹಿಂದೂ ಮತ್ತು ಬೌದ್ಧ ವಿಗ್ರಹಗಳ ಸಂಗ್ರಹಾಲಯವಿದೆ.

ಭಾರತದಲ್ಲಿ, ನಾವು ಮೃತ್ಯುದೇವತೆಯ ಬಗ್ಗೆ ಅಸ್ಪಷ್ಟ ಭಾವನೆಗಳನ್ನು ಹೊಂದಿದ್ದರೂ ಯಮನನ್ನು (ಜಪಾನಿ: ಎಮ್ಮಸಾಮ) ದೇವರೆಂದೇ ಜಪಾನಿನಲ್ಲಿ ಪೂಜಿಸುತ್ತಾರೆ. ಆ ವಿಗ್ರಹ, ನಿಜವಾಗಿಯೂ ಭಯ ಹೆಚ್ಚಿಸುವ ರೀತಿಯಲ್ಲಿಯೇ ಇದೆ. ಯಮನ ವಿಗ್ರಹವು ತಲೆಯ ಮೇಲೆ ಚೀನೀ ಕಿರೀಟವನ್ನು ಧರಿಸಿದ್ದು, ಕೆಂಪು ಮುಖ ಹಾಗೂ ಕೋಪದಿಂದ ಕೆಂಪಾದ ಕಣ್ಣನ್ನು ಹೊಂದಿದೆ. ನೀನು ಸುಳ್ಳನ್ನು ನುಡಿದರೆ ಎಮ್ಮಸಾಮ (ಯಮರಾಜ) ನಿನ್ನ ನಾಲಿಗೆಯನ್ನು ಸೀಳುತ್ತಾನೆಂದು ಜಪಾನೀ ತಾಯಂದಿರು ತಮ್ಮ ಮಕ್ಕಳನ್ನು ಹೆದರಿಸುತ್ತಾರೆ. ಅಂಗಡಿಗಳಲ್ಲಿ ಕೆಲಸ ಮಾಡುವ ಹುಡುಗರು, ಪ್ರತಿ ವರ್ಷವೂ ಜನವರಿ ೧೬ ಮತ್ತು ಜುಲೈ ೧೬ ರಂದು ವಿಶೇಷ ರಜಾ ಪಡೆದು ಯಮರಾಜನಿಗೆ ಪೂಜೆಯನ್ನು ಸಲ್ಲಿಸುತ್ತಾರೆ.

ಬೌದ್ಧ ಧರ್ಮದ 'ಧ್ಯಾನ ಪಂಗಡ'ವನ್ನು ಸ್ಥಾಪಿಸಿದ ಬೌದ್ಧ ಧರ್ಮಗುರುವಾದ ಬೋಧಿಧರ್ಮನನ್ನು ಸೌಭಾಗ್ಯದ ಗೊಂಬೆಯೆಂದು ಜಪಾನಿನಲ್ಲೆಲ್ಲ ಪರಿಗಣಿಸಿದ್ದಾರೆ. ಈ ಗೊಂಬೆ, ಜಪಾನಿನ ಪ್ರತಿ ಗೊಂಬೆಯಂಗಡಿಯಲ್ಲಿಯೂ ಮಾರಾಟಕ್ಕೆ ಇರುತ್ತದೆ. ಈ ಗೊಂಬೆಗೆ ಕಾಲುಗಳಿಲ್ಲ. ಆದರೂ, ಕೆಳಕ್ಕೆ ಬೀಳಿಸಿದರೂ ಚಟಕ್ಕನೆ ಕೂತುಕೊಳ್ಳುವ ಹಾಗೆ, ಒಂದು ವಿಶೇಷ ರೀತಿಯಲ್ಲಿ, ಗೊಂಬೆಯ ಒಳಗಡೆಯಲ್ಲಿ ಭಾರವನ್ನು ಹೊಂದಿಸಿ, ಗೊಂಬೆಯನ್ನು ತಯಾರಿಸಿರುತ್ತಾರೆ. ಆದ್ದರಿಂದ, ಈ ಗೊಂಬೆಯನ್ನು, ಅದೃಷ್ಟವನ್ನು ಸಂಪಾದಿಸಿ ಕೊಡುವ ಹಾಗೂ ಸೋತರೂ ಎದೆಗುಂದದ ಧೈರ್ಯವನ್ನು ತೋರಿಸುವ ಒಂದು ಮಹತ್ವದ ಚಿಹ್ನೆಯೆಂದು ಜಪಾನೀಯರು ಭಾವಿಸಿದ್ದಾರೆ. ಬೋಧಿಧರ್ಮನು ಚೀನದಲ್ಲಿ ಒಂಬತ್ತು ವರ್ಷಗಳ ಕಾಲ ಸಮಾಧಿಯಲ್ಲಿದ್ದನೆಂದೂ, ಹಾಗೆ ಒಂಭತ್ತು ವರ್ಷಗಳ ಕಾಲ ಸ್ಥಿರವಾಗಿ ಸಮಾಧಿಯಲ್ಲಿದ್ದುದ್ದರಿಂದ ತನ್ನೆರಡು ಕಾಲುಗಳನ್ನೂ ಕಳೆದುಕೊಂಡನೆಂದೂ ಪ್ರತೀತಿ ಇದೆ. ಜಪಾನೀಯರು "ಧರ್ಮ"ವನ್ನು "ದುರುಮ" ಎಂದು ಉಚ್ಚರಿಸುತ್ತಾರೆ.

ನಂಬಿದರೆ ನಂಬಿ ಬಿಟ್ಟರೆ ಬಿಡಿ, ಧನಾಧಿಪತಿ ಕುಬೇರ, ಜಪಾನಿನ ಪುರಾತನ 'ಶಿಂಟೋ' ಧರ್ಮದ ಅತ್ಯಂತ ಜನಪ್ರಿಯ ದೇವತೆ.

ಕೊಂಪಿರಾ ದೇವಾಲಯವು ಜಪಾನಿನ ಎಲ್ಲ ಪಟ್ಟಣ ಮತ್ತು ಮೂಲೆಗಳಲ್ಲಿರುವ ಹಳ್ಳಿಯಲ್ಲೂ ಅಂದರೆ ಎಲ್ಲೆಲ್ಲೂ ಸರ್ವವ್ಯಾಪಿಯಾಗಿ ಕಂಡು ಬರುತ್ತದೆ. ಇದು ಬಹಳ ಹಿಂದಿನ ಕಾಲದ ರಾಜಕುಮಾರ ಓನಾಮುಚಿ ಎಂಬುವನ ಆರಾಧ್ಯ ದೇವತೆಯಾಗಿತ್ತೆಂದು ಈಗ ಹೇಳಲಾಗಿದ್ದರೂ ಹಿಂದೂ ಮತ್ತು ಬೌದ್ಧ ದೇವತೆಯಾದ ಕುಮ್ಹೋಹಿರ ಎಂಬ ದೇವರನ್ನು ಈ ದೇವಾಲಯದಲ್ಲಿ ಪೂಜಿಸುತ್ತಿದ್ದರೆಂದೂ ಕೊಂಪಿರಾವು ಕುಮ್ಹೋಹಿರದ ರೂಪಾಂತರವೆಂದೂ ನಂಬಲಾಗಿದೆ. ಭಾರತೀಯ ಪದ ಕೊಂಪಿರಾದ ಅರ್ಥ ಮೊಸಳೆ ಅಥವಾ ಮೀನು ಎಂಬುದಾಗಿದೆ. ಕೊಂಪಿರಾ ದೇವತೆಯು ನಾವಿಕರ ಮತ್ತು ಸಮುದ್ರ ಸಾಹ-

ಸಿಗಳ ರಕ್ಷಕನೆಂದು ಭಾವಿಸಲಾಗಿದೆ. ಈ ಕಾರಣದಿಂದ, ಸಾಮಾನ್ಯವಾಗಿ ಜಪಾನಿನ ಸಮುದ್ರ ತೀರದ ಬಳಿಯ ಹಳ್ಳಿ, ಅಥವಾ ನಾಲ್ಕು ಗುಡಿಸಲುಗಳಿರುವ ಕೊಪ್ಪಲಿನಲ್ಲಿಯೂ ಕೊಂಪಿರಾ ದೇವಾಲಯವನ್ನು ಕಾಣುತ್ತೇವೆ.

ಜಪಾನಿ ದೇವಾಲಯಗಳಲ್ಲಿರುವ ವೇದೋಕ್ತ ದೇವರುಗಳಾದ ಪೃಥ್ವಿ (ಭೂಮಿ), ಸೂರ್ಯ, ಸೋಮ (ಬುಧ), ವರುಣ, ವಾಯು ಮುಂತಾದ ಸಂಸ್ಕೃತದ ತಲೆ ಬರಹಗಳನ್ನು ಹೊಂದಿದ ಚಿತ್ರಗಳು ಮತ್ತು ಪ್ರತಿಮೆಗಳಿಂದ, ಅನೇಕ ಶತಮಾನಗಳಿಂದಲೂ ಭಾರತ ಮತ್ತು ಜಪಾನುಗಳ ನಡುವೆ ಸಾಂಸ್ಕೃತಿಕ ಸಂಬಂಧ ಇದ್ದಿತೆಂದು ಸ್ಪಷ್ಟವಾಗುತ್ತದೆ.

ಈ ಎಲ್ಲ ಪುರಾವೆಗಳಿದ್ದರೂ ಕೆಲವು ವಿದ್ವಾಂಸರು ಪ್ರಪಂಚದ ಎಲ್ಲ ಭಾಗಗಳಲ್ಲೂ ಒಂದೇ ವಿಧವಾದ ಭಾವನೆಗಳು ಒಟ್ಟಿಗೇ ಹುಟ್ಟಿ, ಪ್ರತಿಯೊಬ್ಬರ ಮಿದುಳೂ ಒಂದೇ ರೀತಿಯಲ್ಲಿ ವಿಚಾರಧಾರೆಯನ್ನು ಹರಿಸಿ, ಒಂದೇ ರೀತಿಯ ದೇವತೆಗಳ ಸೃಷ್ಟಿಯಾಗಿದೆಯೆಂಬ ವಾದವನ್ನು ಮುಂದಿಟ್ಟಿದ್ದಾರೆ. ಆದರೆ, ಪ್ರತಿಮೆಗಳು, ಹೀಬ್ರೂ ಭಾಷೆಯಲ್ಲದೆ ಸಂಸ್ಕೃತದ ತಲೆಬರಹಗಳನ್ನು ಏಕೆ ಹೊಂದಿವೆಯೆಂದೂ ಒಂದೇ ಸಂಖ್ಯೆ ಹಾಗು ರೀತಿಯ ಮುಖ ಮತ್ತು ಕರಗಳನ್ನು ಏಕೆ ಹೊಂದಿವೆ ಎಂದೂ (ಉದಾಹರಣೆಗಾಗಿ ಜಪಾನಿನ ಗಣೇಶನೂ ಭಾರತೀಯ ಗಣೇಶನಂತೆ ಆನೆಯ ಸೊಂಡಿಯನ್ನೇ ಹೊಂದಿದ್ದಾನೆ) ಮತ್ತು ಸಹಸ್ರಬಾಹು ಮತ್ತು ಸಹಸ್ರ ನೇತ್ರಗಳ ದೇವರು (ಸಾವಿರ ಕರ ಹಾಗೂ ಕಣ್ಣುಗಳನ್ನು ಹೊಂದಿರುವ ದೇವರು - ವಿಷ್ಣು) ಜಪಾನಿನ ಇತರ ಎಲ್ಲ ದೇವತೆಗಳ ಮೇಲೂ ಅಧಿಕಾರವನ್ನು ಏಕೆ ಹೊಂದಿದ್ದಾನೆಂದೂ ಸ್ಪಷ್ಟಪಡಿಸಲು ಈ ವಿದ್ವಾಂಸರು ಅಸಮರ್ಥರಾಗಿದ್ದಾರೆ!

ಫ್ಯೂಡೋ (ಸ್ಥಿರ ದೇವತೆ) ಸಮಾಧಿಗಳ ದೇವತೆಯು ಶಿವನ ಆಕಾರವನ್ನೂ ಬೆಂಕಿಯಿಂದ ಏಳುತ್ತಿರುವ ಜ್ವಾಲೆಗಳ ಕಡು ನೀಲಿಯ ಬಣ್ಣದ ಭಯಂಕರ ಕಣ್ಣುಗಳನ್ನೂ ಹೊಂದಿದ್ದಾನೆ. ಭಾರತೀಯ ಶಿವನ ರೂಪಕ್ಕೆ ಅನುಗುಣವಾಗಿ ಹೊಳೆಯುವ ಮೂರನೇ ನೇತ್ರವನ್ನೂ ತ್ರಿಶೂಲವನ್ನೂ ಸರ್ಪಗಳ ಸರವನ್ನೂ ಹೊಂದಿದ್ದಾನೆ ಮತ್ತೊಂದು ರೂಪದಲ್ಲಿ, ಕೋಜಿನ್ (ಭಯಂಕರ ದೇವತೆ–ರುದ್ರ) ಅಥವಾ ಮಹೀಸೂರ (ಮಹೇಶ್ವರ), ಕಪಾಲಗಳ ಹಾರ, ಹಾವುಗಳು ಸುತ್ತಿಕೊಂಡಿರುವ ಕಂಕಣಗಳು ಮತ್ತು ಧ್ಯಾನಯೋಗ್ಯವಾದ ವ್ಯಾಘ್ರಚರ್ಮವನ್ನು ಧರಿಸಿದ್ದಾನೆ.

ಈತನ ಪತ್ನಿ 'ಐಜೆನ್' ಎಂಬ ಹೆಸರಿನಲ್ಲಿ, ದೊಡ್ಡ ಬಿಲ್ಲನ್ನು ಮತ್ತು ಸಿಂಹ ಕಿರೀಟವನ್ನು ಧರಿಸಿ, ಭಯಾನಕ ಸ್ವರೂಪವನ್ನು ಹೊಂದಿ 'ಪ್ರೇಮದೇವತೆ' ಎಂದು ಹೆಸರುವಾಸಿಯಾಗಿದ್ದಾಳೆ. ಇಲ್ಲಿ ಪ್ರೇಮವು ಉಚ್ಚ ರೀತಿಯದಾಗಿದ್ದು ಹೆಚ್ಚು ಪ್ರೀತಿಪಾತ್ರರಾಗಿರುವವರನ್ನು ಬಲಿ ಕೊಟ್ಟಲ್ಲಿ ಸ್ವರ್ಗಪ್ರಾಪ್ತಿ ಆಗುವುದೆಂಬ ನಂಬಿಕೆ ಇದೆ. ಜೀವವು ಎಂದೂ ಅಂತ್ಯವನ್ನು ಹೊಂದುವುದಿಲ್ಲ ಮತ್ತು ಹೆಚ್ಚು ಹೆಚ್ಚು ಸಂಸ್ಕಾರ ಪಡೆದು ಮೋಕ್ಷ ಪಡೆಯಬೇಕೆಂಬಿಚ್ಛೆಯಿಂದ ಪ್ರತಿ ಹುಟ್ಟಿನ ಬಾಳಿನ ಮೂಸೆಯಲ್ಲಿ ಕರಗಿ ಪಕ್ವವಾಗುತ್ತದೆ ಎಂದೂ ಇವರ ವಿಶ್ವಾಸವಿದೆ.

ಭಾರತೀಯರು ಪೂಜಿಸುವ ದೇವತೆ 'ಕಾಳಿ' ಜಪಾನಿನಲ್ಲಿ 'ಕಾರಿಟೈಮೋ'— ಸ್ವರ್ಗದ ರಾಣಿಯ ಮಾತೆ ಎಂಬುದಾಗಿ ರಾರಾಜಿಸುತ್ತದೆ. ಈ ದೇವತೆಗೆ ಪ್ರತಿದಿನವೂ ದಾಳಿಂಬೆ ಹಣ್ಣಿನ ನೈವೇದ್ಯವಾಗುತ್ತದೆ. ಬೌದ್ಧ ಧರ್ಮದ ಪ್ರಕಾರ ಹಿಂದಿನ ಕಾಲದ ನರಹತ್ಯೆಯಿಂದ ತೊಟ್ಟಿಕ್ಕಿದ ರಕ್ತದ ಹನಿಗಳೇ ದಾಳಿಂಬೆ ಹಣ್ಣಿನ ರಕ್ತ ವರ್ಣದ ಬೀಜಗಳೆಂಬ ಪ್ರತೀತಿಯಿದೆ. ವೀಣಾ ಪಾಣಿ ಶಾರದೆಯೇ ಬೆಂಟೆನ್, ಸಮುದ್ರದ ತರಂಗಗಳನ್ನು ತಗ್ಗಿಸುವವಳು; ಕೊಂಪಿರಾ ಅಥವಾ ಗಾಂಧರ್ವ— ಹದ್ದಿನ ತಲೆಯುಳ್ಳ ಈ ದೇವತೆ ನಾವಿಕರ ಪ್ರಿಯ ದೇವತೆ; ಲಕ್ಷ್ಮಿ ಅಥವಾ ಕಿಚಿ

ಜೊಟೆನ್, ಭಾಗ್ಯ ಹಾಗೂ ಪ್ರೇಮವನ್ನು ದಯಪಾಲಿಸುವಳು; ಟೈಗೆನ್ ಸೂ–ಸೈನ್ಯದ ಮುಖ್ಯಾಧಿಕಾರಿ (ಕಾರ್ತಿಕೇಯ), ಯುದ್ಧದಲ್ಲಿ ಜಯಮಾಲೆ ದೊರಕಿಸುವವ. ಪ್ರತಿ ಹಳ್ಳಿಯ ಸಮಾರಂಭದಲ್ಲಿ ಮೊದಲು ಅಗ್ರಪೂಜೆಯನ್ನು ಮಾಡಿಸಿಕೊಳ್ಳುವ ಶೋಡೆನ್ ಅಥವಾ ಗಣೇಶ (ವಿಘ್ನನಾಶಕ); ಈತನ ದುಷ್ಟ ಕಾರ್ಯಗಳನ್ನು ತಡೆಗಟ್ಟುವ, ಹನ್ನೊಂದು ತಲೆಯುಳ್ಳ ಹೆಣ್ಣು ರೂಪದ ಕ್ವಾನನ್ (ಭಾರತೀಯ ಪದ್ಧತಿಯಂತೆ ಗೌರಿ, ಗಣೇಶನ ತಾಯಿ)— ಇವೆಲ್ಲವೂ ಭಾರತೀಯ ದೇವತೆಗಳನ್ನು ಜಪಾನಿನಲ್ಲಿ ಪೂಜಿಸಲಾಗುತ್ತದೆಂದು ನಿದರ್ಶಿಸುತ್ತವೆ ಎಂಬುದಾಗಿ ಡಾ. ಓಂಕುರಾ ಹೇಳಿದ್ದಾರೆ.

ದಂತಕಥೆಯಿಂದ, ಸೌಭಾಗ್ಯದ ದೇವತೆಯಾಗಿ ಶೋಡೆನ್‌ನನ್ನು ಪೂಜಿಸುವುದರಿಂದ, ಜಪಾನಿನ ಗಣೇಶನು, ಭಾರತೀಯ ಗಣೇಶನ ಹಾಗೆ ಬ್ರಹ್ಮಚಾರಿಯಾಗಿರದೆ ಸಂಸಾರಿಯಾಗಿ, ಪತ್ನೀ ಸಮೇತ ಪೂಜಿಸಲ್ಪಡುತ್ತಾನೆ. ★

ಚಪ್ಪಲಿ ದಾನ

ಪಂಡಿತ ಮದನ ಮೋಹನ ಮಾಲವೀಯರು, ಪತ್ರಿಕಾ ವ್ಯವಸಾಯವನ್ನೂ ವಕಾಲತ್ತನ್ನೂ ಬಿಟ್ಟು ಬನಾರಸ ಹಿಂದೂ ವಿಶ್ವವಿದ್ಯಾಲಯಕ್ಕಾಗಿ ಧನಸಂಗ್ರಹ ಮಾಡಲು ಜೋಳಿಗೆಯನ್ನೆತ್ತಿದರು. ಬಡವ-ಬಲ್ಲಿದರೆಂಬ ಭೇದವಿಲ್ಲದೆ ಎಲ್ಲರ ಮುಂದೆ ತಮ್ಮ ಜೋಳಿಗೆಯನ್ನು ಹಾಸುತ್ತಿದ್ದರು.

ಒಂದು ಸಲ ಅವರು ಸಂಯುಕ್ತ ಪ್ರಾಂತದ ಒಬ್ಬ ದೊಡ್ಡ ನವಾಬನ ಹತ್ತಿರ ದಾನ ಬೇಡಲು ಹೋದರು. ಆ ನವಾಬನು ಧಾರ್ಮಿಕ ದುರಭಿಮಾನಕ್ಕೆ ಒಳಗಾಗಿ, ಅಲೀಗಡ ವಿಶ್ವವಿದ್ಯಾಲಯದ ಹೊರತು ಹಿಂದೂ ವಿಶ್ವವಿದ್ಯಾಲಯಕ್ಕೆ ಕಿಂಚಿತ್ತಾದರೂ ದಾನಕೊಡಲು ಸಿದ್ಧನಾಗಲಿಲ್ಲ. ಮಾಲವೀಯರು "ನಾನು ಇಲ್ಲಿಂದ ಖಾಲಿ ಜೋಳಿಗೆ ತೆಗೆದುಕೊಂಡು ಹೋಗುವುದಿಲ್ಲ" ಎಂದು ತಮ್ಮ ಜೋಳಿಗೆಯನ್ನು ಹಾಸಿ ಕುಳಿತುಬಿಟ್ಟರು. ನವಾಬನು ಮಾಲವೀಯರ ಈ ಹಟಮಾರಿತನಕ್ಕೆ ಸಿಟ್ಟಿಗೆದ್ದು ತನ್ನ ಕಾಲಿನ ಒಂದು ಚಪ್ಪಲಿಯನ್ನು ಮಾಲವೀಯರ ಜೋಳಿಗೆಯಲ್ಲಿ ಹಾಕಿ "ಇದನ್ನು ತೆಗೆದುಕೊಂಡು ಸಂತೋಷದಿಂದ ನಿಮ್ಮ ಹಾದಿ ಹಿಡಿಯಿರಿ" ಎಂದು ಹೇಳಿದನು.

ಮಾಲವೀಯರು ಮರುಮಾತಾಡದೆ ಅಲ್ಲಿಂದ ಎದ್ದು ಬಂದರು. ಕಾಶಿಗೆ ಬಂದ ಕೂಡಲೇ ಪತ್ರಿಕೆಯಲ್ಲಿ ದಪ್ಪಕ್ಷರಗಳಲ್ಲಿ "ನವಾಬ ಸಾಹೇಬರ ಚಪ್ಪಲಿ ಲಿಲಾವು ಆಗಲಿದೆ. ಅವರು ಈ ಚಪ್ಪಲಿಯನ್ನು ಕಾಶೀ ವಿಶ್ವವಿದ್ಯಾಲಯಕ್ಕೆ ದಾನವಾಗಿ ಕೊಟ್ಟಿದ್ದಾರೆ. ಲೀಲಾವಿನ....ತಾರೀಖು ನಿರ್ಧಾರವಾಗಿದೆ" ಎಂದು ಜಾಹೀರಾತು ಕೊಟ್ಟರು.

ನವಾಬಸಾಹೇಬರು ಅದನ್ನು ಓದಿದ್ದೇ ತಡ, ಸಾವಿರಾರು ರೂಪಾಯಿಗಳ ಚಕ್ಕನ್ನು ಕೊಟ್ಟು ಕಳಿಸಿ ಕ್ಷಮೆಕೋರಿ, ಚಪ್ಪಲಿಯನ್ನು ವಾಪಸ್ಸು ತರಿಸಿಕೊಂಡರು.

—ಸಂಗ್ರಾಹಕ : ಪಿ. ಎಸ್. ಗಲಗಲಿ

ಇದುವೆ ಜೀವ, ಇದು ಜೀವನ

ಮೈಸೂರಿನಿಂದ ನಗರಕ್ಕೆ ಪ್ರೈವೇಟ್ ಬಸ್ಸಿನಲ್ಲಿ ಹೊರಟಿದ್ದೆ. ಗಡಿಬಿಡಿಯಲ್ಲಿ ಊಟ ಉಪಾಹಾರ ತೆಗೆದುಕೊಳ್ಳುವುದಾಗದೆ ಬರಿ ಕಾಫಿ ಮಾತ್ರ ಹಾಕಿದ್ದೆ. ಬಸ್ಸು 'ನಡೆದುಕೊಂಡೇ' ಹೋಗುತ್ತಿತ್ತು. ಒಂಭತ್ತೂವರೆ ಗಂಟೆಗೆ ತಿರುಮಕೂಡಲು ನರಸೀಪುರಕ್ಕೆ ಬಂದಾಗಲೂ ಪುರಸೊತ್ತಿಲ್ಲವೆಂದು ಡ್ರೈವರ್ ಟಿಫಿನ್‌ಗೆ ಅವಕಾಶ ಕೊಡಲಿಲ್ಲ. ನನ್ನ ಹೊಟ್ಟೆ ಉದ್ದಕ್ಕೂ ಚುರ್ ಗುಟ್ಟುತ್ತಿತ್ತು.

ಅಂತೂ ಯಳಂದೂರಿನಲ್ಲಿ ಡ್ರೈವರ್ ಟಿಫಿನ್‌ಗೆ ಅವಕಾಶ ಕೊಟ್ಟು ಬಸ್‌ಸ್ಟ್ಯಾಂಡ್ ಬಳಿ ಒಂದು ಹೋಟೆಲ್ ತೋರಿಸಿದ. ಅದನ್ನು ನೋಡಿಯೆ ನನಗೆ ಓಕರಿಕೆ ಬಂತು. ಹತ್ತಿರ ಬೇರೆಯೆಲ್ಲಾದರೂ ಹೋಟೆಲ್ ಇದೆಯೆ ಎಂದು ಹುಡುಕುತ್ತ ಮುಂದೆ ನಡೆದೆ. ಅಚ್ಚುಕಟ್ಟಾದ ಒಂದು ಮನೆಯ ಮುಂದೆ 'ಕಲ್ಯಾಣ ನಿವಾಸ', 'ಸು ಖಾ ಗ ಮ ನ' ಎಂದು ಬೋರ್ಡ್ ಹಾಕಿತ್ತು. ಮನೆ ಮುಂದಿದ್ದ ಎರಡು ಬೆಂಚುಗಳಲ್ಲಿ ಸಭ್ಯರಾದ ಕೆಲವರು ಕುಳಿತು ಉಪಾಹಾರ ತಿನ್ನುತ್ತಿದ್ದರು. ನೀರು ಕಂಡ ಎಮ್ಮೆಯಂತೆ ನಾನು ಒಳಗೋಡಿ ಖಾಲಿಯಿದ್ದ ಒಂದು ಕುರ್ಚಿಯ ಮೇಲೆ ಕುಳಿತೆ. ಹಲವು ನಿಮಿಷಗಳು ಕಳೆದರೂ ಸಪ್ಲೈ ಮಾಣಿ ಬಾರದ್ದು ನೋಡಿ ಜೋರಾಗಿ 'ಯಾರಪ್ಪಾ ಒಳಗೆ? ಅರ್ಜಂಟ ಎರಡು ಇಡ್ಲಿ ಕಾಫಿ ಕೊಡ್ರಪ್ಪ' ಎಂದು ಅರಚಿದೆ.

ಕೂತಿದ್ದವರೆಲ್ಲ ಗಟ್ಟಿಯಾಗಿ ನಕ್ಕರು. ನಾನು ಕಕ್ಕಾವಿಕ್ಕಿಯಾದೆ. ಆದರೆ ಅವರಲ್ಲೊಬ್ಬರು ಉಳಿದವರನ್ನು ಸುಮ್ಮನಿರಿಸಿ, ಯಾರನ್ನೋ ಹೆಸರು ಹಿಡಿದು ಕೂಗಿ, 'ಲೋ- ಇವರಿಗೆ ಟಿಫಿನ್ ತಂದುಕೊಡು' ಎಂದರು.

ಬಂದದ್ದು ಇಡ್ಲಿಯಲ್ಲ. ಸಿಹಿ ತಿಂಡಿ, ಉಪ್ಪಿಟ್ಟು, ಬಾಳೆ ಹಣ್ಣು. 'ನಾನು ಇಡ್ಲಿ ಹೇಳಿದೆನಲ್ಲಾ' ಎಂದಾಗ ಆ ಮಹನೀಯರು, 'ಪರವಾಯಿಲ್ಲ ತೆಗೆದುಕೊಳ್ಳಿ. ಇದು ಹೋಟೆಲಲ್ಲ, ಅಮಲ್ದಾರ್ರ ಮನೆ- ಅಂದರೆ ನನ್ನ ಮನೆ. ನನಗೆ ವರ್ಗವಾಗಿದೆ ಅಂತ ಟೀಪಾರ್ಟಿ ನಡೆಯುತ್ತಿದೆ. ನೀವು ಹೇಗಾದರೂ ಬಂದಿದ್ದೀರಾ. ತೆಗೆದುಕೊಂಡು ಬಿಡಿ—ದಯವಿಟ್ಟು' ಎಂದರು.

ನಾನು ನಾಚಿದರೂ ಅವರ ದಾಕ್ಷಿಣ್ಯಕ್ಕೆ ಕಟ್ಟು ಬಿದ್ದು ಅದನ್ನು ಮುಗಿಸಿದೆ. ಮತ್ತೇನು ಮಾಡಲಿಕ್ಕಾಗುತ್ತಿತ್ತು?

—ಎನ್. ಎಸ್. ವರದರಾಜನ್

ಅಂದು ರಾತ್ರಿ ನಾವು ಮೂವರೂ ಮನೆಯೆದುರಿನ ಪಡಸಾಲೆಯಲ್ಲೇ ಮಲಗಿ ಹರಟೆ ಹೊಡೆಯುತ್ತಿದ್ದೆವು. ತಾತ ಒಳಗೇ ಮಲಗಿದ್ದರು. ಗಂಟೆ ಹನ್ನೊಂದಾಯಿತು. ತಾತ ಒಳಗಿಂದಲೇ ಬಡಬಡಿಸುತ್ತ ಕೂಗಿದರು—"ಶಂಕರ್ರೋs" ನಾವು ಮೂವರೂ ದಿಗಿಲುಪಟ್ಟು ಎದ್ದು ಒಳಗೋಡಿದೆವು. ತಾತ ಎಚ್ಚತ್ತು ಕುಳಿತಿದ್ದರು. ನಾವು ಕೇಳಿದೆವು—"ಏನಾಯಿತು?" "ಏನಿಲ್ಲ, ಹಿತ್ತಲಲ್ಲಿ ತೆಂಗಿನಕಾಯಿ ಬಿದ್ದ ಸದ್ದು ಕೇಳಿಸಿತು. ಹೋಗಿ ತೆಗೆದುಕೊಂಡು ಬನ್ನಿ" ಎಂದರು.

"ತಾತ, ಇಲ್ಲ. ನಾವು ಎಚ್ಚತ್ತೇ ಇದ್ದೆವು. ಕಾಯಿ ಬೀಳಲಿಲ್ಲ" ಎಂದಾಗ ಅವರು ಗಟ್ಟಯಾಗಿಯೇ ಹೇಳಿದರು- "ಏನು ನನ್ನ ಕಿವಿ ಹೊಟ್ಟ ಹೋಗಿದೆಯೇನು? ಹೋಗಿ ತನ್ನಿರಂತೆ." ನಾವು ವಿಧಿಯಿಲ್ಲದೆ ಹಿತ್ತಿಲಿಗೆ ಹೋಗಿ ಹುಡುಕಿದಾಗ ಬೀಳದ ತೆಂಗಿನ ಕಾಯಾದರೂ ಹೇಗೆ ಸಿಗಬೇಕು?

ನಾವು ಮತ್ತೆ ಮನೆಗೆ ಬಂದು- "ಕಾಯಿ ಬಿದ್ದದ್ದು ಸುಳ್ಳು. ನಾವು ಎಷ್ಟು ಹುಡುಕಿದರೂ ಸಿಗಲಿಲ್ಲ. ಕನಸಿನಲ್ಲಿ ನಿಮಗೆ ತೆಂಗಿನಕಾಯಿ ಬಿದ್ದಂತೆ ಕೇಳಿಸಿರಬೇಕು" ಎಂದೆವು. ತಾತ ತುಸು ಸಿಡುಕಿನಿಂದಲೇ "ನಿಮಗೆ ಬೇಡದಿದ್ದರೆ ನನಗಾದರೂ ಬೇಕು." ಎಂದು ಹೇಳಿದವರೆ ಎದ್ದು ಹುಡುಕಲು ಹೊರಟರು. ನನಗೆ ಅವರ ನೊಂದ ಮುಖವನ್ನು ನೋಡಿ ನಗುವೂ ಕರುಣೆಯೂ ಒಮ್ಮೆಲೇ ಉಂಟಾಯಿತು. ನಾನು ತತ್ಕ್ಷಣ ಮನೆಯೊಳಗೋಡಿ, ಒಳಗಿನಿಂದ ಹೊರಗೋಡಿ, ಒಳಗಿದ್ದ ತೆಂಗಿನ ಕಾಯೊಂದನ್ನು ಹಿಡಿದು ಹಿತ್ತಿಲ ಕಡೆಯಿಂದ ಮನೆಗೆ ಬಂದು —"ನೋಡಿ ತಾತ, ತೆಂಗಿನಕಾಯಿ ಸಿಕ್ಕಿತು!" ಎಂದಾಗ ತಾತನಿಗಾದ ಹೆಮ್ಮೆ ಅಷ್ಟಿಷ್ಟಲ್ಲ.

— ಗ. ಸು. ಉಬರಡ್ಕ

ನಮ್ಮ ಹಳ್ಳಿಗೆ ಬರುವ ಪೋಸ್ಟಮನ್ನನಿಗೆ ಹಾಡುವ ಹುಚ್ಚು ಬಹಳ. ಅದನ್ನು ಯಾರಾದರೂ ಸ್ವಲ್ಪ ಕಿವಿಗೊಟ್ಟು ಕೇಳುತ್ತಿರುವರೆಂದು ಆತನಿಗೆ ಅನಿಸಿದೊಡನೆಯಂತೂ ಆತ ತನ್ನ ಎಲ್ಲ ಕೆಲಸವನ್ನು ಮರೆತು ಹಾಡತೊಡಗುತ್ತಾನೆ. ಆದರೆ ಅವನ ಕಂಠ ಮಾಧುರ್ಯಕ್ಕೆ ಕಿವಿಗೊಡುವವರು ಮಾತ್ರ ಯಾರೂ ಇರಲಿಲ್ಲವೆಂಬುದು ಅವನಿಗೆ ನಿರಾಶೆಯುಂಟುಮಾಡಿತ್ತು.

ಒಂದು ದಿನ ನಮ್ಮ ಮನೆಗೆ ಅವನು ಮನಿಯಾರ್ಡರ್ ತಂದ. ನಾವೆಲ್ಲಾ ಒಳಗೆ ಇದ್ದೆವು. ಸ್ವಲ್ಪ ಬರಲಿಕ್ಕೆ ತಡವಾದದ್ದರಿಂದ ತನ್ನಷ್ಟಕ್ಕೆ ಕಿರುದ್ವನಿಯಲ್ಲಿ ಹಾಡುತ್ತಿದ್ದ. 'ಆತನು ಹಾಡುವುದನ್ನು ನೋಡುತ್ತಿದ್ದ ನನ್ನ ಪುಟ್ಟ ತಂಗಿ ಆತನು ಹಣ ಕೊಟ್ಟು ಹೊರಡುವಾಗ "ಇನ್ನೊಮ್ಮೆ ಸ್ವಲ್ಪ ಜೋರಾಗಿ ಹಾಡು ಪೇದೆ ಕಾಕಾ" ಎಂದಳು. ತನ್ನ ಹಾಡನ್ನು ಕೇಳಿ ಸಂತೋಷಪಡುವ ನನ್ನ ತಂಗಿಯನ್ನು ನೋಡಿ ಆತ ಉಬ್ಬಿ ಒಂದು ಸಣ್ಣ ಹಾಡನ್ನು ಮತ್ತೆ ಹಾಡಿ ಮುಗಿಸಿ, ಹೋಗುತ್ತೇನೆ ಎನ್ನಲು "ಇನ್ನೊಮ್ಮೆ ಹಾಡು ಪೇದೆ ಕಾಕಾ" ಎಂದು ಸಲಿಗೆಯಿಂದ ಅವನ ಹತ್ತರ ಬಂದು ಗಂಟುಬಿದ್ದಳು. ಆತನ ಆನಂದಕ್ಕೆ ಮೇರೆಯೇ ಉಳಿಯಲಿಲ್ಲ. ಮತ್ತೊಮ್ಮೆ ಹಾಡು ಮುಗಿಸಿ ನನ್ನ ತಂಗಿಯನ್ನು ಪ್ರೀತಿಯಿಂದ ತನ್ನೆಡೆಗೆ ಎಳೆದು ಎತ್ತಿ ಮುದ್ದಿಸಿ "ಮಗೂ ನನ್ನ ಹಾಡು ನಿನಗೆ ಸೇರಿಕೆಯಾಯಿತೇ?" ಎಂದು ಕೇಳಿದ.

ಅವಳು ಹೇಳಿದಳು: "ಕಾಕಾ- ನಿನ್ನ ಗೊಗ್ಗರ ಧ್ವನಿ ಕೇಳಲಿಕ್ಕೆ ಬೇಸರವಾದರೂ ನೀನು ಹಾಡುವಾಗ ನಿನ್ನ ತುಟಿಯ ಮೇಲಿನ ಮೀಸೆ ಚೆನ್ನಾಗಿ ಕುಣಿಯುತ್ತದೆ. ಅದನ್ನು ಮತ್ತೆ ಮತ್ತೆ ನೋಡುವಾ ಎನಿಸುತ್ತದೆ. ಅದಕ್ಕೇ ನಿನಗೆ ಎರಡು ಮೂರು ಸಲ ಹಾಡಲಿಕ್ಕೆ ಹೇಳಿದ್ದು."

ಯು. ಎಸ್. ಶ್ರೀನಿವಾಸರಾವ್, ಬೆಳಗಾಂವ

ಕಾಶ್ಮೀರದ ಕೆಲ ಪ್ರದೇಶಗಳನ್ನು ಸಾಬೂನು ಹಾಕಿ ಚೆನ್ನಾಗಿ ತೊಳೆದರೆ ಅವು ಸಿತ್ಸರ್ಲಂಡಿನ ಹಾಗೆ ತೋರಬಹುದು.

—ಜ್ಞಾನೋದಯ

ನಮ್ಮ ವ್ಯಕ್ತಿತ್ವದಲ್ಲಿ ಕೋಟ್ಯಂತರ ವರ್ಷಗಳ ಇತಿಹಾಸವಿದೆ



ಮತ್ಸ್ಯದಿಂದ ಮಾನವ— ಒಂದೇ ಗಂಟೆಯಲ್ಲಿ

ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಭಾರ್ಗವ, ರಾಮ....

ಪುರಾಣಗಳ ಪ್ರಕಾರ ಇದು ವಿಷ್ಣುವಿನ ಅವತಾರಗಳ ಕ್ರಮಾನುಗತ ಶ್ರೇಣಿ. ಆದರೆ ಕಾಕತಾಲೀಯವಾಗಿಯೋ ಅಥವಾ ಋಷಿಗಳ ಜ್ಞಾನ ದೃಷ್ಟಿಯಿಂದಲೋ ಈ ಶ್ರೇಣಿಯಲ್ಲಿ ಒಂದು ವೈಜ್ಞಾನಿಕ ಸತ್ಯ ಅಡಗಿದೆ. ಜೀವೋತ್ಪತ್ತಿ ಮೊದಲು ನೀರಲ್ಲಿ ಆಯಿತು—ಅದಕ್ಕೆ ಮೊದಲು ಪ್ರಪಂಚ ಜೀವಶೂನ್ಯವಾಗಿತ್ತು. ಈ ಜಲಚರ ಜೀವ ಬಗೆಬಗೆಯಾಗಿ ರೂಪುಗೊಂಡು ಅನಂತರ ಅವುಗಳಲ್ಲಿ ಕೆಲವು ಸಮುದ್ರದ ಕರಾವಳಿಯಲ್ಲಿ ನೀರು ಇಳಿದಾಗ ನೆಲದಲ್ಲಿ ಉಳಿದುಕೊಂಡು ಅಲ್ಲಿಯೂ ಬಾಳಲು ಕಲಿತವು. ಅದೇ ಕೂರ್ಮ ಅವತಾರ—ನೀರಲ್ಲೂ ನೆಲದಲ್ಲೂ ಬದುಕಬಲ್ಲ ಜೀವ. ಅನಂತರ ವರಾಹ—ನೀರಿನ ಆಶ್ರಯ ಬಿಟ್ಟು ಬರಿ ನೆಲದ ಮೇಲಷ್ಟೇ ಬದುಕಬಲ್ಲ ಜೀವಿ. ಬಳಿಕ ನರಸಿಂಹ—ಮಾನವನನ್ನು ಹೋಲುವ ಚತುಷ್ಪಾದ ಪ್ರಾಣಿ. ಬಳಿಕ ವಾಮನ—ಪೂರ್ಣ ಮಾನವನಾದರೂ ಇನ್ನೂ ಸಂಸ್ಕಾರವಿಲ್ಲದ "ಕುಳ್ಳ". ಆ ಮೇಲೆ ಭಾರ್ಗವ—ಕೊಡಲಿ ಹಿಡಿದು ಬೇಟೆಯಾಡುವಾತ. ಬಳಿಕ ಬಂದ ರಾಮ ಪೂರ್ಣ ಮಾನವ.

ಪ್ರಪಂಚದಲ್ಲಿರುವ ಜೀವಗಳೆಲ್ಲವೂ ಮೊದಲು ನೀರಲ್ಲಿ ಹುಟ್ಟಿದ ಏಕಾಣು ಜೀವದಿಂದ ಬೆಳವಣಿಗೆ ಹೊಂದಿದವು ಎಂಬುದನ್ನು ಒಂದು ಶತಮಾನ ಹಿಂದೆ ಡಾರ್ವಿನ್ನನು ಸಿದ್ಧಾಂತಪಡಿಸಿದನು. ನಮ್ಮೆಲ್ಲರ ಪ್ರಾಚೀನತಮ ಮೂಲ "ಪುರುಷ" ಮೀನು ಮತ್ತು ತೀರ ಈಚಿನ ಪೂರ್ವಜ ಕಪಿ—ಅಥವಾ ಅದನ್ನು ಹೋಲುವ ವೃಕ್ಷವಾಸಿ ಪ್ರಾಣಿ. ಮೀನಿನಿಂದ ಮಂಗ, ಮಂಗನಿಂದ ಮನುಷ್ಯ ರೂಪುಗೊಂಡು ಇಂದಿನ ಸ್ಥಿತಿಗೆ ಬರಲು ಕೋಟಿ ಕೋಟಿ ವರ್ಷಗಳು ಹಿಡಿದವು.

"ತ್ರಿಪಥಗಾ" ಆಧಾರದಿಂದ

ಇದೆಲ್ಲ ಶಾಲಾಬಾಲಕರಿಗೂ ತಿಳಿದಿರುವ ವಿಷಯ. ಆದರೆ ಅಷ್ಟು ಚೆನ್ನಾಗಿ ತಿಳಿಯದಿರುವ ಸಂಗತಿಯೆಂದರೆ, ಮನುಷ್ಯರಾದ ನಮ್ಮ ಜೀವನ ದಲ್ಲಿ ಈ ಕ್ರಮಾಗತ ವಿಕಾಸದ ಇತಿಹಾಸ ಪುನ ರಾವರ್ತನೆ ಹೊಂದುತ್ತದೆ. ಇಂದಿಗೂ ನಾವು ಜೀವನವನ್ನು ಮೀನಾಗಿಯೆ ಪ್ರಾರಂಭಿಸುತ್ತೇವೆ.

ತಾಯಿಯ ಗರ್ಭದಲ್ಲಿ ಬೆಳೆಯುತ್ತಿರುವ ಭ್ರೂಣದ ವಿಕಾಸವನ್ನು ಪರೀಕ್ಷಿಸಿದವರು ಈ ನಮ್ಮ "ಪ್ರಾಚೀನ ಕರ್ಮ"ದ ಪುನರಾವೃತ್ತಿ ಯನ್ನು ಕಂಡು ಆಶ್ಚರ್ಯ ಹೊಂದಿದ್ದಾರೆ. ಭ್ರೂ-ಣಾವಸ್ಥೆಯಲ್ಲಿರುವ ಶಿಶುವಿನ ಅವಯವಗಳಲ್ಲಿ "ಕಲ್ಲಿ"ಗಳೂ ಸೇರಿವೆ. ಕಲ್ಲಿಗಳೆಂದರೆ ಮೀನು ಗಳು ಉಸಿರಾಡಿಸಲು ಉಪಯೋಗಿಸುವ ಚೀಲ ಗಳು. ಮಾನವ ಭ್ರೂಣದಲ್ಲಿ ಪ್ರಾರಂಭದಲ್ಲಿ ಕಾಣಿಸಿಕೊಳ್ಳುವ ಕಲ್ಲಿಗೂ ಮೀನಿನ ಕಲ್ಲಿಗೂ ಏನೂ ಅಂತರವಿಲ್ಲ. ಈ ಕಲ್ಲಿ ಕಾಲಾಂತರದಲ್ಲಿ ಮಾಯವಾಗಿ ಸ್ಥಲಚರ ಪ್ರಾಣಿಗಳಿಗೆ ಸಹಜ ವಾದ ಶ್ವಾಸಕೋಶಗಳು ರೂಪುಗೊಳ್ಳುತ್ತವೆ.

ಮಾನವರಲ್ಲಿಲ್ಲದ ಇಂಥ ಹಲ ಕೆಲವು ಅವ ಯವಗಳು ಭ್ರೂಣಾವಸ್ಥೆಯಲ್ಲಿರುವ ಶಿಶುವಿನಲ್ಲಿ ಉತ್ಪತ್ತಿಯಾಗುತ್ತವೆ. ಅವುಗಳಲ್ಲಿ ಕೆಲವು ರೂಪಾಂತರ ಹೊಂದುತ್ತವೆ, ಕೆಲವುಗಳಲ್ಲಿ ತಿದ್ದುಪಡಿಗಳಾಗುತ್ತವೆ; ಕೆಲವು ಕಲ್ಲಿಯಂತೆ ಪೂರ್ತಿ ಮಾಯವಾಗುತ್ತವೆ.

ಬಾಲವು ಇಂಥ ಇನ್ನೊಂದು ಅವಯವ. ಭ್ರೂಣಾವಸ್ಥೆಯಲ್ಲಿ ಸಾಕಷ್ಟು ಮುಂದುವರಿದ ಮೇಲೆ ಶಿಶುವಿನಲ್ಲಿ ಬಾಲವೊಂದು ಕಾಣಿಸಿಕೊ ಳ್ಳುತ್ತದೆ. ಇದಕ್ಕೂ ಮಂಗನ ಬಾಲಕ್ಕೂ ಬಹಳ ಮಟ್ಟಿಗೆ ಹೋಲಿಕೆಯಿದೆ. ಬರಬರುತ್ತ ಇದು ಭ್ರೂಣದ ವಿಕಾಸ ಹೊಂದುತ್ತಿರುವ ಶರೀರದಲ್ಲಿ ಒಳಪಟ್ಟು ಅದರ ಹೊರ ತೋರಿಕೆ ಉಳಿಯ ದಂತಾಗುತ್ತದೆ. ಮಾನವನ ಬಹು ಪುರಾತನ ಪೂರ್ವಜರಲ್ಲಿ ಇದ್ದ ಇಂಥ ಅವಯವಗಳು ಗರ್ಭದಿಂದ ಮಗು ಹೊರಬೀಳುವ ಮೊದಲೇ ಕಣ್ಮರೆಯಾಗುತ್ತವಾದರೂ ಕೆಲವೊಂದು ಹುಟ್ಟಿದ ಮೇಲೂ ಉಳಿದುಕೊಳ್ಳುತ್ತವೆ. ಅವುಗಳಿಗೆ ಇಂದಿನ ಮಾನವ ಶರೀರದಲ್ಲಿ ಯಾವ ಉಪಯೋಗವೂ ಇದ್ದಂತಿಲ್ಲ. (ಉದಾ: ಕರು ಳಿನ ಕೊನೆಯಲ್ಲಿರುವ ಅಪೆಂಡಿಕ್ಸ್) ಆದರೆ ಬಹುಶಃ ಬಹು ಪುರಾತನದಲ್ಲಿ ಅದು ಶರೀರದ ಒಂದು ಅವಶ್ಯ ಅಂಶವಾಗಿರಬೇಕು; ಮತ್ತು ಲಕ್ಷಾಂತರ ವರ್ಷಗಳ ನಂತರ ಬರುವ ನಮ್ಮ ವಂಶಜರಲ್ಲಿ ಅವು ಸಂಪೂರ್ಣ ಲೋಪ ಹೊಂದಿ ಬಿಡಬಹುದು.

ಒಂದು ಮಾತಿನಲ್ಲಿ, ಮನುಷ್ಯ ಇಂದು ಜೀವ ವಿಕಾಸದ ಶ್ರೇಣಿಯಲ್ಲಿ ಎಲ್ಲರಿಗಿಂತಲೂ ಮೇಲಿನ ಸ್ತರದಲ್ಲಿರುವನಾದರೂ ಗರ್ಭವಾಸದ ಒಂಭತ್ತು ತಿಂಗಳ ಅವಧಿಯಲ್ಲಿ ಮೀನದಿಂದ ಮಾನವನ ವರೆಗೆ ಜೀವವು ಹೊಂದಿದ ಕೋಟ್ಯಂ ತರ ವರ್ಷಗಳ ವಿಕಾಸವೆಲ್ಲ ಸಂಕ್ಷೇಪವಾಗಿ ಪುನರಾವರ್ತಿಸಲ್ಪಡುತ್ತದೆ. ಹಲ ವರ್ಷಗಳ ಕಥೆ ನಾಟಕದಲ್ಲಿ ಕೆಲ ಗಳಿಗೆಗಳಲ್ಲಿ ತೋರಿಸ-ಲ್ಪಡುವ ಹಾಗೆ.

ಈ ಬೆಳವಣಿಗೆಯಲ್ಲಿ ನಾವು ದಾಟಿ ಬಂದಿ ರುವ ಮೀನ-ಪಶು-ಮಾನವ ಅವಸ್ಥೆಗಳು ಕೇವಲ ನಮ್ಮ ಗರ್ಭವಾಸದಲ್ಲಿ ಮುಗಿದು ಹೋಗುವ ಶಾರೀರಿಕ ಅಂತಸ್ತುಗಳು ಮಾತ್ರವೋ ಅಥವಾ ಅದಕ್ಕಿಂತ ಹೆಚ್ಚಿನ ಮುದ್ರೆಯನ್ನೇನಾದರೂ ಅವು ನಮ್ಮ ಮೇಲೆ ಒತ್ತಿವೆಯೋ? ಅರ್ಥಾತ್ ಡಾರ್ವಿನ್ ಹೇಳಿದ ವಿಕಾಸವು ನಮ್ಮ ಭೌತಿಕ ಶರೀರದ ಮೇಲಷ್ಟೇ ಅಚ್ಚೊತ್ತಿದೆಯೋ ಅಥವಾ ಅದು ನಮ್ಮ ಚೇತನೆಯಲ್ಲೂ ಕಾಣಸಿಗುತ್ತದೋ?

ಈ ಪ್ರಶ್ನೆಗೆ ಆಂಶಿಕ ಉತ್ತರ ವಿಜ್ಞಾನಿಗಳಿಗೆ ಒಂದು ಅನಿರೀಕ್ಷಿತ ಸ್ಥಾನದಲ್ಲಿ ದೊರಕಿತು. ನಮ್ಮ ವಿಕಾಸದ ಕಥೆ ನಮ್ಮ ಶರೀರದಲ್ಲಿ ಮಾತ್ರ ವಲ್ಲ, ನಮ್ಮ ಚೇತನೆಯಲ್ಲೂ ಅಚ್ಚೊತ್ತಿದೆ ಯೆಂದೇ ಊಹಿಸಲೆಡೆಯಿದೆ.

ತೀವ್ರವಾದ ವ್ಯಕ್ತಿತ್ವ ವಿಕಾರಗಳಿಂದ ಪೀಡಿತರಾದ ರೋಗಿಗಳಿಗೆ "ಶಾಕ್ ಟ್ರೀಟ್ ಮೆಂಟ್" ಕೊಡುವಾಗ ಮನೋವಿಜ್ಞಾನಿಗಳು

ಇದನ್ನು ಮೊದಲು ಗಮನಿಸಿದರು. ಈ ಚಿಕಿತ್ಸೆಯಲ್ಲಿ ಮನೋರೋಗಿಗಳಿಗೆ "ಇನ್‌ಸುಲಿನ್" ಇಂಜಕ್ಶನ್ ಕೊಟ್ಟು ಅಚೇತನಾವಸ್ಥೆಯ ತಳಕ್ಕೆ ಒಯ್ಯಲಾಗುತ್ತದೆ. ಈ ಸ್ಥಿತಿಯಲ್ಲಿ ಅವನನ್ನು ಕೆಲ ನಿಮಿಷಗಳವರೆಗಷ್ಟೇ ಇರಿಸಲಾಗುತ್ತದೆ. ಆಗ ರೋಗಿಯ ಅವಯವ ಕಾರ್ಯವೆಲ್ಲ ಹೆಚ್ಚು ಕಡಿಮೆ ನಿಂತುಹೋಗುತ್ತದೆ. ಅದು ಮರಣಕ್ಕೆ ಬಲು ಸಮೀಪವಾದ ಅವಸ್ಥೆ. ಹಾಗೇ ಬಹಳ ಹೊತ್ತು ಬಿಟ್ಟರೆ ಅವನು ಪೂರ್ತಿ ಮರಣಹೊಂದಿ ಬಿಡಬಹುದು.

ಆ ನಿಟ್ಟಿನಲ್ಲಿ ರೋಗಿಯ ಚೇತನೆ— ಪ್ರಜ್ಞೆಯನ್ನೆಲ್ಲ ಒಮ್ಮೆ ಪೂರ್ತಿ ಅಳಿಸಿಹಾಕಿರುತ್ತದೆ ಎನ್ನಬಹುದು. ಅನಂತರ ರೋಗಿಗೆ ಗ್ಲುಕೋಸ್ ಇಂಜಕ್ಶನ್ ಕೊಡುತ್ತಾರೆ. ಗ್ಲುಕೋಸ್‌ನ ಪರಿಣಾಮವಾಗುತ್ತಹೋದಂತೆ ಅವನು ಅಚೇತನದಿಂದ ಚೇತನಾವಸ್ಥೆಗೆ ಸಾವಕಾಶವಾಗಿ ಮರಳುತ್ತಾನೆ. ಈ ಸಾವಕಾಶ ಪುನರಾಗಮನದಲ್ಲೇ ಕೋಟಿ ಕೋಟಿ ವರ್ಷಗಳ ಕ್ರಮಿಕ ವಿಕಾಸದಲ್ಲಿ ಚೇತನವು ಯಾವ ಯಾವ ಹಂತ ದಾಟಿ ಬಂದಿತೆಂಬುದರ "ಚಿತ್ರಪಟ"ವೊಂದು ಡಾಕ್ಟರರಿಗೆ ನೋಡಲು ಸಿಗುವುದು.

ಪುನಶ್ಚೇತನಾವಸ್ಥೆ ಪ್ರಾರಂಭವಾಗುವ ಹೊತ್ತಿಗೆ ರೋಗಿ ಎಷ್ಟು ನಿಶ್ಚೇಷ್ಟಿತನಾಗಿರುತ್ತಾನೆಂದರೆ ಅವನ ಹೃದಯಕ್ರಿಯೆ ಮತ್ತು ಶ್ವಾಸೋಚ್ಛ್ವಾಸ ಕೂಡ ನಿಂತುಹೋದ ಹಾಗೆ ಅನಿಸುತ್ತಿರುತ್ತದೆ. ಯಂತ್ರಗಳ ನೆರವಿಲ್ಲದೆ ಅವುಗಳ ಚಲನೆಯನ್ನು ಗುರುತಿಸಲು ಬಾರದು. ಗ್ಲುಕೋಸಿನ ಪ್ರಥಮ ಇಂಜಕ್ಶನ್‌ನೊಡನೆ ರೋಗಿಯ ಶರೀರದ ಅತಿಮಹತ್ವದ ಅವಯವಗಳಲ್ಲಿ ಚಲನೆ ಪ್ರಾರಂಭವಾಗುತ್ತದೆ.

ಈಗ ಅವನ ಜಡ ಶರೀರದಲ್ಲಿ ಪ್ರಾಣಸ್ಪಂದನ ಪ್ರಾರಂಭವಾಗಿದೆ. ಜೀವ ವಿಕಾಸದ ದೃಷ್ಟಿಯಿಂದ ನೋಡಿದರೆ ಅದು ಅಸ್ತಿತ್ವದ, ಪ್ರಜ್ಞೆಯ ಆರಂಭ; ಅಗಣಿತ ಯುಗಗಳ ಹಿಂದೆ ಜೀವವು ಪ್ರಥಮತಃ ಅರಿವು ಪಡೆದ ಮೊದಲ ಸ್ಥಿತಿ. "ವಿಚಾರ" ಶಕ್ತಿಯ ಬಲು ಕ್ಷೀಣವಾದ ಬೆಳಕು ಆಗ ಮೂಡಿತ್ತಷ್ಟೇ. ಅದರಲ್ಲಿ ಸ್ವೇಚ್ಛೆಯಿಂದ ಯಾವ ಜೈವಿಕ ಕಾರ್ಯವೂ ಆಗದೆ ತಂತಾನೆ ಆಗುತ್ತಿರುತ್ತದಷ್ಟೆ. ರೋಗಿ ಆಗ ಅರ್ಥಹೀನ ಸ್ವಪ್ನಗಳಿಗಿಂತಲೂ ಕೆಳಗಿನ ಮನಃಪ್ರಪಂಚದಲ್ಲಿರುತ್ತಾನೆ.

ಗ್ಲುಕೋಸಿನ ಪರಿಣಾಮವಾಗುತ್ತ ಹೋದಂತೆ ರೋಗಿಯ ಕೈಕಾಲುಗಳು ಒದ್ದಾಡತೊಡಗುತ್ತವೆ. ನೃತ್ಯ ಮುದ್ರೆಯಂತೆ ಅವನ ಅವಯವ ಭಂಗಿಗಳಾಗುತ್ತವೆ. ಈ ಭಂಗಿಗಳಲ್ಲಿ ನೀರಲ್ಲಿ ಈಸುವ ಹಾಗೆ ಕೈಕಾಲಿನ ಚಲನವಿರುತ್ತದೆ. ಇದು ಮಾನವನ ಈಸಾಟದ ಪ್ರತೀಕವಲ್ಲ, ಮೀನಿನ ಈಸಾಟದ್ದು; ಮೀನು ತನ್ನ ಪಕ್ಕ ಮತ್ತು ಬಾಲಗಳನ್ನಾಡಿಸಿ ಈಸುವ ಹಾಗೆ. ಆ ಸ್ಥಿತಿಯಲ್ಲಿ ರೋಗಿಗೆ ವಿಚಾರಶಕ್ತಿಯಿಲ್ಲ, ಸ್ವೇಚ್ಛೆಯಿಂದ ಆಗುವುದಲ್ಲ ಈ ಚಲನವಲನ. ತಂತಾನೆ ಆಗುವಂಥದು. ಯುಗಯುಗಗಳ ಹಿಂದೆ ಪ್ರಾಣವು ಜಲಚರವಾಗಿದ್ದ—ಮತ್ಸ್ಯಾವತಾರದ— ಸ್ಥಿತಿಗೆ ರೋಗಿಯ ಚೇತನವು ಈಗ ಏರಿ ಬಂದಿದೆ.

ಇದು ಕೆಲ ನಿಮಿಷಗಳ ವರೆಗೆ ಮಾತ್ರ. ಗ್ಲುಕೋಸಿನ ಪ್ರಭಾವ ಹೆಚ್ಚಿದಂತೆ ರೋಗಿಯ ಚೇತನವು ವಿಕಾಸಕ್ರಮದಲ್ಲಿ ಇನ್ನೂ ಸ್ವಲ್ಪ ಏರಿ ಬರುತ್ತದೆ. ಈಗ ಅವನ ಕೈಕಾಲುಗಳ ಚಲನದಲ್ಲಿ ಬೇರೆಯೇ ತರಹದ ಒಂದು ಲಯ ಪ್ರಾರಂಭವಾಗಿದೆ. ಕೈ ಕಾಲುಗಳು ಈಗ ಸರದಿಯ ಮೇಲೆ ಚಲಿಸುತ್ತವೆ. ಚಲನದ ಗತಿ ಅಸಮಾನವಾಗಿರುತ್ತದೆ. ಪ್ರಾಚೀನ ಕಾಲದ ಪ್ರಾಣಿಗಳ ಹರಿದಾಡುವ ಯತ್ನಕ್ಕೂ ಈ ಚಲನಕ್ಕೂ ಅದ್ಭುತ ಸಾಮ್ಯ ಕಾಣಿಸುತ್ತದೆ. ಇದರ ಅರ್ಥವೆಂದರೆ ಗ್ಲುಕೋಸಿನ ಪರಿಣಾಮದಿಂದ ರೋಗಿಯ ಚೇತನವು ಈಸುವ ಅವಸ್ಥೆಯಿಂದ ಹರಿದಾಡುವ ಅವಸ್ಥೆಗೆ ದಾಟಿದೆಯೆಂದು. ಈ ದಾಟುವಿಕೆಗೆ ಇಲ್ಲಿ ಕೆಲ ನಿಮಿಷಗಳು ಮಾತ್ರ ಹಿಡಿದವು. ಆದರೆ ಜೀವವಿಕಾಸದ ಚರಿತ್ರೆಯಲ್ಲಿ ಜಲಚರದಿಂದ ಸ್ಥಲಚರ ಅವಸ್ಥೆಗೆ ಬರಲು

ಕೋಟಿ ಕೋಟಿ ವರ್ಷಗಳು ಬೇಕಾದವೆಂಬುದನ್ನು ನೆನಪಿಡಬೇಕು.

ಮತ್ಸ್ಯದಿಂದ ಕೂರ್ಮ. ಹಾಗೆ ಕೇಳಿದರೆ ಮಕ್ಕಳು ಹರಿದಾಡುವುದರಲ್ಲಿಯೂ ಆ ದೂರ ಪುರಾತನದ ಪ್ರಾಣಿ ಜೀವನದ ಪುನರಾವರ್ತನೆಯೇ ಆಗುತ್ತಿದೆಯೆನ್ನಬಹುದು. ಎರಡರಲ್ಲಿಯೂ ಸ್ವೇಚ್ಛೆಯ ಅಂಶ ಕಡಿಮೆ—ನೈಸರ್ಗಿಕ ಪ್ರೇರಣೆಯ ಅಂಶ ಹೆಚ್ಚು.

ಈ ಅಂಶವನ್ನು ನೀವು ಮೆಲುಕುಹಾಕುತ್ತಿರುವಂತೆಯೆ ರೋಗಿಯ ಚರ್ಯೆಯಲ್ಲಿ ಸ್ಪಷ್ಟವಾದ ಹೊಸ ಬದಲಾವಣೆ ಗೋಚರವಾಗುತ್ತದೆ. ಈಗ ಅವನ ಚೇತನ ಇನ್ನೊಂದು ಮೆಟ್ಟಿಲು ಏರಿಬಂದಿದೆ. ಈಗ ಅವನ ಪಾದದ ಕೆಳಗೆ ಹೆಬ್ಬೆರಳಿನ ಬುಡದಲ್ಲಿ ಒಂದು ಪೆನ್ಸಿಲನ್ನೋ ಕಡ್ಡಿಯನ್ನೋ ಮೃದುವಾಗಿ ತಗಲಿಸಿರಿ. ಒಡನೆಯೆ ಕಾಲ್ಬೆರಳುಗಳು ತಾವಾಗಿ ಬಾಗಿ ಪೆನ್ಸಿಲನ್ನು ಹಿಡಿದುಕೊಳ್ಳುತ್ತವೆ. ಇದನ್ನು ಗ್ರಾಸ್ಪ್ ರಿಫ್ಲೆಕ್ಸ್ ಮತ್ತು ಫುಟ್ ರಿಫ್ಲೆಕ್ಸ್ ಎನ್ನುತ್ತಾರೆ. ಜೀವ ವಿಕಾಸದ ದೃಷ್ಟಿಯಿಂದ ಇದು ವಾನರನ ಹಂತ. ಮಂಗಗಳು ಮರದ ಯಾವುದಾದರೊಂದು ಕೊಂಬೆಯನ್ನು ಹೀಗೆ ಹಿಂಗಾಲುಗಳ ಪಂಜು ಮತ್ತು ಬೆರಳುಗಳಿಂದಲೆ ಹಿಡಿದುಕೊಳ್ಳುತ್ತವೆ. ಇದರ ಅರ್ಥ, ಜೀವವಿಕಾಸದಲ್ಲಿ ಅನೇಕ ಕೋಟಿ ವರ್ಷಗಳಲ್ಲಿ ನಡೆದ ಬದಲಾವಣೆಯ ನಂತರ ಉಂಟಾದ ಮಂಗನ ಅವಸ್ಥೆಯನ್ನು ಗ್ಲುಕೋಸಿನ ಶಕ್ತಿಯಿಂದ ರೋಗಿ ಕೆಲವೇ ನಿಮಿಷಗಳ ಅವಧಿಯಲ್ಲಿ ಮುಗಿಸಿ ಅವನ ಚೇತನವು ವಾನರನ ಸ್ತರಕ್ಕೆ ಬಂದು ಮುಟ್ಟಿದೆ ಎಂದು.

ಇದು ಮನುಷ್ಯನಿಗಿಂತ ಹಿಂದಿನ ಅವಸ್ಥೆ. ಮುಂದಿನ ಕೆಲವೇ ನಿಮಿಷಗಳಲ್ಲಿ ರೋಗಿಯ ಚೇತನವು ಕಪಿಯಿಂದ ಮನುಷ್ಯಾವಸ್ಥೆಗೆ ಸಾಗುವುದನ್ನು ಕಾಣಬಹುದು. ಅವನ ಮುಖದಿಂದ ಅಸ್ಪಷ್ಟ ಅಮಾನವೀಯ ಧ್ವನಿಗಳು ಹೊರಡುತ್ತವೆ. ಮಗು ಮಾತಾಡುವ ಶಕ್ತಿ ಪಡೆವ ಮೊದಲು ಇಂಥವೇ ಧ್ವನಿಗಳನ್ನು ಹೊರಡಿಸುತ್ತದೆಂದು ನಾವು ನೆನೆದುಕೊಳ್ಳುತ್ತೇವೆ. ಇದು ನಾಲಿಗೆಯಿಂದಲ್ಲ, ಗಂಟಲಿಂದ ಹೊರಡುವ ಧ್ವನಿ. ಶಿಶುಗಳು ಕೂಡ ಮೊದಲು ಕಂಠದಿಂದಲೇ ತಾನೆ ಧ್ವನಿ ಹೊರಡಿಸುವುದು.

ಮೆಲ್ಲಮೆಲ್ಲಗೆ ಈ ಅಮಾನವೀಯ ಮತ್ತು ಅ-ಸ್ವೇಚ್ಛಾ ಜನಿತ ಧ್ವನಿಗಳು ಸ್ವೇಚ್ಛಾ ಜನಿತ ಶಬ್ದಗಳಾಗಿ ಪರಿವರ್ತನ ಹೊಂದುತ್ತವೆ. ಆದರೂ ಅದರಲ್ಲಿನ್ನೂ ಅಮಾನವೀಯತೆ ಉಳಿದಿರುತ್ತದೆ. ಪಶುಗಳ ಕಂಠದಿಂದ ಹೊರಡುವ ಶಬ್ದಗಳಿಗೂ ಇದಕ್ಕೂ ಸಾದೃಶ್ಯ ಬಹಳ.

ಮುಂದೆ ರೋಗಿಯು ಅರಿಯದ ಮಗು ಇನ್ನೂ ಮಾತು ಕಲಿಯುವಾಗ ಮಾಡುವಂತೆ ತೊದಲುವನು. ಈಗ ಅವನ ವ್ಯಕ್ತಿತ್ವ, ಚೇತನ ಪುನಃ ಮಾನವ "ಜನ್ಮ" ಪಡೆಯುತ್ತಿದೆ. ಅದು ಈಗ ಶಿಶು ಅವಸ್ಥೆಯಲ್ಲಿದೆ. ಅದಿನ್ನು ಪ್ರೌಢಾವಸ್ಥೆಯನ್ನು ಪಡೆಯಲಿದೆ. ಕೆಲ ನಿಮಿಷಗಳಲ್ಲಿ ಅಸ್ಫುಟ ಧ್ವನಿಗಳು ಶಬ್ದಗಳಾಗಿ, ಆ ಮೇಲೆ ಹರಮುರುಕು ವಾಕ್ಯಗಳಾಗಿ, ಕೊನೆಗೆ ಸ್ಪಷ್ಟವಾದ ಮಾತುಗಳಾಗಿ ರೂಪುಗೊಳ್ಳುತ್ತವೆ.

ಅನಂತರ ತುಸು ನಿಮಿಷಗಳಲ್ಲೇ ನಿದ್ದೆ ತಿಳಿದೆದ್ದವನಂತೆ ಪ್ರಜ್ಞಾವಸ್ಥೆಗೆ ಬರುತ್ತಾನೆ. ಮೊದಮೊದಲು ಅವನ ಚಿತ್ತ ವಿಕ್ಷಿಪ್ತವಾಗಿರುವಂತೆ ಇದ್ದರೂ ಆ ಮೇಲೆ ಅವನು ಏಕಾಗ್ರತೆಯನ್ನು ಸಂಪಾದಿಸಿ ತನ್ನ ಪರಿಸರಕ್ಕೆ ಸಚೇತನ ಪ್ರತಿ-ಕ್ರಿಯೆ ತೋರಿಸಲಾರಂಭಿಸುತ್ತಾನೆ. ಅವನು ಈಗ ಸಂಪೂರ್ಣ ಜಾಗ್ರತಾವಸ್ಥೆಗೆ ಮುಟ್ಟಿದ್ದಾನೆ.

ಇಷ್ಟೆಲ್ಲವೂ ಒಂದು ಗಂಟೆಯೊಳಗೆ ಮುಗಿದು ಹೋಗುತ್ತದೆ. ಆದರೆ ಅಷ್ಟೇ ಹೊತ್ತಿನೊಳಗೆ ಆತ ಅಸಂಖ್ಯ ಯುಗಗಳ ಹಿಂದಿನಿಂದ ಅಸಂಖ್ಯ "ಅವತಾರ"ಗಳನ್ನು ದಾಟಿ ಅಪ್ರಜ್ಞೆಯಿಂದ ಪ್ರ-ಜ್ಞೆಗೆ, ಮತ್ಸ್ಯದಿಂದ ಮಾನವನ ವರೆಗಿನ ವಿಕಾಸ ಪಥವನ್ನೆಲ್ಲ ದಾಟಿ ಬಂದಿರುತ್ತಾನೆ. ★

ಬಾಗಿಲ ಸಪ್ಪಳ ಕೇಳಿ ರಮಾ ಎದ್ದಳು. ಸದ್ದು ಮಾಡದೆ ಪಾವಟಿಗೆಗಳನ್ನು ಇಳಿದಳು. ಸಾವಕಾಶವಾಗಿ ಬಾಗಿಲನ್ನು ತೆರೆದಳು. ಕೂಡಲೇ ಅದೇ ಪರಿಚಿತ ವಾಸನೆ ಮೂಗಿಗೇರಿತು. ಅದೇ ವ್ಯಕ್ತಿ ಹೊಯ್ದಾಡುತ್ತ ಒಳಗೆ ಬಂದಿತು. ಗೋಡೆಯ ಆಸರೆ ಹೊಂದಿ ನಿಂತಿತು.

ರಮಾ ಏನೂ ಮಾತಾಡದೆ ಸುಖಮಯನ ಕೈಹಿಡಿದು ಮೇಲೆ ನಡೆದಳು. ಅಟ್ಟ ಹತ್ತುವಾಗ ಸುಖಮಯ ಬಾಯಿ ಬಿಚ್ಚಿದ ಆದರೆ ರಮಾ ಕೂಡಲೆ ಸೆರಗಿನಿಂದ ಅವನ ಬಾಯಿ ಮುಚ್ಚಿ,

ಬಂಗಾಲಿ ಕಥೆ

ಕುಡುಕನ ಹೆಂಡತಿ

ಹರಿನಾರಾಯಣ ಚಟ್ಟೋಪಾಧ್ಯಾಯ



"ದಮ್ಮಯ್ಯ, ಇಲ್ಲಿ ಏನೂ ಮಾತಾಡಬೇಡಿ. ಕೋಣೆಯಲ್ಲಿ ಹೇಳಿ. ಎಲ್ಲವನ್ನೂ ಕೇಳುವೆ" ಎಂದು ಪಿಸುಗುಟ್ಟಿದಳು. ಆತ ಮೂಕನಾಗಿ ಅವಳನ್ನು ಹಿಂಬಾಲಿಸಿದ.

ಆತನನ್ನು ಪಲ್ಲಂಗದ ಮೇಲೆ ಕೂಡಿಸಿದೊಡನೆಯೆ ರಮಾಗೆ ಅಳು ಬಂತು. ಬರುವಾಗಲೇ ಬಾಗಿಲನ್ನು ಮುಚ್ಚಿಕೊಂಡಿದ್ದಳು. ಇಲ್ಲವಾದರೆ ಕೆಳಗಿದ್ದ ಅತ್ತೆ, ನೆಗಣ್ಣಿ, ಮೈದುನರು ಇವಳ ಅಳುವನ್ನು ಕೇಳಿಯಾರಲ್ಲ ಎಂದವಳಿಗೆ ಭಯ.

ಇಷ್ಟಾದರೂ ಈ ಮಾತು ಗುಪ್ತವಾಗಿ ಉಳಿ

G 6—6

ಯಲೇ ಇಲ್ಲ. ಎಂದೋ ಒಮ್ಮೆ ನಡೆಯುವ ಸಂದರ್ಭವಾಗಿದ್ದರೆ ರಮಾ ಏನಾದರೂ ಹೇಳಿ ದಾಟಿಕೊಳ್ಳಬಹುದಿತ್ತು. ಇದು ಪ್ರತಿನಿತ್ಯ ನಡೆಯುವ ಕತೆ. ಹೆಂಡ ಕುಡಿದು ಹೊಯ್ದಾಡುತ್ತ ಮನೆಗೆ ಮರಳುವ ಸುಖಮಯ ವಾಹನಗಳನ್ನು ಅದು ಹೇಗೆ ತಪ್ಪಿಸುತ್ತಿದ್ದನೊ ಎಂದು ಆಕೆ ಆಶ್ಚರ್ಯಪಟ್ಟಳು.

ಒಂದು ವರ್ಷ ಹಿಂದೆ ಸುಖಮಯ ಒಳ್ಳೆಯವನಾಗಿದ್ದ. ಆಫೀಸು ಬಿಟ್ಟೊಡನೆ ಸೀದಾ ಮನೆಗೇ ಬರುತ್ತಿದ್ದ. ರಮಾಳೊಂದಿಗೆ ವಾಯುಸೇವನೆಗೆ ಹೋಗುತ್ತಿದ್ದ. ಈಗ ಮದುವೆಯಾಗಿ ಎಂಟು ವರ್ಷಗಳಾಗಿದ್ದರೂ ಮಕ್ಕಳಾಗಿಲ್ಲ. ಆಗುವ ಸಂಭವವೂ ಇನ್ನಿಲ್ಲ. ಹಾಗೆ ಡಾಕ್ಟರರು ಹೇಳಿದ್ದಾರೆ. ಆದರೆ ಇದಕ್ಕಾಗಿ ಪತಿ-ಪತ್ನಿ ಇಬ್ಬರೂ ವ್ಯಸನಪಟ್ಟಿಲ್ಲ."

ಸುಖಮಯ ಹೇಳುತ್ತಾನೆ: "ಮಕ್ಕಳು ಆಗುವುದೆಂದರೆ ನಾವಿಬ್ಬರೂ ದೂರವಾಗುವುದು. ನಮ್ಮಿಬ್ಬರ ನಡುವೆ ಇನ್ನೊಂದು ಮಾಂಸದ ಮುದ್ದೆ ಬರುವುದು. ಆದ್ದರಿಂದ ಮಕ್ಕಳಾಗದಿರುವುದೇ ಲೇಸು. ಪ್ರತಿ ರಾತ್ರಿಯೂ ನಮ್ಮ ಪಾಲಿಗೆ ಶೋಭನ. ನೀನು ನವವಧು."

ಮೊದಮೊದಲು ಕೆಲವು ದಿನ ರಮಾಗೆ ಕೆಡುಕೆನಿಸುತ್ತಿತ್ತು. ಆದರೆ ಮುಂದೆ ಮೈದುನನಿಗೆ ಮಗುವಾದ ಮೇಲೆ ಆ ಭಾವ ಅಳಿಯಿತು. ಆ ಕೂಸನ್ನು ತಾನೆತ್ತಿಕೊಂಡು ಎದೆಗವಚಿ ಹಿಡಿದು ತನ್ನ ನೆಗಣ್ಣಿಗೆ ಹೇಳಿದಳು: "ಆಹಾ, ಇದು ನನ್ನ ಕೂಸು. ಇದನ್ನು ಮರಳಿ ಕೇಳಿದರೆ ಕೊಡುವುದಿಲ್ಲ."

ಆದರೆ ಒತ್ತಾಯದಿಂದ ತಾನು ಕೂಸನ್ನು ತನ್ನ ಬಳಿ ಹಿಡಿದಿಟ್ಟರೆ ತನ್ನ ಬರಿಯ ಹೊಟ್ಟೆಯ ಬಿಸಿ ಆ ಕೂಸಿನ ಹೊಟ್ಟೆ ತುಂಬದೆಂದು ತಿಳಿಯಲು ಆಕೆಗೆ ತಡವಾಗಲಿಲ್ಲ. ಕೂಡಲೆ ಕೂಸನ್ನು ಮರಳಿ ಅದರ ತಾಯಿಯ ಹತ್ತರ ಮಲಗಿಸಿ, "ಇಕೊ. ಮೊಲೆ ಕುಡಿಸಿಕೊಡು. ಇದೇ ಒಂದು ತೊಂದರೆ," ಎಂದಳು.

ಆದರೆ ಮಗು ತುಸು ಬೆಳೆದ ಮೇಲೆ ಈ ಸಮಸ್ಯೆಯ ಪರಿಹಾರವಾಗಿ ಮಗು ಸಂಜೆಯ ವರೆಗೆ ರಮಾಳ ಹತ್ತಿರವೇ ಇದ್ದು ರಾತ್ರಿಗಷ್ಟೇ ತಾಯಿಯ ಹತ್ತಿರ ಹೋಗುತ್ತಿತ್ತು.

ಆದರೆ ಈಗೀಗ ಮಗುವಾಗಲಿ ಅದರ ತಾಯಿಯಾಗಲಿ ಯಾರೂ ಅವಳ ಕೋಣೆಯತ್ತ ಬರುವುದೇ ಇಲ್ಲ. ಮೈದುನ ಮತ್ತು ನೆಗಣ್ಣಿ ಸುಖಮಯನಿಲ್ಲದಾಗಲೂ ಅವನ ಕೋಣೆಯಲ್ಲಿ ಸೆರೆಯ ವ್ಯವಸ್ಥೆ ಇರುತ್ತದೆಂದೂ ಅದನ್ನು ಕಂಡರೆ ಹುಡುಗರು ಕೆಟ್ಟಾವೆಂದೂ ತಿಳಿದಿದ್ದಾರೆ.

ಇನ್ನು ತಾನು ನಾಲ್ಕು ಜನರ ಎದುರು ಎಂದಿಗೂ ತಲೆ ಎತ್ತಲಾರೆನೆಂದು ರಮಾ ಖಿನ್ನಳಾಗಿದ್ದಾಳೆ. ಆದರೆ ಇದು ಹೀಗೆ ಹೇಗಾಯಿತು? ಎಷ್ಟು ಯೋಚಿಸಿದರೂ ರಮಾಗೆ ಉತ್ತರವೇ ಸಿಗುವುದಿಲ್ಲ.

ಹೀಗಾಗಲಿಕ್ಕೆ ಪ್ರಾರಂಭವಾದ ಮೊದಲನೇ ದಿನ. ಅದನ್ನು ರಮಾ ಎಂದೂ ಮರೆಯಲಾರಳು. ಸುಖಮಯ ಅಂದು ತಡಮಾಡಿ ಮನೆಗೆ ಬಂದಿದ್ದ. ಕ್ಲಬ್ಬಿನಲ್ಲಿ ಫಂಕ್ಷನ್ ಇದ್ದು ತಡವಾದೀತೆಂದು ಮೊದಲೇ ಹೇಳಿದ್ದ.

ಮಾತುಕತೆ ಎಲ್ಲ ಎಂದಿನಂತೇ. ಆದರೂ ಊಟಕ್ಕೆ ಬಡಿಸುವಾಗ ಮಾತ್ರ ರಮಾಗೆ ಏನೋ ವಾಸನೆ ಬಂದಂತಾಯಿತು. ಮತ್ತೊಮ್ಮೆ ಶ್ವಾಸ ಎಳೆದುಕೊಂಡು "ಏನಿದು ವಾಸನೆ?" ಎಂದಳು.

ಆಗಲೇ ಸುಖಮಯ ಎದ್ದು ಕೈತೊಳೆದುಕೊಳ್ಳಲು ಹೊರಟ. ಹೋಗುತ್ತ ನುಡಿದ: "ಊಟ ಮಾಡದೇ ಇದ್ದರೂ ನಡೀತಿತ್ತು, ಹಸಿವೇ ಇರಲಿಲ್ಲ."

ರಮಾ ಅವನ ಹಿಂದಿನಿಂದೇ ಬಚ್ಚಲ ಮನೆಗೂ ಹೋಗಿ, "ಕೇಳಿದಿರೇನು?" ಎಂದಳು.

"ಏನು?" ಹೊರಳಿದನಾತ.

"ನಿಮ್ಮ ಮೈವಾಸನೆಯೇ ಇದು?"

"ಎಂಥ ವಾಸನೆ?"

ಕೊಂಚ ಹಿಂಜರಿದು, "ಸೆರೆ— ಹೆಂಡದ ವಾಸನೆ."

ಆದರೂ ನಿಃಸಂಕೋಚವಾಗಿ ಸುಖಮಯ "ಇದ್ದೀತು" ಎಂದುಬಿಟ್ಟ.

"ಇದ್ದೀತು ಅಂದರೆ ?"

"ನಾನು ಕುಡಿದಿದ್ದೇನೆ," ನಿಶ್ಚಲನಾಗಿ ಬಾಯಿ ಮುಕ್ಕಳಿಸಿದನಾತ.

ರಮಾ ಮರುಮಾತಾಡದೇ ಮರಳಿ ತನ್ನ ಕೋಣೆಗೆ ಬಂದು ಹಾಸಿಗೆಯ ಮೇಲೆ ಬಿದ್ದಳು. ಆತ ತಿರುಗಿ ಬಂದ ಮೇಲೆ ಪುನಃ ಆ ಪ್ರಸ್ತಾಪ ವೆತ್ತಿದಳು.

ಸೊಳ್ಳೆ ಪರದೆ (ಮಚ್ಛರದಾನಿ) ಯನ್ನು ಸರಿಸುವ ನೆವದಿಂದ ಅವನ ಬಾಯಿಯ ಹತ್ತಿರ ತನ್ನ ಮುಖ ಒಯ್ದಳು. ಸುಖಮಯ ಹೆಂಡ ಕುಡಿದದ್ದು ಸುಳ್ಳಾಗಿರಲಿಲ್ಲ. ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡು ಸುಖಮಯನ ಎದೆಯ ಮೇಲೊರಗಿ ಅಳಲಾರಂಭಿಸಿದಳು

"ಇದನ್ನೇನು ಮಾಡಿದಿರಿ! ಈ ವಿಷವನ್ನೇಕೆ ಸೇವಿಸಿದಿರಿ ?"

"ಎಲ್ಲೊ ಸ್ವಲ್ಪ ಕುಡಿದೆ. ಕೆಂಪಾಗಿತ್ತು. ಆದರೆ ಇದೇನು ನಿನ್ನ ರಂಪ! ಕೆಳಗಿನ ಜನರು ಕೇಳಿಯಾರು," ಎಂದವನು ಧಡಕ್ಕನೆ ಎದ್ದು ಕೂತ.

"ಕೇಳಲಿ, ನನ್ನ ಸರ್ವನಾಶದ ಕತೆ ಎಲ್ಲರಿಗೆ ತಿಳಿಯಲಿ. ಅಯ್ಯೊ! ನೀವು ಕುಡಿದಿರಾ ?" ಎಂದು ಆಕೆ ತನ್ನ ತಲೆಯನ್ನು ಅವನ ಪಾದಗಳ ಮೇಲೆ ತಿಕ್ಕತೊಡಗಿದಳು. ಅಮಲು ಇಳಿದು ಸುಖಮಯ ಎದ್ದು ನಿಂತ. ನೀರು ತಂದು ರಮಾಳ ಮುಖದ ಮೇಲೆ ಎರಚಿದ. ಅವಳೆರಡೂ ಕೈಗಳನ್ನು ತನ್ನವುಗಳಲ್ಲಿ ಹಿಡಿದು, "ನಾನಿನ್ನೆಂದೂ ಹೀಗೆ ಮಾಡುವುದಿಲ್ಲ" ಎಂದು ಹೇಳಿದ.

ಸುಖಮಯ ಬಹಳೇನೂ ಕುಡಿದಿರಲಿಲ್ಲ. ಮಿತ್ರರ ಒತ್ತಾಯಕ್ಕಾಗಿ ಕುಡಿದಿದ್ದ. ಮೊದಲ ಗುಟುಕು ಗಂಟಲಲ್ಲಿ ಇಳಿದಾಗ ತುಸು ಬರೆ ಕೊಟ್ಟಂತಾಯಿತು. ಆದರೂ ಮುಂದೆ ಮಿತ್ರರ ಮಾತು, ಗ್ಲಾಸು ಬಾಟಲಿಗಳ ಸಪ್ಪಳದಲ್ಲಿ ಒಂದು ಬಗೆಯ ಸಂಗೀತವಿದೆ ಎನಿಸಿತು.

ರಮಾ ಯೋಚಿಸುವಳು. ಅಂದು ಯಾರಾದರೂ ಕೇಳಿಯಾರೆಂದು ಹೆದರುತ್ತಿದ್ದವನು ಇಂದು ಯಾವ ಪರಿವೆಯೂ ಇಲ್ಲದಂತಿದ್ದಾನೆ. ಮೆಟ್ಟನ್ನು ಎಲ್ಲಿಯೋ ಕಳೆದು, ಕೆಸರಲ್ಲಿ ಉರುಳಾಡಿ ಹೊಯ್ದಾಡುತ್ತ ಬಂದು ಬಾಗಿಲನ್ನು ಬಡಿಯುತ್ತಾನೆ. ಒಮ್ಮೊಮ್ಮೆಯಂತೂ ಓಣಿಯ ತರುಣರೇ ಎಲ್ಲಿಯೋ ಬಿದ್ದಿದ್ದ ಸುಖಮಯನನ್ನು ಎತ್ತಿ ತಂದು ಬಾಗಿಲಲ್ಲಿ ಇರಿಸಿದ್ದಾರೆ.

ನಾಚಿಕೆಯಿಂದ ಕಂಗಾಲಾಗಿದ್ದಳು ರಮಾ. ಒಂದೊಂದು ದಿನ ಸೀರೆಯನ್ನೇ ಉರುಲಾಗಿ ಕುತ್ತಿಗೆಗೆ ಸುತ್ತಿ ಸಾಯೋಣವೇ ಎನ್ನುವಳು. ಬದುಕಿದ್ದರೆ ಮತ್ತೇನೇನು ಕೇಳಬೇಕಾಗುವುದೊ!

ಆದರೆ ಸಾಯುವ ಧೈರ್ಯ ಅವಳಲ್ಲಿರಲಿಲ್ಲ. ಇಂಥ ಅಸಾರ ಜೀವನದ ಬಗ್ಗೆಯೂ ಮೋಹವಿತ್ತು. ಸುಖಮಯನ ಮೈಕೆಸರನ್ನು ಅವನು ತನ್ನ ಮುಖಕ್ಕಷ್ಟೇ ಅಲ್ಲ ಇವಳ ಮುಖಕ್ಕೂ ಒರೆಸಿದ್ದಾನೆ. ಇನ್ನೂ ಆತ ಸುಧಾರಿಸಿಯಾನು, ಪುನಃ ಹೊಸ ಜೀವನ ಪ್ರಾರಂಭವಾದೀತು ಎಂಬ ಆಸೆಯಲ್ಲೇ ಈಕೆ ಇದ್ದಾಳೆ.

ಮೊದಮೊದಲು ಪ್ರತಿ ಶನಿವಾರ ಮಾತ್ರ ಹೀಗಾಗುತ್ತಿತ್ತು. ಈಗಲೋ ದಿನಾಲೂ. ಹೊರಗಿನವರಿಗೆ ಮನೆಯವರಿಗೆ ಯಾರಿಗೂ ಮುಖ ತೋರಿಸುವುದು ಸಾಧ್ಯವಿಲ್ಲದಾಗಿದೆ. ಮೊದಲು ಗೊತ್ತಾದದ್ದು ಅತ್ತೆಗೆ. ಅವಳು ಆಸರೆ ಕೊಟ್ಟು ಸುಖಮಯನನ್ನು ಮೇಲೆ ಕರೆದುಕೊಂಡು ಬರುತ್ತಿದ್ದಳು. ಅವರು ಮಲಗಿರಬೇಕೆಂದಿದ್ದಳು ರಮಾ. ಅತ್ತೆ ಆಗೇನೂ ಮಾತಾಡಲಿಲ್ಲ. ಬರೇ ನೋಡುತ್ತ ನಿಂತಿದ್ದರು ಗೋಡೆಗೆ ಆತುಕೊಂಡು. ಮರುದಿನ ಮಧ್ಯಾಹ್ನ ಊಟವಾದ ಮೇಲೆ ರಮಾ ವಿಶ್ರಾಂತಿಗೆ ಹೊರಟಾಗ ಅತ್ತೆ ಬಂದರು.

"ರಮಾ."

"ಏನತ್ತೆ ?"

"ಸುಖಮಯನ ದೆಸೆಯಿಂದ ನಾವು ಓಣಿಯಲ್ಲಿ ನಿಲ್ಲುವುದೇ ಕಷ್ಟವಾಗಿದೆ. ಎಂದಿನಿಂದ ಇದು

ಯಲೇ ಇಲ್ಲ. ಎಂದೋ ಒಮ್ಮೆ ನಡೆಯುವ ಸಂದರ್ಭವಾಗಿದ್ದರೆ ರಮಾ ಏನಾದರೂ ಹೇಳಿ ದಾಟಿಕೊಳ್ಳಬಹುದಿತ್ತು. ಇದು ಪ್ರತಿನಿತ್ಯ ನಡೆಯುವ ಕತೆ. ಹೆಂಡ ಕುಡಿದು ಹೊಯ್ದಾಡುತ್ತ ಮನೆಗೆ ಮರಳುವ ಸುಖಮಯ ವಾಹನಗಳನ್ನು ಅದು ಹೇಗೆ ತಪ್ಪಿಸುತ್ತಿದ್ದನೊ ಎಂದು ಆಕೆ ಆಶ್ಚರ್ಯಪಟ್ಟಳು.

ಒಂದು ವರ್ಷ ಹಿಂದೆ ಸುಖಮಯ ಒಳ್ಳೆಯವನಾಗಿದ್ದ. ಆಫೀಸು ಬಿಟ್ಟೊಡನೆ ಸೀದಾ ಮನೆಗೇ ಬರುತ್ತಿದ್ದ. ರಮಾಳೊಂದಿಗೆ ವಾಯುಸೇವನೆಗೆ ಹೋಗುತ್ತಿದ್ದ. ಈಗ ಮದುವೆಯಾಗಿ ಎಂಟು ವರ್ಷಗಳಾಗಿದ್ದರೂ ಮಕ್ಕಳಾಗಿಲ್ಲ. ಆಗುವ ಸಂಭವವೂ ಇನ್ನಿಲ್ಲ. ಹಾಗೆ ಡಾಕ್ಟರರು ಹೇಳಿದ್ದಾರೆ. ಆದರೆ ಇದಕ್ಕಾಗಿ ಪತಿ–ಪತ್ನಿ ಇಬ್ಬರೂ ವ್ಯಸನಪಟ್ಟಿಲ್ಲ."

ಸುಖಮಯ ಹೇಳುತ್ತಾನೆ: "ಮಕ್ಕಳು ಆಗುವುದೆಂದರೆ ನಾವಿಬ್ಬರೂ ದೂರವಾಗುವುದು. ನಮ್ಮಿಬ್ಬರ ನಡುವೆ ಇನ್ನೊಂದು ಮಾಂಸದ ಮುದ್ದೆ ಬರುವುದು. ಆದ್ದರಿಂದ ಮಕ್ಕಳಾಗದಿರುವುದೇ ಲೇಸು. ಪ್ರತಿ ರಾತ್ರಿಯೂ ನಮ್ಮ ಪಾಲಿಗೆ ಶೋಭನ. ನೀನು ನವವಧು."

ಮೊದಮೊದಲು ಕೆಲವು ದಿನ ರಮಾಗೆ ಕೆಡುಕೆನಿಸುತ್ತಿತ್ತು. ಆದರೆ ಮುಂದೆ ಮೈದುನನಿಗೆ ಮಗುವಾದ ಮೇಲೆ ಆ ಭಾವ ಅಳಿಯಿತು. ಆ ಕೂಸನ್ನು ತಾನೆತ್ತಿಕೊಂಡು ಎದೆಗವಚಿ ಹಿಡಿದು ತನ್ನ ನೆಗಣ್ಣಿಗೆ ಹೇಳಿದಳು: "ಅಭಾ, ಇದು ನನ್ನ ಕೂಸು. ಇದನ್ನು ಮರಳಿ ಕೇಳಿದರೆ ಕೊಡುವುದಿಲ್ಲ."

ಆದರೆ ಒತ್ತಾಯದಿಂದ ತಾನು ಕೂಸನ್ನು ತನ್ನ ಬಳಿ ಹಿಡಿದಿಟ್ಟರೆ ತನ್ನ ಬರಿಯ ಹೊಟ್ಟೆಯ ಬಿಸಿ ಆ ಕೂಸಿನ ಹೊಟ್ಟೆ ತುಂಬದೆಂದು ತಿಳಿಯಲು ಆಕೆಗೆ ತಡವಾಗಲಿಲ್ಲ. ಕೂಡಲೆ ಕೂಸನ್ನು ಮರಳಿ ಅದರ ತಾಯಿಯ ಹತ್ತರ ಮಲಗಿಸಿ, "ಇಕೊ. ಮೊಲೆ ಕುಡಿಸಿಕೊಡು. ಇದೇ ಒಂದು ತೊಂದರೆ," ಎಂದಳು.

ಆದರೆ ಮಗು ತುಸು ಬೆಳೆದ ಮೇಲೆ ಈ ಸಮಸ್ಯೆಯ ಪರಿಹಾರವಾಗಿ ಮಗು ಸಂಜೆಯ ವರೆಗೆ ರಮಾಳ ಹತ್ತಿರವೇ ಇದ್ದು ರಾತ್ರಿಗಷ್ಟೇ ತಾಯಿಯ ಹತ್ತಿರ ಹೋಗುತ್ತಿತ್ತು.

ಆದರೆ ಈಗೀಗ ಆ ಮಗುವಾಗಲಿ ಅದರ ತಾಯಿಯಾಗಲಿ ಯಾರೂ ಅವಳ ಕೋಣೆಯತ್ತ ಬರುವುದೇ ಇಲ್ಲ. ಮೈದುನ ಮತ್ತು ನೆಗಣ್ಣಿ ಸುಖಮಯನಿಲ್ಲದಾಗಲೂ ಅವನ ಕೋಣೆಯಲ್ಲಿ ಸೆರೆಯ ವ್ಯವಸ್ಥೆ ಇರುತ್ತದೆಂದೂ ಅದನ್ನು ಕಂಡರೆ ಹುಡುಗರು ಕೆಟ್ಟಾರೆಂದೂ ತಿಳಿದಿದ್ದಾರೆ.

ಇನ್ನು ತಾನು ನಾಲ್ಕು ಜನರ ಎದುರು ಎಂದಿಗೂ ತಲೆ ಎತ್ತಲಾರೆನೆಂದು ರಮಾ ಖಿನ್ನಳಾಗಿದ್ದಾಳೆ. ಆದರೆ ಇದು ಹೀಗೆ ಹೇಗಾಯಿತು? ಎಷ್ಟು ಯೋಚಿಸಿದರೂ ರಮಾಗೆ ಉತ್ತರವೇ ಸಿಗುವುದಿಲ್ಲ.

ಹೀಗಾಗಲಿಕ್ಕೆ ಪ್ರಾರಂಭವಾದ ಮೊದಲನೇ ದಿನ. ಅದನ್ನು ರಮಾ ಎಂದೂ ಮರೆಯಲಾರಳು. ಸುಖಮಯ ಅಂದು ತಡಮಾಡಿ ಮನೆಗೆ ಬಂದಿದ್ದ. ಕ್ಲಬ್ಬಿನಲ್ಲಿ ಫಂಕ್ಶನ್ ಇದ್ದು ತಡವಾದೀತೆಂದು ಮೊದಲೇ ಹೇಳಿದ್ದ.

ಮಾತುಕತೆ ಎಲ್ಲ ಎಂದಿನಂತೇ. ಆದರೂ ಊಟಕ್ಕೆ ಬಡಿಸುವಾಗ ಮಾತ್ರ ರಮಾಗೆ ಏನೋ ವಾಸನೆ ಬಂದಂತಾಯಿತು. ಮತ್ತೊಮ್ಮೆ ಶ್ವಾಸ ಎಳೆದುಕೊಂಡು "ಏನಿದು ವಾಸನೆ?" ಎಂದಳು.

ಆಗಲೇ ಸುಖಮಯ ಎದ್ದು ಕೈತೊಳೆದುಕೊಳ್ಳಲು ಹೊರಟ. ಹೋಗುತ್ತ ನುಡಿದ: "ಊಟ ಮಾಡದೇ ಇದ್ದರೂ ನಡೀತಿತ್ತು, ಹಸಿವೇ ಇರಲಿಲ್ಲ."

ರಮಾ ಅವನ ಹಿಂದಿನಿಂದೇ ಬಚ್ಚಲ ಮನೆಗೂ ಹೋಗಿ, "ಕೇಳಿದಿರೇನು?" ಎಂದಳು.

"ಏನು?" ಹೊರಳಿದನಾತ.

"ನಿಮ್ಮ ಮೈವಾಸನೆಯೇ ಇದು?"

"ಎಂಥ ವಾಸನೆ?"

ಕೊಂಚ ಹಿಂಜರಿದು, "ಸೆರೆ— ಹೆಂಡದ ವಾಸನೆ."

ಆದರೂ ನಿಃಸಂಕೋಚವಾಗಿ ಸುಖಮಯ "ಇದ್ದೀತು" ಎಂದುಬಿಟ್ಟ.

"ಇದ್ದೀತು ಅಂದರೆ ?"

"ನಾನು ಕುಡಿದಿದ್ದೇನೆ," ನಿಶ್ಚಲನಾಗಿ ಬಾಯಿ ಮುಕ್ಕಳಿಸಿದನಾತ.

ರಮಾ ಮರುಮಾತಾಡದೇ ಮರಳಿ ತನ್ನ ಕೋಣೆಗೆ ಬಂದು ಹಾಸಿಗೆಯ ಮೇಲೆ ಬಿದ್ದಳು. ಆತ ತಿರುಗಿ ಬಂದ ಮೇಲೆ ಪುನಃ ಆ ಪ್ರಸ್ತಾಪ ವೆತ್ತಿದಳು.

ಸೊಳ್ಳೆ ಪರದೆ (ಮಚ್ಛರದಾನಿ) ಯನ್ನು ಸರಿಸುವ ನೆವದಿಂದ ಅವನ ಬಾಯಿಯ ಹತ್ತಿರ ತನ್ನ ಮುಖ ಒಯ್ದಳು. ಸುಖಮಯ ಹೆಂಡ ಕುಡಿದದ್ದು ಸುಳ್ಳಾಗಿರಲಿಲ್ಲ. ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡು ಸುಖಮಯನ ಎದೆಯ ಮೇಲೊರಗಿ ಅಳಲಾರಂಭಿಸಿದಳು

"ಇದನ್ನೇನು ಮಾಡಿದಿರಿ! ಈ ವಿಷವನ್ನೇಕೆ ಸೇವಿಸಿದಿರಿ ?"

"ಎಲ್ಲೊ ಸ್ವಲ್ಪ ಕುಡಿದೆ. ಕೆಂಪಾಗಿತ್ತು. ಆದರೆ ಇದೇನು ನಿನ್ನ ರಂಪ! ಕೆಳಗಿನ ಜನರು ಕೇಳಿಯಾರು," ಎಂದವನು ಧಡಕ್ಕನೆ ಎದ್ದು ಕೂತ.

"ಕೇಳಲಿ, ನನ್ನ ಸರ್ವನಾಶದ ಕತೆ ಎಲ್ಲರಿಗೆ ತಿಳಿಯಲಿ. ಅಯ್ಯೊ! ನೀವು ಕುಡಿದಿರಾ ?" ಎಂದು ಆಕೆ ತನ್ನ ತಲೆಯನ್ನು ಅವನ ಪಾದಗಳ ಮೇಲೆ ತಿಕ್ಕತೊಡಗಿದಳು. ಅಮಲು ಇಳಿದು ಸುಖಮಯ ಎದ್ದು ನಿಂತ. ನೀರು ತಂದು ರಮಾಳ ಮುಖದ ಮೇಲೆ ಎರಚಿದ. ಅವಳೆರಡೂ ಕೈಗಳನ್ನು ತನ್ನವುಗಳಲ್ಲಿ ಹಿಡಿದು, "ನಾನಿನ್ನೆಂದೂ ಹೀಗೆ ಮಾಡುವುದಿಲ್ಲ" ಎಂದು ಹೇಳಿದ.

ಸುಖಮಯ ಬಹಳೇನೂ ಕುಡಿದಿರಲಿಲ್ಲ. ಮಿತ್ರರ ಒತ್ತಾಯಕ್ಕಾಗಿ ಕುಡಿದಿದ್ದ. ಮೊದಲ ಗುಟುಕು ಗಂಟಲಲ್ಲಿ ಇಳಿದಾಗ ತುಸು ಬರೆ ಕೊಟ್ಟಂತಾಯಿತು. ಆದರೂ ಮುಂದೆ ಮಿತ್ರರ ಮಾತು, ಗ್ಲಾಸು ಬಾಟಲಿಗಳ ಸಪ್ಪಳದಲ್ಲಿ ಒಂದು ಬಗೆಯ ಸಂಗೀತವಿದೆ ಎನಿಸಿತು.

ರಮಾ ಯೋಚಿಸುವಳು. ಅಂದು ಯಾರಾದರೂ ಕೇಳಿಯಾರೆಂದು ಹೆದರುತ್ತಿದ್ದವನು ಇಂದು ಯಾವ ಪರಿವೆಯೂ ಇಲ್ಲದಂತಿದ್ದಾನೆ. ಮೆಟ್ಟನ್ನು ಎಲ್ಲಿಯೋ ಕಳೆದು, ಕೆಸರಲ್ಲಿ ಉರುಳಾಡಿ ಹೊಯ್ದಾಡುತ್ತ ಬಂದು ಬಾಗಿಲನ್ನು ಬಡಿಯುತ್ತಾನೆ. ಒಮ್ಮೊಮ್ಮೆಯಂತೂ ಓಣಿಯ ತರುಣರೇ ಎಲ್ಲಿಯೋ ಬಿದ್ದಿದ್ದ ಸುಖಮಯನನ್ನು ಎತ್ತಿ ತಂದು ಬಾಗಿಲಲ್ಲಿ ಇರಿಸಿದ್ದಾರೆ.

ನಾಚಿಕೆಯಿಂದ ಕಂಗಾಲಾಗಿದ್ದಳು ರಮಾ. ಒಂದೊಂದು ದಿನ ಸೀರೆಯನ್ನೇ ಉರುಲಾಗಿ ಕುತ್ತಿಗೆಗೆ ಸುತ್ತಿ ಸಾಯೋಣವೇ ಎನ್ನುವಳು. ಬದುಕಿದ್ದರೆ ಮತ್ತೇನೇನು ಕೇಳಬೇಕಾಗುವುದೊ!

ಆದರೆ ಸಾಯುವ ಧೈರ್ಯ ಅವಳಲ್ಲಿರಲಿಲ್ಲ. ಇಂಥ ಅಸಾರ ಜೀವನದ ಬಗ್ಗೆಯೂ ಮೋಹವಿತ್ತು. ಸುಖಮಯನ ಮೈಕೆಸರನ್ನು ಅವನು ತನ್ನ ಮುಖಕ್ಕಷ್ಟೇ ಅಲ್ಲ ಇವಳ ಮುಖಕ್ಕೂ ಒರೆಸಿದ್ದಾನೆ. ಇನ್ನೂ ಆತ ಸುಧಾರಿಸಿಯಾನು, ಪುನಃ ಹೊಸ ಜೀವನ ಪ್ರಾರಂಭವಾದೀತು ಎಂಬ ಆಸೆಯಲ್ಲೇ ಈಕೆ ಇದ್ದಾಳೆ.

ಮೊದಮೊದಲು ಪ್ರತಿ ಶನಿವಾರ ಮಾತ್ರ ಹೀಗಾಗುತ್ತಿತ್ತು. ಈಗಲೋ ದಿನಾಲೂ. ಹೊರಗಿನವರಿಗೆ ಮನೆಯವರಿಗೆ ಯಾರಿಗೂ ಮುಖ ತೋರಿಸುವುದು ಸಾಧ್ಯವಿಲ್ಲದಾಗಿದೆ. ಮೊದಲು ಗೊತ್ತಾದದ್ದು ಅತ್ತೆಗೆ. ಅವಳು ಆಸರೆ ಕೊಟ್ಟು ಸುಖಮಯನನ್ನು ಮೇಲೆ ಕರೆದು ಕೊಂಡು ಬರುತ್ತಿದ್ದಳು. ಅವರು ಮಲಗಿರಬೇಕೆಂದಿದ್ದಳು ರಮಾ. ಅತ್ತೆ ಆಗೇನೂ ಮಾತಾಡಲಿಲ್ಲ. ಬರೇ ನೋಡುತ್ತ ನಿಂತಿದ್ದರು ಗೋಡೆಗೆ ಆತುಕೊಂಡು. ಮರುದಿನ ಮಧ್ಯಾಹ್ನ ಊಟವಾದ ಮೇಲೆ ರಮಾ ವಿಶ್ರಾಂತಿಗೆ ಹೊರಟಾಗ ಅತ್ತೆ ಬಂದರು.

"ರಮಾ."

"ಏನತ್ತೆ ?"

"ಸುಖಮಯನ ದೆಸೆಯಿಂದ ನಾವು ಓಣಿಯಲ್ಲಿ ನಿಲ್ಲುವುದೇ ಕಷ್ಟವಾಗಿದೆ. ಎಂದಿನಿಂದ ಇದು

ಸುರುವಾಯಿತು ? ಮದುವೆಯ ಮೊದಲು ಈ ಚಟ ಇರಲಿಲ್ಲ."

ರಮಾ ಏನೂ ಹೇಳಲಿಲ್ಲ. ಏನು ಹೇಳಬೇಕು? ಮದುವೆಯಿಂದಲೆ ಮಗ ಕೆಟ್ಟ ಎಂಬ ಅತ್ತೆಯರ ಆರೋಪಕ್ಕೆ ಉತ್ತರವೇ ಇಲ್ಲ. ಒಳ್ಳೇದಕ್ಕೆ ಮಾತಾಪಿತರು ಹೊಣೆಗಾರರು. ಕೆಟ್ಟದ್ದಕ್ಕೆ ಕೈ ಹಿಡಿದವಳೇ ಹೊಣೆಗಾರಳು.

ಸಂಜೆ ಸುಖಮಯ ನೆಟ್ಟಗೆ ಮನೆಗೆ ಬಂದ.

ಅವನ ಊಟ-ಉಪಚಾರವನ್ನು ರಮಾಳೇ ನೋಡಿಕೊಳ್ಳುತ್ತಿದ್ದಳು. ಸಂಜೆ ಊಟದ ನಿಮಿತ್ತ ಅವನ ಬಳಿ ಕೂತಳು.

"ಇಂದು ಲಗೂ ಬಂದಿದ್ದೀರಿ. ಎಲ್ಲಿಯಾದರೂ ಅಡ್ಡಾಡಲಿಕ್ಕೆ ಹೋಗೋಣ."

"ನನಗೆ ಮತ್ತೆ ಹೋಗಬೇಕಾಗಿದೆ."

"ಎಲ್ಲಿ ?"

"ಒಬ್ಬ ಮಿತ್ರನಲ್ಲಿ."

"ಮಿತ್ರನಲ್ಲಿಗೊ ಅಥವಾ ನರಕಕ್ಕೊ ?"

"ಹೇಗಾದರೂ ತಿಳಿದುಕೊ."

"ನಿಮ್ಮಿಂದಾಗಿ ನಾವು ಓಣಿಯ ಜನರ ಮುಂದೆ ತಲೆ ಬಗ್ಗಿಸಬೇಕಾಗಿದೆ."

"ಹೀಗೇನು ? ಸರಿ."

"ಇದು ನನ್ನ ಮಾತಲ್ಲ. ಅತ್ತೆಯವರ ಮಾತು. ಅವರೇ ಇಂದು ಮಧ್ಯಾಹ್ನ ಹೇಳಿ ಹೋಗಿದ್ದಾರೆ. ನಿಮಗೇನು ಗೊತ್ತು? ಈಗ ಮನೆಯಲ್ಲಿ ಯಾರೂ ನನ್ನೊಡನೆ ಚೆನ್ನಾಗಿ ಮಾತಾಡುವುದಿಲ್ಲ. ಅವರೇನು ತಿಳಿದುಕೊಂಡಿದ್ದಾರೊ! ನಾನೇ ನಿಮ್ಮನ್ನು ಈ ದಾರಿಗೆಳೆದೆನೆಂದು ತಿಳಿದಿದ್ದಾರೇನೊ. ಅಥವಾ ನನ್ನ ಉಪೇಕ್ಷೆಯೆ ನಿಮ್ಮನ್ನು ಈ ದಾರಿಗೆ ಒಯ್ದಿತೆಂದು ತಿಳಿದಿದ್ದಾರೊ. ಈಗಾದರೂ ನೀವು ಎಚ್ಚರಗೊಳ್ಳುವಿರಾ? ಇಷ್ಟು ದೊಡ್ಡ ಗೌರವದ ನೌಕರಿಯಲ್ಲಿದ್ದು ಈ ರೀತಿ ಮನೆಗೆ ಬರುತ್ತೀರೆಂದರೆ ಅಳು ಬರುತ್ತದೆ. ಓಣಿಯ ತರುಣರು ನಿಮ್ಮನ್ನು ಮನೆಗೆ ತಂದಾಗ ಅವರು ನಗುವುದು ನಿಮಗೆ ತಿಳಿಯದು, ನಾನು ನೋಡಿದ್ದೇನೆ. ನಾಚಿಕೆಯಿಂದ ತಲೆಯೆತ್ತಲಿಕ್ಕಾಗುವುದಿಲ್ಲ."

ಇದನ್ನು ಆತ ಕೇಳಿದನೊ ಬಿಟ್ಟನೊ, ಅಂತೂ ಶರ್ಟನ್ನು ಮೈಗೇರಿಸುತ್ತಾ, "ಚೆನ್ನಾಗಿ ಮಾತಾಡುತ್ತೀ. ಇದನ್ನೇ ಸಭೆಯಲ್ಲಿ ಹೇಳಿದ್ದರೆ ಮುಂದಾಳಾಗುತ್ತಿದ್ದೆ" ಎಂದು ನುಡಿದು ಚಪ್ಪಲಿ ಮೆಟ್ಟಿಕೊಂಡು ಹೊರಟುಬಿಟ್ಟ.

ಹಾಸಿಗೆಯಲ್ಲಿ ರಮಾ ಅತ್ತದ್ದೇ ಅತ್ತದ್ದು.

ರಮಾ ಆಗ ಮಲಗಿದವಳು ಎಚ್ಚರಗೊಂಡದ್ದು ಹೊರಗೆ ಗದ್ದಲ ಕೇಳಿಯೆ. ಕೆಳಗಿಳಿಯತೊಡಗಿದವಳು ನಡುವೆಯೆ ತಡೆದಳು. ಅತ್ತೆಯ ಧ್ವನಿ: "ನನ್ನ ಹಣೆಬರಹವೇ ! ನನ್ನ ಮುತ್ತಿನಂಥ ಮಗನ ಗತಿಯನ್ನು ಯಾರಪ್ಪಾ ಹೀಗೆ ಮಾಡಿದರು ?"

ಆಭಾ ಏನೂ ಮಾತಾಡದೆ ಒಂದು ಮೂಲೆಯಲ್ಲಿ ನಿಂತಿದ್ದಾಳೆ. ಅವಳ ಹತ್ತಿರ ಅವಳ ಮಕ್ಕಳು ನಿಂತಿವೆ.

ಎಂದಿನಂತೆ ಕೆಸರಿನಲ್ಲಿ ಉರುಳಾಡಿ ಬಂದ ಸುಖಮಯನನ್ನು ಮೈದುನ ಎಬ್ಬಿಸುತ್ತಿದ್ದಾನೆ.

ರಮಾ ಕೆಲ ಕ್ಷಣ ಅರಿವಿಲ್ಲದವಳಾಗಿದ್ದಳು. ಒಂದು ಕ್ಷಣ ಚಪ್ಪರದ ಮೇಲಿಂದೆ ಕೆಳಗೆ ಬಿದ್ದುಬಿಡಬೇಕೇ ಎನಿಸಿತು. ಮತ್ತೊಮ್ಮೆ ಬಚ್ಚಲಮನೆಯಲ್ಲಿ ಪೈಟಿಗೆ ಸೀರೆಕಟ್ಟಿ ಪ್ರಾಣ ಬಿಡಬೇಕೆಂದುಕೊಂಡಳು. ಆದರೆ ಆಕೆ ಎರಡನ್ನೂ ಮಾಡದೇ ನೆಟ್ಟಗೆ ಕೆಳಗಿಳಿದು ಬಂದು ಸುಖಮಯನ ಕೈ ಮೈದುನನಿಂದ ಬಿಡಿಸಿಕೊಂಡು ಅದಾವುದೊ ಆವೇಶದಲ್ಲಿ ಗಂಡನನ್ನು ಎಳೆಯುತ್ತ ಮೇಲೆ ನಡೆದಳು. ಆತ ಸುಖಮಯನಲ್ಲ, ಆತ ಅವಳ ಲಜ್ಜೆ, ಅವಮಾನ, ಎಂಬಂತೆ.

ಆತ ಮೈತಿಳಿದ ಮೇಲೆ ಅವನ ಪಾದಗಳನ್ನು ಹಿಡಿದು, "ನೀವು ಈ ವಿಷವನ್ನು ಬಿಡಲಾರಿರೆಂದು ನಿರ್ಧಾರವಾಯಿತು. ಕೋಣೆಯಲ್ಲಿ ಬಾಗಿಲು ಮುಚ್ಚಿಯಾದರೂ ಕುಡಿಯಿರಿ. ನಾನೇ ಕುಡಿಸುವೆ. ಈ ರೀತಿ ಎಲ್ಲರೆದುರು ಅವಮರ್ಯಾದೆಯಾಗುವುದಾದರೂ ತಪ್ಪೀತು."

ಎಲ್ಲ ಕೇಳಿಕೊಂಡು ಸುಖಮಯ ಸಾವಕಾಶವಾಗಿ ಹೀಗೆಂದ: "ಆದರೆ ಮನೆಯಲ್ಲಿ ಒಬ್ಬನೇ

ಕೂತು ಕುಡಿಯುವುದೇನು ಸುಖ?"

ಮುಂದೆ ರಮಾ ಮಾತು ಬೆಳೆಸಲಿಲ್ಲ. ಆದರೂ ಸುಖಮಯನು ಹೆಂಡ ಬಿಡಲಾರ, ಕನಿಷ್ಠ ಪಕ್ಷ ತಾನಾದರೂ ಹಾಗೆ ಮಾಡಿಸಲು ಅಸಮರ್ಥಳು ಎಂದು ಅರಿತಳು ರಮಾ. ಇನ್ನು ಉಳಿದ ಜೀವನ ಹೀಗೆ ಉಚ್ಛೃಂಖಲವಾಗಿಯೆ ಸಾಗುವುದು.

ಮರುದಿನ ಸುಖಮಯ ಆಫೀಸಿಗೆ ಹೋದ ಮೇಲೆ ಆಭಾ ರಮಾಗೆ ಅಂದಳು: "ನೀವೂ ಬಲು ಗಟ್ಟಿ, ಅದು ಹೇಗೆ ಅವರನ್ನು ಎಳೆದೊಯ್ದಿರಿ? ನಾನಂತೂ ಸತ್ತರೂ ಹೆಂಡ ಕುಡಿದವರ ಹತ್ತಿರ ಹೋಗಲಾರೆ. ಸೆರೆಯನ್ನು ಕಂಡರೆ ನನಗೆ ಆಗುವುದಿಲ್ಲ."

ರಮಾ ಇಂಥ ಪತಿಯನ್ನು ಸಮೀಪಿಸಬಾರದಿತ್ತೆಂದೂ ಆಭಾ ಸೂಚಿಸಿದಂತಾಯಿತು. ಆಭಾ ಮುಂದುವರಿದಳು: "ಹುಡುಗರಂತೂ ತುಂಬ ಹೆದರಿದ್ದವು . . . . ನಿಮ್ಮ ಆಭರಣಗಳನ್ನು ಕಾಪಾಡಿಕೊಳ್ಳಿ, ಜೋಕೆಯಿಂದಿರಿ."

ಊಟದ ಹೊತ್ತಿಗೆ ಕಣ್ಣೀರು. ಮುಖ ಕೆಳಗೆ ಮಾಡಿಕೊಂಡು ಕೂತಿದ್ದಳು. ಕಣ್ಣೀರು ತಟ್ಟೆಯಲ್ಲಿ ಬೀಳುತ್ತಿತ್ತು. ಹಾಗೇ ಎದ್ದು ಮುಖ ತೊಳಕೊಂಡು ಗಡಗಡನೆ ಮೇಲೆ ಹೋಗಿ ಎಲ್ಲ ಕಿಡಿಕಿ ಬಾಗಿಲುಗಳನ್ನು ಮುಚ್ಚಿಕೊಂಡು ಅತ್ತಳು. ಅತ್ತರೇನಾಗಬೇಕು? ಈಗ ಸುಖಮಯ ಮನುಷ್ಯನಾಗಿ ಉಳಿದೇ ಇಲ್ಲ. ಸೆರೆಯ ನೊರೆಯಲ್ಲಿ ಇವನ ಮಾನವತೆಯೆಲ್ಲವೂ ನಶಿಸಿ ಹೋಗಿದೆ.

ಅತ್ತು ಮುಗಿಸಿದ ಮೇಲೆ ಯೋಚನೆಗೆ ತೊಡಗಿದಳು. ಏನು ಮಾಡಬೇಕು? ಸುಖಮಯನನ್ನು ಹೇಗೆ ಉಳಿಸಬೇಕು? ಅವನ ಮಿತ್ರರಿಗೆ ಪತ್ರಗಳನ್ನು ಬರೆಯಲೆ? ಅಮಲಿನಲ್ಲಿ ಅವರೆಲ್ಲರ ಹೆಸರುಗಳನ್ನು ಸುಖಮಯನು ಉಚ್ಚರಿಸುವುದನ್ನಾಕೆ ಮರೆತಿಲ್ಲ. ಅವರಲ್ಲಿ ಒಬ್ಬಿಬ್ಬರನ್ನು ಈಕೆ ಚೆನ್ನಾಗಿ ಗುರುತಿಸಬಲ್ಲಳು. ಅವರು ಹಿಂದೆ ಮನೆಗೂ ಬರುತ್ತಿದ್ದರು.

ಆದರೆ ಸ್ವಲ್ಪ ಹೊತ್ತಿನಲ್ಲೇ ಈ ಪ್ರಯತ್ನದಲ್ಲಿ ಏನೂ ಆಸೆ ಇಲ್ಲೆಂದು ಅರಿವು ಬಂತು. ಮುಗಿಸಲಿಕ್ಕೆ ಹೊರಟವರು ಉಳಿಸಬಲ್ಲರೆ?

ಆ ರಾತ್ರಿ ರಮಾ ಮತ್ತೆ ಆ ಪ್ರಸ್ತಾಪವೆತ್ತಿದಳು. ಆತ ಎಂಟೂವರೆಗೇ ಮರಳಿದ್ದ. ಇಂದು ಬಹಳ ಕುಡಿದಿದ್ದಿಲ್ಲ.

ಮೇಲ್ಮಾಳಿಗೆಯಲ್ಲಿ ಕೂತು ಆತ ಗುಣಗುಣಿಸುತ್ತಿದ್ದ. ಈಕೆ ಅವನ ಹತ್ತಿರ ಬಂದು ಕೂತಳು.

"ಒಂದು ಮಾತು ಹೇಳಬೇಕಾಗಿದೆ."

"ಒಂದೇ ಮಾತು? ಹೀಗೇಕೆ ಮಾಡುತ್ತೀ ಚಂದ್ರಮುಖೀ? ನಾನೇನು ಮುದುಕನಾದೆನೆ ಈಗ?"

ಸುಖಮಯ ಮೊದಲಿನಿಂದಲೂ ರಸಿಕ ಸ್ವಭಾವದವನು. ಹಿಂದೆ ಈ ವ್ಯಸನ ಅಂಟುವ ಮೊದಲು ಇಡೀ ಮನೆಯನ್ನು ನಗಿಸುತ್ತಲಿದ್ದ. ಈಗಲೂ ಆ ರಸವೃತ್ತಿ ಇದೆ. ಏನೋ ತುಸು ಅಪಮಿಶ್ರಣವಾಗಿದೆ ಅಷ್ಟೇ.

"ಏನು ಕೊಟ್ಟರೆ ನೀವು ಸೆರೆ ಬಿಡುತ್ತೀರಿ?"

"ಮೊಗಲ ಬಾದಶಾಹಿಯನ್ನೇ ಕೊಟ್ಟರೂ ಬಿಡಲಾರೆ."

"ನಗೆಯಾಡಬೇಡಿರಿ. ನಿಜ ಹೇಳಿರಿ."

ಸುಖಮಯ ಅವಳನ್ನೇ ದಿಟ್ಟಿಸಿ ಹೇಳಿದ: "ಹಿಂದೆ ನನಗೆ ಹೊಟ್ಟೆನೋವಿತ್ತು ಗೊತ್ತಿದೆಯೆ? ಅದಕ್ಕಾಗಿ ಆಫೀಸಿಗೂ ಆಗಾಗ ಎರಡೆರಡು ದಿನ ರಜೆ ಬರೆಯುತ್ತಿದ್ದೆ!"

ಊಟ ಮಾಡಿದರೆ ಸಂಕಟವಾಗುತ್ತಿತ್ತು. ಆಗ ಆತ ತಲೆದಿಂಬನ್ನೇ ಹೊಟ್ಟೆಗೆ ಒತ್ತಿಹಿಡಿದು ಹೊರಳಾಡುತ್ತಿದ್ದ. ಅದು ಅಪೆಂಡಿಸಾಯಿಟಿಸ್ ಎಂದು ಕೆಲವರಂದರು. ಕೆಲವರು ಗ್ಯಾಸ್ಟ್ರಿಕ್ ಅಲ್ಸರ್ ಎಂದರು. ಡಾಕ್ಟರರಿಗೆ ತೋರಿಸಬೇಕೆಂದರೆ ಸುಖಮಯ ಒಪ್ಪಲಿಲ್ಲ. ಮಿತ್ರರು ಆಪರೇಶನ್ನೇ ಉಪಾಯ ಎಂದಾಗಂತೂ ಈತ ಒಪ್ಪಲೇ ಇಲ್ಲ.

"ಈಗ ಆ ನೋವೆ ಇಲ್ಲವಾಗಿದೆ ನೋಡು. ಯಾವುದರಿಂದ ಹೀಗಾಯಿತು ಗೊತ್ತೆ? ಈ ಔಷಧದಿಂದ."

ಸೆರೆ ಕುಡಿಯಲು ಪ್ರಾರಂಭಿಸಿದ ಮೇಲೆ ಆ ನೋವು ಎದ್ದಿತ್ತೊ ಇಲ್ಲವೊ ರಮಾಗೆ ಚೆನ್ನಾಗಿ ನೆನಪಿರಲಿಲ್ಲ. ಎದ್ದಿದ್ದರೂ ಮಂದವಿರಬೇಕು. ಆಫೀಸಿಗೆ ರಜೆ ಹಾಕಿರಲಿಲ್ಲ.

"ಆಗಲಿ, ನೀವು ಮನೆಯಲ್ಲೆ ಕುಡಿಯಿರಿ. ನನ್ನ ಎದುರಿನಲ್ಲಿ! ನೀವು ಕೆಸರಿನಲ್ಲಿ ಉರುಳಾಡಿ ಬರುವುದು ಲಜ್ಜಾಸ್ಪದ. ನಿಮ್ಮ ಕೊಳೆ ನನಗೂ ಹತ್ತಿದೆ. ಮೈಗೂ ಮನಸ್ಸಿಗೂ!"

ಆತ ಕೊಂಚ ವಿಚಾರ ಮಾಡಿ ನುಡಿದ: "ಆಗಲಿ, ಅಂಗಡಿಯಲ್ಲಂತೂ ಸಾಧ್ಯವಿಲ್ಲ. ಮಿತ್ರರ ಪೀಡೆಯೂ ಹೆಚ್ಚುತ್ತಿದೆ. ಎಲ್ಲಾರ ಭಾರ ನನ್ನ ಮೇಲೇ."

ರಮಾ ಆನಂದಿತಳಾದಳು. ದುರ್ವ್ಯಸನ ಪೂರಾ ಹೋಗದಿದ್ದರೂ ಅರ್ಧವಾದರೂ ಹೋಯಿತಲ್ಲ ಎಂದು ಸಂತಸಗೊಂಡಳು.

"ಹಾಗಾದರೆ ಹಾಗೇ ಮಾಡಿರಿ. ಮನೆಯಲ್ಲೇ ನಾನು ಕುಡಿಸುವೆ. ಕುಡಿದು ಮಲಗಿರಿ. ಹೊರಗೂ ಮನೆಯಲ್ಲಿಯೂ ಯಾರಿಗೂ ತಿಳಿಯಲಿಕ್ಕಿಲ್ಲ," ಎಂದಳು ರಮಾ.

"ಬರಿ ಕುಡಿಸಿದರೆ ಆಗುವುದಿಲ್ಲ. ನೀನೂ ಜೊತೆಯಲ್ಲಿ ಸ್ವಲ್ಪ ಕುಡಿಯಬೇಕು. ಅದರ ಹೊರತು ಅಮಲು ಏರುವುದಿಲ್ಲ."

ಹೆಂಡತಿಗೆ ಹೆಂಡ ಕುಡಿ ಎಂದು ಯಾರಾದರೂ ಹೇಳಿಯಾರೆ? ಚಕಿತಳಾದಳು ರಮಾ.

"ಹೆದರುವಂಥಾದ್ದೇನಿದೆ ಅದರಲ್ಲಿ? ಒಂದೆರಡು ದಿವಸದಲ್ಲಿ ನೋಡು. ತಾರುಣ್ಯ ಮರಳಿ ಬಂದಂತಾದೀತು."

ಆವೇಶದಿಂದ ಆತನಿಗೆ ರಮಾಳ ದೇಹವು ಪುಷ್ಪವಾಗಿ ಕಾಣಿಸತೊಡಗಿತು.

ರಾತ್ರಿ ಇಡೀ ವಿಚಾರ ಮಾಡಿದಳು. ಕೊನೆಗೆ ಇವನಿಗೊಬ್ಬ ಸಂಗಾತಿ ಬೇಕು, ಜೊತೆ ಬೇಕು ಎಂದುಕೊಂಡಳು. ಆದರೂ ಆ ಜೊತೆ ರಮಾ ಹೇಗಾಗಬೇಕು? ಅತ್ತಿತ್ತ ಹೊಯ್ದಾಡಿದಳು. ಕಣ್ಣೀರಿನಲ್ಲಿ ತಲೆದಿಂಬನ್ನೇ ತೋಯಿಸಿದಳು. ಆದರೂ ಪರಿಹಾರ ಹೊಳೆಯಲಿಲ್ಲ.

ಮುಂದೆರಡು ದಿನ ಸುಖಮಯನು ಹೊತ್ತಿಗೆ ಸರಿಯಾಗಿ ಮನೆಗೆ ಬಂದನು. ಕುಡಿದೇ ಬರುತ್ತಿದ್ದನು.

ಇಷ್ಟಾದರೂ ಆಗಲಿ. ಜನರಿಗೆ ಅಮಲೇರಿದ ಮೇಲಿನ ಒದ್ದಾಟದ ಚಿತ್ರವಾದರೂ ನೋಡಲಿಕ್ಕೆ ಸಿಗಲಿಕ್ಕಿಲ್ಲ.

ಆದರೆ ಮೂರನೇ ದಿನವೇ ಬಾಗಿಲಲ್ಲಿ ನಡುರಾತ್ರಿಯಲ್ಲಿ ಟ್ಯಾಕ್ಸಿ ನಿಂತಿತು. ಕೆಸರಿನಲ್ಲಿ ಮುಳುಗಿದ ಒಂದು ಮೈ ಹೊರಬಿತ್ತು. ಆ ಮೇಲೆ ಹಾಡು.

ಬಾಗಿಲು ತೆರೆಯಿತು. ಮೈದುನ ಹೋಗಿ ಸುಖಮಯನನ್ನು ಹಿಡಿದು ತಂದ. ಈಗ ಆತ ಹಿಂದಿಯಲ್ಲಲ್ಲದೆ ಬಂಗಾಲಿಯಲ್ಲಿ ಹಾಡತೊಡಗಿದ್ದ. ಅವನ ಎದೆಯ ಮೇಲೆ ಕೆಂಪು ಕಾಣಿಸಿತು. ರಕ್ತವಿರಬೇಕೇ ಎಂದಳು. ಆದರೆ ಚೆನ್ನಾಗಿ ನೋಡಿದಾಗ ಅದು ತಾಂಬೂಲವಾಗಿತ್ತು. ಅವನನ್ನು ಮೈದುನ ತಂದು ಪಾವಟಿಗೆಯ ಮೇಲಿರಿಸಿ, "ಇವನ ವ್ಯವಸ್ಥೆ ಮಾಡಿರಿ" ಎಂದು ರಮಾಗೆ ಹೇಳಿದನು. "ಮಾನಾಪಮಾನವೆಂದರೆ ನಿಮಗಂತೂ ಕಃಪದಾರ್ಥವೆನಿಸಿದೆ. ಆದರೆ ನಾನು ಸುತ್ತಮುತ್ತಲಿನವರೆದುರು ತಲೆ ಎತ್ತದಂತಾಗಿದೆ. ದಿನಂಪ್ರತಿ ಇದೇ ರೀತಿಯಾದರೆ ಸಹಿಸುವುದು ಕಷ್ಟ. ಇಲ್ಲವಾದರೆ ನೀವೇ ಬೇರೆ ಕಡೆ ಹೊರಟು ಹೋಗಿರಿ. ಒಂದೆರಡು ದಿನಗಳಲ್ಲಿ ಏನೆಂಬುದನ್ನು ನಿರ್ಧರಿಸಿ ತಿಳಿಸಿರಿ."

ನೀರು ತುಂಬಿದ ಕಂಗಳಿಂದ ರಮಾ ಒಮ್ಮೆ ಮೈದುನನನ್ನು ನೋಡಿದಳು. ಆಮೇಲೆ ಕೆಳಗೆ ನಿಂತ ಅತ್ತೆ ನೆಗಣೆಯರನ್ನು ನೋಡಿದಳು. ಅವರಾರಿಗೂ ಹೆಚ್ಚೇನೂ ಹೇಳುವುದಿರಲಿಲ್ಲ.

ತುಸು ತಡದು ಆಕೆ ಮೇಲೇರಿ ಕೋಣೆಯ ಬಾಗಿಲನ್ನು ಒಳಗಿನಿಂದ ಹಾಕಿಕೊಂಡಳು. ಸುಖಮಯು ಹೊರಗೇ ಬಿದ್ದಿದ್ದ.

ಕೆಳಗಿನಿಂದ, "ಈ ರೀತಿ ಗಂಡನನ್ನು ಇಲ್ಲಿ ಒಗೆದು ಸಿಟ್ಟಾಗಿ ಹೋಗುವುದು ಯಾವ ಗೃಹಿಣಿಗೂ ಶೋಭಿಸದು. ಸಿಟ್ಟು ಗಂಡನ ಮೇಲಲ್ಲ.

ಮೈದುನನ ಮೇಲೆ ಇರಬೇಕು," ಎಂಬ ಮಾತುಗಳು ಕೇಳಿಸಿದವು.

ಉಷಃಕಾಲದ ಹೊತ್ತಿಗೆ ರಮಾ ಬಾಗಿಲು ತೆರೆದಳು. ಸುಖಮಯ ಇನ್ನೂ ಅಲ್ಲಿಯೇ ಬಿದ್ದಿದ್ದ. ಹತ್ತಿರ ಬಂದು ಹಣೆಯ ಮೇಲಿನ ಕೂದಲನ್ನು ಮಮತೆಯಿಂದ ಹಿಂದೆ ಸರಿಸಿದಳು. ಮಾತಾಡಿಸಲು ಬಾಯಿ ಬಿಚ್ಚುತ್ತಿದ್ದಿಲ್ಲ. ಕೈಸನ್ನೆಯಿಂದ, ಮೇಲೆ ನಡೆಯಲು ಹೇಳಿದಳು.

ಆಶ್ಚರ್ಯವೆಂದರೆ ಆತ ಎದ್ದ. ಅವಳನ್ನು ಮೌನವಾಗಿ ಹಿಂಬಾಲಿಸಿದ. ಬಹುಶಃ ಈಗ ಅಮಲು ಇಳಿದಿರಬೇಕು.

ಈ ಹಿಂದೆ ಹೀಗಾದರೆ ಅಳುವುದು ಕರೆಯುವುದು ನಡೆಯುತ್ತಿತ್ತು. ಆದರೆ ಇಂದು ಅಂಥದೇನೂ ಆಗಲಿಲ್ಲ.

ಮರುದಿನ ಸುಖಮಯ ಕೆಲಸಕ್ಕೆ ಹೋದ ಮೇಲೆ ರಮಾ ಹಿಂಬಾಗಿಲಿನಿಂದ ಹೊರಬಿದ್ದಳು. ಮೂರು ನಾಲ್ಕು ಮನೆ ದಾಟಿ ಬಂದು ಎರಡಂತಸ್ತಿನ ಮನೆಯೆದುರು ನಿಂತಳು. ಅಲ್ಲಿಯೇ ಒಬ್ಬಾಕೆ ಬಟ್ಟೆ ಒಗೆಯುತ್ತಿದ್ದಳು. ಅವಳನ್ನು "ಚಂಪಾ, ಅಮಿಯಾ ಭಾವನವರು ಇದ್ದಾರೆಯೆ? ಎಂದು ಕೇಳಿದಳು.

"ಇದ್ದಾರೆ. ಓದುವ ಕೋಣೆಯಲ್ಲಿ ನೋಡಿರಿ."

"ಒಂದು ಮಹತ್ವದ ಮಾತನ್ನು ಹೇಳುವುದಿದೆ. ಹೇಳಿ ಬರುವೆ."

"ನನಗೆ ಗೊತ್ತು."

ರಮಾ ಒಂದೆರಡು ಹೆಜ್ಜೆ ನಡೆದು ಬೆಚ್ಚಿಬಿದ್ದು ತಡೆದು ಹೊರಳಿದಳು: "ನೀನೇನು ತಿಳಿದುಕೊಂಡೆ?" ಎಂದು ಕೇಳಿದಳು.

"ಪುಸ್ತಕ. ಅವರು ಲೈಬ್ರೇರಿ ಸೆಕ್ರೆಟರಿ. ಹೊಸ ಕಾದಂಬರಿ ಕೇಳಲಿಕ್ಕೆ ಬಂದಿದ್ದೀರಿ" ಎಂದಳು ಚಂಪಾ.

ರಮಾಗೆ ಹೋದ ಜೀವ ಬಂದಂತಾಯಿತು.

ಅಮಿಯ ಪುಸ್ತಕ ಓದುತ್ತಿದ್ದ. ಕೋಣೆಯೊಳಗೆ ಹೋಗಿ ರಮಾ ಅಂದಳು : "ಭಾವಯ್ಯ!"

"ಏನು ಅತ್ತಿಗೆ?"

"ನಿಮ್ಮಿಂದ ಒಂದು ಕೆಲಸ ಆಗಬೇಕು. ಯಾರಿಗೂ ಗೊತ್ತಾಗಬಾರದು" ನೋಟನ್ನು ಹೊರತೆಗೆದು ಅಮಿಯನ ಕೈಗಿಡುತ್ತ ರಮಾ, "ಒಂದು ಬಾಟಲಿ ಒಳ್ಳೇ ಸೆರೆಯ ಬೆಲೆ ಏನು ?"

"ಏನು ?" ಆಶ್ಚರ್ಯಗೊಂಡನಾತ.

"ನಿಮಗೆಲ್ಲವೂ ಗೊತ್ತಲ್ಲ. ಮರ್ಯಾದೆ ರಸ್ತೆಯಲ್ಲಿ ಹೋಗುವುದು ಬೇಡವೆಂದು ಮನೆಯಲ್ಲಿಯೇ ಕುಡಿಸಬೇಕೆಂದಿದ್ದೇನೆ"

"ಸುಖಮಯ ಬಾಬು ಒಪ್ಪಿಕೊಂಡಿರುವರೆ?"

"ಹೇಗೊ ಒಪ್ಪಿಸಿದ್ದೇನೆ. ಎಲ್ಲಾ ಮಾಡಿ ಆಯಿತು. ಇನ್ನು ಇದೊಂದನ್ನು ಮಾಡಿ ನೋಡುವೆ."

ಸಂಜೆ ಅಮಿಯ ಬಾಟಲಿ ತಂದುಕೊಟ್ಟ. ಆಗಾಗ ಅಮಿಯ ಪುಸ್ತಕ ತಂದುಕೊಡುತ್ತಿದ್ದನಾದ್ದರಿಂದ ಆತನ ಬರವನ್ನು ಯಾರೂ ಶಂಕಿಸಲಿಲ್ಲ.

ಸುಖಮಯ ಬರಲು ಇನ್ನೂ ತಡವಿತ್ತು. ಎಲ್ಲ ಬಾಗಿಲುಗಳನ್ನು ಮುಚ್ಚಿ ರಮಾ ಕಾಗದದಲ್ಲಿ ಮುಚ್ಚಿದ್ದ ಬಾಟಲಿಯನ್ನು ಹೊರತೆಗೆದು ಗ್ಲಾಸಿನಲ್ಲಿ ಸ್ವಲ್ಪ ಸುರುವಿದಳು. ಕುಡಿಯುವ ಕ್ರಮ ಪ್ರಮಾಣಗಳನ್ನು ಅರಿಯಳು. ಆದರೂ ವಿಷಕ್ಕೆಲ್ಲಿಯ ಪ್ರಮಾಣ ಎಂದುಕೊಂಡಳು. ಒಂದು ಗುಟುಕು ಗಂಟಲನ್ನು ಸುಡುತ್ತಾ ಮೈನಡುಗಿಸುತ್ತ ಒಳಹೊಕ್ಕಿತು. ಅದು ಇಳಿದಂತೆ ಹೊಟ್ಟೆಯೂ ಸುಟ್ಟಂತೆನಿಸಿತು.

ಮತ್ತೊಂದು ಗುಟುಕು. ಈಗ ಅಷ್ಟು ವೇದನೆ ಇಲ್ಲ. ಆದರೂ ಕಣ್ಮುಂದಿನ ವಸ್ತುಗಳು ಕುಣಿಯುತ್ತಿವೆ. ಹಾಗೇ ಮೈ ಸಾವರಿಸಿಕೊಂಡು ಬಾಟಲಿಯನ್ನು ಕಪಾಟಿನ ಒಳಗಿಟ್ಟಳು. ಆಮೇಲೇನಾಯಿತೊ ಆಕೆಗೆ ತಿಳಿಯಲೇ ಇಲ್ಲ. ಬೆಳಿಗ್ಗೆ ಎಚ್ಚರಾದಾಗ ತಲೆ ಸಿಡಿಯುತ್ತಿತ್ತು.

ಐದು ರಾತ್ರಿಗಳು ಹೀಗೆ ಕಳೆದವು. ಸುಖಮಯನೂ ಸುಮ್ಮನೆ ಇರುತ್ತಿದ್ದ. ಒಂದು ಬಾಟಲಿ ಮುಗಿದ ಮೇಲೆ ಅಮಿಯ ಎರಡನೆಯದನ್ನು ತಂದುಕೊಟ್ಟ. ಯಾರಿಗೂ ತಿಳಿಯದಿರ

ಲೆಂದು ಎಲೆತಿಂದು ಬಾಯ ವಾಸನೆ ಅಳಿಸಿಕೊಳ್ಳ ಲೆತ್ನಿಸುತ್ತಿದ್ದಳು.

ಈಗ ರಮಾ ರಾತ್ರಿಯ ಪ್ರತೀಕ್ಷೆ ಮಾಡುತ್ತಾಳೆ. ಅನ್ನಕ್ಕೂ ಒಂದು ವಿಶೇಷ ರುಚಿ ಬರುತ್ತಿದೆ. ಇನ್ನು ತಾನು ಜೊತೆಯಾಗಲು ಯೋಗ್ಯಳಾಗಿರುವೆನೆಂದು ಗಂಡನಿಗೆ ತಿಳಿಸಬೇಕೆಂದುಕೊಂಡು ಮಾಂಸದ ಅಡಿಗೆಯನ್ನೂ ಎರಡು ತಟ್ಟೆಗಳಲ್ಲಿ ಸಿದ್ಧಪಡಿಸಿದಳು. ಸುರುಮಾಡುವ ಮೊದಲು ತನ್ನ ಕೊರಳು ಮುಟ್ಟಿ ಹೊರಗೆಲ್ಲೂ ಸೆರೆ ಕುಡಿಯುವುದಿಲ್ಲೆಂದು ಆಣೆಮಾಡಿ ಸುಖಮಯನು ಪ್ರಾರಂಭಿಸಬೇಕೆಂದು ಹೇಳಲಿದ್ದಳು.

ಎದ್ದು ನೋಡಿದಳು. ಐದೂವರೆ ಗಂಟೆಯಾಗಿತ್ತು. ಇನ್ನೂ ತುಂಬ ಸಮಯವಿದೆ. ಕೂತು ಏನು ಮಾಡುವುದು? ಒಂದೆರಡು ಗುಟುಕು.

ಮತ್ತೊಮ್ಮೆ. ಅಸ್ತವ್ಯಸ್ತ ಬಟ್ಟೆ. ಹಾಗೇ ಎದ್ದು ದುರ್ಗೆಯ ಚಿತ್ರದೆದುರು ಭಕ್ತಿಭಾವದಿಂದ, "ನನ್ನ ಅನಿವಾರ್ಯತೆಯನ್ನರಿತು ನನ್ನನ್ನು ಕ್ಷಮಿಸು ತಾಯಿ" ಎಂದು ಬೇಡಿಕೊಂಡಳು. ಅದೇ ಹೊತ್ತಿಗೆ ಪಾವಟಿಗೆಗಳಲ್ಲಿ ಕಾಲಿನ ಸಪ್ಪಳವಾಯಿತು. ಬೇಗನೆ ಎರಡು ಗ್ಲಾಸುಗಳನ್ನು ಸಿದ್ಧಪಡಿಸಿದಳು. ಸೆರಗಿನಿಂದ ಬಾಯಿ ಒರೆಸಿಕೊಂಡು ಬಾಗಿಲು ತೆರೆದಳು.

ಆತ ಬೆವತಿದ್ದ. ಭಯಗ್ರಸ್ತನಾದಂತಿದ್ದ. ಈಕೆ ಗಾಬರಿಯಾದಳು.

"ಘಾತವಾಗಿಹೋಯಿತು. ಲಾಲ ಮೋಹನ ಬಾಬುಗಳು ತೀರಿಕೊಂಡರು" ಎಂದನಾತ.

"ಲಾಲಮೋಹನಬಾಬು ಯಾರು?" ತೊದಲುತ್ತಲೇ ಕೇಳಿದಳೀಕೆ.

"ನನ್ನ ಕಛೇರಿಯವರು, ತಂಡದವರು ಕೂಡ. ಇಂದೇ ಮಧ್ಯಾಹ್ನ ಹಾಸ್ಪಿಟಲಿನಲ್ಲಿ ಸತ್ತರು. ಸಿರೋಸಿಸ್ ಆಫ್ ದಿ ಲಿವರ್ ಅಂತೆ. ಇದು ಸೆರೆಯ ಪ್ರಭಾವವಂತೆ. ಗಲ್ಲಗಲ್ಲ ಬಡಿದುಕೊಂಡು ಹೇಳುತ್ತೇನೆ: ಇಂದಿನಿಂದ ನಾನು ಸೆರೆ ಕುಡಿಯಲಾರೆ. ಇನ್ನೊಮ್ಮೆ ಅದರ ಹತ್ತಿರ ಹೋಗಲಾರೆ. ಹೀಗೆ ಈ ಹಿಂದೂ ಎಷ್ಟೋ ಸಲ ಹೇಳಿದ್ದೆ. ಈಗಿನದು ನನ್ನ ಕೊನೆಯ ಪ್ರತಿಜ್ಞೆ."

ರಮೆಯ ಕೊರಳನ್ನಾತ ಮುಟ್ಟಲು ಮುಂದಾದಾಗ ಆಕೆ ಕೊಸರಿಕೊಂಡು ಹಾಸಿಗೆಯ ಮೇಲೆ ಬಿದ್ದು ಅಳಲಾರಂಭಿಸಿದಳು. ಯಾರಾದರೂ ಕೇಳಿಯಾರೆಂಬ ಭಯ ಈಗ ಉಳಿದಿರಲಿಲ್ಲ. ಸುಖಮಯ ನೋಡಿದ. ಒಂದು ಗ್ಲಾಸ್ ಬರಿದಾಗಿತ್ತು. ಇನ್ನೊಂದರಲ್ಲಿ ಆ ವಿಷ ಕಾದಿತ್ತು. ಬಲು ಜೋಕೆಯಿಂದಾತ ಕಾಟನ್ನು ಹಿಡಿದು ನಿಂತ. ಸೆರೆಯ ಒಂದು ಹನಿಯೂ ಗಂಟಲಿಗಿಳಿಯದೇ ಅವನ ಮೈ ಈಗ ನಡುಗುತ್ತಿತ್ತು. ಕಣ್ಣಿನ ಮುಂದೆ ನಡೆದುದರ ಅರ್ಥವೇ ಆಗುತ್ತಿಲ್ಲ ಅವನಿಗೆ.

ಅವಳತ್ತ ಸಾಗಿದ. ಮತ್ತೆ ತಡೆದ. ಇಂದು ಇಂಥ ಒಳ್ಳೇ ಸುದ್ದಿಯನ್ನು ಕೇಳಿಯೂ ರಮಾ ಏಕೆ ಅಳುತ್ತಿದ್ದಾಳೆ ಎಂದು ಹೆಂಡ ಕುಡಿಯದ ಸುಖಮಯ ಯೋಚನೆಗೊಳಗಾದ. *

ಭಾರತದ ಸ್ತ್ರೀಯರೆಲ್ಲರೂ ಆಭೂಷಣಪ್ರಿಯರು. ನಮ್ಮ ದೇಶದಲ್ಲಿ ಪ್ರತಿಯೊಂದು ಮದುವೆಗೂ ಸರಾಸರಿ ರೂ. ೧೫೦ ಬೆಲೆ ಬಾಳುವ ಚಿನ್ನ ಆಭರಣಕ್ಕಾಗಿ ಉಪಯೋಗಿಸಲ್ಪಡುತ್ತದೆ. ಒಂದು ವರ್ಷದಲ್ಲಿ ನಡೆಯುವ ಸುಮಾರು ೨೦ ಲಕ್ಷ ಮದುವೆಯ ಸಮಾರಂಭಗಳಿಗೆ ರೂ. ೨೦ ಕೋಟಿ ಬೆಲೆ ಬಾಳುವ ಚಿನ್ನ ವಧುವಿನ ಆಭರಣಕ್ಕಾಗಿ ವ್ಯಯವಾಗುತ್ತದೆ. ಮದುವೆಗೆ ಮುಂಚಿತವಾಗಿ [illegible] ಕೋಟಿ ಹುಡುಗಿಯರಿಗೆ ಸುಮಾರು ೧೨೫ ಕೋಟಿ ರೂಪಾಯಿ ಆಭರಣಕ್ಕಾಗಿ ವಿನಿಯೋಗವಾಗುತ್ತದೆ. ಒಟ್ಟಿನಲ್ಲಿ ಪ್ರತಿವರ್ಷ ೬೮೦ ಕೋಟಿ ರೂಪಾಯಿಯಷ್ಟು ಆಭರಣದ ವ್ಯವಹಾರ ನಡೆಯುತ್ತದೆ. ೨೦ ಲಕ್ಷದಷ್ಟು ಅಕ್ಕಸಾಲಿಗರು ಆಭರಣಗಳನ್ನು ತಯಾರಿಸುವುದರಲ್ಲಿ ನಿರತರಾಗಿದ್ದಾರೆ.

—ನಾಗೇಶರಾವ್, ಉಡುಪಿ

ಯವನಸಿಯನ್ನು ವರಿಸಿದ ಬ್ರಾಹ್ಮಣ ಕವಿ

ಪಾ ವೆಂ ಆಚಾರ್ಯ

ಸ್ಥಿತಿಂ ನೋ ರೇ ದಧ್ಯಾಃ ಕ್ಷಣಮಪಿ ಮದಾಂಧೇಕ್ಷಣ ಸಖೇ
ಗಜಶ್ರೇಣೀನಾಥ ತ್ವಮಿಹ ಜಟಿಲಾಯಾಂ ವನಭುವಿ।
ಅಸೌ ಕುಂಭಿಭ್ರಾಂತ್ಯಾ ಖರನಖರನಿರ್ದಾರಿತಮಹಾ-
ಗುರುಗ್ರಾವಗ್ರಾಮಃ ಸ್ವಪಿತಿ ಗಿರಿಗರ್ಭೇ ಹರಿಪತಿಃ॥

ಲೋಕಮಾನ್ಯ ತಿಲಕರು ತಮ್ಮ "ಕೇಸರಿ" ಪತ್ರಿಕೆಯನ್ನು ಪ್ರಾರಂಭಿಸಿದಾಗ ಅದರ ಮುಖಪುಟದ ಮೇಲೆ ಮುದ್ರಿಸಿದ ಶ್ಲೋಕ ಇದು. ಇಲ್ಲಿತ್ತು ಭಾರತದ ಮೇಲೆ ಅಧಿಕಾರ ನಡೆಸುತ್ತಿದ್ದವರಿಗೆ ಎಚ್ಚರ. "ಎಲೈ, ಮದವೇರಿದ ಆನೆಯೆ, ನೀನು ಆನೆಗಳ ಹಿಂಡಿಗೇ ಒಡೆಯ ಎಂಬ ಹೆಮ್ಮೆಯಿಂದ ಈ ಕಗ್ಗಾಡಿನಲ್ಲಿ ಕ್ಷಣವಾದರೂ ನಿಲ್ಲಬೇಡ–ಇಲ್ಲೇ ಗುಡ್ಡದ ಗುಹೆಯಲ್ಲಿ, ಆನೆಯೆಂಬ ಭ್ರಮೆಯಿಂದ ಭಾರೀ ಬಂಡೆಗಲ್ಲನ್ನು ಉಗುರುಗಳಿಂದ ಚೂರು ಚೂರಾಗಿ ಬಗಿದು ಈಗ ತಾನೆ ಬಂದ. ಸಿಂಹ ಮಲಗಿದೆ." ಭಾರತ ಮಲಗಿದೆ ನಿಜ– ಆದರೆ ಅದರ ವೀರ್ಯವನ್ನು ನೀವು ಅರಿಯಿರಿ. ಅದು ಎಚ್ಚತ್ತರೆ ನಿಮ್ಮ ಗತಿ ತೀರಿತು. ಓಡಿರಿ–ಇನ್ನೂ ಅವಕಾಶವಿರುವಾಗಲೇ ಓಡಿರಿ!

ತಿಲಕರನ್ನು ಮೆಚ್ಚಿಸುವಂಥ ಸತ್ವದಿಂದ ತುಂಬಿ ತುಳುಕುವ, ಅರ್ಥಕ್ಕೆ ಸರಿಯಾಗಿ ಗರ್ಜಿಸುವ ಶಬ್ದ ಧ್ವನಿಯಿಂದೊಡಗೂಡಿದ ಈ ಶ್ಲೋಕವನ್ನು ಬರೆದ ಕವಿ ಜಗನ್ನಾಥ. ಅದನ್ನಾತ ಬರೆದದ್ದು ಭಾರತದ ಪರವಾಗಿ ವಿದೇಶೀಯರಿಗೆ ಎಚ್ಚರಿಕೆ ಕೊಡುವುದಕ್ಕಲ್ಲ ಎಂಬುದು ನಿಜ. ಪ್ರಕಾಂಡ ಪಂಡಿತನಾದ ತನ್ನನ್ನು ತರ್ಕದಲ್ಲಾದರೂ ಕಾವ್ಯದಲ್ಲಾದರೂ ಎದುರಿಸೇನೆಂಬ ಬಂಟರಿಗೆ ಅವನಿತ್ತ ಎಚ್ಚರಿಕೆ ಇದು.

ಜಗನ್ನಾಥ ಪಂಡಿತರಾಜನು ಸಂಸ್ಕೃತ ಕವಿಗಳಲ್ಲಿ ಅಪೂರ್ವ ವರ್ಗಕ್ಕೆ ಸೇರಿದವನು. ಕಾಳಿದಾಸನೊಬ್ಬನನ್ನು ಬಿಟ್ಟರೆ ಬೇರಾವ ಸಂಸ್ಕೃತ ಕವಿಯ ಸುತ್ತಲೂ ಜಗನ್ನಾಥನ ಸುತ್ತ ಹಬ್ಬಿದಷ್ಟು ಕಥೆಯ ಬಳ್ಳಿಗಳು ಹಬ್ಬಿಲ್ಲ. ದಕ್ಷಿಣ ಭಾರತದಲ್ಲಿ ಹುಟ್ಟಿ, ಉತ್ತರ ಭಾರತಕ್ಕೆ ಹೋಗಿ ಅಲ್ಲಿ ತನ್ನ ತರ್ಕಶಾಸ್ತ್ರ ಪ್ರೌಢಿಯಿಂದ ಜಯಭೇರಿ ಹೊಡೆದು ಕವಿಯಾಗಿ ಪರಿವರ್ತನೆ ಹೊಂದಿ ಮೊಗಲ ದರಬಾರಿನಲ್ಲಿ ಕವಿ ಸಮ್ರಾಟನಾಗಿ ಮೆರೆದವನು ಅವನು. ಜಗನ್ನಾಥ ಸಂಸ್ಕೃತ ಕವಿಗಳಲ್ಲಿ ಸರ್ವ ಶ್ರೇಷ್ಠನಲ್ಲ, ಆದರೆ ಅತ್ಯಂತ ಮಧುರ ಕವಿ — ಜಯದೇವನನ್ನು ಬಿಟ್ಟರೆ. ಬೇಂದ್ರೆಯವರೊಮ್ಮೆ ನನ್ನೊಡನೆ ಮಾತಾಡುವಾಗ ಜಗನ್ನಾಥನ "ಗಂಗಾಲಹರಿ" ಓದಿಯೆ ತಮಗೆ ಮೊದಲು ಸಂಸ್ಕೃತ ಸಾಹಿತ್ಯದ ಆಕರ್ಷಣೆಯಾದದ್ದು ಎಂದು ಹೇಳಿದರು.

ಜಗನ್ನಾಥನ ಖಾಸಗಿ ಜೀವನದ ಬಗ್ಗೆ ಇರುವ ಕಥೆ ಸ್ವಾರಸ್ಯ ಮತ್ತು ದುರಂತವಾಗಿದೆ. ಮೊಗಲ ರಾಜಮನೆತನದ ಹೆಣ್ಣೊಂದನ್ನು ಮೆಚ್ಚಿ ಮದುವೆ

ಯಾದ ಅವನು ಸುಖಭೋಗದಲ್ಲಿ ಲೋಲಾಡಿದನು; ಬ್ರಾಹ್ಮಣರಿಂದ ಬಹಿಷ್ಕೃತನಾಗಿ, ಕೊನೆಗೆ ಪ್ರೇಯಸಿಯೊಂದಿಗೆ ಗಂಗೆಯಲ್ಲಿ ಮುಳುಗಿ ಇಹಲೋಕಯಾತ್ರೆ ಮುಗಿಸಿದನು—ಎಂದು ಅವುಗಳ ಸಾರ.

ಜಗನ್ನಾಥ ಆಂಧ್ರ ದೇಶದವನು. ಗೋದಾವರಿ ಜಿಲ್ಲೆಯಲ್ಲಿರುವ ವೆಂಗಿ ನಾಡು ಅವನ ಮೂಲ ಸ್ಥಾನ. ತನ್ನ ತಂದೆಯ ಹೆಸರು ಪೆರುಮ ಭಟ್ಟ, ತಾಯಿ ಲಕ್ಷ್ಮಿ ಎಂದು ಅವನೇ ಹೇಳಿಕೊಂಡಿದ್ದಾನೆ. ತಂದೆ ತಾಯಿಗಳ ಪ್ರೀತಿಯ ಮಗನಾಗಿ ಅವನು ಬೆಳೆದಿರಬೇಕು. ತಂದೆಯಿಂದ ಸಕಲಶಾಸ್ತ್ರಗಳನ್ನು ಕಲಿತುಕೊಂಡನು. ತರ್ಕಶಾಸ್ತ್ರ ಅವನ ಹೆಚ್ಚಿನ ಆಡುಂಬೊಲವಾಗಿತ್ತು. ಎಳೆ ವಯಸ್ಸಿನಲ್ಲೇ ವಾದದಲ್ಲಿ ಪಂಡಿತರನ್ನು ಸದೆ ಬಡಿಯುತ್ತ ಪ್ರತಾಪವನ್ನು ಮೆರೆದನು.

ಜಗನ್ನಾಥನ ಭಾವೀ ಜೀವನದ ರೂಪರೇಖೆ ಎಳೆಯಲು ಬೇಕಾದ ಸಾಮಗ್ರಿಯೆಲ್ಲ ಇಲ್ಲಿತ್ತು. ಮನೆಯಲ್ಲಿ ಅಸಹ್ಯ ಬಡತನ, ತಲೆಯಲ್ಲಿ ಅಗಾಧ ಪಾಂಡಿತ್ಯ, ಹೃದಯದಲ್ಲಿ ಅಪ್ರತಿಮ ಪರಾಕ್ರಮ ಮತ್ತು ಮಹತ್ವಾಕಾಂಕ್ಷೆ. ಅಂದಿನ ದಕ್ಷಿಣ ಭಾರತ ಅವನಿಗೆ ತನ್ನನ್ನು ಹಿಡಿಸಲಾರದಷ್ಟು ಚಿಕ್ಕದಾಗಿ ಕಂಡಿರಬೇಕು. ಅದು ೧೬ ನೇ ಶತಮಾನದ ಅಂತ್ಯ. ವಿಜಯನಗರ ಸಾಮ್ರಾಜ್ಯ ಅಳಿದುಹೋಗಿ ದಕ್ಷಿಣದಲ್ಲೆಲ್ಲ ಕೋಲಾಹಲ ಮಸಗಿತ್ತು. ಪಂಡಿತರನ್ನೂ ಕವಿಗಳನ್ನೂ ಕೇಳುವವರಿರಲಿಲ್ಲ.

ಜಗನ್ನಾಥ ಉತ್ತರಮುಖಿಯಾದ. ಅವನು ಸಾಗುತ್ತ ಸಾಗುತ್ತ ಜಯಪುರದಲ್ಲಿ ಆಶ್ರಯ ಪಡೆದ. ಸಮ್ರಾಟ್ ಅಕಬರನೊಡನೆ ಸಂಧಿ ಮಾಡಿಕೊಂಡ ಪ್ರಥಮ ರಜಪೂತ ಮನೆತನಗಳಲ್ಲೊಂದಾದ ಅದು ಆಗ ಉತ್ಕರ್ಷ ಸ್ಥಿತಿಯಲ್ಲಿತ್ತು. ಆಗ ಉತ್ತರದೇಶದಲ್ಲಿ ಹಿಂದೂ ಪಂಡಿತರನ್ನು ವಾದದಲ್ಲಿ ಸೋಲಿಸಿ ಅಪ್ರತಿಭರನ್ನಾಗಿ ಮಾಡಿದ್ದ ಒಬ್ಬ ಮುಸ್ಲಿಂ ಮೌಲ್ವಿಯ ಪ್ರಸಿದ್ಧಿ ಬಹಳವಾಗಿ ಕೇಳಿಸುತ್ತಿತ್ತು. ಪಂಡಿತರು ಜಗನ್ನಾಥನ ಮೊರೆಹೊಕ್ಕರು. ಆತ ಆರು ತಿಂಗಳು ಗೋಪ್ಯವಾಗಿ ಮುಸ್ಲಿಂ ಶಾಸ್ತ್ರಗಳನ್ನು ಕಲಿತು ಮುಂದೆ ವಾದಭೂಮಿಯಲ್ಲಿ ಮೌಲ್ವಿಯನ್ನು ಪರಾಜಿತಗೊಳಿಸಿ ಹಿಂದುಗಳ ಮರ್ಯಾದೆಯನ್ನು ಕಾಪಾಡಿದನು.

ಈ ಪರಾಕ್ರಮದ ಕಥೆ ದಿಲ್ಲಿಯ ದರ್ಬಾರಿಗೂ ಮುಟ್ಟಿತು. ಅಕಬರನ ಹಿಂದೂ–ಮುಸ್ಲಿಂ ಐಕ್ಯ ಪ್ರಯತ್ನಗಳ ಕಾವು ಇನ್ನೂ ಆರಿರದ ಆ ಕಾಲದಲ್ಲಿ ಜಗನ್ನಾಥ ಪಂಡಿತನನ್ನು ಕಾಣುವ ಕೌತುಕ ದಿಲ್ಲಿಯ ಅಧಿಪತಿಗಾದುದು ಸ್ವಾಭಾವಿಕ.

ಅಂದಿನಿಂದ ದಿಲ್ಲಿಯ ರಾಜ ಸಭೆಯಲ್ಲಿ ಜಗನ್ನಾಥನ ತಾರೆ ಉಚ್ಛ್ರಾಯಕ್ಕೆ ಬರತೊಡಗಿತು. "ದಿಲ್ಲೀವಲ್ಲಭಪಾಣಿ ಪಲ್ಲವತಲೇ ನೀತಂ ನವೀನಂ ವಯಃ" (ದಿಲ್ಲೀಪತಿಯ ಅಂಗೈಯಲ್ಲಿ ತಾರುಣ್ಯವನ್ನು ಕಳೆದೆ) ಎಂದು ಅವನೇ ಹೇಳಿದ್ದಾನೆ.

ಜಹಾಂಗೀರ್ ಮತ್ತು ಶಾಜಹಾನ್ ಚಕ್ರವರ್ತಿಗಳಿಬ್ಬರ ಕಾಲದಲ್ಲೂ ಜಗನ್ನಾಥನು ದಿಲ್ಲೀವಲ್ಲಭರ ಪೂರ್ಣಾನುಗ್ರಹಕ್ಕೆ ಪಾತ್ರನಾಗಿ ಬಾಳಿದನು. ಜಗನ್ನಾಥನ ಸೀಮಾಗ್ರಂಥವಾದ "ರಸಗಂಗಾಧರ"ದಲ್ಲಿ ಉದಾಹರಿಸಲ್ಪಟ್ಟ ಎರಡು ಶ್ಲೋಕಗಳಲ್ಲಿ ಇಬ್ಬರ ಸ್ತುತಿಯೂ ಬರುತ್ತದೆ.

ದಿಲ್ಲಿಯ ದರ್ಬಾರಿನಲ್ಲಿ ಅತ್ಯಂತ ಪ್ರಬಲರಾಗಿದ್ದವರ ಆಶ್ರಯ ಜಗನ್ನಾಥನಿಗಿತ್ತು. ಜಹಾಂಗೀರನ ರಾಣಿ ನೂರ್‌ಜಹಾನಳ ತಮ್ಮ ಆಸಫ್‌ಖಾನ ಅವರಲ್ಲೊಬ್ಬ. ವಿಲಾಸಿಯಾದ ಜಹಾಂಗೀರನನ್ನು ಹಿಡಿತದಲ್ಲಿಟ್ಟುಕೊಂಡು ನೂರ್‌ಜಹಾನ್ ರಾಜ್ಯ ಸೂತ್ರಗಳನ್ನು ಆಸಫನ ಮೂಲಕವೇ ನಡೆಸುತ್ತಿದ್ದಳು. ಜಹಾಂಗೀರನ ಅನಂತರದಲ್ಲಿ ಶಾಜಹಾನನನ್ನು ಪಟ್ಟಕ್ಕೇರಿಸಿ ಭದ್ರತೆಯನ್ನು ಗಳಿಸಿಕೊಟ್ಟವರಲ್ಲಿ ಪ್ರಮುಖನಾದ ಆಸಫಖಾನನ (ಶಾಜಹಾನನಿಗೆ ಈತ ದೂರದೃಷ್ಟಿಯಿಂದ ಹೆಣ್ಣು ಕೂಡ ಕೊಟ್ಟಿದ್ದ) ಪ್ರತಿಷ್ಠೆ ಇನ್ನೂ ಹೆಚ್ಚಿತು. ಅವನ ಆಶ್ರಿತನಾದ ಜಗನ್ನಾಥನಿಗೆ ಪಂಡಿತರಾಜ ಬಿರುದನ್ನು ಶಾಜ

ಹಾನ್ ದಯಪಾಲಿಸಿದ.

ಆಸಫಖಾನನ ಮೇಲೆ ಜಗನ್ನಾಥನಿಗೆ ಅಪಾರವಾದ ಕೃತಜ್ಞತಾಭಾವವಿದ್ದಿರಬೇಕು. ಅವನ ಪ್ರಶಂಸೆಯೇ ವಸ್ತುವಾದ ಒಂದು ಕಾವ್ಯವನ್ನೇ ಜಗನ್ನಾಥ ಬರೆದಿದ್ದಾನೆ. ಅದರ ಹೆಸರು "ಆಸಫವಿಲಾಸ" — ಮುಸ್ಲಿಂ ಪ್ರಮುಖನೊಬ್ಬನ ಬಗ್ಗೆ ಸಂಸ್ಕೃತದಲ್ಲಿ ಬರೆಯಲ್ಪಟ್ಟ ಬಹುಶಃ ಏಕಮಾತ್ರ ಗ್ರಂಥ ಅದು.

ಆಸಫಖಾನ ೧೬೪೧ ರಲ್ಲಿ ತೀರಿಕೊಂಡಾಗ ಕವಿ ಹೃದಯಸ್ಪರ್ಶಿಯಾಗಿ ಹೀಗೆ ಕಣ್ಣೀರು ಸುರಿಸಿದ್ದಾನೆ:

ಯುಕ್ತಂ ತು ಯಾತೇ ದಿವಮಾಸಫೇಂದೌ
ತದಾಶ್ರಿತಾನಾಂ ಯದಭೂದ್ವಿನಾಶಃ |
ಇದಂ ತು ಚಿತ್ರಂ ಭುವಾನವಕಾಶೇ
ನಿರಾಶ್ರಯಾ ಖೇಲತಿ ತಸ್ಯ ಕೀರ್ತಿಃ ||

ಆಸಫಚಂದ್ರ ಸ್ವರ್ಗಕ್ಕೆ ಹೋದ ಬಳಿಕ ಅವನ ಆಶ್ರಿತರು ಹಾಳಾದ್ದರಲ್ಲೇನೂ ಸೋಜಿಗವಿಲ್ಲ: ಆದರೆ ಆವನ ಕೀರ್ತಿಯು ಆಧಾರವಿಲ್ಲದೆ ಅಂತರಾಳದಲ್ಲಿ ಆಡುವುದೀಗ ಆಶ್ಚರ್ಯ.

ಮೊಗಲ ಸಾಮ್ರಾಜ್ಯದ ಅತ್ಯುತ್ಕರ್ಷ ಸ್ಥಿತಿಯಲ್ಲಿ, ಸಾಮ್ರಾಜ್ಯದ ರಾಜಧಾನಿಯಲ್ಲಿ, ದರಬಾರಿನ ಅತಿ ಪ್ರಭಾವಶಾಲಿಗಳ ಆಶ್ರಯದಲ್ಲಿ ಜೀವನವೊಂದು ಸುಖಸ್ವಪ್ನವಾಗಿ ಈ ಕವಿಗೆ ಕಂಡಿರುವುದು ಸಹಜ. ಚಕ್ರವರ್ತಿಯ ಹಿರಿಮಗ ದಾರಾ ಬೇರೆ ಸಂಸ್ಕೃತ ಪ್ರಿಯ. ಅವನಿಗೆ ಜಗನ್ನಾಥನೇ ಪಾಠ ಹೇಳಿದವನಂತೆ ಅವನ ಗಳಿಕೆಗೂ ವೆಚ್ಚಕ್ಕೂ ಲೆಕ್ಕವೇ ಇದ್ದಂತಿಲ್ಲ. ಚಿಲ್ಲರೆ ಜನರ ದಾನ ದಕ್ಷಿಣೆ ಅವನಿಗೆ ಲಕ್ಷ್ಯವೇ ಇಲ್ಲ. ಮನೋರಥಗಳನ್ನು ಪೂರೈಸುವುದಾದರೆ ದಿಲ್ಲೀಶ್ವರ ಪೂರೈಸಬೇಕು, ತಪ್ಪಿದರೆ ಜಗದೀಶ್ವರ ಪೂರೈಸಬೇಕು. ಇತರ ರಾಜರು ಕೊಟ್ಟದ್ದು ತರಕಾರಿಗೋ ಉಪ್ಪಿಗೋ ಸಾಕಷ್ಟೇ — ಎಂದು ಆತ ಒಂದು ಶ್ಲೋಕದಲ್ಲಿ ಹೇಳುತ್ತಾನೆ.

ಸುಂದರ, ಸ್ಫುರದ್ರೂಪ; ವಾಣಿಯಲ್ಲಿ ಅಮೃತ; ಯವನ ದರಬಾರಿನ ಉನ್ಮುಕ್ತ ವಿಲಾಸ ಜೀವನದ ಸಾಮೀಪ್ಯ. ಜಗನ್ನಾಥನ ಕವಿತೆಯ ಕಲ್ಪವೃಕ್ಷಕ್ಕೆ ಅಸಂಖ್ಯ ಪುಷ್ಪಗಳು. ಶೃಂಗಾರರಸದ ಬುಗ್ಗೆಗಳು. ಅವನ "ಭಾಮಿನೀವಿಲಾಸ"ದಲ್ಲಿ ಈ ಚುಟುಕು ಕವಿತೆಗಳ ಸಂಗ್ರಹವೇ ಇದೆ.

ಈ ಸಮಯದಲ್ಲೇ ಜಗನ್ನಾಥನ ಪ್ರಣಯ ಪ್ರಸಂಗ ಘಟಿಸಿದ್ದು. ಕಾವ್ಯಪ್ರಿಯ ಶಾಜಹಾನನಿಗೆ ಪ್ರಿಯನಾಗಿದ್ದ ಜಗನ್ನಾಥ ಒಂದು ದಿನ ಚಕ್ರವರ್ತಿಯೊಡನೆ ಚದುರಂಗವಾಡುತ್ತ ಕುಳಿತಿದ್ದನಂತೆ. ಆಗ ನೀರಡಿಸಿದ ಅರಸನು ಪಾನೀಯಕ್ಕಾಗಿ ಹೇಳಿ ಕಳಿಸಿದನಂತೆ. ರಂಭೆಯಂಥ ಒಬ್ಬ ಯವನ ತರುಣಿ ತಲೆಯ ಮೇಲೆ ಪುಟ್ಟ ನೀರಿನ ಕೊಡ ಇಟ್ಟುಕೊಂಡು ಮಂದಾಕ್ರಾಂತವಾಗಿ ಚಕ್ರವರ್ತಿಯ ಕಡೆ ಸಾಗಿ ಅವನ ಮುಂದೆ ಅದನ್ನಿರಿಸಿದಳಂತೆ. ಅವಳನ್ನು ನೋಡಿದೊಡನೆ ಜಗನ್ನಾಥ ಹೀಗೆಂದನಂತೆ:

ಇಯಂ ಸುಸ್ತನೀ ಮಸ್ತಕನ್ಯಸ್ತಕುಂಭಾ
ಕುಸುಂಭಾರುಣಂ ಚಾರುಚೇಲಂ ವಸಾನಾ!
ಸಮಸ್ತಸ್ಯ ಲೋಕಸ್ಯ ಚೇತಃಪ್ರವೃತ್ತಿಂ
ಗೃಹೀತ್ವಾ ಘಟೇ ನ್ಯಸ್ಯ ಯಾತೀವ ಭಾತಿ||*

ಅವಳ ಹೆಸರು ಲವಂಗಿ. ದಂತಕಥೆಯ ಪ್ರಕಾರ ಅವಳು ಸ್ವತಃ ಶಾಜಹಾನನ ಮಗಳು. ಶಾಜಹಾನನ ಪ್ರಸಿದ್ಧ ಪುತ್ರಿಯರ ಯಾದಿಯಲ್ಲಿ ಲವಂಗಿಯ ಹೆಸರು ಕಾಣುವುದಿಲ್ಲ ನಿಜ. ಆದರೆ ಆಗ ಮೊಗಲಬಾದಶಹರು ರಾಜಕೀಯ ಕಾರಣಗಳಿಗಾಗಿ ಅಸಂಖ್ಯ ಸ್ತ್ರೀಯರನ್ನು ಮದುವೆಯಲ್ಲೋ ಕಾಣಿಕೆಯಾಗಿಯೋ ಸ್ವೀಕರಿಸುತ್ತಿದ್ದರು. ಬಹುಶಃ ಲವಂಗಿ ಇಂಥ ಪ್ರಸಿದ್ಧಿ ಪಡೆಯದ ಶಾಜಹಾನನ ಪ್ರೇಯಸಿಯರಲ್ಲೊಬ್ಬಳ

* ಬಟ್ಟಕುಚದ ಈ ತರಳೆ ಕೆಂಬಣ್ಣದ ಬಟ್ಟೆ ತೊಟ್ಟು ಕೊಡವನ್ನು ತಲೆಗೇರಿಸಿ ಸಾಗುವಾಗ ಜಗತ್ತಿನ ಮನಸನ್ನೇ ಹಿಡಿದು ಕೊಡದಲ್ಲಿ ಮಡಗಿಕೊಂಡು ಹೋಗುವಳೋ ಎನಿಸುತ್ತದೆ.



ಮಗಳಾಗಿರಬಹುದು.

ಲವಂಗಿಯ ರೂಪ ಜಗನ್ನಾಥನ ಮನಸ್ಸಿನಲ್ಲಿ ಅಚ್ಚೊತ್ತಿ ಹೋಯಿತು. ಸ್ಫುರದ್ರೂಪಿಯೂ ಮಹಾ ರಸಿಕನೂ ಆದ ಜಗನ್ನಾಥನ ಮೇಲೆ ಆ ಅಂತಃಪುರ ತರುಣಿಗೂ ಮನಸ್ಸಾಗಿತ್ತು. ಈರ್ವರ ಪ್ರಣಯದ ಬೆಳವಣಿಗೆ, ಅವರು ಹೇಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು ಎಂಬ ಬಗ್ಗೆ ಏನೂ ವಿವರಗಳು ದೊರೆಯುವುದಿಲ್ಲ. ಆದರೆ ಮೊಗಲ ಅಂತಃಪುರದ ಆಗು- ಹೋಗುಗಳ ಚರಿತ್ರೆಯನ್ನು ನೋಡಿದರೆ ಅಲ್ಲಿನ ನಾರಿಯರಿಗೆ ಬೇಕಾದ ಪುರುಷನೊಡನೆ ಸಂಪರ್ಕವನ್ನು ಸ್ಥಾಪಿಸುವ ಉಪಾಯಗಳು ಚೆನ್ನಾಗಿ ಗೊತ್ತಿದ್ದವೆಂದು ವೇದ್ಯವಾಗುತ್ತದೆ. ಶಾಜಹಾನನ ಹಿರಿಯ ಪುತ್ರಿ ಜಹನಾರಾಳ ಪ್ರಣಯ ಪ್ರಸಂಗಗಳು ಕುಪ್ರಸಿದ್ಧವೇ ಆಗಿದ್ದವು. ಔರಂಗಜೇಬನಂಥ ಮಡಿವಂತನ ಮಗಳು ಜೇಬುನ್ನೀಸಾ ಕೂಡ ಗುಪ್ತಪ್ರಣಯ ವ್ಯವಹಾರವನ್ನು ಯಶಸ್ವಿಯಾಗಿಯೆ ನಡೆಸಿದ್ದಳು.

ಲವಂಗಿ-ಜಗನ್ನಾಥರ ಪ್ರಣಯ ಬೆಳೆಯಿತು. ಜಗನ್ನಾಥನಿಗೆ ಆಗ ೪೫ ಮೀರಿರಬೇಕೆನಿಸುತ್ತದೆ. ಅವನ ಮದುವೆ ಎಂದೋ ಸ್ವಜಾತಿಯಲ್ಲಿ ಆಗಿತ್ತು. (ಹೆಂಡತಿಯ ಹೆಸರು ಭಾಮಿನಿಯೆಂದಿತ್ತಂತೆ. ಆದ್ದರಿಂದಲೇ ಆತ ತನ್ನ ಕವನಗುಚ್ಛಕ್ಕೆ "ಭಾಮಿನೀವಿಲಾಸ" ಎಂದು ಹೆಸರಿಟ್ಟಿದ್ದನು) ಲವಂಗಿಯೂ ನವ ತರುಣಿ. ಆದರೆ ■ ಕಾಲದ ಜನರ ಶರೀರಸ್ವಾಸ್ಥ್ಯವು ಬೇರೆಯೆ ತರವಾಗಿತ್ತು; ಆಗಿನ ತರುಣಿಯರನ್ನಾಕರ್ಷಿಸುವ ಸಂಗತಿಗಳೂ ಬೇರೆಯೆ ಇದ್ದವು. ಅದು ವೀರಪೂಜೆಯ ಕಾಲ. ಜಗನ್ನಾಥ ಕವಿಗಳಲ್ಲಿ ವೀರನಾಗಿದ್ದ. ನನ್ನನ್ನು ಮೀರಿಸುವವರಿದ್ದರೆ ಬನ್ನಿ ಎಂದು ಸಡ್ಡು ಹೊಡೆದು ನಿಲ್ಲುವ ಅವನ ಮುಂದೆ ಕವಿಗಳೂ ಪಂಡಿತರೂ ಪೆಟ್ಟು ತಿಂದ ನಾಯಿಗಳ ಹಾಗೆ ಬಾಲ ಮಡಚಿ ನಿಲ್ಲುತ್ತಿದ್ದರು. ಲವಂಗಿ ಅವನನ್ನು ಮೆಚ್ಚಿದಳು. ಶಾಜಹಾನ ಅವರಿಬ್ಬರು ಜೋಡಾಗುವುದನ್ನು ತಡೆಯಲು ಯತ್ನಿಸಲಿಲ್ಲ, ಅಥವಾ ಸಮರ್ಥನಾ

ಗಲಿಲ್ಲ.

ಜಗನ್ನಾಥ ಲವಂಗಿಯರ ಈ ವಿಜಾತೀಯ ಪ್ರಣಯವನು ಕುರಿತು ಹಲವು ಕವಿತೆಗಳು ಪ್ರಚಾರದಲ್ಲಿವೆ. ಅವನ ಕಾವ್ಯ ಶಕ್ತಿ ಅವಳ ಮೇಲೆ ಮಕರಂದವಾಗಿ ಹರಿಯಿತು. ಅವಳಿದ್ದರೆ ಅವನಿಗೆ ಬೇರಾವ ಭಾಗ್ಯವೂ ಬೇಕಾಗಿರಲಿಲ್ಲ.

ನ ಯಾಚೇ ಗಜಾಲೀಂ ನ ವಾ ವಾಜಿರಾಜಿಂ
ನ ವಿತ್ತೇಷು ಚಿತ್ತಂ ಮದೀಯಂ ಕದಾಪಿ।
ಇಯಂ ಸುಸ್ತನೀ ಮಸ್ತಕನ್ಯಸ್ತಕುಂಭಾ
ಲವಂಗೀ ಕುರಂಗೀದೃಗಂಗೀಕರೋತು॥*

ಎಂದಾತ ಶ್ಲೋಕ ಕಟ್ಟಿದ್ದ.

ಹಿಂದೂ ಧರ್ಮದ ಮಾನವುಳಿಸಿದ ಪಂಡಿತ ದಿಗ್ಗಜನಾದವನು ಹೀಗೆ ಧರ್ಮವಿರುದ್ಧವಾಗಿ ವಿಧರ್ಮೀಯಳೊಬ್ಬಳೊಡನೆ ಚೆಲ್ಲಾಟ ನಡೆಸಿರುವುದನ್ನು ಕಂಡು ಯಾರೋ ಅವನಿಗೆ ಸ್ವರ್ಗ ನರಕಗಳ ಎಚ್ಚರ ಕೊಟ್ಟಿರಬೇಕು. ಆಗ ನಿಜವಾದ ಪ್ರಣಯೋನ್ಮತ್ತನ ಹಾಗೆ ಆತ ಉತ್ತರವಿತ್ತದ್ದು ಹೀಗೆ:

ಯುವನೀ ನವನೀತಕೋಮಲಾಂಗೀ
ಶಯನೀಯೇ ಯದಿ ಲಭ್ಯತೇ ಕದಾಚಿತ್।
ಅವನೀತಲಮೇವ ಸಾಧು ಮನ್ಯೇ
ನವ ನೀ ಮಾಘವನೀ ವಿನೋದ ಹೇತುಃ॥†

ಅಪರ ವಯಸ್ಸಿನ ಪ್ರಣಯ ಯಾವಾಗಲೂ ವರ್ಣಿಸುವ ಹಾಗೆ ಜಗನ್ನಾಥನ ಯುವನೀ ಪ್ರೇಮ ಉನ್ಮುಕ್ತವಾಗಿಯೆ ಮೆರೆಯಿತು. ಯಾವ ಮುಚ್ಚುಮರೆಯೂ ಇರಲಿಲ್ಲ. ಮಡಿವಂತರಾದ ಬ್ರಾಹ್ಮಣರಿಗೆ ಇದು ಅಸಹನೀಯವೆನಿಸಿತು. ಹೊಟ್ಟೆಗಾಗಿ ಯವನರಾಜ ಸೇವೆಯೆ ಕೀಳು; ಮೇಲೆ ಯವನೀ ಸ್ನೇಹ. ಕಾಶಿಯ ಪಂಡಿತ ಸಭೆಗಳಲ್ಲಿ ತೀಕ್ಷ್ಣವಾದ ಖಂಡನೆಗಳಾದವು.

ಬಹುಶಃ ಈ ಖಂಡನೆಗಳಲ್ಲಿ ತಮಿಳು ದೇಶದ ವಿದ್ವಾಂಸನೂ ಜಗನ್ನಾಥನಂತೆ ಮಹಾ ಪ್ರತಿಭಾಶಾಲಿ ಅಲಂಕಾರಶಾಸ್ತ್ರಿಯೂ ಕವಿಯೂ ಆದ ಅಪ್ಪಯ್ಯ ದೀಕ್ಷಿತನು ಮುಂದಾಳತನ ವಹಿಸಿರಬೇಕು. ಇಲ್ಲದಿದ್ದರೆ ಅಪ್ಪಯ್ಯ ದೀಕ್ಷಿತನ ಮೇಲೆ ಜಗನ್ನಾಥನ ಮಿತಿಮೀರಿದ ಕೋಪಕ್ಕೆ ಕಾರಣ ಹೇಳುವುದು ಕಷ್ಟ. ಜಗನ್ನಾಥನು ಬರೆದ "ರಸಗಂಗಾಧರ"ವೆಂಬ ಅಲಂಕಾರಶಾಸ್ತ್ರ ಗ್ರಂಥದಲ್ಲಿ ನೆವ ಸಿಕ್ಕಿದಲ್ಲೆಲ್ಲ ಅಪ್ಪಯ್ಯ ದೀಕ್ಷಿತನನ್ನು ಹೆಸರು ಹೇಳಿ ಖಂಡಿಸಲಾಗಿದೆ ಅಪ್ಪಯ್ಯ ದೀಕ್ಷಿತನು ಹೇಳಿದ್ದು ಒಂದೂ ಸರಿಯಲ್ಲ. ಅವನು "ದ್ರವಿಡ ಶಿಶು"–ತಮಿಳು ಮಗು, ಬುದ್ಧಿ ಸಾಲದು ಪಾಪ! ಅಪ್ಪಯ್ಯ "ಚಿತ್ರ ಮೀಮಾಂಸಾ" ಎಂಬ ಗ್ರಂಥ ಬರೆದರೆ ಈತ "ಚಿತ್ರಮೀಮಾಂಸಾ ಖಂಡನೆ" ಎಂಬೊಂದು ಗ್ರಂಥವನ್ನೇ ಬರೆದ. ಜಗನ್ನಾಥ ತನ್ನ ಹಿಂದಿನ ಅಲಂಕಾರ ಶಾಸ್ತ್ರಿಗಳೆಲ್ಲರ ಅಭಿಪ್ರಾಯಗಳನ್ನೂ ಖಂಡಿಸದೆ ಬಿಟ್ಟಿಲ್ಲ. ಆದರೆ ಅಪ್ಪಯ್ಯನ ಬಗೆ ಮಾತ್ರ ಚುನಾಯಿಸಿದ ಬೈಗಳು ಕಾದಿರಿಸಲ್ಪಟ್ಟಿದೆ.

ಜಗನ್ನಾಥನ ವೈಯಕ್ತಿಕ ದ್ವೇಷಕ್ಕೆ ಪಕ್ಕಾದ ಇನ್ನೂ ಒಬ್ಬ ಪಂಡಿತ ಇದ್ದಾನೆ. ಅವನೆಂದರೆ ವ್ಯಾಕರಣ ಗ್ರಂಥವಾದ ಸಿದ್ಧಾಂತ ಕೌಮುದಿಗೆ "ಮನೋರಮಾ" ಎಂಬ ಜನಪ್ರಿಯ ವ್ಯಾಖ್ಯಾನ ಬರೆದ ಭಟ್ಟೋಜಿ ದೀಕ್ಷಿತ. ಜಗನ್ನಾಥನ ವ್ಯಾಕರಣ ಗುರುವಾದ ಶೇಷ ಭಟ್ಟನೇ ಭಟ್ಟೋಜಿ ದೀಕ್ಷಿತನ ಗುರುವೂ ಆಗಿದ್ದನಂತೆ. ದೀಕ್ಷಿತನು ಗುರುವಿಗೆ ದ್ರೋಹ ಬಗೆದನಂತೆ. ತರ್ಕೋ! ಅವನ "ಮನೋರಮಾ"ವನ್ನು ಖಂಡಿಸಲು "ಮನೋರಮಾಕುಚಮರ್ದನ" ಎಂಬೊಂದು ಗ್ರಂಥವನ್ನೇ ಜಗನ್ನಾಥ ಸೃಷ್ಟಿಸಿದನು.

* ಆನೆ ಬೇಡ, ಕುದುರೆ ಬೇಡ, ಧನಧಾನ್ಯವಂತೂ ಬೇಡವೇ ಬೇಡ. ಈ ಉಬ್ಬಿದೆಯ ಲವಂಗಿ ಕೊಡವನ್ನು ತಲೆಯ ಮೇಲಿರಿಸಿಕೊಂಡು ನಡೆಯುತ್ತ ನನ್ನ ಮೇಲೊಮ್ಮೆ ತನ್ನ ಎರಳೆ ಕಣ್ಣುಗಳನ್ನು ಬೀರಿದರೆ ನಾ ಧನ್ಯ.

† ಬೆಣ್ಣೆ ಮೈಯ ಈ ಯುವನಿಯೊಬ್ಬಳು ಮಗ್ಗುಲಲ್ಲಿದ್ದರೆ ಈ ಭೂಮಿಯೇ ನನಗೆ ಸಾಕು; ಸ್ವರ್ಗೋದ್ಯಾನದಲ್ಲಿ ಏನು ಸುಖ?

ಜಗನ್ನಾಥನ ಸ್ವಭಾವವೇ ಹಾಗೆ. ಆತ ಉದ್ಧತ. ಒಲ್ಲದವರೆಂದರೆ ಅವರು ಪರಮ ಶತ್ರುಗಳು. ಮೆಚ್ಚಿದವರು ಇಂದ್ರಚಂದ್ರರು. ಅಗಾಧ ಆತ್ಮವಿಶ್ವಾಸದೊಡನೆ ಹರಿತವಾದ ಬುದ್ಧಿ, ಕವಿಹೃದಯ ಸೇರಿಕೊಂಡಿತ್ತು ಅವನಲ್ಲಿ. ಕೂದಲನ್ನು ಸೀಳುವಂಥ ತರ್ಕಶಕ್ತಿಯಿಂದ ಅವನು "ರಸಗಂಗಾಧರ" ದಲ್ಲಿ ತನ್ನ ವಾದಗಳನ್ನು ಮಂಡಿಸುವಾಗ ನಾವು ಮೆಚ್ಚದೆ ವಿಧಿಯೇ ಇಲ್ಲ. ಸಂಸ್ಕೃತದಲ್ಲಿ ಆಗಿಹೋದ ಅಲಂಕಾರಿಕರಲ್ಲಿ ಅವನೇ ಕೊನೆಯವ, ಅನೇಕ ರೀತಿಗಳಲ್ಲಿ ಅವನದೇ ಕೊನೆಯ ಮಾತು ಕೂಡ.

ಹಿಂದಿನವರು "ದೋಷವಿಲ್ಲದ, ಗುಣವುಳ್ಳ ಶಬ್ದಾರ್ಥಗಳು ಕಾವ್ಯ," "ರಸವುಳ್ಳದ್ದೇ ಕಾವ್ಯ", "ವಕ್ರೋಕ್ತಿಯೆ ಕಾವ್ಯದ ಜೀವಾಳ" ಇತ್ಯಾದಿಯಾಗಿ ಬಗೆಬಗೆಯಾಗಿ ಹೇಳಿದ್ದೆಲ್ಲ ಸಾಕಷ್ಟು ಚಿಂತಿಸದೆ ಹೇಳಿದ ಮಾತು. "ರಮಣೀಯಾರ್ಥ ಪ್ರತಿಪಾದಕಃ ಶಬ್ದಃ ಕಾವ್ಯಂ" ಚೆಲುವಾದ ಅರ್ಥವನ್ನು ವ್ಯಕ್ತಪಡಿಸುವ ಶಬ್ದವೇ ಕಾವ್ಯ ಎಂದು ಅವನು ಸಿದ್ಧಾಂತಪಡಿಸಿದ್ದು ಅತ್ಯಾಧುನಿಕ ವಿಚಾರಕರಿಗೂ ಸರಿಯಾಗಿ ಕಂಡಿದೆ. ಆದರೆ ಕೆಲ ವೇಳೆ ಜಗನ್ನಾಥನ ಛಲ ಅವನನ್ನು ಅಡ್ಡದಾರಿಗೆ ಹಚ್ಚುತ್ತದೆ. ಕಾವ್ಯದಲ್ಲಿ ಉತ್ತಮ, ಮಧ್ಯಮ, ಅಧಮ ಎಂದು ಮೂರು ವಿಧವನ್ನು ಹಿಂದಿನವರು ಹೇಳಿದ್ದರೆ ಅವರಿಂದ ತಾನು ಬೇರೆಯೆ ಎಂದು ತೋರಿಸುವ ಸಲುವಾಗಿಯೆ ಕಾವ್ಯ ನಾಲ್ಕು ವಿಧ— ಉತ್ತಮೋತ್ತಮ, ಉತ್ತಮ, ಮಧ್ಯಮ ಮತ್ತು ಅಧಮ ಎಂದು ಇವನ ಸಾಧನೆ. ತನ್ನ ಪ್ರತಿಪಾದನೆಗಳಿಗೆ ಉದಾಹರಣೆಗಳನ್ನು ಕೊಡಬೇಕಾದಾಗ ಇತರ ಕವಿಗಳಿಂದಾರಿಸದೆ ತನ್ನ ಪದ್ಯಗಳನ್ನೇ ಕೊಡುತ್ತಾನೆ ಅವನು. "ಕಸ್ತೂರಿ ಮೃಗಕ್ಕೆ ಪರಿಮಳಕ್ಕಾಗಿ ಬಣಗು ಹೂಗಳ ಹಂಗೆ?" ಎಂದು ಅವನ ಪ್ರಶ್ನೆ. ಈ ಔದ್ಧತ್ಯವೂ ನಮಗೆ ಅತಿರೇಕವಾಗಿ ಕಂಡೀತು.

ರಾಜಾಶ್ರಯದ ಧೈರ್ಯ, ಪಾಂಡಿತ್ಯದ ಅಹಂಮನ್ಯತೆ, ಯವನೀ ವಿಲಾಸದ ಉನ್ಮಾದಗಳಲ್ಲಿ ಲೋಲಾಡುತ್ತಿದ್ದ ಜಗನ್ನಾಥನಿಗೆ ಜಗತ್ತು ತೃಣಪ್ರಾಯವಾಗಿ ಕಾಣುತ್ತಿತ್ತು. ಆದರೆ ಅದು ಪರ್ಯವಸಾನ ಹೊಂದಲೇಬೇಕಾಗಿತ್ತು. ಅವನ ಆಶ್ರಯದಾತ ಆಸಫಖಾನನ ಮರಣ ಮೊದಲನೇ ಹೊಡೆತವಾಯಿತು. ಅನಂತರ ಶಾಜಹಾನನನ್ನು ಔರಂಗಜೇಬ ಸೆರೆಯಲ್ಲಿಟ್ಟು ಅಣ್ಣ ದಾರಾನನ್ನು ಕೊಲ್ಲಿಸಿದ. ಕಲಾಭಿಮಾನಿ ಚಕ್ರವರ್ತಿಯೂ, ಸಂಸ್ಕೃತಾಭಿಮಾನಿ ಯುವರಾಜನೂ ಪತನ ಹೊಂದಿ ಧರ್ಮಶುಂಠ ಅರಸಿಕ ಶಿಖಾಮಣಿಯೊಬ್ಬ ಪಟ್ಟಕ್ಕೆ ಬಂದಾಗ ಜಗನ್ನಾಥನಿಗೆ ಅಲ್ಲಿ ಎಡೆ ದೊರೆತೀತೆ? ಜಗನ್ನಾಥ ದಿಲ್ಲಿಯನ್ನು ಬಿಡಬೇಕಾಯಿತು. ಅವನ ಗ್ರಹ ವಕ್ರಿಸಿತು. ದೇಶದಿಂದ ದೇಶಕ್ಕೆ ತನ್ನ ಯವನಿಯೊಡನೆ ಆತ ಅಲೆದ. ಕೆಲ ಕಾಲ ಕುಚಬಿಹಾರದ ಪ್ರಾಣನಾರಾಯಣ ರಾಜ ಅವನಿಗೆ ಆಶ್ರಯವಿತ್ತ. ಅವನ ಋಣವನ್ನು "ಪ್ರಾಣಾಭರಣ" ಕಾವ್ಯದಿಂದ ಜಗನ್ನಾಥ ತೀರಿಸಿದ. ಆದರೆ ಆ ರಾಜ್ಯವೂ ಔರಂಗಜೇಬನ ಪಾಲಾಯಿತು.

ಇಳಿ ವಯಸ್ಸು, ವಿಲಾಸ ಜೀವನದ ಅಭ್ಯಾಸಗಳ ಭಾರ, ನಿರಾಶ್ರಯ. ಜಗನ್ನಾಥನ ಮನಸ್ಸು ಈಗ ಪರಮಾತ್ಮನ ಕಡೆ ಹೊರಳಿತು. ಒಂದೆಡೆ ಅವನು ವಿಷ್ಣುವನ್ನು ದೈನ್ಯದಿಂದ ಸ್ತುತಿಸುತ್ತ,

> ವಿಷೀದತಾ ನಾಥ ವಿಷಾನಲೋಪಮೇ
> ವಿಷಾದಭೂಮೌ ಭವಸಾಗರೇ ಹರೇ
> ಪರಂ ಪ್ರತೀಕಾರಮಪಶ್ಯತಾಧುನಾ
> ಮಯಾಯಮಾತ್ಮಾ ಭವತೇ
>
> ನಿವೇದಿತಃ ।

ಈ ವಿಷಾಗ್ನಿಯಂಥ ಸಂಸಾರದಲ್ಲಿ ಪಶ್ಚಾತ್ತಾಪದಿಂದ ನೊಂದ ನನಗೆ ಬೇರೆ ಉಪಾಯ ಕಾಣದು. ನಿನಗೇ ನನ್ನನ್ನು ಅರ್ಪಿಸಿಕೊಂಡಿದ್ದೇನೆ— ಎಂದು ಅತ್ತಿದ್ದಾನೆ. ಅವನ ದೇವಸ್ತೋತ್ರಗಳಲ್ಲಿ ಅನಿರ್ವಚನೀಯವಾದೊಂದು ಆರ್ತ ಭಾವವಿದೆ.



ನಿರ್ಮಲವಾಗಿ ಸ್ನಾನ ಮಾಡುವುದರಲ್ಲಿ ಎಷ್ಟು ಸಂತೋಷವಿದೆಯೆಂಬುದು ಲೈಫ್‌ಬಾಯ್‌ಯಿಂದ ಗೊತ್ತಾಗುತ್ತದೆ. ಆ ಬೇಗೆಯ ಆಯಾಸದ ಭಾವವನ್ನು ಹೋಗಲಾಡಿಸುವುದಕ್ಕೂ ಮತ್ತು ಕೊಳೆಯಲ್ಲಿರುವ ಕ್ರಿಮಿಗಳನ್ನು ತೆಗೆಯುವುದಕ್ಕೂ ಲೈಫ್‌ಬಾಯ್‌ಗೆ ಸಮಾನವಾದದ್ದು ಯಾವುದೂ ಇಲ್ಲ. ಇಡೀ ಸಂಸಾರಕ್ಕೆ ಲೈಫ್‌ಬಾಯ್‌ಯಿಂದ ಸುಖಮಯ ಜೀವನ.

ಲೈಫ್‌ಬಾಯ್ ಎಲ್ಲಿದೆಯೋ ಅಲ್ಲಿದೆ ಆರೋಗ್ಯ!

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

L. 30-X29 KN

ಅಲೆಯುತ್ತ ಕಾಶಿಗೆ ಬಂದ. ಅಲ್ಲಿ ಬ್ರಾಹ್ಮಣರ ಬಹಿಷ್ಕಾರ ಕಾದಿತ್ತು. ಯಾರಿಗೂ ಬೇಡವಾಗಿದ್ದ ಆತ ಲವಂಗಿಯೊಡನೆ ಒಂದು ಮುಂಜಾನೆ ಗಂಗಾತೀರದಲ್ಲಿ ಬಿದ್ದುಕೊಂಡಿದ್ದಾಗ ಅವನ ಆಜೀವ ದ್ವೇಷಿ ಅಪ್ಪಯ್ಯ ದೀಕ್ಷಿತ ಗಂಗೆಯಲ್ಲಿ ಮಿಂದು ಮಡಿಯಾಗಿ ಬಿಡಾರಕ್ಕೆ ಹೊರಟವನು ಮುಸ್ಲಿಂ ಸ್ತ್ರೀಯ ಸಂಗಡ ಮಲಗಿದ ಬ್ರಾಹ್ಮಣನೊಬ್ಬನನ್ನು ಕಂಡು ಸಂಸ್ಕೃತದಲ್ಲೇ ಮೂಗು ಮುರಿದ:

ಕಿಂ ನಿಃಶಂಕಂ ಶೇಷೇ
ಶೇಷೇ ವಯಸಿ ತ್ವಮಾಗತೇ ಮೃತ್ಯೌ ?

ಮುಪ್ಪು ಬಂದಿದ್ದರೂ ಚಿಂತೆಯಿಲ್ಲದೆ ಇನ್ನೂ ಮಲಗಿದ್ದೀಯಲ್ಲಾ—ಎಂದು ಅರ್ಧ ಶ್ಲೋಕವನ್ನು ನುಡಿದವನೇ ಜಗನ್ನಾಥನ ಗುರುತು ಹತ್ತಿ ಅವಸರವಸರವಾಗಿ ಹೀಗೆ ಮುಗಿಸಿದ.

ಅಥವಾ ಸುಖಂ ಶಯಿಥಾ
ನಿಕಟೇ ಜಾಗರ್ತಿ ಜಾಹ್ನವೀ ಭವತಃ ।


(ಇರಲಿಬಿಡು. ಹಾಗೇ ಮಲಗಿರು. ಹತ್ತಿರವೇ ಗಂಗಾಮಾತೆ ನಿನಗಾಗಿ ಎಚ್ಚತ್ತೇ ಇದ್ದಾಳಲ್ಲ)

ಅಪ್ಪಯ್ಯ ಮುಂದೆ ಸಾಗಿದ. ಜಗನ್ನಾಥನಿಗೆ ತಟ್ಟನೆ ಹೊಳೆಯಿತು. ಶತ್ರುವಾದರೂ ಅಪ್ಪಯ್ಯ ತನಗೆ ದಾರಿ ತೋರಿಸಿದ್ದಾನೆ. ನಿಜ. ನನಿಗಿನ್ನು ಗಂಗೆಯೆ ಗತಿ. ಜಗನ್ನಾಥ ಎದ್ದು ಕುಳಿತ. ಗಂಗೆಯನ್ನು ಶ್ಲೋಕಗಳಲ್ಲಿ ಸ್ತುತಿಸಿದ. ಅವನ ಭಕ್ತಿ ಎಷ್ಟು ಏಕಾಗ್ರವಾಗಿತ್ತೆಂದರೆ, ಅವನ ಶ್ಲೋಕಗಳು ಎಷ್ಟು ಮನೋಹರವಾಗಿದ್ದವೆಂದರೆ ಒಂದೊಂದು ಶ್ಲೋಕದೊಡನೆ ಗಂಗೆ ಒಂದೊಂದು ಪಾವಟಿಗೆ ಏರಿ ಬಂದಳು. ೫೨ ನೇ ಶ್ಲೋಕದೊಡನೆ ಜಗನ್ನಾಥ ಮುಕ್ತಾಯಗೊಳಿಸಿದಾಗ ಅವನನ್ನೂ ಅವನ ಲವಂಗಿಯನ್ನೂ ಸೇರಿಯೇ ತನ್ನ ಸೆರಗಿನೊಳಗೆ ಸೆಳೆದುಕೊಂಡು ಹೋಗಿಬಿಟ್ಟಳು. ಬ್ರಾಹ್ಮಣರಿಗೆ ಬೇಡವಾದವನು ಗಂಗೆಗೆ ಬೇಕಾದನು.

ಈ ಕಥೆ-ಜಗನ್ನಾಥನ "ಗಂಗಾಲಹರಿ" ಯನ್ನು ಕೇಳಿ ಮೆಚ್ಚಿ ಗಂಗೆ ಅವನನ್ನು ಸೆಳೆದೊಯ್ದುದು:— ಅಕ್ಷರಶಃ ಸತ್ಯವಿಲ್ಲದಿರಬಹುದು. ಸಂಸ್ಕೃತ ಸಾಹಿತ್ಯದ ರತ್ನಗಳಲ್ಲೊಂದಾದ ಈ ಗಂಗಾ ಸ್ತೋತ್ರದ ಶ್ಲೋಕಗಳು ಅವನ "ರಸಗಂಗಾಧರ"ದಲ್ಲಿ ಉದಾಹರಿಸಲ್ಪಟ್ಟಿರುವುದರಿಂದ ಅದೇ ಅವನ ಕೊನೆಯ ಕೃತಿಯಾಗಿರಲಾರದು. ಆದರೆ ಈ ಧೀರೋದ್ಧತ ಕವಿಯ ಜೀವನ ಹೀಗೆಯೆ ಹೇಗೋ ದುರಂತದಲ್ಲಿ ಮುಗಿದುಹೋಗಿರಬೇಕು ಅವನು "ರಸಗಂಗಾಧರ"ವನ್ನು ತನ್ನ ಜೀವನದ ಕೊನೆಯ ಭಾಗದಲ್ಲಿ ಪ್ರಾರಂಭಿಸಿದ್ದನೆಂಬುದು ನಿರ್ವಿವಾದ. ಅದನ್ನು ಐದು "ಆನನ"ಗಳಲ್ಲಿ ಹೇಳುತ್ತೇನೆಂದಾತ ಪ್ರಾರಂಭದಲ್ಲಿ ಸಾರಿದ್ದಾನೆ. ಆದರೆ ಎರಡನೇ ಆನನದ ಮಧ್ಯದಲ್ಲಿ ಒಮ್ಮೆಲೆ ಅದು ನಿಂತುಹೋಗಿದೆ, ಯಾವ ನಿಲುಗಡೆಗೂ ಬಾರದೆ, ಒಂದು ಶ್ಲೋಕದ ನಡುವೆ. ಆ ಶ್ಲೋಕವನ್ನು ಪೂರ್ತಿಗೊಳಿಸಲೂ ಅವನಿಗೆ ಅವಕಾಶವಿರಲಿಲ್ಲ. ಕಾಲು ಜಾರಿ ಗಂಗೆಗೆ ಬಿದ್ದು ಆತ ಅಳಿದು ಹೋಗಿರಬಹುದು. ಆ ಮೇಲೆ ಹೀಗೆ ಕಥೆ ಬೆಳೆದಿರಬಹುದು. ಆದರೆ ಒಬ್ಬ ಕವಿಯ ಜೀವನಕ್ಕೆ ಅದು ಸರಿಯಾದ ಕಾವ್ಯಮಯ ಮುಕ್ತಾಯವೇ ಸೈ— ಸತ್ಯವಲ್ಲದಿದ್ದರೂ ಸುಂದರ— ಬಹುಶಃ ಶಿವ ಕೂಡ. ★

ಯುರೋಪಿನ ಕತ್ತಲೆಗಿಂತ ಭಾರತದ ಕತ್ತಲೆ ಎಷ್ಟು ಅನಿರ್ವಚನೀಯ ಸೌಂದರ್ಯವುಳ್ಳದ್ದು! ಅಲ್ಲಿನ ಅಂಧಕಾರ ಶುಷ್ಕವಾದದ್ದು, ದಟ್ಟವಾದದ್ದು; ಭಾರತದ್ದು ಸ್ನಿಗ್ಧ ಮತ್ತು ಏನೂ ಕಾಣದಿದ್ದರೂ ಪಾರದರ್ಶಕದ ಹಾಗೆ. ಯುರೋಪಿನ ಕತ್ತಲೆ ಕಗ್ಗಲ್ಲಿನ ಗೋಡೆ, ನಮ್ಮದೋ ಕರಿ ಮುಖಮಲ್ಲಿನ ಪರದೆ.

—ಮೋಹನ ಕಿಶೋರ (ಹಿಂದಿ)



ಅನುವಾದ :
ಬಳಕ್ಕೂರು ಸುಬ್ರಾಯ ಅಡಿಗ

ಧೈರ್ಯಂ ಸರ್ವಾರ್ಥ ಸಾಧನಂ

ಸ್ವಾಮೀ ಕೃಷ್ಣಾನಂದರು ಬಹುದಿನಗಳ ಹಿಂದೆ ತಮ್ಮ ಪ್ರವಚನದಲ್ಲಿ ಹೀಗೆಂದಿದ್ದರು—ಒಮ್ಮೆ ಭಗವಾನ್ ಬುದ್ಧರು ಸಂಜೆಯ ವೇಳೆ ಒಂದು ಮಠಕ್ಕೆ ಹೋಗಿ ರಾತ್ರಿ ಕಳೆಯಲು ಸ್ಥಳ ಕೇಳಿದರು. ಮಠಾಧೀಶ ಮತಾಂಧ ಹಿಂದೂ ಪುರೋಹಿತನಿದ್ದ. ಅವನು ಬುದ್ಧರನ್ನು ಕಾಣುತ್ತಲೇ ಉರಿದೆದ್ದು ತಿರಸ್ಕಾರದಿಂದ ಹೀಗೆಂದ– "ಆ ನದೀತೀರದ ಕೋಣೆಯಲ್ಲಿ ಸ್ಥಳ ವಿದೆ. ಬೇಕಿದ್ದರೆ, ರಾತ್ರಿ ಕಳೆಯಬಹುದು."

ಸತ್ಯ ಸಂಗತಿಯೇನಂದರೆ, ಆ ಕೋಣೆಯಲ್ಲಿ ಭಯಂಕರ ಸರ್ಪವೊಂದಿತ್ತು. ಅದುವರೆಗೆ ಹಲವಾರು ಜನರನ್ನು ಅದು ಕಚ್ಚಿತ್ತು. ತನ್ನಲ್ಲಿಗೆ ಬರುತ್ತಿದ್ದ ಶ್ರೀಮಂತ ಯಾತ್ರಿಕರನ್ನು ಪುರೋಹಿತ ಇದೇ ಕೋಣೆಯಲ್ಲೇ ಇರಗೊಡುತ್ತಿದ್ದ. ಬೆಳಿಗ್ಗೆ ಅವರ ಹೆಣಗಳನ್ನು ನದಿಗೆಸೆಯಲಾಗುತ್ತಿತ್ತು, ಮತ್ತು ಸಂಪತ್ತೆಲ್ಲ ಪುರೋಹಿತನ ವಶವಾಗುತ್ತಿತ್ತು.

ಭಗವಾನ್ ಬುದ್ಧರು ಅಲ್ಲೇ ತಂಗಿದರು. ರಾತ್ರಿ ಆ ಭಯಂಕರ ಸರ್ಪ ಹೊರಬಿದ್ದಾಗ ಬುದ್ಧರು ಧ್ಯಾನಮಗ್ನರಾಗಿದ್ದರು. ಸರ್ಪ ಅವರೆದುರು ಬಂದು ಬುಸುಗುಟ್ಟಿತು. ಆದರೆ ಅವರ ಸಮಾಧಿ ಭಂಗ ಹೊಂದಲಿಲ್ಲ. ಕಟ್ಟಕಡೆಗೆ ಸರ್ಪ ಸಿಟ್ಟಿನಿಂದ ಕುರುಡಾಗಿ ತಲೆ ಜಜ್ಜಿಕೊಂಡು ಸತ್ತುಹೋಯಿತು. ಬೆಳಿಗ್ಗೆ ಪುರೋಹಿತನು ಬುದ್ಧರ ಶವವನ್ನು ನದಿಗೆಸೆಯಲು ಬಂದಾಗ, ಅವರು ಆಗಲೂ ಧ್ಯಾನಮಗ್ನರಾಗಿದ್ದುದನ್ನೂ ಸರ್ಪ ಸತ್ತುದನ್ನೂ ಕಂಡ. 'ಇದೇಕೆ ಹೀಗಾಯಿತು?'-ಎಂಬುದು ಅವನ ಪಾಲಿಗೆ ಕೊನೆಯವರೆಗೂ ಬಿಡಿಸಲಾರದ ಸಮಸ್ಯೆಯಾಯಿತು.



ಎಷ್ಟೋ ವರ್ಷಗಳ ಹಿಂದಿನ ಮಾತು. ನಾನೊಂದು ನಾಯಿ ಸಾಕಿದ್ದೆ. ಅದು ಒಮ್ಮೆ ಗುರ್ರೆಂದರೆ ಸಾಕು, ಆಗಂತುಕರ ಜೀವ ಹಾರಿ ಹೋಗುತ್ತಿತ್ತು. ಬೆಳಿಗ್ಗೆ ಹಾಗೂ ಸಂಜೆ ನಾವ ದನ್ನು ಮನೆಯೊಳಗೆ ಕಟ್ಟುತ್ತಿದ್ದೆವು. ಮಧ್ಯಾಹ್ನ ಮಾತ್ರ ಹೊರಗೆ ಜಗಲಿಯಲ್ಲಿ ಕಟ್ಟುತ್ತಿದ್ದೆವು. ಈ ಜಗಲಿಯಿಂದ ಮೂರನೇ ಮಾಳಿಗೆಗೆ ಹೋಗಲು ದಾರಿಯಿತ್ತು. ಮತ್ತು ಮಧ್ಯಾಹ್ನದ ವೇಳೆ ಹೊಸಬರಾರೂ ಮೇಲೆ ಹೋಗುತ್ತಿರಲಿಲ್ಲ.

ಒಂದು ದಿನ ಅಕಸ್ಮಾತ್ ಮಧ್ಯಾಹ್ನದ ಗಾಡಿ ಯಿಂದ ನನ್ನ ಚಿಕ್ಕಪ್ಪ ಅಲ್ಲಿಗೆ ಬಂದರು. ಅವರು ಪೋಲೀಸ್ ಇನ್ಸ್‌ಪೆಕ್ಟರ್. ಅವರು ಹಾಗೆಯೇ ಮೇಲೇರಿದರು. ಮಕ್ಕಳದನ್ನು ನೋಡಿ–'ನಾಯಿ ಯಿದೆ, ಜಾಗ್ರತೆ' ಎಂದರು. ಅವರ ದನಿ ಕೇಳಿ ನಾನೂ ಮೇಲಿನ ಕೋಣೆಯಿಂದ ಹೊರಬಂದೆ. ಈಗವರು ಟೈಗರಿನತ್ತ ದೃಢಗತಿಯಿಂದ ಮುಂಬ ರಿಯುತ್ತಿದ್ದಾರೆ ಮತ್ತು ಟೈಗರ್ ನಿಂತು ಕೊಂಡರೂ ಬೊಗಳುವುದಿಲ್ಲ. ನಾನು ನಾಯಿಯ ಬಗ್ಗೆ ಎಚ್ಚರಿಕೆಯೀಯುವ ಮೊದಲೇ ಅವರು ಅದರ ಕಡೆ ಗಮನ ಕೊಡದೆ ಹಾಗೆಯೇ ಮೇಲೆ ಬಂದುಬಿಟ್ಟರು.

"ಟೈಗರ್ ಏನೂ ಮಾಡಲಿಲ್ಲವೆ ನಿಮಗೆ?"– ಎಂದು ನಾನು ಪ್ರಶ್ನಿಸಿದಾಗ ಅವರೆಂದರು: "ಇದು ಎಷ್ಟೆಂದರೂ ನಾಯಿ; ನಾವು ಮಹಾ ಮಹಾ ದರೋಡೆಗಾರರನ್ನೂ ಎದುರಿಸಬೇಕಾ ಗುತ್ತದೆ!"

ಯಾರಾದರೂ ಜಗಲಿಗೆ ಕಾಲಿಡುತ್ತಲೇ ಗುರ್ರೆ ನ್ನುವ ಈ ಟೈಗರ್ ಚಿಕ್ಕಪ್ಪನನ್ನು ಕಾಣುತ್ತಲೇ ಅದೇಕೆ ಮೌನ ತಾಳಿತು?— ಎಂಬುದೊಂದು ಅಗತ್ಯದ ಪ್ರಶ್ನೆಯಲ್ಲವೆ?

*

ಕ್ರಾಂತಿಕಾರಿ ಹುತಾತ್ಮರಾದ ಶ್ರೀ ರಾಮ ಪ್ರಸಾದ ಬಿಸ್ಮಿಲ್ಲರು ಅಂದು ಯಾವುದೋ ಸ್ಟೇಶ ನ್ನಿನಿಂದ ಗಾಡಿಯನ್ನೇರಲಿದ್ದರು. ಎಂತೆಂತೋ ಪೋಲೀಸರಿಗೆ ಅದರ ಸುಳಿವು ಸಿಕ್ಕಿತು. ಸ್ಟೇಶ



ನನ್ನು ಪೋಲೀಸರು ಮುತ್ತಿಬಿಟ್ಟರು. ಆದರೆ ಅವರಲ್ಲೊಬ್ಬನಿಗೂ ಬಿಸ್ಮಿಲ್ಲರ ಪರಿಚಯವಿರ ಲಿಲ್ಲ. ಸಮಯಕ್ಕೆ ಸರಿಯಾಗಿ ಬಿಸ್ಮಿಲ್ಲರು ಸೂಟ್ ಬೂಟ್ ಧರಿಸಿ ಕೈಯಲ್ಲಿ ಹಂಟರ್ ಹಿಡಿದು ದೊಡ್ಡ ಸಾಹೇಬರ ವೇಷದಲ್ಲಿ ಬಂದರು. ಸೂಟ್ ಕೇಸ್ ಕೂಲಿಯ ತಲೆಯ ಮೇಲಿರಿಸಿ, ಫಸ್ಟ್‌ಕ್ಲಾಸ್ ಟಿಕೇಟ್ ಹಿಡಿದು ಬರುತ್ತಿದ್ದರು. ಪ್ಲಾಟ್‌ಫಾರ್ಮ್ ಬರುತ್ತಲೇ ಕೂಲಿಯಾಳು ಕಲ್ಲೆಡವಿದುದರಿಂದ ತಲೆಯ ಮೇಲಿನ ಬ್ಯಾಗ್ ಕೆಳಗೆ ಬಿತ್ತು. ಮತ್ತು ಅದರಲ್ಲಿದ್ದ ರಿವಾಲ್ವರ್ ಹೊರಗುರುಳಿತು. ಪೋಲೀಸ್ ಅಧಿಕಾರಿ ಅಲ್ಲಿಗೆ ಬಂದಾಗ ಎಲ್ಲವೂ ತಿಳಿಯಿತು. ಆದರೆ ಗಾಬರಿ ಯಾಗುವವನು ಕ್ರಾಂತಿಕಾರಿಯೆ? ಬಿಸ್ಮಿಲ್ಲರು ಆಳಿನ ಮೇಲೆ ಒಂದೇ ಸವನೆ ಹಂಟರ್ ಬಾರಿಸ ತೊಡಗಿದರು...."ಸುವ್ವರ್, ನನ್ನ ಮೌಜರ್ ಮುರಿಯುತ್ತಿದ್ದರೆ ಏನು ಮಾಡಬೇಕಿತ್ತು?"— ಎನ್ನುತ್ತಾ ಅವರು ನಿಷ್ಕರುಣೆಯಿಂದ ಹೊಡೆಯು ತ್ತಿದ್ದರು...... ಪೋಲೀಸ್ ಅಧಿಕಾರಿಯ ಸಂದೇಹ ದೂರವಾಯಿತು; ಮತ್ತು ಅವನು ಮುಂಬರಿದು ರಿವಾಲ್ವರನ್ನು ಬ್ಯಾಗಿನಲ್ಲಿಟ್ಟು,

ಆಳಿನ ಮೂಲಕ ಫರ್ಸ್ಟ್ ಕ್ಲಾಸಿನಲ್ಲಿರಿಸಿದ. ಬಿಸ್ಮಿಲ್ಲರು ಅಧಿಕಾರಿಗೆ ಧನ್ಯವಾದವಿತ್ತು ತಮ್ಮ ಡಬ್ಬಿಗೆ ನಡೆದರು.

ಬೇಟಿ ಕೈಗೆ ಸಿಕ್ಕಾಗಲೂ ಅಧಿಕಾರಿ ಅದೇಕೆ ಕಳೆದುಕೊಂಡ?

*

ಈ ಮೂರೂ ಉದಾಹರಣೆಗಳು ಬೇರೆ ಬೇರೆ ರೀತಿಯವು. ಆದರೆ ಇವೆಲ್ಲವುಗಳ ಸಾರವೂ ಸ್ಥಿರತೆಯೆಂಬ ಒಂದೇ ಒಂದು ಶಬ್ದದಲ್ಲಿ ಅಡಕವಾಗುತ್ತದೆ. ಸಂಕಟ ಹಾಗೂ ಚಿಂತೆಯ ವೇಳೆಯಲ್ಲೂ ವಿವೇಕಗೆಡದೆ ಸ್ಥೈರ್ಯದಿಂದ ವರ್ತಿಸಬೇಕು. "ವಿಕಾರಹೇತೌ ಸತಿ ವಿಕ್ರಿಯಂತೇ ಯೇಷಾಂ ನ ಚೇತಾಂಸಿ ತ ಏವ ಧೀರಾಃ" ಅರ್ಥಾತ್ ಗಾಬರಿಯ ಸಂದರ್ಭದಲ್ಲೂ ಯಾರ ಮನಸ್ಸು ಅಸ್ಥಿರವಾಗುವುದಿಲ್ಲವೋ ಅವರೇ ವಾಸ್ತವವಾಗಿ ಧೀರಪುರುಷರು. ಈ ಧೈರ್ಯ ಕೆಲವರಲ್ಲಿ ಸ್ವಭಾವತಃ ಇರುತ್ತದೆ. ಮತ್ತು ಯಾರಲ್ಲಿಲ್ಲವೋ ಅವರು ಅಭ್ಯಾಸದಿಂದಲೇ ಇದನು ಪಡೆಯಬಲ್ಲರು. ಇದಕ್ಕೆ ಸ್ವತಃ ನಾನೇ ಒಂದು ಉದಾಹರಣೆಯಾಗಿದ್ದೇನೆ.


ಬಾಲ್ಯದಲ್ಲಿ ನಾನು ಅಂಜುಗುಳಿಯಾಗಿದ್ದೆ. ಅತಿ ಪ್ರೀತಿಯಿಂದಾಗಿ ತಾಯಿ ನನ್ನನ್ನು ಮನುಷ್ಯನಂತಲ್ಲ — ಹಕ್ಕಿಮರಿಯಂತೆ ಸಾಕಿದ್ದಳು. ಸಂಜೆಯಾಗುತ್ತಲೇ ಮನೆಗೆ ಬರುತ್ತಿದ್ದೆ. ಕತ್ತಲ ಹೆಸರೆತ್ತಿದರೇ ಹೆದರುತ್ತಿದ್ದೆ. ಕೇರಿಯ ಹೊರಗೆ ಹಗಲಿನಲ್ಲೂ ಕಾಲಿಡುತ್ತಿರಲಿಲ್ಲ. ದೊಡ್ಡವನಾದಾಗ ನಾನು ಮೆಲ್ಲಮೆಲ್ಲನೆ ಧೈರ್ಯ ತುಂಬಿಕೊಳ್ಳುತ್ತ ಹೋದೆ. ಎಂತಹ ಸಾಹಸಿಗಳೂ ಹೆದರುವಂತಹ ಪರಿಸ್ಥಿತಿಯಲ್ಲಿ ನಾನು ನಗು-ನಗುತ್ತ ಕೆಲಸ ಮಾಡುತ್ತೇನೆ.

*

ಈಶ್ವರನಲ್ಲಿ ನಂಬುಗೆಯೇ ಧೈರ್ಯ ಪಡೆಯುವ ಸರ್ವೋತ್ತಮ ಉಪಾಯ. ದೇವರು ಮಾಡುವುದೇ ಯೋಗ್ಯ; ಕೆಲಸ ಮಾಡುವುದು ಮಾತ್ರ ನನ್ನ ಕರ್ತವ್ಯ—ಈ ರೀತಿಯ ಭಾವನೆ ಮನುಷ್ಯನಿಗೆ ಧೈರ್ಯ ನೀಡುತ್ತದೆ; ಮತ್ತು ಮೆಲ್ಲಮೆಲ್ಲನೆ ಅದು ಅಭ್ಯಾಸವೆನಿಸುತ್ತದೆ. ಜೀವನದಲ್ಲಿ ಅಧೈರ್ಯದ ಯಾವ ಘಟನೆಯಾದರೂ ಸಂಭವಿಸಿದಾಗ ನೀವು ಏಕಾಂತದಲ್ಲಿ ಕುಳಿತು ತುಸು ಹೊತ್ತು ವಿಚಾರ ಮಾಡಿರಿ-ಪಶ್ಚಾತ್ತಾಪಪಡಿರಿ. ಅಯ್ಯೋ, ಇಷ್ಟು ಸಣ್ಣ ವಿಚಾರಕ್ಕಾಗಿ ನಾನೇಕೆ ಅಧೈರ್ಯ ತಾಳಿದೆ? ಮುಂದೆ ಇಂತಹ ಸಂದರ್ಭ ಬಂದಾಗ ಶಾಂತನಾಗುವೆ— ಎಂದು ನಿರ್ಧರಿಸಿದರೆ ನಿಮ್ಮ ನಡವಳಿಕೆ ರೂಪುಗೊಳ್ಳುತ್ತದೆ. ಮಾಡಿದ ತಪ್ಪಿಗಾಗಿ ಒಂದು ಹೊತ್ತಿನ ಊಟ ಬಿಟ್ಟುಬಿಡಿರಿ...... ಆಗ ನಿಮಗೆ ಮುಂಬರುವ ಸಂಕಟದಿಂದ ಪಾರಾಗುವ ಸುಗಮ ಮಾರ್ಗ ತಾನಾಗಿಯೇ ಹೊಳೆಯುವುದು.

ಗಾಬರಿಗೊಳ್ಳುವ ಮನುಷ್ಯನೆ! ನಿನ್ನಲ್ಲೂ ಈಶ್ವರವಿಭೂತಿ ಹಾಗೂ ದೇವರ ಬೆಳಕಿಲ್ಲವೆ? ಮನಸ್ಸನ್ನು ಶಾಂತವಾಗಿರಿಸಿ ಮುಷ್ಟಿಕಟ್ಟಿ ನಿನ್ನ ಹಾದಿಯಲ್ಲಿ ಮುನ್ನಡೆ; ದಾರಿಯ ತಡೆಗಳು ಹೇಡಿಗಳ ಪಾಲಿಗೆ ಮಾತ್ರ ತಡೆಗಳೆನಿಸುವವು; ಧೀರರಿಗೆ ಅವೇ ದಾರಿಯ ಮೆಟ್ಟಲುಗಳಾಗಿ ಪರಿಣಮಿಸುವವು; ವಿಪತ್ತುಗಳನ್ನು ಹತ್ತಿರ ಅಥವಾ ದೂರದಲ್ಲಿ ಕಂಡು ಕಂಗೆಡಬೇಡ. ನಿನ್ನ ಮನಸ್ಸನ್ನು ಅಂಕಿತದಲ್ಲಿಟ್ಟುಕೋ. ಭಗವಾನ್ ಬುದ್ಧರ ಆತ್ಮಸಾಧನೆ ನಮ್ಮಲ್ಲಿ ಇಲ್ಲದಿರಬಹುದು; ಆದರೆ ನನ್ನ ಇನ್ಸ್‌ಪೆಕ್ಟರ್ ಚಿಕ್ಕಪ್ಪನ ಹಾಗೂ ಕ್ರಾಂತಿಕಾರೀ ಬಿಸ್ಮಿಲ್ಲರ ಸ್ಥೈರ್ಯ ನಮ್ಮೆಲ್ಲರಲ್ಲೂ ಇರುವಂಥ ವಸ್ತು. ನಾವು ಟಿಕೇಟಿಲ್ಲದೆ ಪ್ರವಾಸ ಮಾಡುವುದಿಲ್ಲ. ಆದ್ದರಿಂದ ಟಿಕೇಟ್ ನಮ್ಮ ಬಳಿ ಯಾವ ಕಿಸೆಯಲ್ಲಾದರೂ ಇದ್ದೇ ಇದೆ. ಈಗ ಸಿಗದಿದ್ದರೆ ಸ್ಟೇಶನ್ನಿನಲ್ಲಿ ಸಿಕ್ಕೇ ಸಿಗುತ್ತದೆ. ಹೀಗಿರುವಾಗ, ಅಕಸ್ಮಾತ್ ಟಿಕೇಟ್ ಚೆಕ್ಕರ್ ಬಂದನೆಂದು ನಾವೇಕೆ ಗಾಬರಿಯಾಗಬೇಕು? *

"ನಯಾ ಜೀವನ" ದಿಂದ


ಅಶ್ವತ್ಥ ಮರದ ನೆರಳಲ್ಲಿ....
ಪ್ರತಿ ದಿನದ ಕೆಲಸ ಮುಗಿದ ಮೇಲೆ, ಭಾರತದ ಹಳ್ಳಿಗರು ಹೆಚ್ಚಾಗಿ ಹಳ್ಳಿಯ ಒಂದು ಅಶ್ವತ್ಥದ ಮರದಡಿಯಲ್ಲಿ ಎಲ್ಲರೂ ಒಟ್ಟು ಕೂಡಿ ಹರಟೆ ಹೊಡೆಯುವುದು ಅವರ ಸಂಪ್ರದಾಯವಾಗಿರುವುದು. ಇಂದು ಅವರ ನಡುವೆ ಡ್ರೈಸೆಲ್ ಬ್ಯಾಟರಿಯಿಂದ ಚಲಿಸುವ ರೇಡಿಯೋಗಳನ್ನು ಕಾಣುತ್ತೇವೆ. ಇಂತಹ ರೇಡಿಯೋಗಳಿಂದ ಅವರು ವರ್ತಮಾನಗಳನ್ನೂ ಮತ್ತು ಸುಮಧುರ ಸಂಗೀತಗಳನ್ನು ಪಡೆದು ಆನಂದಿಸುವುದು ಒಂದು ಸಾಮಾನ್ಯ ದೃಶ್ಯವಾಗಿ ಇಂದು ಪರಿಗಣಿಸಲ್ಪಟ್ಟಿರುತ್ತದೆ.
ಇಂದು ಭಾರತೀಯ ಹಳ್ಳಿಗನು ಸಂಗೀತದ ಬಗ್ಗೆ ಮತ್ತು ಅದನ್ನು ಒದಗಿಸುವ ಸಾಧನಗಳ ಬಗ್ಗೆ ಅಧಿಕ ಗಮನವನ್ನೀಯುತ್ತಿದ್ದಾನೆ. ಇದರ ಪರಿಣಾಮವಾಗಿ ಆತನ ರೇಡಿಯೋ ಉತ್ತಮವಾಗಿ ಚಲಿಸಲು ಎಸ್ಟ್ರೆಲಾ ರೇಡಿಯೋ ಬ್ಯಾಟರಿಗಳನ್ನೇ ಉಪಯೋಗಿಸುತ್ತಿದ್ದಾನೆ.
ದೀರ್ಘಕಾಲ ಬಾಳುವಂತೆ ತಯಾರಿಸಲ್ಪಟ್ಟ ಈ ಬ್ಯಾಟರಿ, ಡ್ರೈಸೆಲ್ ಬ್ಯಾಟರಿಯ ತಯಾರಿಕೆಯಲ್ಲಿ 20 ವರ್ಷಗಳ ಅಗಾಧ ಅನುಭವದ ಉತ್ಪಾದನೆ-ಯಾಗಿರುತ್ತದೆ. ಎಸ್ಟ್ರೆಲಾ ಬ್ಯಾಟರಿಗಳು ಪ್ರಖ್ಯಾತವಾದ ಅಂತರರಾಷ್ಟ್ರೀಯ ಪ್ರಮಾಣಕ್ಕೆ ತಕ್ಕಂತೆ ತಯಾರಿಸಲ್ಪಟ್ಟು ಪರೀಕ್ಷಿಸಿ ಸಿದ್ಧಗೊಳಿಸಲ್ಪಟ್ಟಿವೆ.
ಇಂದೇ ನಿಮ್ಮ ರೇಡಿಯೋಗೆ ಎಸ್ಟ್ರೆಲಾ ಬ್ಯಾಟರಿಯನ್ನು ಜೋಡಿಸಿರಿ ನೀವು ಬಯಸುವ ಎಲ್ಲಾ ಗುಣಗಳು ಇವಲ್ಲಿ ಕೂಡಿವೆ.
ಎಸ್ಟ್ರೆಲಾ
ರೇಡಿಯೋ ಬ್ಯಾಟರಿ
ನಿಮ್ಮ ರೇಡಿಯೋ ವ್ಯಾಪಾರಿಯಲ್ಲೀಗ ದೊರೆಯುತ್ತದೆ
ESTRELA
ಎಸ್ಟ್ರೆಲಾ ಬ್ಯಾಟರೀಸ್ ಲಿಮಿಟೆಡ್.
ಬೊಂಬಾಯಿ · ಮದ್ರಾಸ್ · ಡಿಲ್ಲಿ · ಕಲ್ಕತ್ತ · ಕಾನ್ ಪುರ್



ಅವಳು ಅವನಿಗಿಂತ ಆರು ವರ್ಷ
ಹಿರಿಯಳಾದರೂ ಅವನ ಹೃದ
ಯವನ್ನು ಕೊನೆವರೆಗೂ
ಸೆರೆ ಹಿಡಿದಿದ್ದಳು

ನೆಪೋಲಿಯನ್ನನ ಹೆಂಡತಿ

ಲಕ್ಷ್ಮೀನಾರಾಯಣ

ಕಾಳಗಗಳಲ್ಲಿ ಜಯವನ್ನಾದರೂ ಕಳೆದು ಕೊಂಡೇನು, ಆದರೆ ನನ್ನ ಒಂದೇ ಒಂದು ಕ್ಷಣವನ್ನು ವ್ಯರ್ಥಮಾಡಲಾರೆ ಎಂದಿದ್ದ ನೆಪೋಲಿಯನ್. ಕಾಲದ ಬೆಲೆಯನ್ನು ಅಷ್ಟರ ಮಟ್ಟಿಗೆ ಅರಿತಿದ್ದ ಮನುಷ್ಯನಾತ. ಆದರೆ ಆ ವ್ಯಕ್ತಿ ತನ್ನ ವಿವಾಹಕ್ಕೇ ಎರಡು ಗಂಟೆ ತಡವಾಗಿ ಬಂದ. ಅವನಿಗೆ ವಿವಾಹ ಮಾಡಿಸಲು ಚರ್ಚಿನಲ್ಲಿ ಕಾದು ಕುಳಿತಿದ್ದ ಪಾದ್ರಿ, ನೆಪೋಲಿಯನ್ ಬರುವ ಹೊತ್ತಿಗೆ ಆಕಳಿಸುತ್ತಾ ನಿದ್ರೆ ಹೋಗುವುದರಲ್ಲಿದ್ದ!

ಅವನಂಥ ಜಗದ್ವಿಖ್ಯಾತ ರಣವಿಕ್ರಮನನ್ನು ಅಂದು ವಿವಾಹವಾದ ಯುವತಿ ವೆಸ್ಟ್ ಇಂಡೀಸ್‌ನ ಪುಟ್ಟ ಹಳ್ಳಿಯ ಒಂದು ಬಡ ಕುಟುಂಬದಲ್ಲಿ ಜನಿಸಿದವಳು. ಅವಳ ಹೆಸರು 'ಮೇರಿ ಜೋಸೆಫ್ ರೋಸ್ ಟ್ಯಾಷರ್ ಲಾ ಪ್ಯಾಗರೀ' ಎಂದು. ಆದರೆ ಜಗತ್ತಿಗೆ ಅವಳು ತಿಳಿದಿರುವುದು ಜೋಸೆಫೈನ್ ಎಂಬ ತುಂಡು ಹೆಸರಿನಿಂದ ಮಾತ್ರ.

ಡಾ॥ ಜಾನ್‌ಸನ್ನನನ್ನು ವಿವಾಹವಾದಾಗ ಎಲಿಜಬೆತ್ತಳಿಗೆ ಅವನಿಗಿಂತ ಇಪ್ಪತ್ತು ವರುಷ ಹೆಚ್ಚು ವಯಸ್ಸಾಗಿತ್ತು. ಇಪ್ಪತ್ತಾರರಲ್ಲಿ ಕಾಲಿಟ್ಟಿದ್ದ ಜಾನ್‌ಸನ್ನನಿಗೆ ಆಕೆ ತಾಯಿಯಾಗಬಲ್ಲಷ್ಟು ದೊಡ್ಡವಳಾಗಿದ್ದಳು. ನೆಪೋಲಿಯನ್ನನ ಪತ್ನಿ ಅವನ ತಾಯಿಯಂತಿರದಿದ್ದರೂ ಅಕ್ಕನೆನಿಸಿಕೊಳ್ಳುವಷ್ಟು ಹಿರಿಯಳಾಗಿದ್ದಳು. ೧೭೯೬ ಮೇ ೧೮ ರಂದು ಅವನು ಅವಳನ್ನು ವಿವಾಹವಾದಾಗ ನೆಪೋಲಿಯನ್ನನಿಗೆ ಇಪ್ಪತ್ತೇಳು ವರುಷ, ಜೋಸೆಫೈನಳಿಗೆ ಮೂವತ್ತಮೂರು ವರುಷ.

ನೆಪೋಲಿಯನ್ ಅವಳನ್ನು ಆತುರದಿಂದಲೇ ಮದುವೆಯಾದುದೇನೋ ನಿಜ. ಆದರೆ ಅಷ್ಟು ಮಾತ್ರಕ್ಕೇ ಅವಳು ರೂಪವತಿಯಾಗಿದ್ದಿರಬಹುದೆಂದು ಊಹಿಸಿದರೆ ಅದು ಶುದ್ಧ ತಪ್ಪು. ರೂಪವತಿಯಿರಲಿ, ಆಕೆ ನೋಡಲು ಅಂಥ 'ಲಕ್ಷಣವಂತೆ' ಕೂಡ ಅಲ್ಲ. ಬಾಯಿ ತೆರೆದೊಡನೆ ಇಣಿಕುವ ಅವಳ ಹುಳುಕು ಹಲ್ಲುಗಳು, ಬೆಳೆದ ಎರಡು ಸ್ವಂತ ಮಕ್ಕಳು, ಇತಿಮಿತಿಯಿರದ ಸಾಲ–ಇವೆಲ್ಲ ಯಾವ ಗಂಡನ್ನೂ ಆಕರ್ಷಿಸುವಂಥವಾಗಿರಲಿಲ್ಲ.

ಆದರೂ ಜೋಸೆಫೈನ್ ಅವನನ್ನು ಬಲೆಗೆ ಹಾಕಿದಳು. ಬೇರೇನಿಲ್ಲದಿದ್ದರೂ ಹೆಣ್ಣಿಗೆ ತೀರ ಅಗತ್ಯವಾದ ಒಂದು ಶಕ್ತಿ—ಗಂಡನ್ನಾಡಿಸುವ ಕಲೆ ಅವಳಿಗೆ ಸಿದ್ಧಿಸಿಹೋಗಿತ್ತು.

ತನ್ನ ಪ್ರಥಮ ಪತಿ ಫ್ರಾನ್ಸಿನ ಕ್ರಾಂತಿಯಲ್ಲಿ ಕ್ರಾಂತಿಕಾರರ ವಿರೋಧಿ ಸೈನ್ಯದ ಅಧಿಕಾರಿಯಾಗಿ ಹೋರಾಡಿ ಗಿಲೊಟಿನ್‌ಗೆ ತಲೆಕೊಟ್ಟ ನಂತರ ಜೋಸೆಫೈನ್ ತನ್ನನ್ನು ವರಿಸಬಲ್ಲ ಯೋಗ್ಯ ವ್ಯಕ್ತಿಯ ಅನ್ವೇಷಣೆಯಲ್ಲಿದ್ದಳು. ಯಾರೋ ಅವಳ ಕಿವಿಯ ಮೇಲೆ ನೆಪೋಲಿಯನ್ನನ ಹೆಸರನ್ನು ಹಾಕಿದರು. ನೆಪೋಲಿಯನ್ ಆಗಿನ್ನೂ ಕ್ರಾಂತಿಪಕ್ಷದ ಒಬ್ಬ ಸಾಮಾನ್ಯ ಯೋಧ ಅಷ್ಟೆ. ಜೊತೆಗೆ ಬಳಿಯಲ್ಲಿ ಒಂದು ಬಿಡಿಗಾಸೂ ಇಲ್ಲದ ನಿರುಪಯೋಗಿ. ಇಷ್ಟು ಸಾಲದೆಂಬಂತೆ ಆಗ ತಾನೇ ಕಾಳಗವೊಂದರಿಂದ ಹಿಂದಿರುಗಿದ್ದ ಅವನಿಗೆ ಕಜ್ಜ ಬೇರೆ ಅಂಟಿಕೊಂಡಿತ್ತು. ಅದರಿಂದ ಪಾರಾಗಲು ನೆಪೋಲಿಯನ್ ತನ್ನ ತಲೆಯನ್ನೇ ಬೋಳಿಸಿಬಿಟ್ಟಿದ್ದ.

ಆದರೇನು, ಈ ಯೋಧ ಒಂದಲ್ಲ ಒಂದು ದಿನ ಜಗತ್ತಿನ ಮಹಾ ಗಂಡುಗಲಿಯಾಗುತ್ತಾನೆಂದು ಅವಳ ಅಂತರಂಗ ಹೇಳಿತೇನೋ. ಅವನನ್ನು ಭೆಟ್ಟಿಯಾಗುವ ಒಂದು ನೆವವನ್ನು ಹುಡುಕತೊಡಗಿದಳು ಜೋಸೆಫೈನ್. ಮಹಾ ಕುಶಾಗ್ರಮತಿಯಾದ ಆ ಹೆಣ್ಣಿಗೆ ಒಂದು ಉಪಾಯ ಮಿಂಚುವುದು ತಡವೆ? ಮಾರನೆಯ ದಿನ ಹನ್ನೆರಡು ವರುಷದ ಅವಳ ಹಿರಿಯ ಮಗ ತನ್ನ ಗತಿಸಿದ ತಂದೆಯ ಕತ್ತಿಯನ್ನು ಬೇಡಲು ನೆಪೋಲಿಯನ್ನನ ಬಳಿಗೆ ಬಂದ.

ಸತ್ತ ತಂದೆಯ ಕತ್ತಿ ಕೇಳಲು ಕ್ರಾಂತಿಯೋಧರ ಬೀಡಿಗೆ ಬಂದ ಈ ಚಿಕ್ಕ ಬಾಲಕನನ್ನು ಕಂಡು ನೆಪೋಲಿಯನ್ನನಿಗೆ ಆ ಹುಡುಗನ ಮೇಲೆ, ಅವನ ತಾಯಿಯ ಮೇಲೆ ಕೂಡಿಯೇ ಆಸಕ್ತಿ ಕೆರಳಿತು. ಮೃತರ ಅಸ್ತ್ರಗಳೆಲ್ಲ ಅವನ ಕಾವಲಿನಲ್ಲಿಯೇ ಇದ್ದವು. ಆ ಸಂಗ್ರಹದಿಂದ ತಂದೆಯ ಕತ್ತಿಯನ್ನು ಹುಡುಕಿ ತೆಗೆದುಕೊಂಡು ಹೋಗಲು ಆ ಹುಡುಗನಿಗೆ ಅನುಮತಿ ದೊರೆಯಿತು.

ಈ ಔದಾರ್ಯಕ್ಕೆ ಕೃತಜ್ಞತೆಯನ್ನರ್ಪಿಸಲೆಂದು ಮಾರನೆಯ ದಿನ ಜೋಸೆಫೈನ್ ಸಾಲಂಕೃತಳಾಗಿ ನೆಪೋಲಿಯನ್ನನಲ್ಲಿಗೆ ಬಂದಳು. ಅವಳ ಕಣ್ಣುಗಳಲ್ಲಿ ಕೃತಜ್ಞತೆ ಕಂಬನಿಯಾಗಿ ತುಳುಕಿತು. ಆ ಸುಸಂಸ್ಕೃತ ನಡೆ, ನುಡಿ, ಅವಳ ಧೀರ ನಿಲುವು ಎಲ್ಲ ನೆಪೋಲಿಯನನನ್ನು ದಂಗುಬಡಿಸಿಬಿಟ್ಟವು. ಅವಳು ತನಗಿಂತ ಉಚ್ಚಸಂಸ್ಕೃತಿಯ ವ್ಯಕ್ತಿಯೆಂಬುದರಲ್ಲಿ ಅವನಿಗೆ ಸಂದೇಹವುಳಿಯಲಿಲ್ಲ. ಹಾಗೆಂದೇ ಅವಳು ಉಪಾಹಾರಕ್ಕೆಂದು ತನ್ನ ಮನೆಗೆ ಆಹ್ವಾನಿಸಿದಾಗ ಅವನು ಉಬ್ಬಿಹೋದ. ಮನೆಗೆ ಹೋದಾಗ ಜೋಸೆಫೈನ್ ಅವನನ್ನು ಅಂಗಾಲಿನಿಂದ ನಡುನೆತ್ತಿಯವರೆಗೆ ಹೊಗಳಿದಳು. ಮುಂದೆ ಅವನೊಬ್ಬ ಇತಿಹಾಸ ಪ್ರಸಿದ್ಧ ಸೇನಾನಿಯಾಗುವುದು ಖಂಡಿತವೆಂದಳು. ಅವಳ ಒಂದೊಂದು ಮಾತಿನಲ್ಲೂ ಮಿಂಚು ಹರಿಯಿತು, ಅಮೃತ ಸುರಿಯಿತು. ಮುಂದೆ ಮೂರೇ ತಿಂಗಳಲ್ಲಿ ನೆಪೋಲಿಯನ್ ಅವಳನ್ನು ವಿವಾಹವಾದ!

ಪಾಪ! 'ಮಧುಚಂದ್ರ'ಕ್ಕೂ ಅವಕಾಶವಿಲ್ಲದಂತೆ ವಿವಾಹವಾದ ನಲವತ್ತೆಂಟು ಗಂಟೆಗಳಲ್ಲಿಯೇ ನೆಪೋಲಿಯನ್ ಇಟಲಿಯ ಮೇಲೆ ಯುದ್ಧಕ್ಕೆ ಹೊರಡಬೇಕಾಯಿತು. ಇಟಲಿಯನ್ನು ತಲುಪಿದಾಗ ಅವನ ಸೈನ್ಯ ಸರಿಯಾಗಿ ಅನ್ನನೀರಿಲ್ಲದೆ ಕಂಗಾಲಾಗಿತ್ತು. ಆದರೆ ಅಂಥ ಸೈನ್ಯವನ್ನೇ ಕಟ್ಟಿಕೊಂಡು ನೆಪೋಲಿಯನ್ ಜಗತ್ತು ಕೇಳರಿಯದಂಥ ಅದ್ಭುತ ಹೋರಾಟ ನಡೆಸಿದ; ಗೆಲುವನ್ನು ಮಡಲಿಗೆ ಹಾಕಿಕೊಂಡ. ಯುರೋಪಿನ ಮನೆಮನೆಯಲ್ಲೂ ಈಗ ಅವನದೇ ಮಾತಾಯಿತು.

ಎಲ್ಲಕ್ಕಿಂತ ವಿಚಿತ್ರವೆಂದರೆ ಇಂಥ ಬಿರುಸಾದ ಕಾಳಗದ ನಡುವೆಯೂ ನೆಪೋಲಿಯನ್ ಜೋಸೆಫೈನಳಿಗೆ ದಿನಕ್ಕೊಂದರಂತೆ ಪ್ರೇಮಪತ್ರ ಬರೆಯುತ್ತಿದ್ದುದು. ಪ್ರೇಮಪತ್ರಗಳೆಂದರೆ ಅಂಥಿಂಥವಲ್ಲ. ನೆಪೋಲಿಯನ್ ಜೋಸೆಫೈನಳಿಗೆ ಬರೆದವು

ಗಳಲ್ಲಿ ದೊರೆತ ಎಂಟು ಪ್ರೇಮಪತ್ರಗಳನ್ನು ೧೯೩೩ ರಲ್ಲಿ ಶ್ರೀಮಂತನೊಬ್ಬ ಇಪ್ಪತ್ತು ಸಾವಿರ ಶಿಲಿಂಗುಗಳಿಗೆ ಕೊಂಡ. ಆ ಪತ್ರಗಳಲ್ಲಿನ ಒಂದು ತುಂಡು ಇಲ್ಲಿದೆ:

"ನನ್ನ ಪ್ರೀತಿಯ ಜೋಸೆಫೈನ್,

"ಬುದ್ಧಿಯನ್ನೇ ಅಪಹರಿಸಿದ ಪ್ರೇಮವನ್ನು ನನ್ನಲ್ಲುಕ್ಕಿಸಿದ ದೇವತೆಯೆ! ಏನು ಹೇಳಲಿ ನನ್ನ ಸ್ಥಿತಿ. ನಾನೀಗ ಉಣ್ಣಲಾರೆ, ನಿದ್ರಿಸಲಾರೆ. ಆಪ್ತ ಸ್ನೇಹಿತರನ್ನು ಸಹ ಲಕ್ಷಿಸಲಾರೆ. ಯಾವ ಯಶಸ್ಸೂ ನನಗೆ ಬೇಕಾಗಿಲ್ಲ. ಯುದ್ಧದಲ್ಲಿ ಜಯ ಬೇಕೆಂದು ನಾನು ಬಯಸುತ್ತಿದ್ದರೆ ಅದು ನಿನಗೆ ಸಂತೋಷ ಕೊಡುವುದೆಂಬ ಕಾರಣಕ್ಕಾಗಿ ಮಾತ್ರ. ನಿನಗಾಗಲ್ಲದಿದ್ದಲ್ಲಿ ಈ ಸೈನ್ಯ, ಯುದ್ಧ— ಎಲ್ಲವನ್ನೂ ಚೆಲ್ಲಿಕೊಟ್ಟು ಪ್ಯಾರಿಸಿಗೆ ಓಡಿ ಬಂದುಬಿಡುತ್ತಿದ್ದೆ, ನಿನ್ನ ಪಾದದಡಿ ಒರಗುತ್ತಿದ್ದೆ.

"ನನ್ನಲ್ಲಿ ಅನಂತ ಪ್ರೇಮವನ್ನುಕ್ಕಿಸಿದ ಮೋಹಿನಿಯೆ! ಮತ್ತು ಹಿಡಿಸುವಂಥ ಮೋಹದ ಹುಚ್ಚನ್ನು ಉತ್ತೇಜಿಸಿದ ಅಪ್ಸರೆಯೆ! ನಿನ್ನ ಚಿತ್ರವನ್ನು ನೋಡದೆ ನಾನು ಒಂದೇ ಒಂದು ಗಂಟೆಯನ್ನೂ ಕಳೆಯಲಾರೆ; ನೋಡಿದಾಗಲೆಲ್ಲ ಅದನ್ನು ಮುತ್ತುಗಳಿಂದ ಮುಚ್ಚದಿರಲಾರೆ."

ಅವನ ಇತರ ಪತ್ರಗಳೊಡನೆ ಹೋಲಿಸಿದರೆ ಇದು ತೀರ ಸಾಮಾನ್ಯ ರೀತಿಯ ಬರೆಹ ಎನಿಸೀತು. ಇಂಥ ಪತ್ರಕ್ಕೆ ಮಾರು ಹೋಗದ ಹೆಣ್ಣು ಉಂಟೆ? ಆದರೆ ಜೋಸೆಫೈನ್ ಅವುಗಳನ್ನು ಲಕ್ಷಿಸಲೇ ಇಲ್ಲ. ಕಡೆಗೆ ಅವುಗಳಿಗೆ ಉತ್ತರಿಸುವಷ್ಟು ಕೃಪೆಯನ್ನೂ ತೋರಲಿಲ್ಲ. ಅವಳೀಗ ಬೇರೊಬ್ಬನ ಜೊತೆಯಲ್ಲಿ ತಿರುಗಾಡತೊಡಗಿದ್ದಳು!

ಈ ಅಲಕ್ಷವನ್ನು ಕಂಡು ನೆಪೋಲಿಯನ್ ತುಂಬ ಬೇಸತ್ತ. ಕಡೆಗೊಮ್ಮೆ ಈಜಿಪ್ಟಿನಲ್ಲಿ (೧೭೯೮-೯೯)ಯುದ್ಧದಲ್ಲಿ ತೊಡಗಿದ್ದವನು ಯಾವಳೋ ಒಬ್ಬ ಚೆಲುವೆಯನ್ನು ತನ್ನ ಬಿಡಾರದಲ್ಲಿ ಉಪಾಹಾರಕ್ಕೆ ಆಹ್ವಾನಿಸಿದನಂತೆ. ಈ ಸುದ್ದಿ ಅದು ಹೇಗೋ ಸಾವಿರಾರು ಮೈಲು ಹರಿದು ಬಂದು ಜೋಸೆಫೈನಳ ಕಿವಿಗೆ ಬಿತ್ತು.

ಸರಿ. ನೆಪೋಲಿಯನ್ ಯುದ್ಧ ಮುಗಿಸಿ ಮನೆಗೆ ಹಿಂದಿರುಗಿದಾಗ ಅಲ್ಲಿ ಜೋಸೆಫೈನಳೊಡನೆ 'ಈಜಿಪ್ಟಿನ ಟೀ ಪಾರ್ಟಿ'ಯ ಸಂಬಂಧವಾಗಿ ಮತ್ತೊಂದು ಯುದ್ಧವೇ ಕಾದಿತ್ತು.

ಯಾರ ಮನೆ ದೋಸೆ ತೂತಲ್ಲ? ನೆಪೋಲಿಯನ್ನನ ಸೋದರಿಯರಿಗೆ ತಮಗಿಂತ ಉತ್ತಮ ರೀತಿಯಲ್ಲಿ ಬೆಳೆದ ಜೋಸೆಫೈನಳನ್ನು ಕಂಡರೆ ಅಸೂಯೆ, ಮತ್ಸರ. ಅವಳು ತಮ್ಮನ್ನು ಉದ್ದೇಶಪೂರ್ವಕ ಅಲಕ್ಷಿಸುತ್ತಾಳೆಂಬ ಸಂಶಯದ ಕ್ರಿಮಿ ಬೇರೆ ಅವರ ತಲೆ ಸೇರಿಬಿಟ್ಟಿತ್ತು. ಈ ದ್ವೇಷದ ಫಲವಾಗಿ ಜೋಸೆಫೈನ್ ಅವರಿಂದ 'ಮುದಿ ಹೆಂಗಸು' ಎಂಬ ಬಿರುದು ಹೊತ್ತಳು. 'ನಿನ್ನ ಆ ದಪ್ಪ, ಮುದಿ ಹೆಂಗಸನ್ನು ಬಿಟ್ಟು ಬೇರೊಂದು ಚಿಕ್ಕ ಹುಡುಗಿಯನ್ನು ಮದುವೆಯಾಗೆ'ಂದು ನೆಪೋಲಿಯನ್ನನಿಗೆ ಸೋದರಿಯರ ಒತ್ತಾಯ ಪ್ರಾರಂಭವಾಯಿತು.

ಯಾರೇನೇ ಹೇಳಲಿ ನೆಪೋಲಿಯನ್ನನಿಗೆ ತನ್ನ ಪತ್ನಿಯಲ್ಲಿ ಪ್ರೀತಿ ಅಳಿಯಲಿಲ್ಲ. ಕ್ರಾಂತಿ ತನ್ನ ಕ್ರೌರ್ಯದಿಂದ ತಾನೇ ನಾಶ ಹೊಂದಿ ನೆಪೋಲಿಯನ್ನನಿಗೆ ಅಧಿಕಾರವೊಪ್ಪಿಸಿದಾಗ (೧೭೯೯) ಅವಳಾತನಿಗೆ "ಗೃಹಿಣೀ ಸಚಿವಃ" ಎರಡೂ ಆದಳು. ಐದು ವರುಷಗಳ ನಂತರ ನೆಪೋಲಿಯನ್ನನಿಗೆ ಫ್ರಾನ್ಸು ಚಕ್ರವರ್ತಿಯಾಗಿ ಪಟ್ಟಾಭಿಷೇಕ ಮಾಡಿದಾಗ ಅವಳನ್ನಾತ ವಿಧಿವತ್ತಾಗಿ (ಮೊದಲು ಆದದ್ದು ಸಿವಿಲ್ ವಿವಾಹ ಮಾತ್ರ) ವರಿಸಿದ. ಜೋಸೆಫೈನ್ ಈಗ ಚಕ್ರವರ್ತಿನಿಯಾದಳು.

ವರ್ಷಗಳು ಕಳೆದವು. ಆದರೆ ಜೋಸೆಫೈನ್‌ಗೆ ಚಕ್ರವರ್ತಿನಿಯಾಗಿ ಕೊನೆವರೆಗೆ ಉಳಿಯುವ ಯೋಗ ಇರಲಿಲ್ಲ. ಸೋದರಿಯರಿಗಾಗಲ್ಲದಿದ್ದರೆ ಬೇರೊಂದು ಕಾರಣಕ್ಕಾಗಿಯಾದರೂ ನೆಪೋಲಿಯನ್ ವಿವಾಹವಿಚ್ಛೇದ ಮಾಡಿಕೊಳ್ಳುವುದು ಅಗತ್ಯವಾಗುವ ಸ್ಥಿತಿ ಬಂದೊದಗಿತ್ತು.

ನೆಪೋಲಿಯನ್ನನಿಗೆ ಜೋಸೆಫೈನಳಲ್ಲಿ ಮಕ್ಕಳಾಗಿರಲಿಲ್ಲ. ಮಕ್ಕಳು ಬೇಕಾದಲ್ಲಿ ಬೇರೆ ವಿವಾಹವಾಗಬೇಕಾದುದು ಅನಿವಾರ್ಯವೆನಿಸಿತು ಅವನಿಗೆ. ವಿಧಿಯಿಲ್ಲದೆ ಹದಿಮೂರು ವರ್ಷಗಳ ದಾಂಪತ್ಯದ ನಂತರ ವಿವಾಹವಿಚ್ಛೇದದ ಪತ್ರಕ್ಕೆ ಸಹಿಮಾಡುವಾಗ ಆ ಯೋಧನ ಕಣ್ಣಲ್ಲಿ ಕಂಬನಿ ಉಕ್ಕಿಬಂತು. ಅದಾದ ಮೂರು ದಿನಗಳ ವರೆಗೆ ನೆಪೋಲಿಯನ್ ಊಟ, ತಿಂಡಿಗಳನ್ನು ಬಿಟ್ಟು ಯಾರನ್ನೂ ನೋಡಬಯಸದೆ ಒಬ್ಬನೇ ಶೂನ್ಯದೃಷ್ಟಿಯಿಂದ ಆಕಾಶವನ್ನು ನೋಡುತ್ತ ಕುಳಿತುಬಿಟ್ಟಿದ್ದನಂತೆ. ಈ ವಿಚ್ಛೇದದ ನಂತರ ಆಸ್ಟ್ರಿಯಾದ ರಾಜಕುಮಾರಿ ಮೇರಿ ಲೂಯಿ ಅವನ ಪತ್ನಿಯಾದಳು.

ಆದರೆ ನೆಪೋಲಿಯನ್ನನ ದುರದೃಷ್ಟಕ್ಕೆ ಮಿತಿಯಿರಲಿಲ್ಲ. ಆಸ್ಟ್ರಿಯಾದ ರಾಜಕುಮಾರಿ ಅವನಿಗೆ ಮಗನನ್ನಿತ್ತರೂ ಮನಸ್ಸನ್ನೀಯಲಿಲ್ಲ. ಎಷ್ಟಾದರೂ ಆಸ್ಟ್ರೀಯಾ ನೆಪೋಲಿಯನ್ನನಿಂದ ಸಾಕಷ್ಟು ಒದೆತ ತಿಂದ ದೇಶ. ಅಲ್ಲಿಯ ಜನರಿಗೆಲ್ಲಾ ನೆಪೋಲಿಯನ್ ಆಜೀವ ಶತ್ರುವಾಗಿ ಪರಿಣಮಿಸಿದ್ದ. ತನಗೆ ಗಂಡನಾಗುವ ಮೊದಲೇ ಶತ್ರುವಾಗಿದ್ದ ನೆಪೋಲಿಯನ್ನನನ್ನು ಆಸ್ಟ್ರಿಯಾದ ರಾಜಕುಮಾರಿ ದ್ವೇಷಿಸಲು ಕಲಿತಳೇ ಹೊರತು ಪ್ರೀತಿಸಲಿಲ್ಲ. ಆಕೆ ನೆಪೋಲಿಯನ್ನನನ್ನು ವಿವಾಹವಾದದ್ದು ಕೂಡ ರಾಜಕೀಯ ಕಾರಣಗಳಿಗಾಗಿ! ಉದ್ದಕ್ಕೂ ಅವಳು ಅವನ ಅಹಿತವನ್ನೇ ಬಯಸಿದಳು, ಕಡೆಕಡೆಗೆ ನೆಪೋಲಿಯನ್ ಅಪಜಯಗಳನ್ನೆದುರಿಸಬೇಕಾಗಿ ಬಂದಾಗ ಅವನನ್ನು ಸಂಪೂರ್ಣವಾಗಿ ಕೈಬಿಟ್ಟಳು. ಸಾಲದೆಂಬಂತೆ ಮಕ್ಕಳೂ ತನ್ನ ಗಂಡನನ್ನು ದ್ವೇಷಿಸುವಂತೆ ಮಾಡಿ ತನ್ನ ರಾಷ್ಟದ ಪರವಾಗಿ ಅವನ ಮೇಲೆ ಭಯಂಕರ ರೀತಿಯಲ್ಲಿ ಸೇಡು ತೀರಿಸಿಕೊಂಡಳು.

ನಿಜವಾಗಿ ನೆಪೋಲಿಯನ್ನನ ಪ್ರೀತಿಗೆ ಪಾತ್ರಳಾಗಿದ್ದವಳು ಜೋಸೆಫೈನ್‌ಳೊಬ್ಬಳೇ. ಅವಳು ಸತ್ತಮೇಲೆ ಗೋರಿಯ ಬಳಿ ಹೋಗಿ ನೆಪೋಲಿಯನ್ ಅಳುತ್ತಾ ಹೇಳಿದನಂತೆ: "ನನ್ನ ಜೋಸೆಫೈನ್ ಏನೇ ಆಗಿದ್ದಿರಲಿ, ಅವಳು ನನ್ನನ್ನು ಹೀಗೆ ಕಡೆಗಾಲದಲ್ಲಿ ಕೈಬಿಡುತ್ತಿರಲಿಲ್ಲ."

ಕಡೆಗೆ ಸೆಂಟ್ ಹೆಲೀನಾದಲ್ಲಿ ಕಣ್ಣು ಮುಚ್ಚುವಾಗ ಆ ಮಹಾರಥನ ತುಟಿಯಿಂದ ಜಾರಿದ ಕಟ್ಟಕಡೆಯ ಪದವಾದರೂ ಅದೇ— 'ಜೋಸೆಫೈನ್.'

*

ಅಂಕೆಗಳು ನುಡಿವ ಸಾಕ್ಷ್ಯ

ಇಡೀ ಜಗತ್ತಿನಲ್ಲಿ ಇಂಗ್ಲಿಷರು ಕ್ಷೌರ ಮಾಡಿಕೊಳ್ಳುವುದರಲ್ಲಿ ಗಟ್ಟಿಗರು. ಅವರು ಉಪಯೋಗಿಸುವಷ್ಟು 'ರೇಜರ'ನ್ನು ಯಾವ ರಾಷ್ಟ್ರದವರೂ ಉಪಯೋಗಿಸುವುದಿಲ್ಲ. ಅಮೇರಿಕನರು, ಜರ್ಮನರು, ಸ್ವಿಸ್ಸರು ಒಂದು ವಾರದಲ್ಲಿ ಸರಾಸರಿ ಐದು ಬಾರಿ ಮುಖಕ್ಷೌರ ಮಾಡುತ್ತಾರೆ. ಫ್ರೆಂಚರು ವಾರದಲ್ಲಿ ಎರಡೇ ಬಾರಿ ಗಡ್ಡ ಬೋಳಿಸುತ್ತಾರೆ. ಇಂಗ್ಲೀಷರು ಮಾತ್ರ ವಾರದ ಏಳೂ ದಿನಗಳಲ್ಲಿ ತಪ್ಪದೇ ಮುಖಕ್ಷೌರ ಮಾಡುತ್ತಾರೆ. ಇಂಗ್ಲೀಷರ ಕ್ಷೌರದ ವಿಷಯ ಹೆಚ್ಚಿನ ಅಭ್ಯಾಸಮಾಡಿದ ಫ್ರೆಂಚ್ ವಿದ್ವಾಂಸನೊಬ್ಬನ ಪ್ರಕಾರ ಒಬ್ಬ ಇಂಗ್ಲೀಷ ಜನಸಾಮಾನ್ಯನು ತನ್ನ ಜೀವಮಾನದಲ್ಲಿ ಸರಾಸರಿ ಅರ್ಧ ಚದರ ಮೈಲಿನಷ್ಟು ಸ್ಥಳದಲ್ಲಿ ೨,೫೦,೦೦,೦೦೦ ರೋಮಗಳನ್ನು ಬೋಳಿಸಿ ತೆಗೆಯುತ್ತಾನೆ.

—ನಾಗೇಶರಾವ್, ಉಡುಪಿ

ಅವನಿಗಾಗಿ ಅದು ಮಾಡದ ಕೆಲಸವಿಲ್ಲ

ಮನುಷ್ಯನ ಮಿತ್ರ:
ನಾಯಿ

ಕ್ಯಾಪ್ಟನ್ ಎಂ. ಜಿ. ಕೆ. ಮೂರ್ತಿ



ಷಪರ್ಡ್



ಪೂಡಲ್



ಹಿಮನಾಯಿ



ಬ್ಲಡ್ ಹೌಂಡ್


ಈ ಸ್ವಾರ್ಥಿ ಪ್ರಪಂಚದಲ್ಲಿ ಮನುಷ್ಯನಿಗೆ ನಿಃಸ್ವಾರ್ಥನಾದ ಒಬ್ಬ ಮಿತ್ರ— ಅವನ ಇತರ ಸ್ನೇಹಿತರೆಲ್ಲರೂ ಅವನನ್ನು ಕೈಬಿಟ್ಟರೂ ತಾನು ಮಾತ್ರ ಕೈಬಿಡದ ಒಬ್ಬ ಮಿತ್ರನೆಂದರೆ ಅವನ ನಾಯಿ. ನಂಬಿಕೆ, ಪ್ರಾಮಾಣಿಕತೆ, ಆಜ್ಞಾಧಾರಕ ಬುದ್ಧಿ, ಸ್ವಾಮಿನಿಷ್ಠೆ ಮತ್ತು ಅನುರಾಗಗಳಲ್ಲಿ ನಾಯಿಯನ್ನು ಮೀರಿಸುವ ಪ್ರಾಣಿಯಿಲ್ಲ.

ನಾಯಿಗಳು ಪ್ರದರ್ಶಿಸುವ ಕೌಶಲ್ಯ, ಚುರುಕುಬುದ್ಧಿ, ಗ್ರಹಣ ಶಕಿ ಗಳು ಬೆರಗುಗೊಳಿಸುತ್ತವೆ. ಟಬ್ಬಿ ಎಂಬ ನಾಯಿ ಸೌದೆ ಸಂಗ್ರಹಿಸುವುದು, ಎಣಿಕೆ ಮಾಡುವುದು, ದನಕರುಗಳನ್ನು ಸಂಭಾಳಿಸುವುದು ಮುಂತಾದ ಬೇರೆ ಬೇರೆ ೧೫೦ ಕೆಲಸಗಳನ್ನು ಕಲಿತಿತು. ಹದಿನೈದು ಬೇರೆ ಬೇರೆ ಪದಾರ್ಥಗಳನ್ನು ೨೫ ಅಡಿ ಆಚೆ ಚೆಲ್ಲಾಪಿಲ್ಲಿಯಾಗಿಟ್ಟು, ಯಾವ ಪದಾರ್ಥದ ಹೆಸರನ್ನು ಹೇಳಿದರೂ ಟಬ್ಬಿಯು ಅದನ್ನು ಆರಿಸಿ ತರುತ್ತಿತ್ತು. ಟೋನಿ ಎಂಬ ನಾಯಿಯು ತನ್ನ ಹೆಸರನ್ನು ಚಿಕ್ಕ ಇಟ್ಟಿಗೆಗಳಿಂದ ಜೋಡಿಸುತ್ತಿತ್ತು. ಬಾಯಿ ಪಾದ್ಯಕ್ಕೆ ತಕ್ಕಂತೆ ನರ್ತನಮಾಡಿ ಹಾಡುತ್ತಿತ್ತು, ಮತ್ತು ಇಸ್ಪೀಟಿನ ಕಟ್ಟಿನಿಂದ ಎಕ್ಕಾ (Ace) ಗಳನ್ನು ಆರಿಸಿ ತೆಗೆಯುತ್ತಿತ್ತು. ಮತ್ತೊಂದು ನಾಯಿಯು ಪೇಟೆಯಲ್ಲಿ ಒಬ್ಬನನ್ನು


ಪ್ರತಿದಿನವೂ ನೋಡಲು ಟ್ರಾಂನಲ್ಲಿ ಹತ್ತಿಕೊಂಡು ಹೋಗುತ್ತಿತು. ತಪ್ಪಾದ ಟ್ರಾಂನಲ್ಲಿ ಹತ್ತಿದಾಗ ಆ ನಾಯಿಯು ಟ್ರಾಂ ಮೊದಲನೆ ಸಾರಿ ನಿಂತೊಡನೆ ಕೆಳಗಿಳಿದು ಮುಂದಿನ ಟ್ರಾಂ ಬರುವವರೆಗೂ ಕಾದು, ಅದನ್ನು ಹತ್ತುತ್ತಿತ್ತು.

ನಾಯಿ ಸಾಧಿಸಿರುವ ಅದ್ಭುತಗಳಿಗೆಲ್ಲ ಎರಡು ಸಂಗತಿಗಳು ಕಾರಣ: ಯಜಮಾನನ ಪ್ರಶಂಸೆಗಾಗಿ ಆಸೆ ಮತ್ತು ಅದರ ಅಸಾಧಾರಣ ಸೂಕ್ಷ್ಮ ಇಂದ್ರಿಯಗಳು. ವಾಸನೆ ಹಿಡಿಯುವುದರಲ್ಲಿ ನಾಯಿಗೆ ಅದ್ಭುತ ಶಕ್ತಿಯಿದೆ. ನಾಯಿಯು ಜೀವಿಸುವುದೇ ವಾಸನೆಯ ಪ್ರಪಂಚದಲ್ಲೆಂದು ಹೇಳಬಹುದು. ನಾಯಿಯ ಮಿದುಳಿನಲ್ಲಿ ಘ್ರಾಣೇಂದ್ರಿಯಜನ್ಯ ಜ್ಞಾನವನ್ನು ಉತ್ಪತ್ತಿ ಮಾಡುವ ಭಾಗವು ಮನುಷ್ಯನದಕ್ಕಿಂತಲೂ ತುಂಬ ವಿಶಾಲವಾಗಿದೆ. ಒಂದು ಬೆಟ್ಟನ ಕೊನೆಯಿಂದ ಮಾತ್ರ ಮುಟ್ಟಲ್ಪಟ್ಟ ಒಂದು ಮರದ ತುಂಡನ್ನು ಏಕರೂಪವಾದ ನಲವತ್ತು ತುಂಡುಗಳ ಮಧ್ಯದಲ್ಲಿಟ್ಟರೂ ತರಬೇತು ಮಾಡಿದ ನಾಯಿಯು ವಾಸನಾ ಶಕ್ತಿಯಿಂದ ಆ ತುಂಡನ್ನು ತಕ್ಷಣವೆ ಪತ್ತೆ ಮಾಡುತ್ತದೆ ಓಡುವಾಗ ನಾಯಿಯು ತನ್ನ ಲಕ್ಷ್ಯವನ್ನು ಘ್ರಾಣೇಂದ್ರಿಯ ವಾಸನೆಯ ಮೇಲೆ ಏಕಾಗ್ರಗೊಳಿಸುತ್ತದೆ. ಅದು ಎಷ್ಟು ಸೂಕ್ಷ್ಮ ಮತ್ತು ಚುರುಕೆಂದರೆ ಒಂದು ಪ್ರಾಣಿಯ ಕಾಲಿನ ವಾಸನೆ, ಶರೀರ ವಾಸನೆಗಳಲ್ಲಿರುವ ಭೇದವನ್ನೂ ಗಾಯಗೊಂಡ ಪ್ರಾಣಿ, ಸತ್ತ ಪ್ರಾಣಿಯ ವಾಸನೆಗಳ ವ್ಯತ್ಯಾಸವನ್ನೂ ತಿಳಿಯಬಲ್ಲದು; ಕಾಲಿನ ವಾಸನೆಯು ಎಲ್ಲಿಂದ ಯಾವ ಕಡೆ ಹೋಗಿದೆಯೆಂದು ತೋರಿಸಬಲ್ಲದು. ಒಂದು ಮಾರ್ಗದಲ್ಲಿ ಎಷ್ಟೇ ವಾಸನೆಗಳು ಒಂದರ ಮೇಲೊಂದು ಸೇರಿದ್ದರೂ ಕೆಲವು ನಾಯಿಗಳು ನಿಶ್ಚಿತ ವಾಸನೆಯ ದಾರಿಯನ್ನು ತಪ್ಪಿಲ್ಲದೆ ಅನುಸರಿಸಿ ಹೋಗಬಲ್ಲವು.

ನಾಯಿಯ ಕರ್ಣಶಕ್ತಿಯೂ ಮನುಷ್ಯನದಕ್ಕಿಂತ ಬಹಳ ಸೂಕ್ಷ್ಮ. ಮನುಷ್ಯನಿಗೆ ೬॥ ಗಜದಲ್ಲಿ ಕೇಳಿಸದಷ್ಟು ಸೂಕ್ಷ್ಮವಾದ ಶಬ್ದವನ್ನು "ಜರ್ಮನ್ ಷಪರ್ಡ್" ನಾಯಿ ೨೬ ಗಜ ದೂರದಿಂದ ಕೇಳಬಲ್ಲದು. ಸಮೀಪಿಸುತ್ತಿರುವ ಹೆಜ್ಜೆಯ ಶಬ್ದವು ಯಜಮಾನನ ಕಿವಿಗೆ ಬೀಳುವುದಕ್ಕಿಂತ ಬಹಳ ಮುಂಚೆಯೇ ನಾಯಿಯು ಕೇಳಿಸಿಕೊಂಡು ಬೊಗಳುತ್ತದೆ; ಶಬ್ದವು ಇಂಥಾ ದಿಕ್ಕಿನಿಂದಲೇ ಬರುತ್ತಿದೆಯೆಂದು ನಾಯಿಗೆ ಗೊತ್ತು. ಮನುಷ್ಯನಿಗೆ ಕೇಳಬಾರದ ಬಹು ಚೀರಾದ ಶಬ್ದಗಳು ನಾಯಿಗೆ ಕೇಳಿಸುತ್ತವೆ. ಬೇಟೆ ನಾಯಿಯ ಶಿಕ್ಷಕರು ನಿಶ್ಶಬ್ದದ ಸಿಳ್ಳು



ಕಾಲಿ



ಸೆಂಟ್ ಬರ್ನಾರ್ಡ್

ಹಾಕುವಾಗ, ಅದರ ಧ್ವನಿಯು ಎಷ್ಟು ಕಿರಿಯದೆಂದರೆ, ಕೆಲವು ಅಡಿಗಳ ಹತ್ತಿರ ಇರುವ ಮನುಷ್ಯನಿಗೆ ಅದು ಕೇಳಿಸುವುದಿಲ್ಲ; ಅದೇ ಧ್ವನಿಯು ೭೫ ಗಜಗಳಿಗಿಂತಲೂ ಹೆಚ್ಚು ದೂರದಲ್ಲಿರುವ ನಾಯಿಗೆ ಕೇಳಿಸಿ ಅದು ಚಲನ ತೋರುತ್ತದೆ.

ನಾಯಿಯ ದೃಷ್ಟಿ ಮಾತ್ರ ಮನುಷ್ಯನದಕ್ಕಿಂತ ಬಹು ಕಡಿಮೆ. ಕಿವಿ ಮೂಗುಗಳ ಸಂವೇದನೆಗಳಿಂದ ನಾಯಿಯು ಗುರುತು ಹಿಡಿಯುತ್ತದೆ. ಆದರೆ ಸಂಚಲನಗಳು ಎಷ್ಟೇ ಸೂಕ್ಷ್ಮವಾಗಿದ್ದರೂ ನಾಯಿಗಳು ಅರಿಯುತ್ತವೆ. ಈ ಶಕ್ತಿಯಿರುವುದರಿಂದ ರಂಗಭೂಮಿಯ ನಾಯಿಗಳು ಗಣಿತದ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯುತ್ತವೆ. ಶಿಕ್ಷಕನ ಕೈ ಅಥವಾ ದವಡೆಯ ಚಲನೆಗಳು ಮನುಷ್ಯನ ಕಣ್ಣಿಗೆ ಗೋಚರವಾಗದಿದ್ದರೂ ಶಿಕ್ಷಿತ ನಾಯಿಗಳು ಅವುಗಳನ್ನು ಸುಲಭವಾಗಿ ಅನುಸರಿಸಿ, ಸಂಕಲನ ಮತ್ತು ಗುಣಾಕಾರ ಲೆಕ್ಕಗಳ ಉತ್ತರವನ್ನು ಬೊಗಳಿ ಬೊಗಳಿ ತಿಳಿಸುತ್ತವೆ.

ನಾಯಿಗಳಲ್ಲಿ ಸುಮಾರು ೨೨೫ ಜಾತಿಗಳಿವೆ; ಅವುಗಳಲ್ಲಿ ಮುಖ್ಯವಾದವುಗಳು ೨೫. ಕೆಲವು ಜಾತಿಯ ನಾಯಿಗಳಿಗೆ ಇತರ ಜಾತಿಯ ನಾಯಿಗಳಿಗಿಂತ ಹೆಚ್ಚು ಸೂಕ್ಷ್ಮ ಬುದ್ಧಿಯಿದೆ. ಫ್ರಾನ್ಸ್ ದೇಶದ ಉದ್ದ ರೋಮವುಳ್ಳ "ಪೂಡಲ್" ಜಾತಿಯ ನಾಯಿಗೆ ಅತಿಶಯ ಬುದ್ಧಿ ಇದೆ. ಶಿಕ್ಷಣ ಮತ್ತು ಅನುಭವದಿಂದ ನಾಯಿಗಳು ಜಾಗ್ರತೆಯಾಗಿ ಕಲಿಯುತ್ತವೆ. ಅವಕ್ಕೆ ಒಳ್ಳೇ ಜ್ಞಾಪಕ ಶಕ್ತಿ ಮುಂಜಾಗ್ರತೆ ದೂರ ದೃಷ್ಟಿಗಳಿವೆ. ಸಾಮಾನ್ಯ ನಾಯಿಗಳು ಹನ್ನೆರಡು ಆಜ್ಞೆಗಳಿಗೆ ಪ್ರತಿಕ್ರಿಯೆ ತೋರುವಂತೆ ತರಬೇತು ಮಾಡಬಹುದು. ಹೆಚ್ಚು ಬುದ್ಧಿಯ ನಾಯಿಗಳು ನೂರಕ್ಕಿಂತಲೂ ಹೆಚ್ಚು ಶಬ್ದಗಳನ್ನೂ ಬೇರೆ ಬೇರೆ ವಾಕ್ಯಗಳನ್ನೂ ಅರ್ಥ ಮಾಡಿಕೊಳ್ಳಬಹುದು.



ಅಲ್ಸೇಶಿಯನ್

ಕಾಲಿ (collie) ಎಂಬ ಜಾತಿಯ ನಾಯಿಯು ಕುರಿ ಮತ್ತು ದನಕರುಗಳ ಹಿಂಡನ್ನು ಬಹು ಜಾಗರೂಕತೆ ಮತ್ತು ಚಾತುರ್ಯದಿಂದ ಕಾಯುತ್ತದೆ. ಹಿಂಡಿನ ಸುತ್ತಲೂ ಹೋಗುತ್ತಾ, ಚದರಿ ಹೋದ ಕುರಿಗಳನ್ನು ಅವುಗಳ ಸ್ಥಾನಕ್ಕೆ ಕರೆ ತರುತ್ತದೆ. ಕುರಿಗಳು ಸುತ್ತಮುತ್ತಲಿನ ಜಮೀನನ್ನು ಪ್ರವೇಶಿಸದಂತೆ ನೋಡಿಕೊಳ್ಳುತ್ತದೆ. ರಾತ್ರಿಯಲ್ಲಿ ಮಂದೆಗಳನ್ನು ತೋಳ ಮುಂತಾದ ಕಾಡು ಮೃಗಗಳ ಹಾವಳಿಯಿಂದ ರಕ್ಷಿಸುತ್ತದೆ. ತನ್ನ ಯಜಮಾನನ ಸಹಾಯ ಅಥವಾ ಮಾರ್ಗದರ್ಶನವಿಲ್ಲದೆ ಏಕಾಕಿಯಾಗಿ ಕುರಿಗಳನ್ನು ತಂತಿ ಆವರಣದೊಳಗೆ ಅಟ್ಟುತ್ತದೆ. ಹಸುಗಳನ್ನು ಎಚ್ಚರಿಕೆಯಿಂದ ನೋಡಿಕೊಂಡು, ಹಾಲು ಕರೆಯಲು ಮನೆಗೆ ತರುತ್ತದೆ. ಒಂದು ನಾಯಿಯು ಬಲವಾದ ೨೦೦ ಎತ್ತುಗಳನ್ನು ಅಂಕೆಯಲ್ಲಿಟ್ಟು ನಿಭಾಯಿಸಿ, ಅವುಗಳನ್ನು ಯಾವ ಯಾವ ಸ್ಥಳದಲ್ಲಿ ಸೇರಿಸಬೇಕೋ ಅಲ್ಲಿ ಕೂಡಿಡ ಬಲ್ಲದು. ಮೈದಾನದಲ್ಲಿ ಹೋಗುವಾಗ ತನ್ನ ಕುರಿಗಳು ಇತರ ಕುರಿಗಳ ಜೊತೆಯಲ್ಲಿ ಬೆರೆತು

ಅಲೆದಾಡದಂತೆ ಯುಕ್ತಿಯಿಂದ ನಿಭಾಯಿಸುತ್ತವೆ.

ನಾಯಿಗಳು ಪೋಟಾಪೋಟಿಯ ಪರೀಕ್ಷೆಗಳಿಗೆ ನಿಂತಾಗ ಬಹು ಕಠಿನ ಸಾಹಸಗಳನ್ನೂ ಆಶ್ಚರ್ಯಕರವಾದ ಸಾಮರ್ಥ್ಯವನ್ನೂ ಪ್ರದರ್ಶಿಸುತ್ತವೆ. ನದಿಯಲ್ಲಿ ಬಿದ್ದವರನ್ನು ರಕ್ಷಿಸಲು "ನದಿ ಪೋಲಿಸ್" ಇಲಾಖೆಯವರು ಅಲ್ಸೇಷಿಯನ್ ನಾಯಿಗಳನ್ನು ಉಪಯೋಗಿಸುತ್ತಾರೆ. ರಕ್ಷಣೆಯ ನಾಯಿಗಳು (rescue dogs) ಗಾಢವಾದ ಮಂಜಿನ ರಾಶಿಯಲ್ಲಿ ಸಿಕ್ಕಿಬಿದ್ದ ಮಾರ್ಗಸ್ಥರನ್ನು ಅಪಾಯದಿಂದ ಉಳಿಸುತ್ತವೆ. ಬೆಂಕಿಯ ಅನಾಹುತದಲ್ಲಿ ಬಿದ್ದು ನರಳುತ್ತಿರುವವರನ್ನು ಕಾಪಾಡುತ್ತವೆ. ರಭಸದಿಂದ ಬರುತ್ತಿರುವ ಮೋಟಾರ್ ಕಾರ್‌ಗಳ ದಾರಿಯಲ್ಲಿರುವ ಮಕ್ಕಳನ್ನು ಆಚೆ ನೂಕಿ ಅವುಗಳ ಪ್ರಾಣವನ್ನು ಉಳಿಸುತ್ತವೆ. ಕಟ್ಟಡಗಳು ಮುರಿದು ಬಿದ್ದ ರಾಶಿಗಳಲ್ಲಿ ಹುಗಿದುಹೋದ ಮನುಷ್ಯನು ಸಿಕ್ಕಿಬಿದ್ದಿರುವ ನಿಶ್ಚಿತ ಸ್ಥಳವನ್ನು ನಾಯಿಯು ವಾಸನೆಯಿಂದ ನಿರ್ಣಯಿಸುವುದೇ ಅಲ್ಲದೆ, ಆ ಮನುಷ್ಯನು ಜೀವಂತನಾಗಿರುವನೇ ಇಲ್ಲವೇ ಎಂಬುದನ್ನು ತನ್ನ ಮೈನಿಲುವಿನಿಂದ ತಿಳಿಯಪಡಿಸುತ್ತದೆ. ಮನುಷ್ಯನು ಬದುಕಿದ್ದರೆ, ನಾಯಿಯು ಬಹು ಉದ್ರೇಕ,ಉತ್ಸಾಹವನ್ನು ತೋರಿಸಿ ಜಾಗವನ್ನು ಅಗಿಯುವುದಕ್ಕೆ ಸಹಾಯ ಮಾಡುತ್ತದೆ; ಅವನು ಸತ್ತಿದ್ದರೆ ನಾಯಿಯು ದುಃಖದ ಮೈನಿಲುವನ್ನು ತೋರಿಸುತ್ತದೆ. ಈ ಚಾತುರ್ಯವು ಅನೇಕ ಜನರನ್ನು ಒಡಕುತುಡುಕುಗಳ ರಾಶಿಗಳಿಂದ ಹೊರಗೆ ತೆಗೆದು ಪ್ರಾಣದಾನ ಮಾಡಿದೆ. ಬಾಂಬ್ ಸಿಡಿತದ ಹಾವಳಿಯಲ್ಲಿ ನೂರಾರು ಕಟ್ಟಡಗಳು ನಾಶವಾಗಿ ಬಿದ್ದಿದ್ದಾಗ ರಾಶಿರಾಶಿಗಳಲ್ಲಿ ೨೦ ಅಡಿ ಕೆಳಗೆ ಸಿಕ್ಕಿಕೊಂಡಿದ್ದ ಶರೀರದ ಸ್ಥಳವನ್ನು ಒಂದು ನಾಯಿ ಪತ್ತೆಮಾಡಿತು.

ನಾಯಿಯ ತಲೆ, ಬಾಲ, ಕಿವಿ, ಕಣ್ಣುಗಳ ಪ್ರತಿಯೊಂದು ಸಂಚಲನೆಯಲ್ಲೂ ಒಂದೊಂದು ಬೇರೆ ಬೇರೆ ಸೂಕ್ಷ್ಮವಾದ ಅರ್ಥವೂ ಸಂಕೇತನವೂ ಇರುವುದರಿಂದ, ಅವುಗಳನ್ನು ಸರಿಯಾಗಿ ಗ್ರಹಿಸಲು ನಾಯಿಗೂ ಅದನ್ನು ಸಂಬಾಳಿಸುವ ಮನುಷ್ಯನಿಗೂ ಸಂಪೂರ್ಣ ಐಕ್ಯ, ಅನ್ಯೋನ್ಯವಿರಬೇಕಾದದ್ದು ಅತ್ಯವಶ್ಯ. ಒಂದು ನಾಯಿಯು ೩೩೩ ವಿಪತ್ತುಗಳಲ್ಲಿ ಭಾಗ ವಹಿಸಿ, ಅವುಗಳಲ್ಲಿ ೨೧ ಜನರ ಪ್ರಾಣವನ್ನು ಉಳಿಸಿ, ಪರಾಕ್ರಮ ಮತ್ತು ಕರ್ತವ್ಯನಿಷ್ಠತೆಗಾಗಿ ಪ್ರಾಣಿಗಳ ಬಿರುದಿನ ಬಿಲ್ಲೆಯನ್ನು ಪಡೆಯಿತು. ಸೇಂಟ್ ಬರ್ನಾರ್ಡ್ ಎಂಬ ಜಾತಿಯ ಭಾರಿ ನಾಯಿಗಳನ್ನು ಸ್ವಿಟ್ಸರ್‌ಲೆಂಡ್ ದೇಶದ ಆಲ್ಪ್ಸ್ ಪರ್ವತದ ಭಿಕ್ಷುಗಳು, ಪರ್ವತಗಳಲ್ಲಿ ಮಂಜಿನಿಂದ ದಾರಿತಪ್ಪಿ ಪ್ರಯಾಸಪಡುವ ಜನರನ್ನು ರಕ್ಷಿಸಲು ತರಬೇತು ಮಾಡಿದ್ದಾರೆ. ಒಂದು ನಾಯಿ ೪೦ ಕ್ಕಿಂತ ಹೆಚ್ಚು ಜನರ ಪ್ರಾಣವನ್ನು ಉಳಿಸಿತು.

ಹರಿಕಾರ ನಾಯಿಯು ಒಂದು ಠಾಣ್ಯದಿಂದ ಮತ್ತೊಂದು ಪಾಳ್ಯಕ್ಕೆ ಸಮಾಚಾರದ ಪತ್ರಗಳನ್ನು ಕೊಂಡು ಓಡಿ ಹೋಗುತ್ತದೆ. ಸಾಧ್ಯವಾದಷ್ಟು ಗೌಪ್ಯವಾಗಿ ಹೋಗುತ್ತಾ ಯಾರಾದರೂ ಹಾದಿಗಟ್ಟಿದರೆ, ಅದು ಅವರ ಮೇಲ್ಬಾಯದೆ ತಪ್ಪಿಸಿಕೊಂಡು ಹೋಗುತ್ತದೆ. ಯುದ್ಧದ ಕಾಲದಲ್ಲಿ ನಾಯಿಯು ಠಾಣ್ಯಕ್ಕೆ ಹೋಗುವಷ್ಟರಲ್ಲಿ ಆ ಠಾಣ್ಯವು ಬೇರೆ ಸ್ಥಳಕ್ಕೆ ಹೊರಟು ಹೋಗಿದ್ದರೆ, ನಾಯಿಯು ವಾಸನಾಶಕ್ತಿಯಿಂದ ಹೊಸ ಸ್ಥಳವನ್ನು ಸೇರುತ್ತದೆ. ರೆಡ್‌ಕ್ರಾಸ್ ನಾಯಿಯು ವಿಪತ್ತಿಗೆ ಸಿಕ್ಕಿಬಿದ್ದವರನ್ನು ಹುಡುಕಿ ಪತ್ತೆಮಾಡಿ, ತನ್ನ ಯಜಮಾನನನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತದೆ.

ಪೋಲೀಸ್ ನಾಯಿಗಳು ವಿಧೇಯತೆ, ಈಜುವುದು ಹೈಜಂಪ್, ಲಾಂಗ್‌ಜಂಪ್, ಹತ್ತುವುದು, ಮೈ ಹವಣಿಕೆಯ ವ್ಯಾಯಾಮ, ಹರ್ಡಲ್ಸ್ ಪಂದ್ಯಾಟ ಮುಂತಾದ ಪರೀಕ್ಷೆಗಳಲ್ಲಿ ತಯಾರಾಗಿರುತ್ತವೆ. ಅವು ೯ ಅಥವಾ ೧೦ ಅಡಿ ಉದ್ದಕ್ಕೂ, ೬ ಅಡಿ ಎತ್ತರಕ್ಕೂ ಹಾರುತ್ತವೆ. ರೊಡೇಸಿಯಾದ ಕ್ರಾನ್‌ಸ್ಟಂಡಾಂಕೊ ಎಂಬ ಹೆಸ

ರಿನ ನಾಯಿಯು ೧೬॥ ಅಡಿ ಎತ್ತರಕ್ಕೂ ೨೪ ಅಡಿ ಉದ್ದಕ್ಕೂ ಹಾರಬಲ್ಲದು; ಇವು ಪ್ರಪಂಚದ ದಾಖಲೆಗಳಲ್ಲಿ ಅತ್ಯುನ್ನತವಾದವು. ಈ ನಾಯಿಗಳು ಪೂರ್ಣ ವೇಗದಲ್ಲಿ ಓಡುತ್ತಿರುವಾಗ, ಪೀಪಿ ಊದಿದ ಕೂಡಲೆ ಥಟ್ಟನೆ ಮಲಗಿ, ಪುನಃ ಸಿಳ್ಳು ಹಾಕಿದ ಕೂಡಲೆ ಹಿಂತಿರುಗುತ್ತವೆ. ಹೆಜ್ಜೆ ವಾಸನೆಯಿಂದ ಪತ್ತೆ ಮಾಡುವುದರಲ್ಲಿ ಅವಕ್ಕೆ ಪ್ರವೀಣತೆಯಿದೆ. ಒಂದು ಹೆಜ್ಜೆ ಗುರುತು ಹೊರ್ತು ಮತ್ತಾವ ಗುರುತೂ ಇಲ್ಲದೆ, ಅಥವಾ ಕಳ್ಳನು ಮುಟ್ಟಿದ ಒಂದು ಪದಾರ್ಥ ಮಾತ್ರವಲ್ಲದೆ ಮತ್ತಾವ ವಸ್ತುವೂ ಇಲ್ಲದಿದ್ದರೂ ಕಳ್ಳನು ಓಡಿ ಹೋಗಿ ೬-೧೪ ಗಂಟೆಗಳಾಗಿದ್ದರೂ ಈ ನಾಯಿಗಳು ಮಾರ್ಗವನ್ನು ಹಿಂಬಾಲಿಸುತ್ತವೆ. ಒಬ್ಬ ಮನುಷ್ಯನ ವಾಸನೆಯನ್ನು ಅವನು ಒಂದು ವಾರದ ಹಿಂದೆ ಮುಟ್ಟಿದ್ದ ಯಾವುದಾದರೂ ಪದಾರ್ಥದಿಂದ ನಾಯಿಗೆ ತೋರಿಸಿದರೆ, ಅದು ಅವನು ಹನ್ನೆರಡು ಜನಗಳ ಮಧ್ಯದಲ್ಲಿ ಸೇರಿದ್ದರೂ ಅವನನ್ನು ಪತ್ತೆ ಮಾಡುತ್ತದೆ.

ಬೇಟೆನಾಯಿಯು ಬೇಟೆಯ ಪ್ರಾಣಿಗಳು ಎತ್ತ ಕಡೆ ಇವೆ ಎಂಬುದನ್ನು ವಾಸನೆಯಿಂದ ಅರಿತು ತನ್ನ ತಲೆಯನ್ನು ಅತ್ತಕಡೆ ತಿರುಗಿಸಿ ಚಲಿಸದೆ ಕೂಡುತ್ತದೆ. ಬಂದೂಕಿನಿಂದ ಹೊಡೆಯಲ್ಪಟ್ಟ ಪ್ರಾಣಿಯನ್ನು ಹುಡುಕಿ ತನ್ನ ಯಜಮಾನನಿಗೆ ತಂದು ಕೊಡುತ್ತದೆ. ಬ್ಲಡ್‌ಹೌಂಡ್ ಜಾತಿಯ ನಾಯಿಯು ಅತ್ಯಂತ ಚುರುಕಾಗಿ ವಾಸನೆಯನ್ನು ಹಿಡಿದು, ಅತ್ಯಂತ ವೇಗವಾಗಿ ಓಡುತ್ತದೆ.

ಸೇನೆಯ ನಾಯಿಗಳು ಯುದ್ಧದಲ್ಲಿ ಗಾಯಪಟ್ಟ ಮನುಷ್ಯರನ್ನು ಹುಡುಕುವುದು, ಸಿಡಿಮದ್ದಿನ ಗುಂಡಿನ ಪತ್ತೆ, ಸಮಾಚಾರವನ್ನು ಒಯ್ಯುವುದು, ಶತ್ರು ಸೈನ್ಯದ ಸ್ಥಳವನ್ನು ಹುಡುಕುವುದು ಔಷಧಿಯ ಸರಬರಾಯಿಯನ್ನು ಒಯ್ಯುವುದು, ಸುರಂಗಗಳ ಪತ್ತೆ ಮುಂತಾದ ಕೆಲಸಗಳನ್ನು ಮಾಡಿದವು. ಅಮೇರಿಕ ದೇಶದ ಸೇನೆಯಲ್ಲಿ ನಾಯಿಯ ಇಲಾಖೆಯನ್ನು ಏರ್ಪಡಿಸಲಾಗಿತ್ತು. ಜರ್ಮನಿಯ ಸೇನೆಯಲ್ಲಿ ೪೦,೦೦೦-೫೦,೦೦೦ ನಾಯಿಗಳಿದ್ದವು. ಅವುಗಳಲ್ಲಿ ೧೦ ಸಾವಿರ ನಾಯಿಗಳನ್ನು ಜಪಾನಿಗೆ ಕೊಟ್ಟರು. ರಷ್ಯಾ ಮತ್ತು ಇಂಗ್ಲಂಡ್‌ಗಳಲ್ಲೂ ನಾಯಿಗಳನ್ನು ಸೇನೆಯ ಇಲಾಖೆಯಲ್ಲಿ ಉಪಯೋಗಿಸಿದರು. ಪಹರೆ ನಾಯಿಗಳು ಅವಿತುಕೊಂಡಿರುವ ದುಷ್ಟರನ್ನು ವಾಸನೆಯಿಂದ ಕಂಡುಹಿಡಿದು, ಆ ಸ್ಥಳಕ್ಕೆ ಗಸ್ತಿ ತಿರುಗುವವರನ್ನು ಕರೆತರುತ್ತವೆ. "ಜರ್ಮನ್ ಷಪರ್ಡ್" ನಾಯಿಗಳು ವಾಸನೆಯನ್ನು ೬೦೦ ಗಜ ಆಚೆಯೇ ಹಿಡಿಯಬಲ್ಲವು.

ಮೊದಲನೇ ಮಹಾಯುದ್ಧದಲ್ಲಿ ಕಣ್ಣು ಕಳೆದುಕೊಂಡ ಸೈನಿಕರಿಗೆ ಮಾರ್ಗದರ್ಶನ ಸಹಾಯಕ್ಕಾಗಿ ಸಾವಿರಾರು ನಾಯಿಗಳನ್ನು ತಯಾರಿಸಿದರು. ಅಮೇರಿಕದಲ್ಲಿ "Seeing Eye Foundation" ಎಂಬ ನಾಯಿ ಶಿಕ್ಷಣದ ಕೇಂದ್ರವು ಲೋಕ ಪ್ರಸಿದ್ಧವಾದದ್ದು. ಈ ನಾಯಿಯು ತನ್ನ ಯಜಮಾನನನ್ನು ಹಳ್ಳ ಕೊಳ್ಳ, ಬೇಲಿ, ಗಡಿದುರ್ಗಗಳಿಂದ ಅಪಾಯವಾಗದಂತೆ ಕರೆದೊಯ್ಯುತ್ತದೆ. ತಲೆಗೆ ತಾಕುವಂಥಾದ್ದೇನಾದರೂ ಇದ್ದರೆ, ನಾಯಿಯು ಯಜಮಾನನನ್ನು ನಿಲ್ಲಿಸಿ, ಅವನು ಅದರ ಎತ್ತರವನ್ನು ಕೈಯಿಂದ ಮುಟ್ಟಿ ತಿಳಿದುಕೊಳ್ಳುವಂತೆ ಮಾಡುತ್ತದೆ; ರಸ್ತೆಯಲ್ಲಿ ವಾಹನಗಳು ಬರುತ್ತಿರುವಾಗ, ಏನೂ ಅಪಾಯವಿಲ್ಲವೆಂದು ತಿಳಿದ ನಂತರ ರಸ್ತೆಯನ್ನು ಹಾಯುತ್ತದೆ. ದೀಪ ಟೆಲಿಗ್ರಾಫ್ ಕಂಬಗಳಿಗಾಗಲಿ, ಮರಗಳಿಗಾಗಲಿ ಅವನು ಡಿಕ್ಕಿ ಹೊಡೆಯದಂತೆ ಕಾಯುತ್ತದೆ. ಸಮೀಪಿಸುತ್ತಿರುವ ವಾಹನಗಳ ವೇಗವನ್ನು ವಿವೇಚಿಸುತ್ತದೆ. ದಾರಿಯಲ್ಲಿ ಅಡ್ಡ ಮರ ಸಿಕ್ಕಿದರೆ, ಯಜಮಾನನು ಅದರ ಕೆಳಗೆ ಹೋಗಬಲ್ಲನೇ, ಅಥವಾ ಅದನ್ನು ಸುತ್ತಿ ಹೋಗಬೇಕೇ ಎಂಬುದನ್ನು ನಿರ್ಣಯಿಸುತ್ತದೆ. ಈ ನಾಯಿಗಳ ಮನಸ್ಸೂ ಯಜಮಾನನ ಮನಸ್ಸೂ ಸಂಪೂರ್ಣವಾಗಿ ಐಕ್ಯವಾಗುವಂತೆ ಅವುಗಳು ವಿಶೇಷ ರೀತಿಯಿಂದ ತಯಾರಾಗಿವೆ. ಈ ನಾಯಿಗಳು

ಕುರುಡ ಮನುಷ್ಯನ ಸ್ವಭಾವವನ್ನೂ ಜೀವನದಲ್ಲಿ ಅವನಿಗಿರುವ ಮನೋವೃತ್ತಿಯನ್ನೂ ಸಂಪೂರ್ಣವಾಗಿ ಬದಲಾಯಿಸಿವೆ.

ಕೆಲವು ನಾಯಿಗಳಿಗೆ ಒಂದು ಚಿಕ್ಕ ಗಾಡಿಯಲ್ಲಿ ಒಬ್ಬ ಪ್ರಯಾಣಿಕನ ಸುಮಾರಾದ ಭಾರವನ್ನು ಎಳೆದುಕೊಂಡು ಹೋಗುವಷ್ಟು ಶಕ್ತಿಯಿದೆ. ಕೆಲವು ದೇಶಗಳಲ್ಲಿ ನಾಯಿಗಳು ಜಮೀನಿನಲ್ಲಿ ಬೆಳೆದ ಫಸಲನ್ನು ವ್ಯಾಪಾರ ಸ್ಥಳಗಳಿಗೆ ಎಳೆದುಕೊಂಡು ಹೋಗುತ್ತವೆ. ಎಸ್ಕಿಮೋ ಜನರು ಹಿಮದ ಮೇಲೆ ಚಕ್ರವಿಲ್ಲದ ಜಾರು ಬಂಡಿಗಳನ್ನು ಎಳೆದುಕೊಂಡು ಹೋಗಲು ಜೀನು ಹಾಕಿದ ನಾಯಿಗಳನ್ನು ಉಪಯೋಗಿಸುತ್ತಾರೆ. ಉಗ್ರ ಚಳಿಗಾಲದಲ್ಲಿ ಉಷ್ಣತಾಮಾನವು ಬಿಂದುವಿನ ಕೆಳಗೆ ೫೦ ಡಿಗ್ರಿ ಕೆಳಗಿದ್ದರೂ ಹಿಮದ ನಾಯಿಗಳು ಕೆಲಸ ಮಾಡುತ್ತವೆ. ಪೀರಿ ಎಂಬುವನು ಉತ್ತರ ಧ್ರುವಕ್ಕೆ ನಾಯಿಗಳಿಂದ ಒಯ್ಯಲ್ಪಟ್ಟನು. ಸ್ಕಾಟ್ ಎಂಬುವನು ದಕ್ಷಿಣಧ್ರುವಕ್ಕೆ ನಾಯಿಗಾಡಿಯಲ್ಲಿ ಹೋದನು ಒಂದು ನಾಯಿಯು ಅಲಾಸ್ಕಾದಲ್ಲಿ ೪೫೦ ಪೌಂಡ್ ಭಾರವನ್ನು ೫೦೦ ಮೈಲಿಗಳ ದೂರ ಎಳೆದುಕೊಂಡು ಹೋಯಿತು. *



ಜಾನ್ಸನ್ನರ ಅಜ್ಞಾನ

ಡಾ. ಜಾನ್ಸನ್ ಇಂಗ್ಲೀಷ್ ಭಾಷೆಗೆ ಮೊಟ್ಟಮೊದಲು ಒಂದು ಶಬ್ದಕೋಶ ತಯಾರಿಸಿದರು. ಫ್ರೆಂಚ್ ಭಾಷೆಯಲ್ಲಿ ಅನೇಕ ಪಂಡಿತರು ಸೇರಿ ನಲುವತ್ತು ವರ್ಷಗಳಲ್ಲಿ ಒಂದು ಶಬ್ದಕೋಶ ನಿರ್ಮಿಸಿದ್ದರೆ ಜಾನ್ಸನ್ನರು ಒಬ್ಬಂಟಿಗರಾಗಿ ಕೆಲ ವರ್ಷಗಳಲ್ಲೇ ಈ ಶಬ್ದಕೋಶವನ್ನು ಸಿದ್ಧಪಡಿಸಿದ್ದರು. ಅದು ಬಿಸಿ ದೋಸೆಯಂತೆ ಮಾರಾಟವಾಯಿತು. ಅವರ ಕೀರ್ತಿ ಹಬ್ಬಿತು. ಅದು ವರ್ಷವರ್ಷಕ್ಕೂ ಹೆಚ್ಚುತ್ತಲೇ ಇತ್ತು. ಅವರ ಆರ್ಥಿಕ ಸ್ಥಿತಿಯೂ ಉತ್ತಮಗೊಂಡಿತು.

ಆದರೆ ತಮ್ಮ ಶಬ್ದಕೋಶ ಪೂರ್ತಿ ನಿರ್ದಿಷ್ಟವಾಗಿದೆಯೆಂದೂ ತಾವು ಸರ್ವಜ್ಞರೆಂದೂ ಭಾವಿಸುವಷ್ಟು ಮಟ್ಟಿಗೆ ಯಶಸ್ಸಿನ ಮಾದ ಎಂದಿಗೂ ಜಾನ್ಸನ್ನರ ತಲೆಗೇರದಿದ್ದುದು ಅವರ ಹಿರಿಮೆ. ಅವರ ಶಬ್ದಕೋಶದಲ್ಲಿ Pastern ಎಂಬ ಶಬ್ದಕ್ಕೆ "ಕುದುರೆಯ ಮೊಳಕಾಲು" ಎಂದು ಅರ್ಥ ಬರೆದಿತ್ತು. ಆದರೆ ಆ ಶಬ್ದದ ನಿಜವಾದ ಅರ್ಥ "ಕುದುರೆಯ ಪಾದದ ಒಂದು ಭಾಗ" ಎಂಬುದಾಗಿತ್ತು. ಶಬ್ದಕೋಶ ಪ್ರಕಟವಾಗಿ ಹಲವರ್ಷಗಳ ನಂತರ ಅಂಜುತ್ತಂಜುತ್ತ ಒಬ್ಬ ಮಹಿಳೆ ಈ ತಪ್ಪನ್ನು ಅವರ ಗಮನಕ್ಕೆ ತಂದು "ನಿಮ್ಮಂಥ ವಿದ್ವಾಂಸರು ಹೀಗೆ ಬರೆಯಲು ಕಾರಣವೇನಾದರೂ ಇರಲೇ ಬೇಕು" ಎಂದು ಅವಳು ಹೇಳಿದಳು.

"ಕಾರಣವೇ ?" ಎಂದರು ಡಾ. ಜಾನ್ಸನ್ನರ್. "ಅಜ್ಞಾನ ತಾಯಿ, ಶುದ್ಧ ಅಜ್ಞಾನ!"

— ಜಿ. ಕೆ. ನಾಡಿಗ

ನಗೆಮಲ್ಲಿಗೆ

ಸ್ವಿಜರ್ಲಂಡಿನ ಹೋಟೆಲೊಂದು ಹೀಗೆ ಜಾಹೀರಾತು ಮುದ್ರಿಸಿದೆ: "ಇದು ಏಕಾಂತಧಾಮ. ಏಕಾಂತಪ್ರಿಯರಿಗೆ ಇಂಥ ಆದರ್ಶ ನಿವಾಸ ಬೇರೊಂದು ದೊರಯದು. ಏಕಾಂತವನ್ನು ಬಯಸುವವರು ಜಗತ್ತಿನ ಮೂಲೆಮೂಲೆಯಿಂದ ಬಂದು ಇಲ್ಲಿ ತುಂಬುತ್ತಿದ್ದಾರೆ."

*

"ಏನ್ರಿ, ಹತ್ತು ರೂಪಾಯಿ ಕೈಗಡ ತೆಗೆದುಕೊಂಡದ್ದನ್ನು ಮರೆತೇಬಿಟ್ಟಿರಾ?"

"ಛೆ! ಛೆ—ಸ್ವಲ್ಪ ಅವಕಾಶ ಕೊಡಿ. ನೀವು ಹಗಲೆಲ್ಲ ಅದನ್ನು ತಿರುಗಿ ಕೇಳುತ್ತಿದ್ದರೆ ಮರೆಯುವುದು ಹೇಗೆ?"

*

ಚರ್ಚಿಲ್ಲರಿಗೂ ಅವರ ಅಳಿಯ ಡಂಕನ್ ಸ್ಯಾಂಡಿಸ್‌ಗೂ ಒಮ್ಮೆ ಜಗಳವಾಗಿ ಮಾತುಕತೆ ನಿಂತುಹೋಯಿತು. ಸ್ಯಾಂಡಿಸ್ ಕೆಲ ಕಾಲದ ಮೇಲೆ ಮಾವನೊಡನೆ ಹೇಗಾದರೂ ರಾಜಿಮಾಡಿಕೊಳ್ಳಬೇಕೆಂದು ಎಷ್ಟು ಯತ್ನಿಸಿದರೂ ಚರ್ಚಿಲ್ ಜಪ್ಪೆನ್ನಲಿಲ್ಲ.

ಕೊನೆಗೊಂದು ದಿನ ಊಟಕ್ಕೆ ಕುಳಿತಾಗ ಒಳ್ಳೆ ಪ್ರಸನ್ನ ಮುದ್ರೆಯಲ್ಲಿದ್ದ ಚರ್ಚಿಲ್ಲರನ್ನು ಸ್ಯಾಂಡಿಸ್ ಕೇಳಿದರು:

"ಜಗತ್ತಿನ ಅತಿ ಶ್ರೇಷ್ಠ ರಾಜಕಾರಣಿ ಯಾರೆಂದು ನಿಮ್ಮೆಣಿಕೆ?" ಚರ್ಚಿಲ್ಲರು ಈ ಬಾರಿ ಉತ್ತರಿಸಿದರು: "ಮುಸೋಲಿನಿ."

ಸ್ಯಾಂಡಿಸ್: "ಆದರೆ ನೀವೇಕೆ ಅಲ್ಲ?"

ಚರ್ಚಿಲ್ ಹೇಳಿದರು: "ಮುಸೋಲಿನಿ ಅಳಿಯನನ್ನು ಕೊಲ್ಲಿಸಿದ. ಆದರೆ ನನ್ನಿಂದಾಗಲಿಲ್ಲ."

*

ತನ್ನ ಹಳೇ ಶಾಲೆಯನ್ನು ಹೆಂಡತಿಗೆ ತೋರಿಸುತ್ತ ಆತ ಹೇಳಿದ: "ಇಲ್ಲಿ ಸತ್ಯ ಹೇಳಿದ್ದಕ್ಕಾಗಿ ಒಮ್ಮೆ ನನಗೆ ಬೆತ್ತದೇಟು ಬಿದ್ದಿತ್ತು."

ಅವಳೆಂದಳು: "ಹೀಗೋ, ಅಂದಿನಿಂದ ನೀವು ಆ ಚಟ ಬಿಟ್ಟಿರಿ ತಾನೆ?"

*

ಅಕೌಂಟೆಂಟ್ ಕೆಲಸಕ್ಕಾಗಿ ಬಂದ ಉಮೇದ್ವಾರನನ್ನು ಇಂಟರ್‌ವ್ಯೂ ಮಾಡುತ್ತ ಸಂಸ್ಥೆಯ ಭಾಗೀದಾರರು ಕೇಳಿದರು:

"ನಿಮಗೆ ಡಬಲ್ ಎಂಟ್ರಿ ಪದ್ಧತಿ ಗೊತ್ತಿದೆಯೆ?"

"ಓಹೋ! ಟ್ರಿಪಲ್ ಎಂಟ್ರಿ ಕೂಡ ಬಲ್ಲೆ" ಎಂದ ಉತ್ಸಾಹಿ ಉಮೇದ್ವಾರ.

ಚಕಿತರಾದ ಭಾಗೀದಾರರು ಪ್ರಶ್ನಿಸಿದರು: "ಟ್ರಿಪಲ್ ಎಂಟ್ರಿ ಅಂದರೇನಯ್ಯ?"

"ಎಂಟ್ರಿ ಒಂದು, ವ್ಯವಸ್ಥಾಪಕ ಭಾಗೀದಾರರಿಗಾಗಿ ನಿಜವಾದ ಲಾಭವನ್ನು ತೋರಿಸಲಿಕ್ಕೆ; ಎಂಟ್ರಿ ಎರಡು, ಬರೇ ಬಂಡವಳ ಕೊಟ್ಟ ಭಾಗೀದಾರರಿಗಾಗಿ—ಕಡಿಮೆ ಲಾಭ ತೋರಿಸಲಿಕ್ಕೆ; ಎಂಟ್ರಿ ಮೂರು, ಇನ್‌ಕಂಟಾಕ್ಸಿನವರಿಗಾಗಿ—ಹಾನಿ ತೋರಿಸಲಿಕ್ಕೆ."

*

"ಅಲ್ರಿ, ಡಾಕ್ಟರರೇ, ನನ್ನ ಆಪರೇಶನ್ನಿಗಾಗಿ ನೀವು ತೆಗೆದುಕೊಂಡ ಫೀ ಬಹಳವಾಯಿತು ಎಂದು ನನ್ನ ಹೆಂಡತಿ ಹೇಳುತ್ತಾಳೆ."

"ಏನು ಹಾಗಂದರೆ? ನಿಮ್ಮ ಹೆಂಡತಿ ನಿಮ್ಮ ಪ್ರಾಣಕ್ಕೆ ಕಟ್ಟುವಷ್ಟೇ ಕಡಿಮೆ ಬೆಲೆಯನ್ನು ನೀವೂ ಕಟ್ಟುತ್ತೀರೇನು?"

ಹಳೇ ವಿದ್ಯಾರ್ಥಿಯೊಬ್ಬನಿಗೆ ಅರ್ಥಶಾಸ್ತ್ರದ ಪ್ರೊಫೆಸರರು ಈ ವರ್ಷದ ಪರೀಕ್ಷೆಯ ಪ್ರಶ್ನೆಗಳನ್ನು ತೋರಿಸಿದರು.

"ಅಲ್ರೀ ಪ್ರೊಫೆಸರ್, ನಾವು ಕಲಿಯುತ್ತಿದ್ದಾಗಲೂ ಇವೇ ಪ್ರಶ್ನೆಗಳನ್ನು ಕೇಳಿದ್ದಿರಲ್ಲ" ಎಂದ ಆತ ಸೋಜಿಗದಿಂದ.

"ಹೌದು, ನಾವು ಯಾವಾಗಲೂ ಅವೇ ಪ್ರಶ್ನೆಗಳನ್ನು ಕೇಳುತ್ತೇವೆ."

"ಆದರೆ ಹುಡುಗರು ಹಿಂದಿನ ವರ್ಷಗಳ ಪ್ರಶ್ನೆಗಳನ್ನು ನೋಡಿಯೇ ಇರುತ್ತಾರೆಂದು ನಿಮಗೆ ಗೊತ್ತಿಲ್ಲವೇ ?"

"ಗೊತ್ತಿದೆ." ಎಂದರು ಪ್ರೊಫೆಸರರು. "ಆದರೆ ಅರ್ಥಶಾಸ್ತ್ರದಲ್ಲಿ ನಾವು ಉತ್ತರಗಳನ್ನೇ ಬದಲಿಸುತ್ತಿರುತ್ತೇವೆ."

*

"ಇದು ನನ್ನ ಮಿತ್ರ ಅಬ್ದುಲ್ ಲತೀಫನ ಗೋರಿ. ಆತ ತನ್ನಲ್ಲಿದ್ದುದನ್ನೆಲ್ಲ ಅನಾಥಾಲಯಕ್ಕೆ ಕೊಟ್ಟು ಸತ್ತ."

"ವ್ಹಾ! ಎಂಥ ಔದಾರ್ಯ! ಅನಾಥಾಲಯಕ್ಕೆ ಏನೇನೆಲ್ಲ ಸಿಕ್ಕಿತು ?"

"ಅಬ್ದುಲ್ಲನ ನಾಲ್ವರು ಗಂಡು ಮಕ್ಕಳು ಮತ್ತು ಒಬ್ಬ ಹುಡುಗಿ."

*

ಪ್ರಸಿದ್ಧ ರಾಜಕೀಯ ಮುಂದಾಳೊಬ್ಬರು ಇಂಗ್ಲಂಡ್ ಪ್ರವಾಸ ಮುಗಿಸಿ ಊರಿಗೆ ಬಂದರು. ಅವರ ಸತ್ಕಾರ ಸಮಾರಂಭ ನಡೆಯಿತು. ಅಲ್ಲಿ ತಮ್ಮ ಪ್ರವಾಸದ ಅನುಭವಗಳನ್ನು ಬಣ್ಣಿಸುತ್ತ ಅವರು ಹೀಗೆಂದರು :

"ನಾನು ನೋಡಿದ್ದರಲ್ಲೆಲ್ಲ ಆಶ್ಚರ್ಯವಾದದ್ದೆಂದರೆ ಅಲ್ಲಿಯ ಹುಡುಗರು—ನೋಡಿ, ನನಗೇ ಸರಿಯಾಗಿ ಇಂಗ್ಲೀಷು ಮಾತಾಡಲು ಬರೋದಿಲ್ಲ—ಅಲ್ಲಿ ಹುಡುಗರು ಸಹಾ—ನಾಲ್ಕು ವರ್ಷದ ಪಿಳ್ಳೆಗಳು ಕೂಡ-ಸರಾಗವಾಗಿ ಇಂಗ್ಲೀಷು ಮಾತಾಡುತ್ತಾರೆ...."

—ಜಿ. ಕೆ. ನಾಡಿಗ

*

ಹೆಂಡತಿ : "ಪ್ರತಿಯೊಂದರ ಬೆಲೆಯೂ ದಿನದಿನಕ್ಕೆ ಹೆಚ್ಚುತ್ತಿದೆಯಲ್ಲಾ ಅಂತೀನಿ."

ಗಂಡ : "ಹಾಗೇನೂ ಇಲ್ಲ. ಮೂರರ ಬೆಲೆ ಹಾಗೇ ಇದೆ: ನಿನ್ನ ದೃಷ್ಟಿಯಲ್ಲಿ ನನ್ನ ಬೆಲೆ, ನನ್ನ ದೃಷ್ಟಿಯಲ್ಲಿ ನಿನ್ನ ಬೆಲೆ ಮತ್ತು ನೆರೆಯವರ ದೃಷ್ಟಿಯಲ್ಲಿ ನಮ್ಮಿಬ್ಬರ ಬೆಲೆ."

*

ಲೆಕ್ಕದ ಅಧ್ಯಾಪಕರು— ಹದಿನೈದು ಆಳುಗಳಿಗೆ ಒಂದು ಬಾವಿಯನ್ನು ತೋಡಲು ಎಂಟು ದಿನಗಳು ಬೇಕಾದರೆ ಇಪ್ಪತ್ತು ಆಳುಗಳಿಗೆ ಅದೇ ಬಾವಿಯನ್ನು ತೋಡಲು ಎಷ್ಟು ಸಮಯ ತಗಲುತ್ತದೆ ?

ವಿದ್ಯಾರ್ಥಿ— ಅದು ಅಸಾಧ್ಯ ಸರ್!


ಅಧ್ಯಾಪಕರು — ಏನೋ ಅದು ಅಸಾಧ್ಯ?

ವಿದ್ಯಾರ್ಥಿ— ಒಂದೇ ಬಾವಿಯನ್ನು ಎರಡು ಸಲ ತೋಡುವುದು ಸಾಧ್ಯವಿಲ್ಲದ ಮಾತು ಸರ್ !

—ಸಚ್ಚಿದಾನಂದ ಹೆಗಡೆ

ತರುಣಿ- ನಾನು ಯಾವಾಗಲೂ ನಿಮ್ಮ ವಿಚಾರವನ್ನೆ ಮಾಡುತ್ತಿರುತ್ತೇನೆ.

ತರುಣ- ನಾನೂ ಹಾಗೆಯೆ ಪ್ರಿಯೆ. ನಾವಿಬ್ಬರೂ ಬೇಗ ಲಗ್ನವಾಗಿ ಪರಸ್ಪರರನ್ನು ಕುರಿತು ವಿಚಾರಮಾಡುವುದನ್ನು ನಿಲ್ಲಿಸಿಬಿಡೋಣ.



ಒಂದು ರೋಮಾಂಚಕ ಸತ್ಯಘಟನೆ

ಕಾರ್ನಿಸಿನ ಮೇಲೊಬ್ಬ ತರುಣ

ಜಿ. ಜಿ. ಹೆಗಡೆ

೧೯೩೮, ಜುಲೈ ೨೬, ಗುರುವಾರ ನ್ಯೂಯಾರ್ಕ್ ನಗರದಲ್ಲಿ ಒಂದು ಅದ್ಭುತ ವಿಚಿತ್ರ ದಿನವಾಗಿ ಹೋಯಿತು. ಫಿಫ್ತ್ ಅವೆನ್ಯು ಮತ್ತು ಫಿಫ್ಟಿ ಫಿಫ್ತ್ ರಸ್ತೆಗಳಲ್ಲಿ ಅಂದು ಜನರ ಮಹಾ ಜಾತ್ರೆಯೊಂದು ನೆರೆದು ಒಂದು ವಿಕ್ಷಿಪ್ತ ಪ್ರಕರಣವನ್ನು ಈಕ್ಷಿಸಿತು. ರಸ್ತೆಯ ಮೇಲೆ ೨೦೨ ಅಡಿ ಎತ್ತರ ಏರಿದ್ದ ಹೊಟೆಲ್ ಗೋಥಾಮಿನ ಮೇಲೆ ಅವರೆಲ್ಲರ ಕಣ್ಣುಗಳು ಕೀಲಿಸಿದ್ದವು. ಇದರ ಮಾಳಿಗೆಯ ತುತ್ತ ತುದಿಯಿಂದ ನಾಲ್ಕು ಮಾಳಿಗೆ ಕೆಳಗಿನ-ಬರಿ ಕೆಲವೇ ಅಂಗುಲ ಅಗಲವಾಗಿದ್ದ ಕಾರ್ನಿಸಿನ ಮೇಲೆ ಒಬ್ಬ ಬೊಕ್ಕನೆತ್ತಿಯ ತರುಣ ವಿಚಿತ್ರ ಭಂಗಿಯಲ್ಲಿ ನಿಂತಿದ್ದ

ಕಾರ್ನಿಸಿಗೆ ಕಟಾಂಜನವಿರಲಿಲ್ಲ. ಬಾಗಿಲೂ ಇರಲಿಲ್ಲ. ಆತ ಎರಡು ಕಿಟಕಿಗಳ ನಡುವೆ ನಿಂತಿದ್ದ. ಒಂದು ಕಿಟಕಿಯಿಂದ ಅವನಿಗಿಂತ ಸ್ವಲ್ಪ ಹೆಚ್ಚು ವಯಸ್ಸಾದ ಹೆಂಗಸೊಬ್ಬಳು ಬಿಳುಪೇರಿದ ಮುಖದಿಂದ ಹಣಕಿ ಅವನನ್ನು ಪ್ರಾರ್ಥಿಸುತ್ತಿದ್ದಳು. ಆತ ಅವಳ ಕೈಗೆ ನಿಲುಕದಂತೆ ಮುದುಡುತ್ತಿದ್ದ. ಸ್ವಲ್ಪ ತಪ್ಪಿದರೆ ೧೬೦ ಅಡಿ ಕೆಳಗೆ ಬಿದ್ದು ಅವನ ಇತಿಶ್ರೀಯಾಗುತ್ತಿತ್ತು.

ಹನ್ನೆರಡು ಗಂಟೆ ಸಮಯ. ಜನ ಸಂದಣಿಯಿಂದ ವಾಹನಗಳೆಲ್ಲ ನಿಂತು ಹೋಗಿದ್ದವು. ಪೋಲೀಸರಿಗೆ ಪೇಚು ಬಂತು. ತರುಣನೋ ಪೋಲೀಸರ ಮುಖ ಕಂಡೊಡನೆ "ಮುಂದೆ

ಬಂದರೆ ಕೆಳಗೆ ಹಾರಿಬಿಡುತ್ತೇನೆ" ಎಂದು ಹೆದರಿಸುತ್ತಿದ್ದ. ಪೋಲೀಸರಿಗೆ ದಿಕ್ಕು ತೋಚದಂತಾಯಿತು. ಅಧಿಕಾರಿಗಳು ಇಂಥ ವಿಮೋಚನಾ ಕಾರ್ಯಗಳಲ್ಲಿ ನಿಪುಣನೆನಿಸಿದ್ದ ತಮ್ಮಲ್ಲಿಯ ಚಾರ್ಲ್ಸ್ ವಿ. ಗ್ಲಾಸ್ಕೋ ಎಂಬಾತನನ್ನು ಕರೆಯಿಸಿ ಅವನಿಗೆ ಆ ತರುಣನನ್ನು ಪಾರುಮಾಡುವ ಕಾರ್ಯವನ್ನೊಪ್ಪಿಸಿದರು.

ಕಾರ್ನೀಸಿನ ಮೇಲೆ ನಿಂತಿದ್ದ ತರುಣ ೨೬ ವಯಸ್ಸಿನ ಜಾನ್ ವಿಲಿಯಂ ವಾರ್ಡೇ ಎಂಬಾತನಾಗಿದ್ದ. ಸೌಥಂಪ್ಟನ್ನಿನಲ್ಲಿ ಅಮೇರಿಕನ್ ರೇಲ್ವೆ ಎಕ್ಸ್‌ಪ್ರೆಸ್ ಕಂಪನಿಯಲ್ಲಿ ನೌಕರನಾಗಿದ್ದ ತನ್ನ ತಂದೆಯೊಡನೆ ಆತ ವಾಸಿಸುತ್ತಿದ್ದ. ಜಾನ್ ಸೌಮ್ಯ ಸ್ವಭಾವದ ತರುಣ. ಆಟ, ಸಂಗೀತ, ಕವಿತೆಗಳಲ್ಲಿ ಪ್ರೀತಿಯುಳ್ಳವ. ಆತ ಒಂದು ಬ್ಯಾಂಕಿನಲ್ಲಿ ಕೆಲಕಾಲ ಕಾರಕೂನನಾಗಿದ್ದ. ಒಳ್ಳೆಯ ಕೆಲಸಗಾರ, ಆದರೆ ಆಗಾಗ "ಒಂದು ತರಹ ವರ್ತಿಸುವವನು" ಅನ್ನಿಸಿಕೊಂಡಿದ್ದ.

ಈ ಘಟನೆಯ ಹಿಂದಿನ ವರ್ಷ ಒಮ್ಮೆ ಚಾಕುವಿನಿಂದಿರಿದುಕೊಂಡು ಆತ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದ. ಆ ಮೇಲೆ ಅವನನ್ನು ಆಸ್ಪತ್ರೆಯಲ್ಲಿ ಇಟ್ಟಿದ್ದರು.

ವಾರ್ಡ್ ಮನೆತನದ ಸ್ನೇಹಿತರಾಗಿದ್ದ ಶ್ರೀ ಮತ್ತು ಶ್ರೀಮತಿ ಪೆಟ್ರಿಕ್ ಎ. ವೆಲೆಂಟ್ಯಾನರು ಆಸ್ಪತ್ರೆಯಿಂದ ಮನೆಗೆ ಬಂದ ಜಾನನನ್ನು ಅವನಿಗೆ ಹೊಸ ವಾತಾವರಣವೊದಗಿಸಲು ತಮ್ಮಲ್ಲಿಟ್ಟುಕೊಂಡರು. ಗೋಥಾಮ್ ಹೊಟೆಲ್ಲಿನ ಪ್ರಕರಣಕ್ಕೆ ಎಂಟು ದಿನ ಮೊದಲು ಜಾನ್ ಒಂದು ಸೇತುವೆಯ ಬಳಿ ಕಾರನ್ನು ನಿಲ್ಲಿಸಿ ಸೇತುವೆಯ ಮಧ್ಯ ಭಾಗಕ್ಕೆ ನಡೆದುಕೊಂಡು ಹೋಗಿ ಅಲ್ಲಿ ಕೆಳಗೆ ಹರಿಯುತ್ತಿದ್ದ ನೀರನ್ನು ನೋಡುತ್ತ ನಿಂತುಕೊಂಡಿದ್ದ. ಸಂಶಯದಿಂದ ಸೇತುವೆಯ ಕೆಲಸಗಾರನೊಬ್ಬ ಅಲ್ಲಿಗೆ ಬಂದು ಅವನನ್ನು ಅಲ್ಲಿಂದ ಹೊರಡಿಸಿದ್ದಲ್ಲದೆ ಅವನ ಕಾರಿನ ನಂಬರನ್ನು ಪೋಲೀಸರಿಗೆ ತಿಳಿಸಿದ. ಆದರೆ ಆತ್ಮಹತ್ಯೆಯ ಪ್ರಯತ್ನವನ್ನು ಆತ ಪ್ರತ್ಯಕ್ಷ ಮಾಡಿರಲಿಲ್ಲವಾದ್ದರಿಂದ ಕಾಯದೆಯಂತೆ ಪೋಲೀಸರು ಏನನ್ನೂ ಮಾಡಲಾರದವರಾದರು. ಈ ಪ್ರಕರಣದಿಂದ ಗಾಬರಿಯಾಗಿ ವೆಲೆಂಟ್ಯಾನರು ಜಾನನನ್ನೂ ಅವನು ಅತಿಯಾಗಿ ಪ್ರೀತಿಸುತ್ತಿದ್ದ ಅವನ ಅಕ್ಕ ಕ್ಯಾಥರೀನಳನ್ನೂ ಚಿಕಾಗೋಕ್ಕೆ ಕರೆದೊಯ್ದು ಅಲ್ಲಿ ಕೆಲ ದಿನ ಉಳಿದರು. ನ್ಯೂಯಾರ್ಕಿಗೆ ಮರಳಿದ ನಂತರ ವೆಲೆಂಟ್ಯಾನ್ ದಂಪತಿಗಳು ಗೋಥಾಮ್ ಹೊಟೆಲ್ಲಿನಲ್ಲಿಳಿದುಕೊಂಡರು.

ಅಂದು ವೆಲೆಂಟ್ಯಾನರು ತಮ್ಮ ಕಚೇರಿಗೆ ಹೋದ ಬಳಿಕ ಶ್ರೀಮತಿ ವೆಲೆಂಟ್ಯಾನ್ ಮತ್ತು ಕ್ಯಾಥರೀನರು ಜಾನನೊಡನೆ ಹರಟುತ್ತ ಕುಳಿತರು. ಜಾನನನ್ನು ಪರೀಕ್ಷಿಸಲು ಡಾಕ್ಟರರೊಬ್ಬರಿಗೆ ಹೇಳಲಿದ್ದೇನೆ ಎಂದು ಕ್ಯಾಥರೀನ್ ಅಂದಾಗ ಜಾನ್ "ಬೇಡ" ಎಂದು ಅಬ್ಬರಿಸಿದ. "ಹಾಗೇ ಆಗಲಿ" ಎಂದು ಕ್ಯಾಥರೀನ್ ಮಾತಿನ ವಿಷಯ ಬದಲಿಸಿದಳು.

ಅವರಲ್ಲಿ ಹೆಚ್ಚಿನ ಮಾತು ನಡೆಯಲಿಲ್ಲ. ಮಾತುಕಥೆ ಸುಗಮವಾಗಿ ಸಾಗಿದ್ದಾಗ ಜಾನ್ ಎದ್ದು ನಿಂತು ಕೋಟನ್ನು ಕಳಚಿ ಅದನ್ನು ಕುರ್ಚಿಯ ಮೇಲಿಟ್ಟ. "ನಾನು ಕಿಟಕಿಯ ಹೊರಗೆ ಹೋಗುತ್ತೇನೆ" ಎಂದವನೇ ಶ್ರೀಮತಿ ವೆಲೆಂಟ್ಯಾನ್ ಅಥವಾ ಕ್ಯಾಥರೀನಳಿಗೆ ಕ್ಷಣದ ಅವಕಾಶವನ್ನೂ ಕೊಡದೆ ಕಿಟಕಿಯ ಹೊರಗೆ ಹೋಗಿಬಿಟ್ಟ.

ಕ್ಯಾಥರೀನ್ ಬಂದು ನೋಡಿದಳು. ಜಾನ್ ನಿಂತಿದ್ದ ಕಾರ್ನೀಸ್ ೧೮ ಇಂಚು ಅಗಲದ್ದಿತ್ತು. ರಸ್ತೆಗೆ ೧೬೦ ಅಡಿ ಎತ್ತರದಲ್ಲಿತ್ತು. ಜಾನನೊಡನೆ ಮಾತಾಡಲೆತ್ನಿಸಿದ ಅವಳು ಮತ್ತೊಮ್ಮೆ ಕೆಳಗೆ ರಸ್ತೆಯನ್ನು ನೋಡಿದಾಗ ಎಚ್ಚರತಪ್ಪಿ ಬಿದ್ದಳು.

ಅಷ್ಟರಲ್ಲಿ ರಸ್ತೆಯ ಮೇಲಿನ ಜನರ ಕಣ್ಣಿಗೆ ಜಾನ್ ಬಿದ್ದಿದ್ದ. ಜನ ನೆರೆಯತೊಡಗಿದರು. ರಸ್ತೆಯಲ್ಲಿ ಸಂಚಾರ ನಿಯಂತ್ರಣ ಮಾಡುತ್ತಿದ್ದ

ಪೋಲೀಸನೊಬ್ಬ ಹೊಟೆಲನ್ನು ಪ್ರವೇಶಿಸಿ ಮಾಳಿಗೆಯನ್ನೇರಿ ಬಂದು ಕಿಟಕಿಯ ಹೊರಗೆ ತಲೆಹಾಕಿ ಜಾನನನ್ನು ಕುರಿತು "ಏ, ಅಲ್ಲಿ ನಿಂತೇನು ಮಾಡುತ್ತಿರುವಿ? ಬಾ ಒಳಗೆ" ಎಂದು ಕೂಗಿದ. "ನೀನೇನಾದರೂ ಒಂದು ಹೆಜ್ಜೆ ಮುಂದಿಟ್ಟರೆ ನಾನು ಕೆಳಗೆ ಹಾರಿಕೊಳುತ್ತೇನೆ" ಎಂದು ಜಾನ್ ಉತ್ತರವಿತ್ತ. ಅವನ ಕಣ್ಣುಗಳಲ್ಲಿಯ ನಿರ್ಧಾರವನ್ನೂ ಆತ ಜಿಗಿಯುವವರಂತೆ ತುದಿಗಾಲಿನಲ್ಲಿ ನಿಂತಿದ್ದ ಬಗೆಯನ್ನೂ ಕಂಡು ಆ ಪೋಲೀಸ ಗಾಬರಿಯಾಗಿ ಸರಸರನೆ ಕೆಳಗೆ ಬಂದು ಅಧಿಕಾರಿಗಳಿಗೆ ಫೋನ್ ಮಾಡಿದ. ಕೆಲ ಕ್ಷಣಗಳಲ್ಲಿ ೬೦ ಪೋಲೀಸರನ್ನೂ ಅಗ್ನಿಶಾಮಕ ಎಂಜಿನ್ನುಗಳನ್ನೂ ಅಂಬ್ಯುಲನ್ಸನ್ನೂ ತೆಗೆದುಕೊಂಡು ಇನಸ್ಪೆಕ್ಟರನೊಬ್ಬ ಅಲ್ಲಿಗೆ ಧಾವಿಸಿ ಬಂದ.

ಯಾರು ಹೇಗೆ ಬಂದರೂ ಜಾನನಿಗೆ ಕಾಣಿಸುವಂತಿದ್ದುದರಿಂದ ಪೋಲೀಸರು ನಿರುಪಾಯರಾದರು. ಸಾಮಾನ್ಯವಾಗಿ ಇಂಥ ಪ್ರಸಂಗದಲ್ಲಿ ಪೋಲೀಸರು ಉಪಯೋಗಿಸುವ ತಂತ್ರಗಳಲ್ಲಿ ಒಂದೂ ಪ್ರಯೋಜನಕ್ಕೆ ಬರುವಂತಿರಲಿಲ್ಲ. ಜಾನ್ ನಿಂತಿದ್ದ ಸ್ಥಳವೇ ಅಂಥದಾಗಿತ್ತು. ಗೋಥಾಮ್ ಹೊಟೆಲ್ಲಿನ ಎದುರುಗಡೆ ಅಷ್ಟು ಎತ್ತರದ ಕಟ್ಟಡವೂ ಇರಲಿಲ್ಲ. ಸಮಯವೊಂದೇ ಪೋಲೀಸರಿಗೆ ಸಹಾಯ ಮಾಡುವ ಸಂಭವವಿತ್ತು. ನಿಂತು ನಿಂತು ಬೇಸತ್ತು ಜಾನ್ ಒಳಗೆ ಬರುವ ಸಂಭವವಿತ್ತು. ಹಾಗೆ ಮಾಡಲು ಅವನ ಮನವೊಲಿಸುವ ಪ್ರಯತ್ನ ಮಾಡಬೇಕಾಗಿತ್ತು. ಆದರೆ ಜಾನನಿಗೆ ಪೋಲೀಸರೆಂದರೆ ಶತ್ರುಗಳು ಎಂಬ ಭಾವನೆ ಅವನು ಈ ಮೊದಲು ಮಾಡಿದ ಆತ್ಮಹತ್ಯೆಯ ಪ್ರಯತ್ನಗಳ ನಂತರ ಬಂದಿತ್ತಾದ್ದರಿಂದ ಬೇರೆಯವರೇ ಈ ಪ್ರಯತ್ನ ಮಾಡಬೇಕಾಗಿತ್ತು.

ಕ್ಯಾಥರೀನ್ ಮತ್ತು ಶ್ರೀಮತಿ ವೆಲೆಂಟ್ಯಾನರು ಪುನಃ ಪುನಃ ಕಿಟಕಿಯ ಬಳಿಗೆ ಹೋಗಿ ಅತ್ಯಂತ ಮಮತೆಯಿಂದ ಜಾನನೊಡನೆ ಮಾತನಾಡಿದರು. ದಮ್ಮಯ್ಯ ಎಂದರು. ತಮ್ಮ ಪ್ರೀತಿಯ ಧಾರೆಯನ್ನೆ ಮಾತಿನಲ್ಲಿ ಸುರಿಸಿ ಅವನನ್ನು ಒಲಿಸಿಕೊಳ್ಳಲೆತ್ನಿಸಿದರು. ಸಮಾಚಾರ ಕೇಳಿ ಕಚೇರಿಯಿಂದ ಬಂದ ವೆಲೆಂಟ್ಯಾನರು ಕೂಡ ತಮ್ಮಿಂದ ಸಾಧ್ಯವಾದ ಮಟ್ಟಿಗೂ ಜಾನನ ಮನ ತಿರುಗಿಸಲು ಪ್ರಯತ್ನಿಸಿದರು. ಯಾವುದೂ ಉಪಯೋಗವಾಗಲಿಲ್ಲ. "ನನ್ನನ್ನು ನನ್ನಷ್ಟಕ್ಕೆ ಬಿಡಿ. ಒಂದಿಷ್ಟು ಹೊತ್ತು ಇಲ್ಲಿ ಕಳೆಯಬೇಕೆಂದಿದ್ದೇನೆ," ಎಂಬುದೊಂದೇ ಸೊಲ್ಲು ಜಾನನ ಬಾಯಲ್ಲಿ.

ಕೆಲ ಹೊತ್ತಿನ ಮೇಲೆ ಜಾನ್ ನೀರು ಬೇಕೆಂದ. ಆದರೆ ಕಿಟಕಿಯ ಹೊರಗೆ ಕಾರ್ನೀಸಿನ ಮೇಲೆ ಗ್ಲಾಸನ್ನಿಡಬೇಕೆಂದೂ ತಾನು ನೀರು ಕುಡಿಯುವಾಗ ಯಾರೂ ಕಿಟಕಿಯ ಬಳಿ ಇರಕೂಡದೆಂದೂ ಕರಾರು ಹಾಕಿದ.

ಇಂಥ ಸಮಯದಲ್ಲಿ ಜಾನನನ್ನು ಹೇಗಾದರೂ ಪಾರುಮಾಡಲು ನಿಯಮಿಸಲ್ಪಟ್ಟಿದ್ದ ಗ್ಲಾಸ್ಕೊ ಮಾಳಿಗೆಯನ್ನೇರಿ ಹೋಗುವ ಮೊದಲು ತನ್ನ ಬಟ್ಟೆ ಬದಲಿಸಿಕೊಂಡ. ಆತ ಹೊಟೆಲ್ಲಿನ ನೌಕರನೊಬ್ಬನ ಕೋಟು ಹಾಕಿಕೊಂಡು ಜಾನ್ ಯಾವ ಕೋಣೆಯ ಕಿಟಕಿಯ ಹೊರಗೆ ನಿಂತಿದ್ದನೊ ಆ ಕೋಣೆಗೆ ಬಂದ.

"ಹಲೊ ಜಾನ್!" ಎಂದ ಆತ ಹೊರಗೆ ಇಣಿಕಿ.

"ಯಾರು ನೀನು?" ಜಾನನ ಕಣ್ಣುಗಳಲ್ಲಿ ಸಂಶಯ ಸ್ಪಷ್ಟವಾಗಿತ್ತು.

"ನಾನಿಲ್ಲಿ ಹೊಸತಾಗಿ–ಇಂದೇ ಬೆಳಿಗ್ಗೆ ನೌಕರಿಗೆ ಸೇರಿಕೊಂಡಿದ್ದೇನೆ. ಜಾನ್, ನಿಜ ಎಂದರೆ ನಿನ್ನ ಖಾಸಗಿ ವ್ಯವಹಾರದಲ್ಲಿ ಮೂಗು ತುರುಕುವ ಮನಸ್ಸು ನನಗೆಳ್ಳಷ್ಟೂ ಇಲ್ಲ. ಆದರೆ ನಿನ್ನ ಈ ವ್ಯವಹಾರ ನನಗೂ ಸ್ವಲ್ಪ—ಏಕೆ, ಬಹಳಷ್ಟು ಸಂಬಂಧಪಡುವುದಾದ್ದರಿಂದ ನನ್ನ ಮಾತುಗಳನ್ನಷ್ಟು ಕೇಳಿಕೊ. ನನಗೆ ಹೆಂಡತಿ ಮತ್ತು ಮೂರು ಮಕ್ಕಳಿದ್ದಾರೆ. ಈವತ್ತಿನ ನೌಕರಿ ಸಿಗುವ ಮೊದಲು ನಾನು ನಿರುದ್ಯೋಗಿಯಾಗಿದ್ದೆ.

ಸರಕಾರ ಕೊಡುತ್ತಿದ್ದ ಧರ್ಮದಿಂದ ಬದುಕಿದ್ದೆವು. ಆ ಕಷ್ಟವನ್ನೇನು ಹೇಳಲಿ? ನೀನೆಂದಾದರೂ ಅಂಥ ಜೀವನ ಅನುಭವಿಸಿದ್ದೀಯಾ ಜಾನ್?"

ಜಾನ್ ಉತ್ತರ ಕೊಡಲಿಲ್ಲ. ಆದರೆ ಅವನ ಕಣ್ಣುಗಳಲ್ಲಿದ್ದ ಸಂಶಯ ಭಾವ ಅಳಿದಿತ್ತು. ಮುಖದ ಬಿಗುವು ಸಡಿಲಾಗಿತ್ತು.

ಗ್ಲಾಸ್ಕೊ ತನ್ನ ಮಾತು ಮುಂದುವರಿಸಿದ: "ಜಾನ್, ಆ ಬಾಳು ನಿಜವಾಗಿಯೂ ಬಹಳ ಕಷ್ಟದ್ದು. ಇನ್ನು ಮನುಷ್ಯ ಒಬ್ಬನೇ ಇದ್ದರೆ, ಹೆಂಡರು ಮಕ್ಕಳ ವ್ಯಾಪ ಇಲ್ಲದಿದ್ದರೆ ನಡೆದೀತು ಎನ್ನು. ಈಗ ನೌಕರಿ ಸಿಕ್ಕಿದೆ, ಕಷ್ಟ ಮುಗಿಯಿತು ಎಂದು ನೀನನ್ನಬಹುದು. ಆದರೆ ನೋಡು. ನೀನು ಅಲ್ಲಿ ನಿಂತಿರುವಿ. ನಿನ್ನ ಜೀವನ- ಮರಣಗಳ ಒಡೆಯ ನೀನಾದರೂ ನೀನೇನಾದರೂ ಅನಾಹುತಕ್ಕೆ ಗುರಿಯಾದರೆ ಏನಾಗುವುದು ಬಲ್ಲಿಯಾ? ಈ ಹೊಟೆಲ್ಲಿಗೆ ಕೆಟ್ಟ ಹೆಸರು ಬರುವುದು. ಅದರ ವ್ಯಾಪಾರ ಹಾಳಾಗಿ ಹೋಗುವುದು. ಆಗ ಅದು ನೌಕರರನ್ನು ಕಡಿಮೆ ಮಾಡಬೇಕಾಗುವುದು. ನೌಕರರನ್ನು ತೆಗೆಯುವ ಪ್ರಶ್ನೆ ಬಂದರೆ ಮೊದಲು ಹೊಸತಾಗಿ ಕೆಲಸಕ್ಕೆ ಬಂದವರನ್ನೆ ತೆಗೆಯುತ್ತಾರೆ ತಾನೆ? ಹಾಗಾದಲ್ಲಿ ನನಗೆ-ನನ್ನ ಹೆಂಡತಿಮಕ್ಕಳಿಗೆ ಮತ್ತೆ ಸರಕಾರದ ಆಶ್ರಯವೇ ಗತಿ. ನನಗೆ–ನನ್ನ ಕುಟುಂಬಕ್ಕೆ ಈ ನೌಕರಿ ಎಷ್ಟು ಮಹತ್ವದ್ದು ಎಂದು ತಿಳಿಯದೆ ನಿನಗೆ?"

"ಛೆ! ನೀನು ಮತ್ತೆ ಪರಿಹಾರ ಧನದಿಂದ ಅರೆ ಹೊಟ್ಟೆ ಉಣ್ಣುವುದು ನನಗೆ ಹಿಡಿಸದು. ನನಗೆ ಇನ್ನೊಂದು ಗ್ಲಾಸು ನೀರು ಕೊಡುವಿಯಾ?" ಜಾನ್ ಕೇಳಿದ.

"ಓಹೋ! ಅಗತ್ಯವಾಗಿ" ಎಂದ ಗ್ಲಾಸ್ಕೊ. ಆತ ಕಿಟಿಕಿಯಿಂದ ಹಿಂದೆ ಕೋಣೆಯೊಳಕ್ಕೆ ಸರಿದ. ಆತ ಪಿಸುಮಾತಿನಲ್ಲಿ ಎಮರ್ಜನ್ಸಿ ಡಿವಿಜನ್ನಿನವರಿಗೆ "ಆತನಿಗೆ ನೀರು ಕೊಡುವಾಗ ಅವನ ಮುಂಗೈ ಹಿಡಿದುಕೊಳ್ಳುತ್ತೇನೆ. ನನ್ನ ಕಾಲಿಗೆ ಹಗ್ಗ ಕಟ್ಟಿರಿ. ನಾನು ಅವನ ಕೈಹಿಡಿದುಕೊಂಡ ನಂತರ ನಮ್ಮನ್ನು ಜಗ್ಗಿಕೊಳ್ಳಿರಿ" ಎಂದ.

ನ್ಯೂಯಾರ್ಕಿನಲ್ಲಿ ಅತಿ ಪ್ರಚಂಡ ಹಗ್ಗ ಜಗ್ಗಾಟಗಾರರೆಂದು ಹೆಸರಾದ ಎಂಟು ಜನ ಹಗ್ಗವನ್ನು ಹಿಡಿದು ನಿಂತರು. ಗ್ಲಾಸ್ಕೊ ಗ್ಲಾಸು ತುಂಬಿಕೊಂಡು ಕಿಡಿಕಿಗೆ ನಡೆದು ಅದರ ದಂಡೆಯ ಮೇಲೆ ಕುಳಿತ. ತುಸು ಮುಂದೆ ಬಂದಿದ್ದ ಜಾನ್ ಹಿಂದೆ ಸರಿದು ಮತ್ತೆ ಮೊದಲಿನ ಸ್ಥಳದಲ್ಲೆ ನಿಂತುಕೊಂಡ.

"ಬಾರಲ್ಲ. ತಗೊ," ಎಂದು ಹೇಳಿದ ಗ್ಲಾಸ್ಕೊ. ಆದರೆ ಮತ್ತೆ ಮೊದಲಿನಂತೆ ಬಿಗುಮುಖನಾಗಿದ್ದ ಜಾನ್ "ಗ್ಲಾಸನ್ನು ಎಡಗೈಯಿಂದ ಕೊಡು" ಎಂದ. ಗ್ಲಾಸ್ಕೊ ಹಾಗೆ ಮಾಡದೆ ವಿಧಿಯಿರಲಿಲ್ಲ. ನೀರು ಕುಡಿಯುತ್ತಿರುವಾಗ ಜಾನನ ಕಣ್ಣುಗಳು ಗ್ಲಾಸ್ಕೊನ ಮೇಲೆ ನಟ್ಟೇ ಇದ್ದವು. ಆತ ಬಗ್ಗಿ ಗ್ಲಾಸನ್ನು ಕಾರ್ನಿಸಿನ ಮೇಲಿಟ್ಟು ಸರಿಸಿ ಗ್ಲಾಸ್ಕೊನ ಕೈಗೆ ತಲುಪುವಂತೆ ಮಾಡಿದಾಗ ಕೆಳಗಿದ್ದ ಜನ "ಹ್ಹಾ!" ಎಂದು ಕೂಗಿದರು. ಜಾನ್ ನೆಟ್ಟಗೆ ನಿಂತು, ಹಿಂದೆ ಮುಂದೆ ವಾಲಿಯುತ್ತ ಕೆಳಗಿನ ಜನರನ್ನು ನೋಡಿದ. ಆಗ ಜನ ಇನ್ನಿಷ್ಟು ಗಾಬರಿಯಿಂದ ಕೂಗಿದರು. ಗ್ಲಾಸ್ಕೊನ ಹೊಟ್ಟೆಯಲ್ಲಿ ತಳಮಳವಾಗುತ್ತಿತ್ತು. ಆತ ತುಟಿ ಕಚ್ಚಿಕೊಂಡು ಹೇಗೋ ಆರ್ತನಾದವನ್ನು ಗಂಟಲಲ್ಲೆ ತಡೆದ.

"ಒಂದು ಸಿಗರೇಟು ಕೊಡಲೆ?"

"ಥ್ಯಾಂಕ್ಸ್, ಸಿಗರೇಟನ್ನೂ ನಿಮ್ಮ ಎಡಗೈಯಿಂದಲೇ ಕೊಡಿ" ಎಂದ ಜಾನ್.

ಫೋಟೊಗ್ರಾಫರರು ಜಾನನ ಚಿತ್ರ ತೆಗೆದುಕೊಳ್ಳುವುದರಲ್ಲಿ ಮಗ್ನರಾಗಿದ್ದರು. ನ್ಯಾಶನಲ್ ಬ್ರಾಡ್‌ಕಾಸ್ಟಿಂಗ್ ಕಂಪನಿಯಂತೂ ಟೆಲಿವಿಜನ್‌ನಲ್ಲಿ ಜಾನನ ವಿಲಾಸವನ್ನು ಮೂಡಿಸತೊಡಗಿತ್ತು. ಮ್ಯೂಚುವಲ್ ಬ್ರಾಡ್‌ಕಾಸ್ಟಿಂಗ್ ಕಂಪನಿ ಜಾನನ ಚಲನವಲನಗಳ ರನಿಂಗ್ ಕಾಮೆಂಟ್ರಿಯನ್ನು ಕೊಡತೊಡಗಿತ್ತು. ಜನ-

ಸಮ್ಮರ್ದದಲ್ಲಿ ನುಗ್ಗಿ ಚಿಲ್ಲರೆ ಮಾರಾಟಗಾರರು ದುರ್ಬೀನುಗಳ ವ್ಯಾಪಾರ ನಡೆಸಿದ್ದರು.

ಗ್ಲಾಸ್ಕೊ ಪೋಲೀಸ್ ಅಧಿಕಾರಿಗಳಿಗೆ ಹೇಳಿದ: "ಅವನನ್ನು ಹಿಡಿಯುವುದು ಬಲು ಕಷ್ಟದ ಮಾತು. ಆತ ಬಲು ಚುರುಕು ಹುಡುಗ. ಅವನ ಮೇಲೆ ನನ್ನ ಯಾವ ತಂತ್ರವೂ ನಡೆಯಲಿಲ್ಲ. ತಾಳ್ಮೆಯಿಂದಲ್ಲದೆ ಮತ್ತಾವುದರಿಂದಲೂ ಕೆಲಸವಾಗದು. ಹೊಟೆಲಿನ ನೌಕರ ನಾನು ಎಂಬ ನನ್ನ ಕಟ್ಟುಕಥೆ ಮಾತ್ರ ಅವನನ್ನು ನಂಬಿಸಿದೆ. ಅವನೊಡನೆ ಮಾತಾಡುತ್ತ ಅವನನ್ನು ಒಲಿಸಬಹುದು ಎನಿಸುತ್ತದೆ."

ಆಗ ಒಬ್ಬ ಅಧಿಕಾರಿ "ನಿಜ ಗ್ಲಾಸ್ಕೊ. ಆದರೆ ಅವನು ಆದಷ್ಟು ಹೆಚ್ಚಿಗೆ ನೀರು ಕುಡಿಯುವಂತೆ ಮಾಡು. ಅಂದರೆ ಆತ ಇನ್ನು ಸ್ವಲ್ಪ ಹೊತ್ತಿನ ಮೇಲಾದರೂ ಮೂತ್ರವಿಸರ್ಜನೆಗೆಂದು ಒಳಗೆ ಬರಬೇಕಾದೀತು," ಎಂದ.

ಅಷ್ಟರಲ್ಲಿ ಜಾನನನ್ನು ಕಾಣಲು ಹತ್ತಿರದ ಡಾ. ಪ್ರೆಸ್ಕರ್ ಎಂಬವರು ಬಂದರು. ಅವರು ಮಾನವ ಸ್ವಭಾವವನ್ನು ಚೆನ್ನಾಗಿ ಅರಿತವರೆಂದು ಹೆಸರಾಂತವರು ಅವರು ಗ್ಲಾಸ್ಕೋನ ಸ್ಥಾನದಲ್ಲಿ ಕುಳಿತು ಅವನನ್ನು ಒಳಗೆ ಕಳಿಸಿದರು. ಸ್ವಲ್ಪ ಸಮಯದ ನಂತರ ಅವರು ಈಚೆ ಬಂದು ಗ್ಲಾಸ್ಕೊಗೆ "ಆತ ನಿಮ್ಮನ್ನು ಕೇಳುತ್ತಿದ್ದಾನೆ. ಒಳಗೆ ಬರಬೇಕೆಂದು ಆತನಿಗೆ ಮನಸ್ಸಿರುವ ಹಾಗಿದೆ. ಆದರೆ ಇಷ್ಟೆಲ್ಲ ಆದಮೇಲೆ ಜನ ತನ್ನನ್ನು ಗೇಲಿ ಮಾಡಿಯಾರು, ಪೋಲೀಸರು ಶಿಕ್ಷಿಸಿಯಾರು ಎಂದಾತ ಅಂಜಿಕೊಂಡಂತೆ ಕಾಣುತ್ತದೆ. ಗ್ಲಾಸ್ಕೊ, ಆತನನ್ನು ಒಲಿಸಿಕೊಳ್ಳಬಹುದು ಎಂದು ನನಗನಿಸುತ್ತದೆ" ಎಂದರು.

ಗ್ಲಾಸ್ಕೊ ಮತ್ತೆ ಕಿಟಿಕಿಯ ಬಳಿಗೆ ಬಂದ. ಜಾನ್ ಮತ್ತು ಆತ ಸುಮಾರು ಒಂದೂವರೆ ತಾಸಿನ ವರೆಗೆ ಅದು ಇದು ಮಾತಾಡಿದರು. ವ್ಯಾಯಾಮದ ಪ್ರಸ್ತಾಪವೂ ಬಂತು. ಗ್ಲಾಸ್ಕೊ ಜಾನನ ಶರೀರ ಸೌಷ್ಠವವನ್ನು ಕೊಂಡಾಡಿದ. ಇದು ಡಂಬೆಲ್ಸ್ ಆಡಿ ಬಂದ ಸೌಷ್ಠವ ಎಂದ ಜಾನ್. ಗ್ಲಾಸ್ಕೊ ಆಗ, "ನನ್ನ ಬೊಜ್ಜು ತೂಕವನ್ನು ಕಡಿಮೆ ಮಾಡಿಕೊಳ್ಳಬೇಕೆಂದಿದ್ದೇನೆ. ನಡಿ, ನಿನ್ನ ಡಂಬೆಲ್ಸ್‌ಗಳನ್ನು ನನಗೆ ತೋರಿಸು. ನಾನೂ ಅಂಥವನ್ನೆ ಕೊಂಡು ನೀನು ಹೇಳಿದಂತೆ ವ್ಯಾಯಾಮ ಮಾಡುತ್ತೇನೆ. ಹೊರಡೋಣವೆ, ಸಂಜೆಯ ಗದ್ದಲ ಶುರುವಾಗುವುದರೊಳಗೆ ನಾವು.."

"ಛೆ! ಛೆ! ಇಷ್ಟು ಬೇಗನೆ ಹೊರಡಲಾಗುವುದಿಲ್ಲ."

"ಹಾಗಾದರೆ ಯಾವಾಗ?"

"ಹೇಳುತ್ತೇನೆ."

ಈ ದೀರ್ಘ ಮಾತುಕಥೆಯ ಕಾಲದಲ್ಲಿ ಜಾನ್ ಹಲವಾರು ಗ್ಲಾಸು ನೀರು ಕುಡಿದಿದ್ದ. ಆದರೆ ಪ್ರತಿಸಲವೂ ನೀರಿನಲ್ಲಿ ಔಷಧವನ್ನೇನೂ ಕೂಡಿಸಿಲ್ಲವೆಂದು ಖಾತ್ರಿ ಮಾಡಿಕೊಳ್ಳಲು ಗ್ಲಾಸ್ಕೊ ಒಂದೆರಡು ಗುಟುಕು ಕುಡಿದೇ ತನಗೆ ಕೊಡುವಂತೆ ಮಾಡಿದ್ದ. ಎಡಗೈಯಿಂದಲೇ ಗ್ಲಾಸನ್ನು ಕೊಡುವಂತೆ ಮಾಡಿದ್ದ. ಇದರ ಪರಿಣಾಮ ಅಧಿಕಾರಿಗಳು ಊಹಿಸಿದಂತೆಯೆ ಆಯಿತು. ಆದರೆ ಮೂತ್ರಬಾಧೆ ಆದದ್ದು ಜಾನನಿಗಲ್ಲ, ಗ್ಲಾಸ್ಕೊಗೆ!

ಒಂದೇ ಸ್ಥಳದಲ್ಲಿ ತಾಸುಗಟ್ಟಲೆ ನಿಂತಿದ್ದರ ಪರಿಣಾಮವಾಗಲಿ, ಅಷ್ಟೊಂದು ನೀರು ಕುಡಿದದ್ದರ ಪರಿಣಾಮವಾಗಲಿ ಜಾನನ ಮೇಲೆ ಏನೂ ಆದಂತೆ ಕಾಣಸಲಿಲ್ಲ. ಗ್ಲಾಸ್ಕೊ, ಅವನು ದಣಿದಾಗ ಜಾನನೊಡನೆ ಸಂಭಾಷಣೆಗೆ ತೊಡಗುತ್ತಿದ್ದ ಡಾ. ಪ್ರೆಸ್ಕರ್, ಕೆಳಗೆ ರಸ್ತೆಯಲ್ಲಿ ನಿಂತು ನೋಡುತ್ತಿದ್ದ ಸಹಸ್ರಾರು ಜನ ಎಲ್ಲರೂ ದಣಿದು ಹೋಗಿದ್ದರು. ಸಂಜೆ ಆರಕ್ಕೆ ಬಂತು. ಜಾನ್ ನಾಲ್ಕಾರು ಸಲ ತಾನು ಒಳಗೆ ಬರುವುದಾಗಿ ಹೇಳಿದಂತೆ ಮಾಡಿದ್ದನಾದರೂ ಕತ್ತಲಾಗತೊಡಗಿದಂತೆ ಅವನಲ್ಲೇನೂ ಬದಲಾವಣೆಯಾಗುತ್ತಿರುವಂತೆ ಕಾಣಿಸಿತು.

ಜಾನ್ ಅಕ್ಕನೊಡನೆ ಮಾತಾಡಬಯಸಿದ. ಗ್ಲಾಸ್ಕೊ ತಂದು ಕೊಟ್ಟ ಫೋನಿನಲ್ಲಿ ಆತ ಅಕ

ನೊಡನೆ ಮಾತಾಡಿದ ದನಿ ಬಲು ಮಂದವಾಗಿತ್ತು. ಆದರೆ ಅವನ ಮುಖದ ಮೇಲಿಂದ ಆ ಮಾತುಕಥೆ ಸಮಾಧಾನಕರವಾಗಲಿಲ್ಲವೆಂಬುದು ಸ್ಪಷ್ಟವಾಗಿ ಕಾಣಿಸಿತು.

ಕ್ಯಾಥರೀನ್ ನಿರಾಶಳಾಗಿ ಅತ್ತುಬಿಟ್ಟಳು. ಶ್ರೀಮತಿ ವೆಲೆಂಟ್ಯಾನಳು ಫೋನ್ ಎತ್ತಿದಳು. "ನಾವೆಲ್ಲ ನಿನ್ನನ್ನು ಪ್ರೀತಿಸುತ್ತೇವೆ. ನಮಗೆಲ್ಲ ನೀನು ಬೇಕು. ಏನು, ಒಳಗೆ ಬರಲಾಗುವುದಿಲ್ಲವೆಂದರೆ? ನೀನು ಒಳಗೆ ಬಾ. ಎಲ್ಲ ಸರಿಯಾಗುತ್ತದೆ" ಎಂದಳು.

ಅದಕ್ಕೆ ಜಾನ್ ಇತ್ತ ಉತ್ತರ: "ಈಗ ಒಳಗೆ ಬರಲು ನಾಚಿಕೆಯಾಗುತ್ತದೆ. ಕೆಳಗೆ ಎಷ್ಟೆಲ್ಲ ಜನ ನಿಂತು ನೋಡುತ್ತಿದ್ದಾರೆ!"

ಜಾನ್ ಫೋನ್ ರಿಸೀವರನ್ನು ಕೆಳಗಿಡುವುದನ್ನೇ ಗ್ಲಾಸ್ಕೋ ಕಾಯುತ್ತಿದ್ದ. ಇಡುವಾಗ ಅವನನ್ನು ಹಿಡಿದುಕೊಳ್ಳಬೇಕೆಂದಾತನ ಯೋಚನೆ. ಆದರೆ ಜಾನ್ ಫೋನನ್ನು ಗ್ಲಾಸ್ಕೋನ ಕೈಗೆ ಎಸೆದ.

ಗ್ಲಾಸ್ಕೊ ಈಗ ಮಿತಿಮೀರಿ ದಣಿದಿದ್ದ. ಒಳಗೆ ಬಂದು ಹಾಸಿಗೆಯಲ್ಲಿ ಅಡ್ಡಾದ. ಜಾನನೊಡನೆ ಮಾತಾಡತೊಡಗಿದ ಡಾ. ಪ್ರೆಸ್ಕರ್ ಸ್ವಲ್ಪ ಹೊತ್ತಿನಲ್ಲಿ ಬಂದು "ತಾವೇನೂ ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಪೋಲೀಸ್ ಕಮೀಶನರರು ಬರೆದುಕೊಟ್ಟರೆ ಆತ ಒಳಗೆ ಬರಲು ಸಿದ್ಧನಿದ್ದಾನೆ" ಎಂದರು. ಪೋಲೀಸ್ ಕಮೀಶನರರು, "ನೀನು ಕೇಳುವ ಕಾಗದ ತಯಾರಾಗುತ್ತಿದೆ. ನೀನೀಗ ಒಳಗೆ ಬರಬಹುದು. ನನ್ನಲ್ಲಿ ನಂಬಿಗೆಯಿಲ್ಲವೆ? ನಾನು ಪ್ರಾಮಾಣಿಕನಂತೆ ಕಾಣಿಸುವುದಿಲ್ಲವೆ?" ಎಂದಾಗ "ಇಲ್ಲ, ಖಂಡಿತ ಇಲ್ಲ," ಎಂದು ಜಾನ್ ಉತ್ತರಕೊಟ್ಟ.

ಸೂರ್ಯಾಸ್ತವಾದ ನಂತರ ಪೋಲೀಸರ ಸರ್ಚ್‌ಲೈಟುಗಳು ಬೆಳಗಿದವು. ಜನರ ಗದ್ದಲ ಹೆಚ್ಚುತ್ತಿತ್ತೇ ವಿನಾ ಕಡಿಮೆಯಾಗಲಿಲ್ಲ.

ಗ್ಲಾಸ್ಕೊ ಎದ್ದು ಬಂದ. ಜಾನನಿಗೆ ಹೇಳಿದ: "ನೋಡು, ನೀನು ಅಲ್ಲಿ ನಿಂತು ೧೦ ತಾಸುಗಳಾಗಿ ಹೋಯಿತು. ನಿನ್ನ ಮೈಯೆಲ್ಲ ಹೊಲಸಾಗಿ ಹೋಗಿದೆ. ನೀನು ದಣಿದಿರಬೇಕು. ಈಗ ಈ ಕೋಣೆಯಲ್ಲಿ ಯಾರೂ ಇರದಂತೆ ಮಾಡಿದ್ದೇನೆ. ಇಲ್ಲಿದೆ ಕೀಲಿಕೈ. ಇನ್ನು ಇಪ್ಪತ್ತು ನಿಮಿಷಗಳ ವರೆಗೆ ಕೋಣೆ ನಿನ್ನದು. ನೀನು ಒಳಗೆ ಬಂದು ಕೈಕಾಲು ಮುಖ ತೊಳೆದುಕೊ. ನಿನಗೆ ತುಸು ಹುರುಪು ಬಂದೀತು. ಆ ಮೇಲೆ ಮತ್ತೆ ಬೇಕಾದರೆ ಈಗಿದ್ದಲ್ಲಿಯೆ ಹೋಗಿ ನಿಂತುಕೊ."

"ಹುಂ. ಆ ಬಗ್ಗೆ ವಿಚಾರ ಮಾಡುತ್ತೇನೆ." ಅವನ ಧ್ವನಿಯಲ್ಲಿ ಸಂಧಾನದ ಲಕ್ಷಣವನ್ನು ಕಂಡುಕೊಂಡ ಗ್ಲಾಸ್ಕೊ, "ಸರಿ ಹಾಗೆ ಮಾಡು. ನೋಡು, ಒಳಗೆ ಯಾರೂ ಇಲ್ಲ ಎಂದು ನಿನಗೆ ಖಾತ್ರಿಯಾಗಲು ಪಡದೆ ಸರಿಸಿದ್ದೇನೆ. ಕೀಲಿಕೈ ಇಲ್ಲೇ ಇಡುತ್ತೇನೆ. ನಾನಿನ್ನು ಹೊರಗೆ ಹೋಗಿ ಸರಿಯಾಗಿ ಇಪ್ಪತ್ತು ಮಿನಿಟುಗಳ ನಂತರ ಬರುತ್ತೇನೆ," ಎಂದು ಅಲ್ಲಿಂದ ನಡೆದ.

ಕೋಣೆಯಲ್ಲಿ ಕಪಾಟಿನ ಹಿಂದೆ ಜಾನನ ಕೈಗೆ ಕೋಳತೊಡಿಸಲು ಅತ್ಯಂತ ಚತುರನೂ ಕ್ಷಣಾರ್ಧದಲ್ಲಿ ಕಾರ್ಯ ಪೂರೈಸುವವನೂ ಆದ ಒಬ್ಬನನ್ನು ನಿಲ್ಲಿಸಿದ್ದರು. ಹೊರಗೆ ಬಾಗಿಲಿಗೆ ಕಿವಿ ಹಚ್ಚಿಕೊಂಡು ಗ್ಲಾಸ್ಕೊ ನಿಂತಿದ್ದ.

"ನಾನು ಆ ಹುಡುಗನೊಡನೆ ಮಾತಾಡಬಯಸುತ್ತೇನೆ" ಎಂಬ ಧ್ವನಿ ಕೇಳಲು ಗ್ಲಾಸ್ಕೊ ತಿರುಗಿ ನೋಡಿದ. ಎದುರಿಗೆ ಒಬ್ಬ ಪ್ರೊಟೆಸ್ಟಂಟ್ ಪಾದ್ರಿ ನಿಂತಿದ್ದ. "ಆ ಹುಡುಗನಿಗೆ ದೇವರ ಭಯವಿದ್ದಂತಿಲ್ಲ. ಅದರ ರಹಸ್ಯ ಆತನಿಗೆ ತಿಳಿದಿಲ್ಲ. ನಾವೆಲ್ಲ ವಿವರಿಸಿ ಹೇಳಿ ಅವನನ್ನು ರಕ್ಷಿಸುತ್ತೇವೆ."

"ಕ್ಷಮಿಸಿ ಪಾದ್ರಿಗಳೇ. ಈಗ ಸದ್ಯ ಯಾರನ್ನೂ ಖೋಲಿಗೆ ಬಿಡದಿರಲು ಆಜ್ಞೆಯಿದೆ. ಇನ್ನರ್ಧ ತಾಸು ತಡೆದು ಚೀಫ್ ಇನ್‌ಸ್ಪೆಕ್ಟರರನ್ನು ಕಂಡು ಆಮೇಲೆ ಮಾತಾಡಬಹುದು," ಎಂದ ಗ್ಲಾಸ್ಕೊ.

ತುಸು ಹೊತ್ತಿನ ಮೇಲೆ ಕೋಣೆಯಲ್ಲಿದ್ದ ಕೋಳ ತೊಡಿಸುವವನಿಗೆ ಆ ಪಾದ್ರಿ ಕಾಣಿಸಿಕೊಂಡ. ಆತ ಪಕ್ಕದ ಕೋಣೆಯ ಬಾಗಿಲಿ

ನಿಂದ ಬಂದಿದ್ದ. ಆ ಮನುಷ್ಯ ಒಳಗೆ ಕಾಣಿಸಿಕೊಳ್ಳುವುದಕ್ಕೂ ಜಾನ್ ಕಿಟಕಿಗೆ ಬಂದು ಒಳಗೆ ನೋಡುವುದಕ್ಕೂ ಸರಿಹೋಯಿತು. ಪಾದ್ರಿಯನ್ನು ಕಾಣುವುದೊಂದೇ ತಡ, ಜಾನ್ ಸರ್ರನೆ ಹಿಂದೆ ಸರಿದ. ತನ್ನ ಸ್ಥಳಕ್ಕೆ ಹೋಗಿ ನಿಂತುಬಿಟ್ಟ. ಕ್ಷಣಾರ್ಧದಲ್ಲಿ ಇದು ನಡೆದು ಹೋಯಿತು.

ಪಾದ್ರಿಯನ್ನು ಹೊರಗೆ ಹಾಕಿದರು ಗ್ಲಾಸ್ಕೊ ಮತ್ತೆ ಕಿಟಕಿಗೆ ಓಡಿ ಬಂದ. "ಜಾನ್, ಪ್ರಮಾದವಾಗಿಬಿಟ್ಟಿತು. ಆ ಮನುಷ್ಯ ಪಕ್ಕದ ಕೋಣೆಯಿಂದ ಎಲ್ಲರ ಕಣ್ಣು ತಪ್ಪಿಸಿ ಹೇಗೆ ಒಳಗೆ ಬಂದನೊ ಕಾಣೆ. ಈ ಸಲ ಜಾಗ್ರತೆ ವಹಿಸುತ್ತೇನೆ. ನೀನು ಒಳಗೆ ಬರುವಿಯಾ?" ಎಂದು ಕೇಳಿದ.

ಜಾನ್ ಉತ್ತರವನ್ನೇ ಕೊಡಲಿಲ್ಲ.

ಆತನನ್ನು ಇನ್ನು ಪುಸಲಾಯಿಸಿ ಪ್ರಯೋಜನವಿಲ್ಲೆಂದು ನಿಶ್ಚಯವಾಯಿತು. ಆದರೆ ಪೋಲೀಸರ ತಲೆಯಲ್ಲಿ ಇನ್ನೊಂದು ಉಪಾಯ ಹೊಳೆದಿತ್ತು. ಅವರು ೪೦ ಅಡಿ ಉದ್ದ, ೨೫ ಅಡಿ ಅಗಲವಾಗಿದ್ದ ಬಲೆಯೊಂದನ್ನು ತರಿಸಿದರು ಹೋಟೆಲಿನ ಎಂಟನೆಯ ಮಾಳಿಗೆಯ ಕಿಡಿಕಿಗಳಿಗೆ ಅದರ ತುದಿಗಳನ್ನು ಕಟ್ಟಿ ಮೇಲೆ ಹದಿನೆಂಟನೇ ಮಾಳಿಗೆಯ ಕಿಡಿಕಿಗಳಿಂದ ಇಳಿಸಿದ ಹಗ್ಗಗಳ ಆಧಾರದಿಂದ ಅವರು ಜಾನ್ ನಿಂತಿದ್ದ ೧೭ ನೆಯ ಮಾಳಿಗೆಯತ್ತ ಏರಿಸತೊಡಗಿದ್ದರು. ಆ ಮಾಳಿಗೆ ದಾಟಿದೊಡನೆ ಅದನ್ನು ಗೋಡೆಗೊತ್ತಿ ಜಾನನನ್ನು ಹಿಡಿಯಬೇಕಾಗಿತ್ತು. ಆದರೆ ಆ ಬಲೆಗೇನಾಯಿತೊ ಅದು ೧೭ ನೇ ಮಾಳಿಗೆ ಮುಟ್ಟುತ್ತಿರುವಷ್ಟರಲ್ಲಿ ತೊಡಕಿ ಸಡಿಲು ಬಿದ್ದು ಕೆಳಗೆ ಕಟ್ಟಡದ ಗೋಡೆಗೆ ತಗಲಿ ಜೋತು ಬಿದ್ದಿತು.

ಅದನ್ನು ಬಿಡಿಸಿ ಸರಿಪಡಿಸಲು ಪೋಲೀಸರು ಒದ್ದಾಡತೊಡಗಿದರು. ಸಮಯ ಕಳೆಯಲು ಗ್ಲಾಸ್ಕೊ ಮತ್ತೆ ಮಾತಾಡತೊಡಗಿದ. "ಈ ಎಲ್ಲ ಜನರ ಮುಂದೆ ಹೀಗೆ ಮಾಡುತ್ತಿರುವುದಕ್ಕಾಗಿ ನನಗೆ ನಾಚಿಕೆಯಾಗುತ್ತದೆ. ಅವರೆಲ್ಲ ಏನೋ ಅದ್ಭುತದ ನಿರೀಕ್ಷಣೆಯಲ್ಲಿದ್ದಾರೆ" ಜಾನ್ ಹೇಳಿದ.

"ಸರಿ. ಅವರ ಅಪೇಕ್ಷೆಯನ್ನು ಭಂಗಗೊಳಿಸೋಣ" ಎಂದ ಗ್ಲಾಸ್ಕೊ.

"ನಾನು ನಿರ್ಧಾರ ಮಾಡಿದ್ದೇನೆ."

"ಸರಿ. ಅವರೆಲ್ಲ ಮೂರ್ಖರು ಎಂದು ಸಿದ್ಧ ಮಾಡೋಣ."

ಅಷ್ಟರಲ್ಲಿ ಗ್ಲಾಸ್ಕೊನ ಕಾಲಿಗೆ ಕಟ್ಟಿದ ಹಗ್ಗ ಜಗ್ಗಿದಂತಾಗಲು ಆತ ಜಾನನಿಗೆ "ಒಂದು ನಿಮಿಷ, ಬಂದೆ" ಎಂದು ಕೋಣೆಯೊಳಗೆ ಸರಿದ. ಜಾನನ ಬಾಲ್ಯ ಮಿತ್ರನೊಬ್ಬ ಬಂದಿದ್ದ. ಆತ ಜಾನನೊಡನೆ ಮಾತಾಡತೊಡಗಿದ.

ಇನ್ನೇನು, ಬಲೆ ಸರಿಯಾಗುವುದರಲ್ಲಿತ್ತು. ಆದರೆ ಅಧಿಕಾರಿಗಳೊಂದಿಗೆ ಗ್ಲಾಸ್ಕೊ ಮಾತಾಡುತ್ತಿದ್ದಂತೆ ಜನರ ಕೋಲಾಹಲ ಕೇಳಿಸಿತು. "ಹ್ಞಾ. ಹಾರಿದ, ನೋಡಿ!"

ಗ್ಲಾಸ್ಕೊ ಅತ್ತುಬಿಟ್ಟ.

ಜಾನ್ ಕೆಳಗೆ ಬೀಳುತ್ತಿದ್ದಂತೆ ೧೬ ನೆಯ ಮಾಳಿಗೆಯ ಕಿಟಿಕಿಯಲ್ಲಿದ್ದ ಪೋಲೀಸನೊಬ್ಬ ಅವನನ್ನು ಹಿಡಿಯಲೆತ್ನಿಸಿದ್ದು ವ್ಯರ್ಥವಾಯಿತು.

ನೆಟ್ಟಗೆ ಬಾಣದಂತೆ ಕೆಳಗಿಳಿಯುತ್ತಿದ್ದ ಜಾನ್ ಎಂಟನೆಯ ಮಾಳಿಗೆಯ ಕಾರ್ನೀಸಿಗೆ ಬಡಿದು ತಲೆ ಕೆಳಗಾಗಿ ಬೀಳತೊಡಗಿದ. ಆತ ಕೆಳಗೆ ನೆಲದ ಮೇಲೆ ಅರ್ಧ, ಅರ್ಧ ಗಟಾರದಲ್ಲಿ ಬಿದ್ದ. ಅವನಿಗೆ ಕೊನೆಯ ಉಪದೇಶ ಮಾಡಲೆಂದು ಒಬ್ಬ ಪಾದ್ರಿ ಓಡಿಬಂದ. ಆದರೆ ಅಷ್ಟರಲ್ಲಿ ಜಾನನ ಪ್ರಾಣಪಕ್ಷಿ ಹಾರಿ ಹೋಗಿತ್ತು. *

೬ ತಾಸಿನಲ್ಲಿ ಪೃಥ್ವೀಪ್ರದಕ್ಷಿಣೆ

ಡಾ. ಚಿಂ. ಶ್ರೀ. ಕರ್ವೆ

ಲಂಡನ್ನಿನಿಂದ ನ್ಯೂಯಾರ್ಕಿಗೆ ಎರಡೇ ಗಂಟೆಗಳಲ್ಲಿ ತಲಪುವ ವಿಮಾನ ಈ ವರ್ಷ ಸಿದ್ಧವಾಗಲಿದೆ. ಅಷ್ಟು ದೂರವನ್ನು ೪೪ ನಿಮಿಷಗಳಲ್ಲಿ ಮುಗಿಸುವ ವಾಹನಗಳನ್ನು ಯೋಜಿಸುತ್ತಿದ್ದಾರೆ.

ರಶಿಯದ ಯೂರಿ ಗಾಗರಿನ್ ಆಕಾಶದಲ್ಲಿ ೧೮೦ ಮೈಲು ಎತ್ತರದ ವರೆಗೆ ಹೋಗಿ ಅಲ್ಲಿಂದ ಪೃಥ್ವೀಪ್ರದಕ್ಷಿಣೆಯನ್ನು ಮಾಡಿ ಬಂದ ನಂತರದಲ್ಲಿ ಮತ್ತು ಅಮೇರಿಕದ ಅಲೆನ್ ಶಪರ್ಡ್ ಆಕಾಶದಲ್ಲಿ ೧೧೫ ಮೈಲು ಎತ್ತರಕ್ಕೆ ಹೋಗಿ ಬಂದ ನಂತರದಲ್ಲಿ ಇನ್ನು ಮುಂದೆ ಬೇಗನೆ ಆಕಾಶಯಾನದಲ್ಲಿ ಹೊಸ ಪರ್ವ ಆರಂಭವಾದೀತೆಂಬ ನಂಬಿಕೆಯಾಗತೊಡಗಿದೆ. ಹೀಗಾದಲ್ಲಿ ಇಂದು ತಾಸಿಗೆ ೬೦೦ ಮೈಲು ವೇಗದಲ್ಲಿ ಹಾರುವ "ಬೋಯಿಂಗ್–೭೦೭" ಮತ್ತು "ಕಾಮೆಟ್" ಮುಂತಾದ ವಿಮಾನಗಳ ಬದಲು ಅವುಗಳಿಗಿಂತಲೂ ತುಂಬ ವೇಗದಲ್ಲಿ ಹಾರುವ ವಿಮಾನಗಳು ಉಪಯೋಗದಲ್ಲಿ ಬರುವವು.

ಗಾಗರಿನ್ ತಾಸಿಗೆ ೧೮,೦೦೦ ಮೈಲು ವೇಗದಲ್ಲಿ ಹಾರಿ ಪೃಥ್ವೀಪ್ರದಕ್ಷಿಣೆ ಮಾಡಿದ. ಬರಲಿರುವ ಶೀಘ್ರಗಾಮಿ ವಿಮಾನಗಳು ಇಷ್ಟೊಂದು ಪ್ರಚಂಡ ವೇಗದಲ್ಲಿ ಹಾರಲಾರವಾದರೂ ಶಪರ್ಡ್ ಹಾರಿದ ವೇಗದಲ್ಲಿ ಅಂದರೆ ತಾಸಿ… ಸುಮಾರು ನಾಲ್ಕೂವರೆ ಸಾವಿರ ಅಥವಾ… ಅದಕ್ಕೂ ತುಸು ಹೆಚ್ಚು ಎಂದರೆ ೫,೦೦… ಮೈಲು ವೇಗದಲ್ಲಿ ಹಾರುವ ವಿಮಾನಗಳ… ಮುಂದಿನ ಕೆಲವೇ ವರ್ಷಗಳಲ್ಲಿ ಅಸ್ತಿತ್ವಕ… ಬರುವುದು ಸಾಧ್ಯವಿದೆ. ಸದ್ಯದಲೆ ಅಮೇರಿಕ… 'ಬಿ-೭೦' ಎಂಬ ವಿಮಾನ ತಾಸಿಗೆ ೨,೦೦… ಮೈಲು ವೇಗದಲ್ಲಿ ಹಾರಲಿದೆ. ಇದರಿಂದ ಜೆಟ… ವಿಮಾನಕ್ಕಿಂತಲೂ ಮೂರು ಪಟ್ಟು ವೇಗದಿಂ… ಹಾರುವ ವಿಮಾನಗಳನ್ನು ಸದ್ಯದಲ್ಲಿಯೆ ತಯ… ರಿಸಲಿದ್ದಾರೆಂದು ಖಚಿತವಾಗುವುದು.

ಈಗ ಪ್ರಯೋಗಾವಸ್ಥೆಯಲ್ಲಿರುವ "ಎಕ್ಸ್-… ೧೫" ಎಂಬ ವಿಮಾನದ ವೇಗ ತಾಸಿಗೆ ೪,೦೦… ಮೈಲು ಆಗಬಹುದು ಎಂದು ಅಂದಾಜು ಇದೆ… ಈ ವಿಮಾನ ೫೦ ಅಡಿ ಉದ್ದ, ೨೨ ಅಡಿ ಅಗ… ವಾಗಿದೆ. ಆಕಾಶ ಬಾಣದಲ್ಲಿ ಉಡ್ಡಾ… ಕ್ಕಾಗಿ ಸ್ಫೋಟಕ ಮಿಶ್ರಣವನ್ನು ಉಪಯೋಗಿಸ… ವಂತೆ ಈ ವಿಮಾನದ ಉಡ್ಡಾಣಕ್ಕಾಗಿ ಅಮೋ… ನಿಯ ಮತ್ತು ದ್ರವೀಭೂತ ಪ್ರಾಣವಾಯು (ಆಮ್ಲಜನಕ) ಮಿಶ್ರಣದ ಇಂಧನವನ್ನು ಉ… ಯೋಗಿಸುವುದರಿಂದ ಇದಕ್ಕೆ ಇಷ್ಟೊಂದು… ಅಗಾಧ ವೇಗ ಪ್ರಾಪ್ತವಾಗಲಿದೆ. ಇದುವರೆ… ಇಂಥ ಮೂರು ವಿಮಾನಗಳನ್ನು ಕಟ್ಟಿದ್ದು ಅ… ಗಳಲ್ಲಿ ಒಂದರಲ್ಲಿ ಕುಳಿತು ರಾಬರ್ಟ್ ವೈಟ… ಎಂಬ ಅಮೇರಿಕನ್ ವೈಮಾನಿಕನು ಆಕಾಶದ… ಸುಮಾರು ೨೬ ಮೈಲು ಎತ್ತರಕ್ಕೆ ಹಾರಿ ತೋ… ಸಿದ್ದಾನೆ. ಆ ಎತ್ತರದಲ್ಲಿ ಅವನ ವಿಮಾ… ತಾಸಿಗೆ ೧,೫೦೦ ಮೈಲು ವೇಗದಲ್ಲಿ ಹಾರುತ್ತ… ಲಿತ್ತು. ಇನ್ನು ಮುಂದಿನ ಪ್ರಯೋಗಗಳ… ಈ ವೇಗವನ್ನು ಹಂತ-ಹಂತವಾಗಿ ಹೆಚ್ಚಿ… ಗಂಟೆಗೆ ೪,೦೦೦ ಮೈಲಿಗೆ ಒಯ್ಯಲಾಗುವುದು…

ಈಗ ಇಂಥ ವಿಮಾನಗಳ ಚಿಕ್ಕ ಮಾದರಿಗ… ಮೇಲೆ ನಡೆಸಿರುವ ಪ್ರಯೋಗಗಳಿಂದ … ನೂತನ ವೇಗಶಾಲಿ ವಿಮಾನಗಳ ಆಕಾ… ಮಾತ್ರ ತೀರ ಭಿನ್ನವಾಗಬೇಕಾದೀತು ಎಂದು… ಕಾಣಿಸುತ್ತದೆ. ಬಹುಶಃ ಅವುಗಳ ಆಕಾರ ಬ…

• "ಕಿರ್ಲೋಸ್ಕರ" ದಿಂದ



ತಾಸಿಗೆ ೫೦೦೦ಮೈಲು ಸಾಗುವ ಈ ಪ್ರವಾಸಿ ವಿಮಾನವನ್ನು ಹೀಗೆ ಇನ್ನೊಂದು ವಿಮಾನ ಆಕಾಶಕ್ಕೆ ಒಯ್ದು ಹಾರಿಸಿ ಬಿಡುವುದು

ಯುವ ಪೆನ್ಸಿಲಿನಂತೆ ಆಗಬಹುದು. ಪೃಥ್ವಿಯಿಂದ ತೀರ ಮೇಲ್ಗಡೆ ವಿರಳ ವಾತಾವರಣದಲ್ಲಿ ನಡೆಯುವ ಪ್ರವಾಸಕ್ಕೆ ಈ ಆಕಾರವು ಹೆಚ್ಚು ಉಪಯುಕ್ತವಾಗಬಹುದು ಎಂದು ಅನಿಸಿದೆ. ಈ ವಿಮಾನಗಳ ಪ್ರವಾಸ ಅಂತರಿಕ್ಷದಲ್ಲಿ ಸುಮಾರು ೧೪ ಮೈಲು ಎತ್ತರದಲ್ಲಿ ನಡೆಯಬಹುದೆಂದು ಅಂದಾಜಿದೆ. ಇಷ್ಟು ಎತ್ತರದಲ್ಲಿ ವಾತಾವರಣದ ಒತ್ತಡ ಎಷ್ಟು ಕಡಿಮೆಯಾಗಿರುವುದೆಂದರೆ ಅದರಿಂದ ವಿಮಾನದಲ್ಲಿ ಪ್ರವಾಸ ಮಾಡುವವರ ರಕ್ತ ಕುದಿಯತೊಡಗುವುದು. ಮತ್ತೆ ಇಷ್ಟು ಎತ್ತರದಲ್ಲಿರುವ ವಾತಾವರಣದ ಉಷ್ಣತಾಮಾನ ಶೂನ್ಯಕ್ಕಿಂತ ೬೫°(—೬೫°) ಕಡಿಮೆಯಾಗಿರುವುದು.

ಆದುದರಿಂದ ಅಲ್ಪ ಒತ್ತಡ ಮತ್ತು ಅಲ್ಪ ಉಷ್ಣತಾಮಾನಗಳಿಂದ ಪ್ರಯಾಣಿಕರನ್ನು ಸಂ-ರಕ್ಷಿಸಲು ವಿಶೇಷ ಏರ್ಪಾಡುಗಳನ್ನು ಮಾಡದೆ ವಿಧಿಯಿಲ್ಲ. ವಿಮಾನದಲ್ಲಿ ಕೃತ್ರಿಮವಾಗಿ ಅಗತ್ಯವಿರುವಷ್ಟು ಒತ್ತಡ ಮತ್ತು ಉಷ್ಣತಾಮಾನವನ್ನು ಇರಿಸುವ ವ್ಯವಸ್ಥೆ ಮಾಡಬೇಕಾಗುವುದು. ಹೀಗಾದರೆ ತಾಸಿಗೆ ೨,೦೦೦ಮೈಲು ವೇಗದಲ್ಲಿ ಹಾರುವಾಗ ವಿಮಾನದ ಮೇಲೆ ಹಾಯುವ ಉಷ್ಣ ಹವೆಯಿಂದ, ಅದರ ಹೊರ ಆವರಣದ ಉಷ್ಣತಾಮಾನ ೬,೦೦° ಗಳಿಗಿಂತಲೂ ಏರುವುದರಿಂದ ಒಳಗಿನವರಿಗೆ ತಗಲಬಹುದಾದ ಬಿಸಿಯೂ ತಪ್ಪುವುದು

ವಿಮಾನದ ಹೊದಿಕೆಯ ಅತಿ ಹೆಚ್ಚು ಉಷ್ಣತಾಮಾನದ ಜಳವು ಒಳಗಿನವರಿಗೆ ತಗಲದಂತೆ ಮಾಡುವುದೊಂದು ದೊಡ್ಡ ಪ್ರಶ್ನೆಯೆನಿಸಿದರೂ ಆಕಾಶದಲ್ಲಿ ಆಕಾಶಬಾಣಗಳ ಸಹಾಯದಿಂದ ಇದುವರೆಗೆ ಮಾಡಿರುವ ಉಡ್ಡಾಣಗಳ ಅನುಭವದಿಂದ ಅದೇನೂ ಅಂಥ ದಿವ್ಯವೆನಿಸದು ಎಂದು ಹೇಳಬಹುದಾಗಿದೆ. ಏಕೆಂದರೆ ಅಲೆನ್ ಶೆಪರ್ಡ್ ಯಾವ ಕೃತ್ರಿಮ ಪೆಟ್ಟಿಗೆಯಲ್ಲಿ ಕುಳಿತು ಆಕಾಶದಿಂದ ಭೂಮಿಗೆ ಹಾರಿದನೊ ಆ ಪೆಟ್ಟಿಗೆಯ ಮೆಲ್ಭಾಗದ ಉಷ್ಣತಾಮಾನ ೩,೦೦೦° ಗಳಷ್ಟು (ವಾತಾವರಣದೊಡನಾದ ಘರ್ಷಣೆಯ ಮೂಲಕ) ಇದ್ದಿತು. ವಿಜ್ಞಾನಿಗಳು ಒಳಗಡೆ ಯೋಜಿಸಿದ್ದ ಹವೆಯನ್ನು ತಂಪುಗೊಳಿಸುವ ಏರ್ಪಾಡಿನಿಂದ ಶೆಪರ್ಡನಿಗೆ ಏನೂ ತೊಂದರೆಯಾಗಲಿಲ್ಲ.

ಇದಕ್ಕಾಗಿ ವಿಮಾನದ ಮೇಲ್ಭಾಗವನ್ನು ಎರಡು ಪದರುಗಳಲ್ಲಿ ಮಾಡಿ ಆ ಎರಡು ಪದರುಗಳ ನಡುವೆ ಖಾಲಿ ಜಾಗೆಯಿರುವಂತೆ ಯೋಜಿಸಬೇಕಾಗುವುದು (ಥರ್ಮಾಸಿನಂತೆ). ಈ ಪೊಳ್ಳಿನಲ್ಲಿ ತಂಪು ಹವೆ ಓಡಾಡುವಂತೆ ಮಾಡಬೇಕು. ಅದರ ಬದಲು ತಣ್ಣೀರು ಹರಿಯುತ್ತಿರುವಂತೆ ಮಾಡಬೇಕೆಂದೂ ಕೆಲವರ ಅಭಿಪ್ರಾಯವಿದೆ.

ಉಷ ತಾಮಾನದ ಪ್ರಶ್ನೆಯನ್ನು ಬಗೆಹರಿಸಿದ ನಂತರ ವಿಮಾನದ ಒಳಗೆ ಹವೆಯ ಚಲನವಲನದ ಪ್ರಶ್ನೆ ಏಳುವುದು. ಅದಕ್ಕಾಗಿ ಹೊರಗಿನ ಶುದ್ಧ ಹವೆಯನ್ನು ಒಳಗೆ ತೆಗೆದುಕೊಂಡು ಒಳಗಿನ ಅಶುದ್ಧ ಹವೆಯನ್ನು ಹೊರಗೆ ಕಳಿಸುವ ವ್ಯವಸ್ಥೆ ಬೇಕು. ಆದರೆ ಈ ಅದ್ಭುತ ವೇಗದ

ವಿಮಾನದ ರ್ಯಾಮ್‌ಜೆಟ್ ಪದ್ಧತಿಯ ಇಂಜಿನ್ನುಗಳ ಮೂಲಕ ವಿಮಾನದತ್ತ ಸೆಳೆಯಲ್ಪಡುವ ಹವೆಯ ಉಷ್ಣತಾಮಾನವೂ ೬೦೦°ಗಳಷ್ಟಿರುವುದರಿಂದ ಹೊರಗಿನ ಹವೆಯನ್ನು ಒಳಗೆ ತೆಗೆದುಕೊಳ್ಳುವುದೂ ಅನುಕೂಲದ್ದಾಗದು. ಅಲ್ಲದೆ ೧೪ ಮೈಲು ಎತ್ತರದಲ್ಲಿರುವ ಹವೆಯಲ್ಲಿ ಓಝೋನ್ ವಾಯುವಿನ ಪ್ರಮಾಣವೂ ಹೆಚ್ಚಾಗಿರುವುದು ನಿರ್ವಿವಾದ. ಒಂದು ನಿರ್ದಿಷ್ಟ ಪ್ರಮಾಣಕ್ಕಿಂತ ಹೆಚ್ಚಿಗೆ ಈ ವಾಯುವಿರುವುದು ಹಿತಕರವಲ್ಲ. ಆದ್ದರಿಂದ ಹೊರಗಿನ ಹವೆಯಲ್ಲಿ ಓಝೋನನ್ನೂ ಉಷ್ಣತೆಯನ್ನೂ ಕಡಿಮೆ ಮಾಡಿದ ನಂತರವೇ ವಿಮಾನದೊಳಕ್ಕೆ ತೆಗೆದುಕೊಳ್ಳಬೇಕಾಗುವುದು.

ಇಷ್ಟೆಲ್ಲ ಏರ್ಪಾಡು ಮಾಡಿದರೆ ಮಾತ್ರ ಪ್ರಯಾಣಿಕರಿಗೆ ಈಗಿನ ವಿಮಾನ ಪ್ರಯಾಣಕ್ಕೂ ಈ ಹೊಸ ವಿಮಾನಗಳ ಪ್ರಯಾಣಕ್ಕೂ ವಿಶೇಷ ಅಂತರ ಕಾಣಿಸದು. ವಿಮಾನವು ಮೇಲಕ್ಕೇರುವಾಗ ಅವರು ತಮ್ಮ ಆಸನಗಳಲ್ಲಿ ಭದ್ರವಾಗಿ ಕುಳಿತಿರಬೇಕಾಗುವುದು. ವಿಮಾನಗಳ ಕಿಡಿಕಿಯಿಂದಲೂ ಅವರಿಗೆ ಪ್ರಯೋಜನವಾಗದು. ಏಕೆಂದರೆ ೭,೦೦೦ ಅಡಿ ಎತ್ತರದಲ್ಲಿ ಹಾರುವ ವಿಮಾನದ ಕಿಡಿಕಿಗಳಿಂದ ಪೃಥ್ವಿಯ ಮೇಲಿನ ದೃಶ್ಯ ಸರಿಯಾಗಿ ಕಾಣಿಸದು. ಮತ್ತು ವಿಮಾನವನ್ನು ತಂಪಾಗಿಡಲು ಅದನ್ನು ಕಟ್ಟಬೇಕಾದ ರೀತಿಯಲ್ಲಿ ಕಿಡಿಕಿಗಳಿರುವುದು ದುಷ್ಕರವಾಗಿದೆ. ಆದ್ದರಿಂದ ಟೆಲಿವಿಜನ್ ಮುಂತಾದ ಸಾಧನಗಳಿಂದ ಪ್ರಯಾಣಿಕರ ಮನೋರಂಜನೆ ಮಾಡಬೇಕಾದೀತು.

ಮತ್ತೆ, ಇಷ್ಟು ದ್ರುತಗತಿಯಲ್ಲಿ ಹಾರುವ ವಿಮಾನದಲ್ಲಿ ಮಾಡುವ ಪ್ರವಾಸ ದೀರ್ಘಕಾಲದ್ದಂತೂ ಎಂದೂ ಆಗದು. ೨,೦೦೦ ಮೈಲು ವೇಗದ ಈ ವಿಮಾನಗಳಲ್ಲಿ ಹತ್ತು ಸಾವಿರ ಮೈಲಿನ ಸಾಗರೋತ್ತರ ಪ್ರಯಾಣ ಕೇವಲ ಐದು ಗಂಟೆಗಳಲ್ಲಿ ಮುಗಿದುಹೋಗುತ್ತದೆ. ಒಂದು ವಿಮಾನ ನಿಲ್ದಾಣದಿಂದ ಹೊರಟಿವು ಎನ್ನುವಷ್ಟರಲ್ಲಿ ಇನ್ನೊಂದು ವಿಮಾನ ನಿಲ್ದಾಣ ಬಂದಿರುತ್ತದೆ. ವೈಮಾನಿಕರು ತಮ್ಮ ಉಡ್ಡಾಣ ಮತ್ತು ಇಳಿಯುವಿಕೆಯ ಸೂಚನೆ ಕೊಡುವುದಕ್ಕಾಗಿ ಗಣಕಯಂತ್ರಗಳ (ಡಿಜಿಟಲ್ ಕಾಂಪ್ಯೂಟರ್ಸ್) ಸಹಾಯ ಪಡೆಯಬೇಕಾದೀತು. ಮಾನುಷ ವೈಮಾನಿಕನು ಲೆಕ್ಕಮಾಡುವಾಗ ಸಾವಿರದಲ್ಲಿ ಒಂದಂಶದಷ್ಟು ತಪ್ಪಾದರೂ ಸಾಕು, ಬಹಳಷ್ಟು ತೊಂದರೆ ಗೊಂದಲಗಳೇಳಬಹುದು. ಏಕೆಂದರೆ ಈ ವಿಮಾನ ಮಿನಿಟಿಗೆ ೩೦ ಮೈಲು ಹಾರುತ್ತದೆ.

ಈಗಿನ ಜೆಟ್ ವಿಮಾನಗಳು ಗಂಟೆಗೆ ೬೦೦ ಮೈಲು ವೇಗದಲ್ಲಿ ಸಾಗುವುದನ್ನೇ ಮೊದಲ ಗಂಟೆಯಲ್ಲಿ ೧,೦೦೦ ಮೈಲಿಗೆ, ಅದರ ನಂತರದ ಗಂಟೆಯಲ್ಲಿ ೧,೨೦೦ ಮೈಲು, ಮುಂದೆ ೨,೦೦೦ ಮೈಲು ಹೀಗೆ ಕ್ರಮವಾಗಿ ವೇಗವನ್ನು ಏರಿಸುತ್ತ ಹೋಗುವುದು ವಿಜ್ಞಾನಿಗಳ ಉದ್ದೇಶವಲ್ಲ. ಅದು ಲಾಭದಾಯಕವೂ ಅಲ್ಲ. ಏರಿಸಿದರೆ ಒಮ್ಮೆಲೆ ವೇಗವನ್ನು ೧,೪೦೦ ಮೈಲಿಗಿಂತಲೂ ಹೆಚ್ಚಿಗೆ ಏರಿಸಬೇಕಾಗುವುದು. ತಾಸಿಗೆ ಇಷ್ಟು ವೇಗದಲ್ಲಿ ಹಾರುವ ವಿಮಾನಗಳ ಮೇಲ್ಭಾಗ ಆಲ್ಯುಮಿನಿಯಮ್ಮಿನದಿದ್ದರೆ ನಡೆಯಬಹುದಾದರೂ ೨,೦೦೦ ಮೈಲು ವೇಗದ ವಿಮಾನಗಳ ಮೇಲ್ಭಾಗವನ್ನು ಸ್ಟೇನ್‌ಲೆಸ್ ಸ್ಟೀಲ್ ಅಥವಾ ಟಿಟಾನಿಯಂ ಧಾತುವಿನಿಂದ ಕಟ್ಟಬೇಕಾದೀತು. ಹೀಗೆ ಕಟ್ಟುವ ವಿಮಾನುಗಳ ವೆಚ್ಚವು ಈಗಿಗಿಂತ ಸಹಜವಾಗಿ ನಾಲ್ಕು ಪಟ್ಟು ಹೆಚ್ಚಾಗುವುದು: ಈಗ ಒಂದು ಜೆಟ್ ವಿಮಾನ ತಯಾರಿಸಲು ಎರಡು ಎರಡೂವರೆ ಕೋಟಿ ರೂಪಾಯಿಗಳು ಬೇಕಾಗುವವಾದರೆ ಈ ಹೊಸ ವಿಮಾನ ಕಟ್ಟಲು ಎಂಟು ಹತ್ತು ಕೋಟಿ ರೂಪಾಯಿಗಳು ಬೇಕಾಗುವವು. ಆದರೆ ಅದರಿಂದ ಆತಂಕವಿಲ್ಲ. ಏಕೆಂದರೆ ವಿಮಾನಗಳು ವೇಗದಿಂದ ಹಾರುವುದರಿಂದ ಕಡಿಮೆ ವಿಮಾನಗಳಿಂದ ಕೆಲಸ ಪೂರ್ತಿಗೊಳಿಸಿಕೊಳ್ಳಲು ಸಾಧ್ಯವಾಗುವುದು.

ಆದರೆ ಈ ವಿಮಾನಗಳ ಸಂಚಾರದಲ್ಲಿ ಇನ್ನೊಂದು ಬಹು ದೊಡ್ಡ ಸಮಸ್ಯೆಯಿದೆ.

ವಿಮಾನನಿಲ್ದಾಣದಿಂದ ಮೇಲಕ್ಕೆ ಹಾರಿದೊಡನೆ ವಿಮಾನವು ಕೂಡಲೆ ತಾಸಿಗೆ ೨,೦೦೦ ಮೈಲು ವೇಗವನ್ನು ಪಡೆದರೆ ಹವೆಯಲ್ಲಿ ಉತ್ಪನ್ನವಾಗುವ ಪ್ರಚಂಡವಾದ ಶಾಕ್‌ವೇವ್‌ಗಳ ದುಷ್ಪರಿಣಾಮ ನಿಲ್ದಾಣದ ಮೇಲೆ ವಿಪರೀತವಾಗುವುದು. ಈ ಪ್ರಶ್ನೆಯ ಪರಿಹಾರಕ್ಕಾಗಿ ಮಾಡಬಹುದಾದ ಉಪಾಯವೆಂದರೆ ವಿಮಾನವು ನೆಲದಿಂದ ೩೫,೦೦೦ ಅಡಿ ಎತ್ತರಕ್ಕೆ ಹೋಗುವವರೆಗೆ ಧ್ವನಿಯ ವೇಗಕ್ಕಿಂತಲೂ ಕಡಿಮೆ ಮೈಲು ವೇಗದಲ್ಲಿಯೆ ಅದನ್ನು ಹಾರಿಸಬೇಕಾಗುವುದು. ಏಕೆಂದರೆ ವಾಹನದ ವೇಗ ಧ್ವನಿಯ ವೇಗಕ್ಕಿಂತಲೂ ಹೆಚ್ಚಾದಾಗಲೇ ಈ ಶಾಕ್‌ವೇವ್‌ಗಳು ಹುಟ್ಟಿಕೊಳ್ಳುತ್ತವೆ. ೩೫,೦೦೦ ಅಡಿ ಎತ್ತರದಲ್ಲಿ ವಿಮಾನದ ವೇಗ ಧ್ವನಿಯ ವೇಗಕ್ಕಿಂತ ಹೆಚ್ಚಾದರೂ ಅದರಿಂದುದ್ಭವಿಸುವ ಶಾಕ್ ವೇವ್‌ಗಳ ದುಷ್ಪರಿಣಾಮ ಪೃಥ್ವಿಯ ಮೇಲಾಗದು. ಆದರೆ ಧ್ವನಿಯ ವೇಗಕ್ಕಿಂತಲೂ ಹೆಚ್ಚು ವೇಗದಿಂದ ಹಾರುವ ವಿಮಾನಗಳು ಒಂದಕ್ಕೊಂದು ಎಷ್ಟು ದೂರದಲ್ಲಿ ಬಂದಾಗ ಅವುಗಳು ಹುಟ್ಟಿಸುವ ಶಾಕ್ ವೇವ್‌ಗಳ ಪರಸ್ಪರ ಪರಿಣಾಮ ಏನಾಗುವುದೆಂದು ತಿಳಿದಿಲ್ಲ.

೨,೦೦೦ ಮೈಲು ವೇಗದಲ್ಲಿ ಹಾರುವ ವಿಮಾನಗಳು ರೂಢಿಯಾದ ಮೇಲೆ ೫,೦೦೦ ಮೈಲು ವೇಗದ ವಿಮಾನಗಳು ತಯಾರಾಗಬಹುದು. ಇಂಥ ವಿಮಾನಗಳ ಕಲ್ಪನೆಯನ್ನು ಬ್ರಿಟಿಶ್ ವಿಮಾನ ತಜ್ಞ ಡಾ. ಜಾಮಿಸನ್ ಎಂಬವರು ಪ್ರಕಟಿಸಿದ್ದಾರೆ ಆದರೆ ತಾಸಿಗೆ ೫,೦೦೦ ಕ್ಕಿಂತಲೂ ಹೆಚ್ಚು ವೇಗದಲ್ಲಿ ಹಾರುವ ವಿಮಾನಗಳು ನಿಲ್ದಾಣದಿಂದ ಉಡ್ಡಾಣಗೈಯುವಾಗ ಒಂದೊಂದಾಗಿ ಇರುವುದಿಲ್ಲ. ಕಡಿಮೆ ವೇಗದ ಒಂದು ವಿಮಾನದ ಬೆನ್ನ ಮೇಲೆ ಈ ವೇಗಶಾಲಿ ವಿಮಾನವನ್ನು ಇಡಲಾಗುವುದು. ನಿಲ್ದಾಣದಿಂದ ಈ ಜೋಡಿ ವಿಮಾನಗಳು ೯,೦೦೦ ಅಡಿ ಎತ್ತರದ ವರೆಗೆ ಹಾರಿದ ನಂತರ ಅವು ಬೇರೆ ಬೇರೆಯಾಗುವವು. ಕೆಳಗಿನ ವಿಮಾನ ಭೂಮಿಗಿಳಿಯುವುದು. ೧೦೦–೧೩೦ ಪ್ರವಾಸಿಕರನ್ನು ಹೊತ್ತಿರುವ ಮೇಲಿನ ವೇಗಶಾಲಿ ವಿಮಾನವು ೧,೩೦,೦೦೦ ದಿಂದ ೧,೪೦,೦೦೦ ಅಡಿ ಎತ್ತರಕ್ಕೆ ಹಾರಿ ತಾಸಿಗೆ ೫,೦೦೦ ಮೈಲಿಗಿಂತ ಹೆಚ್ಚಿನ ವೇಗದಲ್ಲಿ ಮುಂದುವರಿಯುವುದು ಎಂದು ವಿಜ್ಞಾನಿಗಳು ಯೋಚಿಸಿದ್ದಾರೆ. ಇಂಥ ವಿಮಾನಗಳು ಬಳಕೆಯಲ್ಲಿ ಬಂದಾಗ ನ್ಯೂಯಾರ್ಕಿನಿಂದ ಸಿಡ್ನಿ (ಆಸ್ಟ್ರೇಲಿಯ) ವರೆಗಿನ ಬಹು ದೂರದ ಪ್ರವಾಸವನ್ನು ಕೂಡ ಕೇವಲ ೫೫ ಮಿನಿಟುಗಳಲ್ಲಿ ಮುಗಿಸಬಹುದು. ನ್ಯೂಯಾರ್ಕಿನಿಂದ ಲಂಡನ್ನಿಗೆ ಬರಲು ಬರೀ ೪೦ ಮಿನಿಟುಗಳು ಸಾಕು.

ಜೆಟ್‌ಗಿಂತ ಹೆಚ್ಚು ವೇಗದಲ್ಲಿ ಹಾರುವ ವಿಮಾನಗಳಲ್ಲಿ ತಾಸಿಗೆ ೨,೦೦೦ ಮೈಲು ವೇಗದಲ್ಲಿ ಹಾರುವ ವಿಮಾನದ ಮೊದಲನೆಯ ಮಾದರಿ 'ಬಿ–೭೦' ಈ ವರ್ಷವೇ ಅಂದರೆ ೧೯೬೨ ರಲ್ಲಿ ರಚಿತವಾಗುವುದು. ಮೊದಮೊದಲು ಈ ವಿಮಾನಗಳನ್ನು ಪರಮಾಣು ಬಾಂಬು ಅಥವಾ ಹೈಡ್ರೊಜನ್ ಬಾಂಬುಗಳನ್ನು ಒಯ್ಯಲು ಉಪಯೋಗಿಸಬಹುದಾಗಿದೆ. ಪ್ರಯೋಗಕಾಲದಲ್ಲಿ ವಿಮಾನದಲ್ಲಿರುವ ತಂತ್ರಜ್ಞರು ಅದರೊಳಗಿನ ಕೃತ್ರಿಮ ಒತ್ತಡದ ಒಂದು ಪೆಟ್ಟಿಗೆಯಲ್ಲಿ ಕುಳಿತಿರುವರು. ಪೆಟ್ಟಿಗೆಯೊಳಗಿನ ಉಷ್ಣತಾಮಾನ ೭೫ ರಿಂದ ೮೦° ಗಳ ವರೆಗೆ ಇರುವುದು. ಮೊದಲನೆಯ ಪ್ರಯೋಗ ಸಮಯದಲ್ಲಿ ವಿಮಾನಕ್ಕೇನಾದರೂ ಸಂಕಟ ಪ್ರಾಪ್ತವಾದರೂ ಈ ಪೆಟ್ಟಿಗೆ ವಿಮಾನದಿಂದ ತಂತಾನೇ ಹೊರಬಿದ್ದು ಪ್ಯಾರಾಚ್ಯೂಟ್ ಸಹಾಯದಿಂದ ಭೂಮಿಗಿಳಿಯುವಂತೆ ಯೋಜನೆ ಇರುತ್ತದೆ. ಒಳಗಿರುವ ತಂತ್ರಜ್ಞರಿಗೆ ಹೊರಗಿನ ಸಹಾಯ ಬರುವ ವರೆಗೆ ಬದುಕಿರುವುದಕ್ಕಾಗಿ ಒಳಗೆ ಒಂದು ವಾರದ ವರೆಗೆ ಸಾಲುವಷ್ಟು ಅನ್ನವಸ್ತ್ರಗಳೂ ಸ್ವರಕ್ಷಣೆಗಾಗಿ ಬಂದೂಕುಗಳೂ ಸಿದ್ಧವಾಗಿರುವುವು. ಈ ಪ್ರಯೋಗಗಳು ಯಶಸ್ವಿಯಾದಲ್ಲಿ ಮುಂಬರುವ ಐದು ವರ್ಷಗಳಲ್ಲಿ ಇಂಥ ವಿಮಾನಗಳಲ್ಲಿ ಪ್ರವಾಸವು ಸಾಧ್ಯವಾಗುವಂತಿದೆ. ★

ಆತ ಮುತ್ತಿನ ಹೊಲಗಳನ್ನು ಸ್ಥಾಪಿಸಿದ

ಮುತ್ತಿನ ರಾಜ : ಮಿಕಿಮೋಟೋ

ವಿವಿಧ ಮೂಲಗಳಿಂದ

ಮುತ್ತುಗಳನ್ನು ಚೀಲಗಳಲ್ಲಿ ತುಂಬಿದರು, ರತ್ನಗಳನ್ನು ಬಳ್ಳಗಳಲ್ಲಿ ಅಳೆದರು...


ಶ್ರೀಮಂತಿಕೆಯನ್ನು ಬಣ್ಣಿಸಲು ನಮ್ಮ ಕವಿಗಳು ಉಪಯೋಗಿಸುವ ಭಾಷೆ ಇಂಥದು. ಕವಿಗಳ ಕಲ್ಪನಾಲೋಕದ ಈ 'ಸತ್ಯ'ವನ್ನು ಇಪ್ಪತ್ತನೆಯ ಶತಮಾನದ ಕಾವ್ಯರಹಿತ ಜಗತ್ತಿನಲ್ಲಿ ವಾಸ್ತವಿಕ ಸತ್ಯವಾಗಿ ಮಾಡಿದವನು ಜಪಾನಿನ ಮಿಕಿಮೋಟೊ. ಅವನ ಮುತ್ತಿನ "ಹೊಲ"ಗಳಲ್ಲಿ ಮುತ್ತುಗಳನ್ನು ಚೀಲಗಳಲ್ಲೇ ತುಂಬಲಾಗುತ್ತದೆ. ಅದು ಜಗತ್ತಿನ ಮೂಲೆಮೂಲೆಗಳಿಗೂ ಹೋಗುತ್ತದೆ.

ಮಿಕಿಮೋಟೋವಿನ ಪುಣ್ಯದಿಂದ, ಶ್ರೀಮಂತರಾದ ಮಹಿಳೆಯರಿಗಷ್ಟೇ ಲಭ್ಯವಾಗಬಹುದಾಗಿದ್ದ ಬೆಳುದಿಂಗಳ ಬಣ್ಣದ ಮುತ್ತಿನ ಹಾರ ಅಷ್ಟು ಅನುಕೂಲವಂತರಲ್ಲದ ರಮಣಿಯರ ಕೊರಳನ್ನೂ ಸಿಂಗರಿಸಬಲ್ಲುದಾಗಿದೆ. "ಅನುಕೂಲವುಳ್ಳ ನಾರಿಯರಿಗೆ ಹತ್ತು ರೂಪಾಯಿಗೆ, ಇಲ್ಲದವರಿಗೆ ಉಚಿತವಾಗಿ, ಒಂದೊಂದು ಮುತ್ತಿನ ಹಾರ ದೊರೆಯುವಂತಾಗುವ ವರೆಗೆ ನಾನು ಬದುಕಿದರೆ ಸಾಕು" ಎಂದು ಮಿಕಿಮೋಟೋ ಹೇಳುತ್ತಿದ್ದನಂತೆ. ೯೬ ನೇ ವಯಸ್ಸಿನಲ್ಲಿ ತೀರಿಕೊಂಡಾಗ ಈ ಕನಸನ್ನು ಪೂರ್ತಿಯಾಗಿ ಅಲ್ಲದಿದ್ದರೂ ಬಹುಮಟ್ಟಿಗೆ ನನಸು ಮಾಡಿ ತೋರಿಸಿದ್ದನಾತ.

ಮುತ್ತನ್ನು ಸಮುದ್ರದ ಕೆಲಭಾಗಗಳಲ್ಲಿರುವ ಒಂದು ಚಿಪ್ಪಿನ ಜೀವಿ ಕೊಡುತ್ತದೆಂದು ಇಂದು ಎಲ್ಲರೂ ಬಲ್ಲರು. ಶತಮಾನಗಳಿಂದ ಮನುಷ್ಯ ಸಮುದ್ರದಲ್ಲಿ ಮುಳುಗಿ ಮುತ್ತುಗಳನ್ನು ತೆಗೆದಿದ್ದಾನೆ. ಆದರೆ ಮುತ್ತಿನ ಜೀವಿ ಮುತ್ತನ್ನು ಹೇಗ ಉತ್ಪಾದಿಸುತ್ತದೆಂದು ಅವನಿಗೆ ಗೊತ್ತಿರಲಿಲ್ಲ. ಅದು ತಾನಾಗಿ ಕೊಟ್ಟ ಮುತ್ತಿನಿಂದಲೇ ಆತ ತೃಪ್ತನಾಗಬೇಕಿತ್ತು. ಇದು ಮುತ್ತಿನ ಬೆಲೆಯನ್ನು ಯಾವಾಗಲೂ ಸಾಮಾನ್ಯರಿಗೆ ನಿಲುಕದಷ್ಟು ಏರಿಕೆಯಲ್ಲಿಡುತ್ತಿತ್ತು.

ಮಿಕಿಮೋಟೋ ಅದನ್ನು ಬದಲಿಸಿ ಚಿಪ್ಪಿನ ಜೀವಿ ಅವನಿಗೆ ಬೇಕಾದಂತೆ, ಬೇಕಾದಷ್ಟು ದುಂಡಗಿನ ಆಣಿ ಮುತ್ತುಗಳನ್ನು ಕೊಡುವಂತೆ ಮಾಡಿದ. ಅದೇ ಅವನ ಹಿರಿಮೆ.

'ಕಲ್ಚರ್ ಮುತ್ತು' ಎಂದು ಮಿಕಿಮೋಟೋ ಅದನ್ನು ಕರೆದ. ಅದನ್ನು ಧರಿಸುವ ರಮಣಿಯರು ಅದರ ಅಗ್ಗತನವನ್ನು ನೋಡಿ ಅದು ಮುತ್ತಲ್ಲವೆಂದು ತಿಳಿಯದಿರಲಿ. ನೈಜ ಮುತ್ತನ್ನು ಯಾವ ಚಿಪ್ಪಿನ ಜೀವಿ ಉತ್ಪಾದಿಸುತ್ತದೋ ಅದೇ ಜೀವಿ ಈ ಮುತ್ತನ್ನೂ ಉತ್ಪಾದಿಸುತ್ತದೆ. ಈ ಮುತ್ತಿನಲ್ಲೂ ಅದರಲ್ಲೂ ಇರುವ ರಾಸಾಯನಿಕ ಪದಾರ್ಥವೂ ಒಂದೇ. ಎಕ್ಸ್‌ರೇ ಉಪಕರಣಗಳಿಂದ ನೋಡಿದ ಹೊರತು ಎರಡರಲ್ಲಿರುವ ಅಂತರ ಸ್ವಲ್ಪವೂ ತಿಳಿಯದು.



ಮಿಕಿಮೋಟೋವಿನ ಕುಲಕಸುಬಿಗೂ ಮುತ್ತುಗಳಿಗೂ ಬಾದರಾಯಣ ಸಂಬಂಧ ಕೂಡ ಇರಲಿಲ್ಲ. ಅವನ ತಂದೆಯಾದ ಓಟೋಜಿಕಿ ಮಿಕಿಮೋಟೋ ಸೇವಿಗೆ ವ್ಯಾಪಾರಿಯಾಗಿದ್ದ. ೧೮೫೮ ರಲ್ಲಿ ಹುಟ್ಟಿದ ನಮ್ಮ ನಾಯಕ ಕೋಕಿಚಿ ಮಿಕಿಮೋಟೋಗೆ ಶಾಲೆಗೆ ಹೋಗುವ ಅವಕಾಶ ವಿಶೇಷ ಸಿಗಲಿಲ್ಲ. ಅವನು ಹನ್ನೊಂದರಲ್ಲಿರುವಾಗ ತಂದೆಗೆ ಜಾಡ್ಯವಾಗಿ ಅಂಗಡಿಯನ್ನು ನಡೆಸುವ ಭಾರ ಇವನ ಹೆಗಲ ಮೇಲೆ ಕೂತಿತ್ತು. ಸೇವಿಗೆಯಲ್ಲದೆ ತರಕಾರಿ ವ್ಯಾಪಾರವನ್ನೂ ಈ ಹುಡುಗ ಕೈಕೊಳ್ಳಬೇಕಾಯಿತು.

ಮಿಕಿಮೋಟೋಗೆ ಮುತ್ತಿನ ಹುಚ್ಚು ಎಳೆ ವಯಸ್ಸಿನಲ್ಲೆ ಹಿಡಿಯಿತು. ಅವನೊಮ್ಮೆ ಯೋಕೋಹಾಮಾ ಬಂದರಕ್ಕೆ ಹೋಗಿದ್ದಾಗ "ಕಾಯಕಲ್ಪ" ಔಷಧ ತಯಾರಿಸುವುದಕ್ಕಾಗಿ ಚೀನಿ ವ್ಯಾಪಾರಿಗಳು ಬೀಜ ಮುತ್ತುಗಳನ್ನು (ಬಲು ಚಿಕ್ಕ ಗಾತ್ರದ ಮುತ್ತು) ಕೇಳಿದ ಬೆಲೆ ಕೊಟ್ಟು ಕೊಳ್ಳುವುದನ್ನು ನೋಡಿದಂದಿನಿಂದ ಅವನ ವ್ಯಾಪಾರಿ ಬುದ್ಧಿಯ ಕುತೂಹಲ ಕೆರಳಿತ್ತು. ಅಂದಿನಿಂದಾತ ತನ್ನ ವಿರಾಮದ ಹೊತ್ತನ್ನೆಲ್ಲ ಮುತ್ತಿನಂಗಡಿಗಳಲ್ಲೋ ತನ್ನ ಹುಟ್ಟೂರಾದ ಟೋಬಾ ಬಂದರದ ಸಮುದ್ರ ದಂಡೆಯಲ್ಲಿ ಮುತ್ತಿನ ಚಿಪ್ಪುಗಳನ್ನು ಆರಿಸಿ ಅವುಗಳಿಂದ ಮಿಂಚುವ ಕಾಮನ ಬಿಲ್ಲಿನ ಬಣ್ಣಗಳನ್ನು ನೋಡುತ್ತ ಕನಸುಗಳನ್ನು ಹಣೆಯುವುದರಲ್ಲೋ ಕಳೆಯಹತ್ತಿದ. ಯಾರ ಮುಂದೆಯೂ ತನ್ನ ವಿಚಾರಗಳನ್ನು ಪ್ರಕಟಿಸುವ ಧೈರ್ಯ ಅವನಿಗಾಗಲಿಲ್ಲ. ೨೩ ನೇ ವಯಸ್ಸಿನಲ್ಲಿ ಅವನಿಗೆ ಮದುವೆಯಾದ ಮೇಲೆ ಅವನ ಹಂಚಿಕೆಗಳ ಗುಟ್ಟುಗಳಲ್ಲಿ ಭಾಗಿಯಾಗಲು ಅವನಿಗೊಂದು ವ್ಯಕ್ತಿ ದೊರೆತಂತಾಯಿತು. ಸುಂದರಿಯಾದ ಉಮೆ ಕುಮೆ ರಾತ್ರಿ ಅವನ ತೋಳ ಸೆರೆಯಲ್ಲಿ ಒರಗಿ ಅವನ ಸ್ಫೂರ್ತಿಯುಕ್ತ ಮಾತುಗಳನ್ನು ಮುಗ್ಧಳಾಗಿ ಕೇಳುತ್ತಿದ್ದಳು.

೨೫ ನೇ ವಯಸ್ಸಿನಲ್ಲಿ ತಂದೆ ತೀರಿಕೊಂಡು ಮಿಕಿಮೋಟೋಗೆ ತನ್ನ ಸ್ವಂತ ಸಂಸಾರದೊಡನೆ ಒಂಭತ್ತು ತಮ್ಮ-ತಂಗಿಯರ ಹೊಟ್ಟೆಯ ಹೊಣೆಯೂ ಗಂಟುಬಿತ್ತು. ಮಿಕಿಮೋಟೋ ಹೆದರಲಿಲ್ಲ ಅವನು ತನ್ನ ವ್ಯವಹಾರವನ್ನು ವಿಸ್ತರಿಸಿ ಸೇವಿಗೆ ತರಕಾರಿಗಳೊಡನೆ ಸಮುದ್ರೋತ್ಪತ್ತಿಗಳ ವ್ಯವಹಾರವನ್ನೂ ಸೇರಿಸಿಕೊಂಡ. ಇದು ಅವನ ಮನೋರಾಜ್ಯಕ್ಕೆ ಹತ್ತಿರವಾದ ವಿಷಯ. ಬೇಗನೆ ಅವನು ಅದರಲ್ಲಿ ಪ್ರಮುಖನೆನಿಸುವಷ್ಟು ಪ್ರಗತಿ ಪಡೆದ. ಅವನು ಪ್ರದರ್ಶಿಸಿದ ಮುತ್ತುಗಳಿಗೆ ಟೋಕಿಯೋ ಪ್ರದರ್ಶನದಲ್ಲಿ ಬಹುಮಾನ ಬಂತು. ರಾಜಮಾತೆ ಮುತ್ತುಗಳಿಗಾಗಿ ಅವನಿಗೇ ಆರ್ಡರ್ ಕೊಡತೊಡಗಿದಳು. ಅವನು ಶಿಮಾ ಸಮುದ್ರೋತ್ಪತ್ತಿ ಸುಧಾರಣಾ ಸಂಘದ ಅಧ್ಯಕ್ಷನಾದ.

ಇದಾದ ಮೇಲೆಯೆ ಅವನು ತನ್ನ "ಮುತ್ತಿನ ಕೃಷಿ"ಯ ಯೋಜನೆಯನ್ನು ಟೋಕಿಯೋದ ಅಧಿಕಾರಿಗಳ ಮುಂದೆ ಮಂಡಿಸಿದ್ದು. ಅವರ ಹುಬ್ಬುಗಳು ಈ ಶಬ್ದ ಕೇಳಿಯೆ ಎತ್ತರವಾದವು. ಮುತ್ತಿನ ಕೃಷಿ ಮಾಡಲು ಅದೇನು ಬತ್ತವೇ, ರಾಗಿಯೆ? ಮಿಕಿಮೋಟೋ ಬಲು ಸೈರಣೆಯಿಂದ ತನ್ನ ವಿಚಾರಗಳನ್ನು ವಿವರಿಸಿದ. ಈಗಿನಂತೆ ಹುಚ್ಚಾಬಟ್ಟೆ ಮುತ್ತನ್ನು ತೆಗೆದರೆ ಕೆಲವೇ ದಿನಗಳಲ್ಲಿ ಮುತ್ತಿನ ಚಿಪ್ಪಿನ ಜೀವಿಗಳೆಲ್ಲ ಮುಗಿದು ಹೋದಾವು. ಸಾಕಷ್ಟು ಮುತ್ತಿನ ಪೂರೈಕೆಯೂ ಆಗದು. ಇದರ ಬದಲು ಮುತ್ತಿನ ಚಿಪ್ಪು ಜೀವಿಗಳನ್ನೂ ಅಲಬೋನ್ ಜೀವಿಗಳನ್ನೂ ಕಲೆ ಹಾಕಿ ಸಮುದ್ರ ತಳದಲ್ಲಿ ಸಂರಕ್ಷಿತ ಪ್ರದೇಶಗಳಲ್ಲಿ ಇಟ್ಟು ಕಾಪಾಡಬೇಕು. ಇದೇ ಮುತ್ತಿನ ಕೃಷಿ. ಮಾತ್ರ ಆ ಪ್ರದೇಶದಲ್ಲಿ ಮೀನು ಹಿಡಿಯುವುದನ್ನು ನಿಲ್ಲಿಸಬೇಕು ಎಂದಾತ ಹೇಳಿದ.

ಟೋಬಾ ಬಳಿ ಇರುವ ಆಗೊ ಆಖಾತ ಜಪಾನಿನ ಸಮೃದ್ಧ ಮುತ್ತಿನ ಕೇಂದ್ರಗಳಲ್ಲೊಂದು. ಮಿಕಿಮೋಟೋ ಸುತ್ತಮುತ್ತಲಿನ ಹಳ್ಳಿಗರಿಗೆ ತನ್ನ ಹಂಚಿಕೆಯನ್ನು ವಿವರಿಸಿ ಮೀನು ಹಿಡಿಯುವುದನ್ನು ಬಿಟ್ಟರೆ ಸಮುದ್ರದಲ್ಲಿ ಮುತ್ತಿನ ಕೃಷಿ ಮಾಡಿ ಎಷ್ಟು ಲಾಭ ಹೊಂದಬಹುದೆಂದು ಬಾಯಲ್ಲಿ ನೀರೂರುವಂತೆ ತಿಳಿಹೇಳಿದ. ಮೀನುಗಾರರು ತಲೆ ಅಲ್ಲಾಡಿಸಿದರು. ಸಂಶಯಾಸ್ಪದವಾದ ನಾಳಿನ ಲಾಭಕ್ಕಾಗಿ ಈ ಹುಚ್ಚು ತರುಣನ ಮಾತು ಕೇಳಿ ಅವರು ಇಂದಿನ ಅನ್ನ

ಬಿಟ್ಟಾರೆ? ಜಿನ್‌ಮ್ಯೋ ಮುರಾ ಎಂಬೊಂದು ಚಿಕ್ಕ ಹಳ್ಳಿ ಮಾತ್ರ ಒಪ್ಪಿತು. ಅಲ್ಲಿ ಒಂದು ಸಹಕಾರಿ ಸಂಘ ಸ್ಥಾಪಿಸಲಾಯಿತು. ಮಿಕಿಮೋಟೋ ಇತರರೊಡನೆ ಸ್ವತಃ ಮುತ್ತಿನ ಚಿಪ್ಪು ಜೀವಿಗಳನ್ನು ಹುಡುಕಲು ಸಮುದ್ರಕ್ಕಿಳಿದು ದೂರದೂರದ ವರೆಗೆ ಸಾಗುತ್ತಿದ್ದ. ಚಳಿಯಲ್ಲಿ ನಡುಗುತ್ತ ಮರಿ ಚಿಪ್ಪು ಜೀವಿಗಳನ್ನು ಹಿಡಿದು ಸಂರಕ್ಷಿತ ಪ್ರದೇಶಗಳಲ್ಲಿ ಅವನ್ನು "ಬಿತ್ತು" ತ್ತಿದ್ದ.

೧೮೯೦ ರಲ್ಲಿ ಅವನು ಪ್ರದರ್ಶಿಸಿದ ಸಮುದ್ರೋತ್ಪತ್ತಿಗಳಿಗೆ ಟೋಕಿಯೋದಲ್ಲಿ ಪ್ರಥಮ ಬಹುಮಾನ ಬಂತು. ಆದರೆ ಅಷ್ಟರಲ್ಲಿ ಅವನ ತಲೆಯೊಳಗೆ ಹೊಸ ಕೀಟವೊಂದು ಹೊಕ್ಕಿತ್ತು. ಒಂದು ದಿನ ರಾತ್ರಿ ಆತ ಮನೆಗೆ ಬಂದಾಗ ಹೆಂಡತಿಯ ಹತ್ತಿರ "ಅಲ್ಲಾ, ಚಿಪ್ಪಿನೊಳಗೆ ಮುತ್ತು ಹೇಗೆ ಹುಟ್ಟುತ್ತದೆ? ನಮಗೆ ಬೇಕಾದಂತೆ ಅದನ್ನು ಹುಟ್ಟಿಸುವಂತೆ ಮಾಡಲು ಸಾಧ್ಯವಿಲ್ಲವೆ?" ಎಂದ.

ದೇವರು ಮಾತ್ರ ಮಾಡುವುದನ್ನು ತಾನು ಮಾಡುವೆನೆಂಬ ಗಂಡನ ಯೋಚನೆ ಅವಳಿಗೆ ವಿಲಕ್ಷಣವಾಗಿ ಕಂಡಿರಬೇಕು. "ನೀವು ಕ್ಷೌರ ಮಾಡಿಸಿಕೊಳ್ಳದೆ ಎಷ್ಟು ದಿನವಾಯಿತು? ನಾಳೆ ರಜಾ ತೆಗೆದುಕೊಂಡು ಕ್ಷೌರದಂಗಡಿಗೆ ಹೋಗಿ. ಎಲ್ಲ ಸರಿಹೋಗುತ್ತದೆ" ಎಂದಳು.

"ಆಗಲಿ, ಆದರೆ ಮುತ್ತುಗಳು ಹೇಗೆ ಹುಟ್ಟುತ್ತವೆ ಎಂದು ಕಂಡುಹಿಡಿಯಲೇ ಬೇಕಲ್ಲವೆ?" ಎಂದ ಮಿಕಿಮೋಟೋ, ಹೆಂಡತಿಯ ವ್ಯಂಗ್ಯವನ್ನು ಗಮನಿಸದೇನೇ.

ಮಿಕಿಮೋಟೋ ಚಿಪ್ಪಿನೊಳಗೆ ಮುತ್ತು ಹುಟ್ಟುವ ವಿಧಾನವನ್ನು ಅರಿಯಲು ಬಲ್ಲವರ ಬೆನ್ನು ಹತ್ತಿದ. ಜೀವಶಾಸ್ತ್ರದ ಪ್ರೊಫೆಸರರನ್ನು ಪೀಡಿಸಿದ. ಕೊನೆಗೆ ಟೋಕಿಯೋ ವಿಶ್ವವಿದ್ಯಾಲಯದ ಡಾ. ಮಿಜುಕುರಿಯವರು ಮುತ್ತಿನ ಉತ್ಪತ್ತಿಯ ಬಗ್ಗೆ ವಿಜ್ಞಾನಿಗಳ ಊಹೆಯನ್ನಾತನಿಗೆ ವಿವರಿಸಿದರು. ಮುತ್ತಿನ ಜೀವಿಗಳ ಚಿಪ್ಪಿನೊಳಗೆ, ಆ ಜೀವಿಯನ್ನು ಕೊಲ್ಲದೆನೆ ಹೊರಗಿನ ಪದಾರ್ಥವನ್ನು ಪ್ರವೇಶಗೊಳಿಸಲು ಸಾಧ್ಯವಾದರೆ ಮುತ್ತು ಆಗುತ್ತದೆಯೆಂದು ಊಹೆ. ಆದರೆ ಇದು ಊಹೆ ಮಾತ್ರ. ಈ ವರೆಗೆ ಯಾರೂ ಅದರಲ್ಲಿ ಯಶಸ್ವಿಯಾಗಿಲ್ಲ ಎಂದವರು ಎಚ್ಚರ ಕೊಡದೆ ಬಿಡಲಿಲ್ಲ.

ಟೋಕಿಯೋದಿಂದ ಮರಳಿದವನೇ ಮತ್ತೆ ಮಿಕಿಮೋಟೋ ಮುತ್ತನ್ನುಂಟುಮಾಡುವ ತನ್ನ ಯೋಜನೆಯನ್ನು ಹೆಂಡತಿಯ ಮುಂದೆ ಬಿಚ್ಚಿದ. ಮತ್ತಾವ ಹೆಣ್ಣಾಗಿದ್ದರೆ ಉರಿದೆದ್ದು ಬಿಡಬಹುದಾಗಿತ್ತು. ಹತ್ತು ವರ್ಷಗಳಿಂದ ಬೆನ್ನು ಬೆನ್ನಿಗೆ ಬರುತ್ತಿದ್ದ ಮಕ್ಕಳ ಬಾಧೆ ಸಾಲದ್ದಕ್ಕೆ ಸೇವಿಗೆ, ತರಕಾರಿ ವ್ಯಾಪಾರವನ್ನೆಲ್ಲ ನೋಡಿಕೊಳ್ಳುವ ಅಸಹನೀಯ ಕಾರ್ಯಭಾರವನ್ನು ಅವಳೇ ಹೊತ್ತಿದ್ದಳು. ಗಂಡ ತನ್ನ ಮುತ್ತಿನ ಬಿಸಿಲುಗುದುರೆಯ ಬೆನ್ನು ಹತ್ತಿ ಅವಳನ್ನು ಈ ಪರಿ ಕಷ್ಟಕ್ಕೀಡು ಮಾಡಿದ್ದ. ಆದರೆ ಉಮೆ ಕುಮೆ ಮೃದುವಾಗಿ ಹೇಳಿದಳು: "ನೀವಂದಂತೆಯೆ ಆಗಲಿ. ನಾನು ವ್ಯವಹಾರವನ್ನೆಲ್ಲ ನೋಡಿಕೊಳ್ಳುತ್ತೇನೆ. ಚಿಂತೆ ಬೇಡ."

ಮಿಕಿಮೋಟೋ "ಇನ್ನು ಇದೇ ನನ್ನ ಜೀವನ ಧ್ಯೇಯ" ಎಂದು ಕುಣಿದಾಡಿದ.

ಮಿಕಿಮೋಟೋ ಕತ್ತಲಲ್ಲಿ ಕೈಯಾಡಿಸಬೇಕಾಗಿತ್ತು. ಚಿಪ್ಪಿನೊಳಗೆ ಏನನ್ನು ಹಾಕಿದರೆ ಮುತ್ತಾಗುತ್ತದೆ? ಚಿಪ್ಪುಜೀವಿಯ ಯಾವ ವಯಸ್ಸಿನಲ್ಲಿ ಅದನ್ನು ಹಾಕಬೇಕು? ಇದೊಂದೂ ಗೊತ್ತಿರಲಿಲ್ಲ. ಮೊದಲು ಆತ ಗಾಜಿನ ಚೂರು, ಆವೆಮಣ್ಣಿನ ಚಿಕ್ಕ ಗುಳಿಗೆಗಳನ್ನು ಹಾಕಿ ನೋಡಿದ. ಚಿಪ್ಪುಜೀವಿಗಳು ಅದನ್ನು ಒಡನೆ ಹೊರಗುಗಳಿದವು. ಆ ಮೇಲೆ ಮೀನು ಚಿಪ್ಪುಗಳನ್ನು ಚಿಕ್ಕ ಚಿಕ್ಕ ಚೂರುಗಳನ್ನಾಗಿ ಮಾಡಿ ಅವುಗಳನ್ನು ಚಿಪ್ಪಿನೊಳಗಿರುವ ಜೀವಿಯ ಆವರಣದೊಳಗೆ ತುರುಕಿ ನೋಡಿದ. ಇದು ಹೆಚ್ಚು ಯಶಸ್ವಿಯಾದಂತೆ ತೋರಿತು.

ಆತ ಬೇರೆ ಬೇರೆ ವಯಸ್ಸಿನ ಒಂದು ಸಾವಿರ ಮುತ್ತಿನ ಜೀವಿಗಳನ್ನು ಸಂಗ್ರಹಿಸಿ ಚಿಪ್ಪಿನ ತುಣುಕುಗಳನ್ನು ಸೂಕ್ಷ್ಮ ಶಸ್ತ್ರಕ್ರಿಯೆಯ ಮೂಲಕ ಅವುಗಳೊಳಗೆ ಹಾಕಿದ ಉದ್ದನ್ನ ಹಗ್ಗವೊಂದಕ್ಕೆ ಅವುಗಳನ್ನೆಲ್ಲ ಕಟ್ಟಿ ಜಿನ್‌ಮ್ಯೋ ಮುರಾದ ಸಮುದ್ರತಳದಲ್ಲಿ ಇಳಿಸಿದ. ಈ ಕೆಲಸವನ್ನು ಮುಗಿಸಿದಾಗ ಅವನೆಷ್ಟು ಸೋತಿದ್ದನೆಂ

ದರೆ ಮನೆಗೆ ಬಂದವನೇ ಹಾಸಿಗೆ ಹಿಡಿದು ಮಲಗಿದ.

ಹಲವು ತಿಂಗಳ ನಂತರ ಆತ ಜಿನ್‌ಮ್ಯೋಮುರಾಕ್ಕೆ ಹಿಂದಿರುಗಿದಾಗ ಜನರು ಕೆರಳಿದ್ದರು. ಇನ್ನೆಷ್ಟು ದಿನ ಕಟ್ಟಿಗೆ, ತರಕಾರಿ ಮಾರಿ ಜೀವಿಸಬೇಕು ಎಂದವರು ಆಕ್ಷೇಪಿಸತೊಡಗಿದ್ದರು. ಮಿಕಿಮೋಟೋ ಮಿತ್ರರು ಕೂಡ "ಪಾಪ! ಉಮೆ ಕುಮೆಯ ದುರದೃಷ್ಟ. ಅವಳ ಗಂಡನಿಗೆ ತಲೆ ಕೆಟ್ಟಿದೆ" ಎನ್ನುತ್ತಿದ್ದರು.

"ಕಟ್ಟಿಗೆಯೇಕೆ ಇನ್ನು ಮುತ್ತನ್ನೇ ಮಾರುತ್ತೀರಿ" ಎಂದು ಹಳ್ಳಿಗರಿಗೆ ಧೈರ್ಯ ಹೇಳಿ ಮಿಕಿಮೋಟೋ ಹಿಂದಿನ ವರ್ಷ "ಬಿತ್ತಿದ್ದ" ಚಿಪ್ಪಿನ ಜೀವಿಗಳನ್ನೆಲ್ಲ ಮೇಲಕ್ಕೆತ್ತಿಸಿದ. ಅವುಗಳನ್ನು ತೆರೆದು ನೋಡಿದ್ದಾಯಿತು. ಎರಡು ವರ್ಷ ವಯಸ್ಸಿನ ಚಿಪ್ಪುಗಳಲ್ಲಿ ಏನೂ ಇರಲಿಲ್ಲ. ಆಸೆಯಿಂದ ಮೂರು ವರ್ಷದವುಗಳನ್ನು ಬಿಚ್ಚಿದರು. ಅಲ್ಲಿಯೂ ಶೂನ್ಯ. ಒಂದೊಂದಾಗಿ ಆ ಸಾವಿರ ಚಿಪ್ಪುಗಳನ್ನೂ ಬಿಚ್ಚಿ ನೋಡಿದ್ದಾಯಿತು. ಒಂದೇ ಒಂದರಲ್ಲಿ ಕೂಡ ಮುತ್ತು ಸಿಗಲಿಲ್ಲ.

ಜನ ಗದ್ದಲ ಮಾಡಿದರು ಆದರೆ ಮಿಕಿಮೋಟೋ ಹೊಸ ಹೊಂಗನಸುಗಳಿಂದ ಅವರನ್ನು ಮರುಳು ಮಾಡಿದ. ಸಾಲವೆತ್ತಿ ಕಡಮಾಡಿ ಹೇಗೋ ೫,೦೦೦ ಚಿಪ್ಪಿನ ಜೀವಿಗಳನ್ನು ಸಂಪಾದಿಸಿದ. ಚಿಪ್ಪಿನ ಎರಡೂ ಭಾಗಗಳು ಸೇರಿದಲ್ಲಿ ಚೂರಿ ಹಾಕಿ ಸ್ವಲ್ಪ ಬಿಡಿಸಿ ಹವಳದಿಂದ ಹಿಡಿದು ಮೀನಿನ ಎಲುಬಿನ ಚೂರುಗಳ ವರೆಗೆ ಕಂಡ ಕಂಡ ವಸ್ತುಗಳನ್ನೆಲ್ಲ ಹಾಕಿ ಸಮುದ್ರದಲ್ಲಿಳಿಸಿದ.

ಟೋಬಾದಲ್ಲೀಗ ಆತ ನಗೆಯ ವಸ್ತುವಾಗಿದ್ದ. "ನಿನ್ನ ಹೆಂಡತಿಯನ್ನು ಹೀಗೆ ದುಡಿಸಿದರೆ ಕೊಲ್ಲುತ್ತೀ" ಎಂದು ಮುದುಕರು ಎಚ್ಚರಿಸಿದರು. ಆದರೆ ಉಮೆ ಕುಮೆಯ ಸಹಾನುಭೂತಿ ಅವನಿಗೆ ಸಂಪೂರ್ಣವಾಗಿತ್ತು. "ಜನ ನಿಮ್ಮನ್ನು ಹುಚ್ಚನೆನ್ನಲಿ, ಮೈಗಳ್ಳನೆನ್ನಲಿ ನಾನು ನಿಮ್ಮನ್ನು ಪ್ರೀತಿಸುತ್ತೇನೆ. ಇದು ಸಾಲದೆ?" ಎಂದಳು. ಮಿಕಿಮೋಟೋ ಅವಳನ್ನು ಬಿಗಿದಪ್ಪಿ ತನ್ನ ಹೊಸದೊಂದು ಕಲ್ಪನೆಯನ್ನು ಅವಳ ಕಿವಿಯಲ್ಲಿ ಉಸುರಿದ.

ಮರುದಿವಸವೇ ಗಂಡ ಹೆಂಡತಿ ಸೇರಿ ಆ ಕಲ್ಪನೆಯನ್ನು ಕಾರ್ಯಗತಗೊಳಿಸಿದರು. ಈ ವರೆಗೆ ಮಾಡಿದ್ದೇ ತಪ್ಪು. ಮುತ್ತನ್ನು ಬೆಳೆಯಲು ಮುತ್ತನ್ನೇ ಬಿತ್ತಬೇಕು. ಇದು ಅವನ ಹೊಸ ತರ್ಕವಾಗಿತ್ತು. ಆದ್ದರಿಂದ ಮುತ್ತಿನ ಜೀವಿಯ ಒಳ ಚಿಪ್ಪಿನ ಆ ತಳತಳಿಸುವ ಭಾಗವನ್ನೇ ಸೂಕ್ಷ್ಮವಾದ ಚೂರುಚೂರಾಗಿ ಮಾಡಿ ಅವರು ಜೀವಂತ ಮುತ್ತಿನ ಚಿಪ್ಪುಗಳೊಳಗೆ ಹಾಕಿದರು. ದೋಣಿಗಳಲ್ಲಿ ಸಾಗಿ ಇಬ್ಬರೂ ಸೇರಿ ತಮ್ಮ ಹಳ್ಳಿಯ ಸಮೀಪದ ಸಮುದ್ರ ತಳದಲ್ಲಿ ಅವುಗಳನ್ನು ಮಡಗಿದರು.

ಈ ಕಾರ್ಯಾಚರಣೆಯಿಂದ ಅವರು ಹೊಸ ಉತ್ಸಾಹದೊಡನೆ ಮನೆಗೆ ಮರಳಿದ್ದರು ಮಾತ್ರ. ವಜ್ರಾಘಾತವೊಂದು ಅವರಿಗೆದುರಾಯಿತು. "ಕೆಂಪು ತೆರೆ" ಎಂದು ಕರೆಯಲಾಗುವ ನೈಸರ್ಗಿಕ ವಿಪತ್ತು ಜಿನ್‌ಮ್ಯೋಮುರಾದ ಅವರ "ಮುತ್ತಿನ ಹೊಲ"ಕ್ಕೆ ಒದಗಿತ್ತು. ಸುದ್ದಿ ಕೇಳಿ ಮಿಕಿಮೋಟೊ ಅಲ್ಲಿಗೆ ಧಾವಿಸಿದ. ಮುತ್ತಿನ ಚಿಪ್ಪಿನ ಜೀವಿಗಳಿಗೆ ಯಮಸದೃಶವಾದ ಕೆಂಪು ತೆರೆಯ ರೋಗಾಣುಗಳು ಅವನ ೫,೦೦೦ ಚಿಪ್ಪುಗಳಲ್ಲಿ ಪ್ರತಿಯೊಂದನ್ನೂ ಕೊಂದುಹಾಕಿದ್ದವು.

ನಿರಾಶೆಯು ಪೆಟ್ಟು ಅಸಹನೀಯವಾಯಿತು. ಹೆಂಡತಿ ಸಮಾಧಾನ ಮಾಡಿದರೂ ಕೇಳದೆ ಮಿಕಿಮೋಟೊ ಹಳ್ಳಿಗರಿಗೆ ಪುನಃ ಮೀನು ಹಿಡಿಯಿರೆಂದು ಹೇಳಿದ. ಮುತ್ತಿನ ಗೊಡವೆ ಸಾಕೆಂದ. ತಾಳಲಾರದ ಸಾಲದ ಭಾರದಿಂದ ತ್ರಸ್ತನಾಗಿ ಊರುಬಿಟ್ಟು ಹೋಗಿ ವ್ಯಾಪಾರ ವಿದ್ಯೆಯನ್ನು ಕಲಿಯತೊಡಗಿದ. ಅವನು ಮುತ್ತಿನಿಂದ ಮುತ್ತು ಬೆಳೆಯುವ ಹಂಚಿಕೆಯಂತೆ ಸಮುದ್ರದಲ್ಲಿಳಿಸಿದ್ದ ಸಾವಿರ ಚಿಪ್ಪುಗಳನ್ನು ಕೂಡ ಮರೆತುಬಿಟ್ಟ.

ಎಷ್ಟೋ ದಿನಗಳ ನಂತರ ಟೋಬಾಕ್ಕೆ ಮರಳಿದಾಗಲೂ ಅವನ ನಿರ್ವಿಣ್ಣತೆ ಮಾಯವಾಗಿರಲಿಲ್ಲ. ನಾಚಿಕೆಯಿಂದೆಂಬಂತೆ ತಲೆವಾಗಿಯೆ ಆತ ಬೀದಿಯಲ್ಲಿ ನಡೆಯುತ್ತಿದ್ದ. ಅವನ ಚೈತನ್ಯವನ್ನು ಸಜೀವವಾಗಿಡಲು ಉಮೆ ಕುಮೆಯ ಸರ್ವಶಕ್ತಿಯೂ ಬೇಕಾಯಿತು. ಅವಳು ಅವನನ್ನು ದಿನವೂ ಸಮುದ್ರ ತೀರಕ್ಕೆ ಕರೆದೊಯ್ಯು

ಅಲ್ಲಿ ಅವರು "ಮುತ್ತು ಬಿತ್ತಿದ್ದ ಹೊಲ" ವನ್ನು ತೋರಿಸಿ ಹುರಿದುಂಬಿಸುತ್ತಿದ್ದಳು. ಆತ ಉದಾಸೀನನೆಂಬಂತೆ ಆಲಿಸುತ್ತಿದ್ದ.

ಒಂದು ದಿನ ಮಳಲ ದಿನ್ನೆಯ ಮೇಲೆ ಬಿದ್ದುಕೊಂಡಿದ್ದಾಗ "ಹಾ! ಇಲ್ಲಿ ನೋಡಿ!" ಎಂಬ ಉಮೆಯ ಉತ್ತೇಜಿತ ಉದ್ಗಾರ ಕೇಳಿಸಿತು. ಧಾವಿಸಿ ನೋಡಿದರೆ ಅವರು ಮುತ್ತು ಬಿತ್ತಿದ್ದ ಒಂದು ಚಿಪ್ಪು ಅವಳ ಅಂಗೈಯಲ್ಲಿ ಬಾಯಿ ತೆರೆದು ಕುಳಿತಿತ್ತು. ಅದರೊಳಗೊಂದು ಬೆಳ್ಳನ್ನ ಮುತ್ತು ತಳತಳಿಸುತ್ತಿತ್ತು.

ಅವನ ಕಳೆದುಹೋದ ಚೈತನ್ಯವೆಲ್ಲ ಮರಳಿ ಬಂತು. ಅದರೊಡನೆಯೆ "ಬಿತ್ತಿದ್ದ" ಒಂದೊಂದೇ ಚಿಪ್ಪನ್ನು ಚಾಕುವಿನಿಂದ ಮೀಟಿ ತೆರೆದು ನೋಡಿದರು. ಪ್ರತಿಯೊಂದರಲ್ಲೂ ಒಂದು ಮುತ್ತು ನಗುತ್ತಿತ್ತು. ಒಂದೇ ಕೊರತೆಯಿತ್ತು. ಮುತ್ತುಗಳು ಶುದ್ಧ ದುಂಡಾಗಿರದೆ ಅರ್ಧ ವರ್ತುಲವನ್ನು ಹೋಲುತ್ತಿದ್ದವಷ್ಟೇ. ಆದರೆ ಉಮೆ ಅವನನ್ನು ಸಮಾಧಾನಪಡಿಸಿ "ಮುತ್ತು ಮೂಡಿಸಲು ಕಲಿತ ಮೇಲೆ ಅದರ ಆಕಾರವನ್ನು ನಿಯಂತ್ರಿಸಲು ಎಷ್ಟು ಹೊತ್ತು?" ಎಂದಳು.

ಟೋಬಾ ಬಂದರೇ ಉತ್ಸಾಹಿತವಾಯಿತು. ಮಿತ್ರರು ಸಹಾಯಕ್ಕೆ ಬಂದರು. ಸಾಲ ಸಿಕ್ಕಿತು. ಹಳೇ ಸಾಲ ತೀರಿತು. ಮಿಕಿಮೋಟೋ ಮೂವತ್ತೈದನೇ ವಯಸ್ಸಿನಲ್ಲಿ ಜಪಾನಿನಲ್ಲೆಲ್ಲ ಪ್ರಸಿದ್ಧನಾದನು. ಕೆಲ ದಿನಗಳಲ್ಲೇ ಅವನ ಐದನೇ ಮಗು ಮತ್ತು ಮೊದಲನೇ ಗಂಡು ಮಗು ಹುಟ್ಟಿತು.

ಮಿಕಿಮೋಟೋ ಈಗ ಟಟೋಕು ಎಂಬ ಚಿಕ್ಕ ದ್ವೀಪವನ್ನು ಬಾಡಿಗೆಗೆ ಹಿಡಿದು ಅದರ ಬಳಿ ಸಮುದ್ರದಲ್ಲಿ ತನ್ನ ಮುತ್ತಿನ ಹೊಲವನ್ನು ಪ್ರಾರಂಭಿಸಿದ. ಇನ್ನೂ ನಾಲ್ಕು ವರ್ಷ ಅವರು ಶ್ರಮ ಪಡಬೇಕಾಗಿತ್ತು. ಹೊಸ ಮುತ್ತು ತಯಾರಾಗಲು ಅಷ್ಟು ಸಮಯ ಬೇಕಿತ್ತು. ಆದರೆ ವಿಜಯ ನಿಶ್ಚಿತವಾಗಿತ್ತು. ಅವನು ಹತ್ತು ಸಾವಿರ ಚಿಪ್ಪು ಜೀವಿಗಳನ್ನು ಕೊಂಡ. ಪ್ರತಿಯೊಂದನ್ನೂ ಚೂರಿಯಿಂದ ಸಂದಿಗುಂಟ ನಡುವೆ ಬಿಡಿಸಿ ಮುತ್ತಿನ ಚಿಪ್ಪಿನ ಒಂದು ಕಣವನ್ನು ಅದರೊಳಗೆ ಹಾಕಿದ್ದಾಯಿತು. ಅನಂತರ ಅವನ್ನು ಮುಚ್ಚಿ ಬುಟ್ಟಿಗಳಲ್ಲಿ ಹಾಕಿ ಸಮುದ್ರ ತಳಕ್ಕಿಳಿಸಲಾಯಿತು. ನಾಲ್ಕು ವರ್ಷಗಳ ನಂತರ ಮುತ್ತು ಆ ಕಣದ ಸುತ್ತಮುತ್ತ ಬೆಳೆದು ಆಣಿಯಾಗಲಿತ್ತು.

ಆದರೆ ಆ ದಿನವನ್ನು ಕಾಣಲು ಉಮೆ ಕುಮೆ ಬದುಕಿ ಉಳಿಯಲಿಲ್ಲ. ೧೮೯೬ ರಲ್ಲಿ, ಮಿಕಿಮೋಟೋನ ಮೊದಲ ಮುತ್ತು ಸಿದ್ಧವಾದ ಮೂರೇ ವರ್ಷಗಳಲ್ಲಿ ಅವಳು ಪೆರಿಟೊನೈಟಿಸ್ ರೋಗಕ್ಕೆ ತುತ್ತಾದಳು. ಸಾಯುವಾಗ ತನ್ನ ಆತ್ಮ ಯಾವಾಗಲೂ ಅವನಿದ್ದಲ್ಲೆ ಸುಳಿದು ಕಣ್ಗಾಪು ನಡೆಸುವುದೆಂದಳು. ಅವನು ಬೇಗನೆ ದುಂಡು ಮುತ್ತುಗಳನ್ನು ಯಶಸ್ವಿಯಾಗಿ ಸಿದ್ಧಪಡಿಸುವನೆಂದು ಹರಸಿದಳು. ನಗುತ್ತ ಕಣ್ಮುಚ್ಚಿದಳು.

ಮಿಕಿಮೋಟೋ ಮತ್ತೆ ಮದುವೆಯಾಗಲಿಲ್ಲ. ಉಮೆಯನ್ನೆಂದಿಗೂ ಮರೆಯಲಿಲ್ಲ. ಅವಳ ಆತ್ಮದ ಸಂತುಷ್ಟಿಗಾಗಿಯೆ ಎಂಬಂತೆ ಅವನು ತನ್ನ ಮುತ್ತಿನ ವ್ಯವಸಾಯವನ್ನು ಇಮ್ಮಡಿ ರಭಸದಿಂದ ಮುಂದೊತ್ತಿದ.

ಟಟೋಕು ದ್ವೀಪದ ಸುತ್ತಮುತ್ತಲ ಹುಡುಗಿಯರು ಶತಮಾನಗಳಿಂದ ಪ್ರವೀಣ ಮುಳುಗುಗಾತಿಯರೆಂದು ಹೆಸರಾಗಿದ್ದರು. ಮಿಕಿಮೋಟೋ ಅವರಿಂದ ಮುಳುಗುಗಾತಿಯರ ಒಂದು ಪಡೆಯನ್ನೆ ತರಬೇತಿ ಮಾಡಿಸಿದ. ಆ ವರೆಗೆ ಕೌಪೀನ ಹೊರತು ಬರಿ ಬತ್ತಲೆಯಾಗಿಯೆ ಮುಳುಗುಹಾಕುವುದು ಅವರ ಪದ್ಧತಿಯಾಗಿತ್ತು. ಮಿಕಿಮೋಟೋ ಅವರಿಗೆ ಬಿಳಿ ಉಡುಗೆ ಕೊಟ್ಟ. ಅವನ ಮುತ್ತಿನ ಚಿಪ್ಪುಗಳನ್ನು ಸಮುದ್ರ ತಳದಲ್ಲಿ ಇರಿಸಿ ಬರುವುದು ಮೇಲೆ ತರುವುದು ಅವರ ಕೆಲಸ.

೧೯೦೫ರಲ್ಲಿ ಮಿಕಿಮೋಟೋ ಹತ್ತು ಲಕ್ಷ ಚಿಪ್ಪಿನ ಜೀವಿಗಳನ್ನು ನಟ್ಟಿದ್ದ. ಉಮೆ ಸತ್ತು ಒಂಭತ್ತು ವರ್ಷ ಕಳೆದಿತ್ತು. ಮಿಕಿಮೋಟೋ ಈಗ ಸಂಪನ್ನನಾಗಿದ್ದ. ಈ ಹತ್ತು ಲಕ್ಷ ಚಿಪ್ಪುಗಳಿಂದ ಹತ್ತು ಲಕ್ಷ ಮುತು ಗಳು ನಾಲ್ಕು ವರ್ಷಗಳ ನಂತರ ತೆಗೆಯಲ್ಪಟ್ಟಾಗ....

ಆದರೆ ನಡುಹಗಲಲ್ಲಿ ಕತ್ತಲೆ, ನಡುರಾತ್ರಿಯಲ್ಲಿ ಬೆಳಕು ಅವನ ಜೀವನದ ವರ್ತನೆಯಾ

ಗಿಯೆ ಇತ್ತೆಂದು ಕಾಣುತ್ತದೆ. ಅದೇ ವರ್ಷ "ಕೆಂಪು ತೆರೆ" ಬಂತು. ಅವನು ಬೇಕಾದಷ್ಟು ಹೆಣಗಿದರೂ ಹತ್ತು ಲಕ್ಷದಲ್ಲಿ ಒಂದೂವರೆ ಲಕ್ಷಕ್ಕಿಂತ ಹೆಚ್ಚು ಚಿಪ್ಪಿನ ಜೀವಿಗಳನ್ನು ಉಳಿಸಲಾಗಲಿಲ್ಲ.

ಪುನಃ ಮಿಕಿಮೋಟೋ ಸರ್ವಸ್ವವನ್ನು ಕಳೆದುಕೊಂಡ ಅಕಿಂಚನನಾದ. ಈ ಸಲ ಅವನಿಗೆ ಸಮಾಧಾನ ಹೇಳಲು ಉಮೆ ಕೂಡ ಇರಲಿಲ್ಲ. ಹುಚ್ಚು ಹಿಡಿಯುವುದನ್ನು ತಪ್ಪಿಸಲು ಆತ ಸಮುದ್ರ ದಡದಲ್ಲಿ ಕುಳಿತು ತನ್ನ ಸತ್ತ ಚಿಪ್ಪು ಜೀವಿಗಳ ಚಿಪ್ಪುಗಳನ್ನು ಒಂದೊಂದಾಗಿ ತೆರೆಯುವುದರಲ್ಲಿ ತೊಡಗಿದ.

ಹೀಗೆ ಒಂದು ದಿನ ಸಂಜೆ ತನ್ನ ಪ್ರಾಯೋಗಿಕ ಹೊಲದ ಚಿಪ್ಪುಗಳನ್ನು ಬಿಚ್ಚುತ್ತ ಕುಳಿತಿದ್ದಾಗ ಒಂದು ಚಿಪ್ಪನ್ನಾತ ತೆರೆದ. ನಿರೀಕ್ಷಿಸಿದ ಸ್ಥಳದಲ್ಲಿ ಆ ಚಿಪ್ಪಿನೊಳಗೆ ಮುತ್ತು ಇದ್ದಿಲ್ಲ ಆದರೆ ಏನೋ ಒಂದು ಕಲೆ ಕಾಣಿಸಿತು. ಅಲ್ಲಿ ಬಿಡಿಸಿದಾಗ ಜೀವಿಯ ಹೊಟ್ಟೆಯ ಕೆಳಗೆ ಒಂದು ನಿರ್ದಿಷ್ಟವಾದ ದುಂಡನ್ನ ಮುತ್ತು ಅಡಗಿತ್ತು.


ನಡುರಾತ್ರಿಯಲ್ಲಿ ಬೆಳಕು....

ಮಿಕಿಮೋಟೋ ತನ್ನ ದಾಖಲೆಗಳನ್ನು ಪರೀಕ್ಷಿಸಿದಾಗ ಈ ಒಂಟಿಳೆಯ ಚಿಪ್ಪುಗಳಿಗೆ "ಬೀಜ" ಬಿತ್ತುವಾಗ ಪ್ರಯೋಗಿಸಿದ ರೀತಿ ಗೊತ್ತಾಯಿತು. ಒಂದು, ಮುತ್ತಿನ ಚಿಪ್ಪಿನ ಕಣಗಳನ್ನು ಹೀಗೆಯೆ ಚಿಪ್ಪಿನೊಳಗೆ ನಟ್ಟಿರದೆ ಚಿಪ್ಪುಗಳ ಬಿಜಾಗರಿ (ಹಿಂಜಸ್–ಮರಡು)ಯಂಥ ಭಾಗದಲ್ಲಿ ನಡಲಾಗಿತ್ತು; ಎರಡು, ಆ ಕಣಗಳಿಗೆ ಚಿಪ್ಪಿನ ಜೀವಿಯ ಸಜೀವ ಮಾಂಸದ ತಿಳಲನ್ನು ಆವರಣ ಹಾಕಲಾಗಿತ್ತು.

ಆ ಬುಟ್ಟಿಯ ಮತ್ತೂ ನಾಲ್ಕು ಚಿಪ್ಪುಗಳನ್ನು ಮಿಕಿಮೋಟೋ ಬಿಚ್ಚಿದ. ಪ್ರತಿಯೊಂದರಲ್ಲೂ ದುಂಡನ್ನ ಮುತ್ತೇ ಇತ್ತು. ಮಿಕಿಮೋಟೋ ಎದ್ದ. ಅಂಗೈಯಲ್ಲಿ ಆ ಮುತ್ತುಗಳನ್ನು ಹಿಡಿದು ಹೆಂಡತಿಯ ಸಮಾಧಿಯತ್ತ ಸಾಗಿದ. ಅವಳಿಗೆ ಆನಂದಬಾಷ್ಪಗಳೊಡನೆ ಅವುಗಳನ್ನರ್ಪಿಸಿದ.

ಇಂದು ಮಿಕಿಮೋಟೋನ "ಕಲ್ಚರ್" ಮುತ್ತಿನ ಉದ್ದಿಮೆ ಜಪಾನಿನಲ್ಲಿ ೧,೧೨,೦೦೦ ಜನರಿಗೆ ಉದ್ಯೋಗ ಕೊಡುತ್ತಿದೆ. ಟೋಬಾ ಆಖಾತದಲ್ಲಿರುವ ಅವನ ಮುತ್ತಿನ ಹೊಲದಲ್ಲಿ ಮುತ್ತಿನ ಬೆಳೆ ತೆಗೆಯುತ್ತಿದ್ದಾರೆ. ಮುತ್ತುಗಳನ್ನು ಚೀಲದಲ್ಲಿ ತುಂಬುತ್ತಿದ್ದಾರೆ. ಮೂರು ವರ್ಷ ವಯಸ್ಸಿನ ಚಿಪ್ಪಿನ ಜೀವಿಗಳ ಚಿಪ್ಪಿನೊಳಗೆ ಮುತ್ತಿನ ಚಿಪ್ಪಿನ ಕಣಗಳನ್ನು ನಡುತ್ತಾರೆ. ನಾಲ್ಕೈದು ವರ್ಷಗಳೊಳಗೆ ದುಂಡಾದ ಮುತ್ತು ಅಲ್ಲಿ ಬೆಳೆಯುತ್ತದೆ. ಚಿಪ್ಪಿನ ಜೀವಿಯ ಮೈಯಿಂದ ಸ್ರವಿಸಿದ ಕ್ಯಾಲ್ಸಿಯಂ ಪದರು ಪದರಾಗಿ ಕಣದ ಸುತ್ತಲೂ ಅಂಟಿಕೊಂಡು ಈ ಮುತ್ತು ಸೃಷ್ಟಿಯಾಗುತ್ತದೆ. ನೈಸರ್ಗಿಕ ಮುತ್ತಿಗೂ ಇದಕ್ಕೂ ಅದರ ಕೇಂದ್ರದಲ್ಲಷ್ಟೇ ಅಂತರವಿರುವುದು. ಅದೊಂದು ಬಿಟ್ಟರೆ ಇದು ಶುದ್ಧ ಮುತ್ತೇ.

ಮಿಕಿಮೋಟೋ ೧೯೫೪ ರಲ್ಲಿ ತೀರಿಕೊಂಡ. ಅವನ ಯಶಸ್ಸು ಅವನ ತಲೆಯನ್ನು ಸ್ವಲ್ಪವೂ ತಿರುಗಿಸಿರಲಿಲ್ಲ. ಕೊನೆವರೆಗೂ ಸರಳ ಜೀವಿಯಾಗಿಯೆ ಬಾಳಿದನಾತ. *



ಬಿರೂರ್ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ಹುರಿಯಾಳಾಗಿ ನಾಮಪತ್ರ ಕೊಡಲು ಹೋದ ಶಿವಕುಮಾರ ಶಾಸ್ತ್ರಿಗಳು ಇಡುಗಂಟು ಕೊಡಲು ರೂ. ೨೦ ಕಡಿಮೆ ಬಿದ್ದದ್ದು ಕಂಡು ಆ ಕಚೇರಿಯ ನೌಕರರಿಂದಲೇ ಅಷ್ಟು ಚಂದಾ ಎತ್ತಿ ಭರ್ತಿ ಮಾಡಿದರು.



ಮಫತ್‌ಲಾಲ್
ಗ್ರುಪ್

ಪ್ರಿಂಟೆಡ್ ಪಾಪ್ಲಿನ್‌ಗಳು

ನ್ಯೂ ಶೊರೊಕ್ (ಶೊರೊಕ್) ಆಹಮುದಾಬಾದ್, ನ್ಯೂ ಶೊರೊಕ್, ನಡಿಯಾಡ್. ಸ್ಟಾಂಡರ್ಡ್, ಬೊಂಬಾಯಿ. ಸ್ಟಾಂಡರ್ಡ್ (ನ್ಯೂ ಚೈನಾ), ಬೊಂಬಾಯಿ. ಸ್ಟಾಂಡರ್ಡ್, ದೇವಾಸ್. ಸಾಸ್ಸೂನ್, ಬೊಂಬಾಯಿ. ಸಾಸ್ಸೂನ್ (ನ್ಯೂ ಯೂನಿಯನ್) ಬೊಂಬಾಯಿ. ಸೂರತ್ ಕಾಟನ್, ಸೂರತ್. ಮಫತ್‌ಲಾಲ್ ಫೈನ್, ನವಸಾರಿ. ಗಗಲ್‌ಭಾಯ್ ಜೂಟ್, ಕಲ್ಕತ್ತ. ಇಂಡಿಯನ್ ಡೈಸ್ಟಫ್, ಬೊಂಬಾಯಿ.

Graphic MF 50

ಒಂದು
ಹೃದಯಸ್ಪರ್ಶಿ
ಕಥೆ

ಧನಿಯರ ಸತ್ಯನಾರಾಯಣ



ದಿ. ಕೊರಡ್ಕಲ್
ಶ್ರೀನಿವಾಸರಾವ್

ಆರು ವರ್ಷದ ಆ ಹುಡುಗ. ಕಲ್ಲು-ಮುಳ್ಳಿನ ಏರುತಗ್ಗಿನ ಊರ ಕಾಲುದಾರಿ ನಡೆದು ಸೋತಿದ್ದಾನೆ. ಆತನ ತಲೆಯ ಮೇಲೊಂದು ಬಾಳೆಯ ಕಂದು— ಹೊರಲಾರದ ಹೊರೆಯದು ಅವನಿಗೆ. ಹೊತ್ತು ಕುತ್ತಿಗೆ ಸೋತಾಗ ಅದನ್ನು ಬಲ ಹೆಗಲ ಮೇಲೇರಿಸುವನು. ಅನಂತರ ಎಡ ಹೆಗಲ ಮೇಲೆ, ಅಲ್ಲಿಯೂ ನೋವಾದಾಗ ಬಲ ಕಂಕುಳಲ್ಲಿಟ್ಟು ಕೈಗಳಿಂದಾಧರಿಸಿ ಹಿಡಿದುಕೊಳ್ಳುವನು. ಬಳಿಕದು ಎಡ ಕಂಕುಳಿಗೆ ಹೋಗುವುದು. ಅಲ್ಲಿಂದ ತಿರುಗಿ ತಲೆಯ ಮೇಲೆ. ಹೀಗೆ ಬಡವನಿಗೆ ಹಣದ ಚರಿಗೆ ಸಿಕ್ಕಿದರೆ ಹೇಗೋ ಹೇಗೋ ಛಲದಿಂದ ಹೊತ್ತು ಮನೆಯ ಕಡೆ ಸಾಗುವಂತೆ, ಆ ಆರು ವರುಷದ ಬಳಕೆಯೂ ತೋರದ ಹರಕಂಗಿಯ ಕೌಪೀನದ ಬಾಲಕನು ಬಾಳೆಯ ಕಂದನ್ನು ಹೊತ್ತು ಕಾಲೆಳೆದೆಳೆದು ಮುಂದೆ ಸಾಗುತ್ತಿದ್ದಾನೆ ಮನೆ ಹಾದಿ ಹಿಡಿದು. ಇನ್ನೂ ಎರಡು ಮೂರುಗಳಿಗೆ ನಡೆಯಬೇಕು. ಆದರೆ ಈಗಾಗಲೆ ತೀರ ದಣಿದು ಸುಣ್ಣವಾಗಿದ್ದಾನೆ. ಹಣೆ ಕುತ್ತಿಗೆ ಎದೆಯೆಲ್ಲ ಬೆವರು. ಮೋರೆ ಕೆಂಪೇರಿ ಕನಲಿದೆ. ಆದರೂ ಆ ಬಾಳೆಯ ಕಂದನ್ನು ತೆಗೆದತ್ತ ಬಿಸುಡಲಾರ. ಮಾತ್ರವಲ್ಲ, ಬಿಗುವಾಗಿ ಹಿಡಿದರೆ ಅದೆಲ್ಲಿ ಜಜ್ಜಿ ಹೋಗುವುದೋ, ಸಡಿಲಾಗಿ ಕೈಗೊಟ್ಟರೆ ಅದೆಲ್ಲಿ ಜಾರಿಬಿದ್ದು ಸುಳಿ ಮುರಿದು ನುಜ್ಜುಗುಜ್ಜಾಗುವುದೋ ಎಂದು ಬೆದರಿ ಬಹು ಜಾಗರೂಕತೆಯಿಂದ ಹೊರುತ್ತಿದ್ದಾನೆ ಅದನ್ನು. ಹೆತ್ತಬ್ಬೆ ತನ್ನ ಮಗುವನ್ನು ಅಷ್ಟು ಜತನದಿಂದ ಹಿಡಿದುಕೊಳ್ಳುವಳೋ ಎಂದು ಸಂಶಯ ಬರಬೇಕು ನೋಡುವವರಿಗೆ.

"ಹೀಗೆ ಹಿಂದೆ ಬಿದ್ದರೆ ಹೇಗೆ ಮನೆ ಸೇರುವುದು? ಹೊತ್ತು ಇಳಿಯುವುದೂ ಕಾಣುವುದಿಲ್ಲವೆ? ಬೇಡಾ ಬೇಡಾ ಎಂದರೆ ಕೇಳದೆ ಹೊತ್ತೆ! ಯಾವ ಕರ್ಮಕ್ಕೆ ಅದು! ತೆಗೆದತ್ತ ಒಗೆದು,

'ನಂದಾದೀಪ' ದಿಂದ

ಬೇಗ ಮುಂದೆ ಬಂದೀ ಆಯಿತು! ಇಲ್ಲವಾದರೆ ನಾನೇ ಎಳೆದು ಬಿಸಾಡುತ್ತೇನೆ, ನೋಡು!" ಎಂದು ಗದರಿಸುತ್ತಾಳೆ ಮುಂದೆ ಸಾಗುತ್ತಿರುವ ಅವನ ತಾಯಿ. ಅವಳಾದರೂ ಆ ಕಂದನ್ನು ತೆಗೆದುಕೊಳ್ಳಬಾರದೇ ಎಂದರೆ ಅವಳಿಗೊಂದು ಹೊರೆ ಬೇರೆಯೇ ಇದೆ. ಸುಮಾರು ಮೂರು ವರುಷದ ಮಗು! ಬಡ ತೌರಿಗೆ ಸೋಣೇ ತಿಂಗಳ ಬಿದ್ದಿಗೆ ಹೋಗಿ, ಹೊಕ್ಕ ಬಡಮನೆಗೆ ಹಿಂತಿರುಗಿ ಬರುತ್ತಿರುವವಳು ಅವಳು. ಅವಳ ತಾಯಿ ಕೊಟ್ಟ ನಾಲ್ಕು ಹಳೆಯ ಸೌತೆಯ ಕಾಯಿ, ಒಂದರೆ ಸೇರು ಅವಡೆ, ಒಂದು ತುಂಡು ಮರಸಣಿಗೆ, ಹರುವೆಯ ದಡಿ, ಕೆಸುವಿನ ಕಾಲು, ಇತ್ಯಾದಿಗಳ ಒಂದು ಕಟ್ಟು ಬಲಗೈ ತುದಿಯಿಂದ ತೂಗಿ ತೂಗಿ ಕೈ ತುಂಡಾಗುವಂತಾಗಿದೆ. ಎಡ ಕಂಕುಳಲ್ಲಿದೆ ಆ ಮಗು– ನಡೆಯಲಿಕ್ಕೆ ಸಣ್ಣದು, ಹೊರಲಿಕ್ಕೆ ದೊಡ್ಡದು!

ತಾಯಿಯ ಗದರಿಕೆಯನ್ನು ಕೇಳಿ ಅವಳೆಲ್ಲಾದರೂ ಆ ಕಂದನ್ನು ಎಳೆದು ಬಿಸಾಡುವಳೋ ಎಂದು ಅವಳ ಹಿಂದೆಯೇ ಓಡಿಯೋಡಿ ನಡೆಯುತ್ತಿದ್ದ ನಾಲ್ಕು ವರುಷದ, ಹರಕು ಪಾವಡೆಯ, ಕಾಡಿಗೆಗಣ್ಣಿನ ಹುಡುಗಿಯೊಂದು ಅಣ್ಣನ ಕೈಯಿಂದ ಅದನ್ನು ತೆಗೆದುಕೊಂಡು ಅವನು ಮಾಡಿದಂತೆ ತಲೆ ಹೆಗಲು ಕೈಕಂಕುಳಗಳನ್ನೆಲ್ಲ ಉಪಯೋಗಿಸಿ ಹೆಣಗಾಡಿ ಅಂತೂ ಸ್ವಲ್ಪ ದೂರ ತಂದಿತು. ಅಷ್ಟರಲ್ಲಿ ತುಸು ಸುಧಾರಿಸಿಕೊಂಡ ಅಣ್ಣನು ತಿರುಗಿ ತಲೆಗೊಟ್ಟ ಆ ಕಂದಿಗೆ. ಹೀಗೆ ಅಣ್ಣ ಸೋತಾಗ ತಂಗಿ, ತಂಗಿ ಸೋತಾಗ ಅಣ್ಣ, ಎಂದು ಹಾಗೂ ಹೀಗೂ ಆ ಕಂದು ಬಂದಿಳಿಯಿತು ಅವರ ಗುಡಿಸಲ ಬಾಗಿಲಲ್ಲಿ.

ಅದೊಂದು ರಸಬಾಳೆಯ ಕಂದು. ಅವರಜ್ಜಿಯ ಮನೆಯಲ್ಲಿ ರಸಬಾಳೆಯ ಚಿಕ್ಕದೊಂದು ಗೊನೆ ಬಲಿತಿತ್ತು. ಮೊಮ್ಮಕ್ಕಳು ಬರುವಾಗ ಹಣ್ಣಾಗಲೆಂದು ಆ ಮುದುಕಿ ಅದನ್ನು ಕಡಿಸಿ ತೂಗಿಸಿದ್ದಳು. ಆದರೆ ಇವರು ಅಜ್ಜಿಯ ಮನೆ ಸೇರುವುದಕ್ಕೆ ಎರಡು ದಿನ ಮುಂಚಿತವಾಗಿಯೇ ಅದು ಚೆನ್ನಾಗಿ ಮಾಗಿತ್ತು. ರಸಬಾಳೆಯ ಹಣ್ಣಲ್ಲವೆ? ಮಾಗಿದ ಮೇಲೆ ಗೊನೆಯಲ್ಲಿ ನಿಲ್ಲಲಿಲ್ಲ. ಮಗನ ಮಕ್ಕಳು ತಿನ್ನದೆಯೂ ಕೇಳಲಿಲ್ಲ. ಆದರೂ ಆ ಮುದುಕಿಯು ನಾಲ್ಕು ಹಣ್ಣುಗಳನ್ನು ಎಲ್ಲೋ ಮಡಕೆಯೊಳಗೆ ಅಡಗಿಸಿಟ್ಟಿದ್ದು, ತುಂಬ ತಿಂದಿದ್ದ ಆ ಮಕ್ಕಳ ಕಣ್ಣು ತಪ್ಪಿಸಿ ಈ ಮೊಮ್ಮಕ್ಕಳಿಗೆ ಕೊಟ್ಟಳು. ಊರ ಜಾತ್ರೆಯಲ್ಲಿ ಅಂಗಡಿಯೆದುರು ತೂಗಿಸಿದ್ದ ಬಾಳೆಯ ಗೊನೆಗಳನ್ನು ಈ ಮಕ್ಕಳು ಕಂಡಿದ್ದರಲ್ಲದೆ ತಿಂದು ನೋಡಿದವರಲ್ಲ. ಜಾತ್ರೆಗೆ ಹೋದಲ್ಲಿ ಒಂದೆರಡು ಮಂಡಕ್ಕಿಯುಂಡೆ ಚಕ್ಕುಲಿಗಳಿಗಿಂತ ಹೆಚ್ಚಿನದೇನನ್ನೂ ಕೊಂಡು ಕೊಡಲಾರದಷ್ಟು ಕಡುಬಡತನ ಆ ಮಕ್ಕಳ ತಂದೆ ತೌಡನಿಗೆ. ಆದುದರಿಂದ ಹಣ್ಣು ಹಣ್ಣಾದ ಆ ಬಾಳೆಯ ಹಣ್ಣು ಅಮೃತ ಪ್ರಾಶನದಂತಾಯಿತು ಅವರಿಗೆ. ಅಜ್ಜಿಯ ಬಳಿ ಕುಳಿತು ಅದರ ಕತೆ ಕೇಳಿದರು. ಅಜ್ಜಿಯು ಹೇಳಿದಳು. ಆ ಉದ್ದದ ಕತೆಯನ್ನು ಗಿಡ್ಡಾಗಿ ಹೇಳುವುದಾದರೆ— ಒಂದು ವರುಷದ ಹಿಂದೆ ಅವರ ಮಾವನೊಂದು ರಸಬಾಳೆಯ ಕಂದನ್ನು ತಂದು ನೆಟ್ಟಿದ್ದ. ಅದು ಗೊನೆ ಹಾಕಿತ್ತು. ಆದರೆ ಆ ಗೊನೆ ಬೇಗ ಹಣ್ಣಾಯಿತು; ಇವರು ಬಂದುದು ತಡವಾಯಿತು. ಈಗ ಆ ಬಾಳೆಯ ನಾಲ್ಕು ಕಂದುಗಳಿವೆ. ಅವೂ ಬೆಳೆದು ಗೊನೆ ಹಾಕುವುವು. ಆಗ ಒಂದು ಗೊನೆಯನ್ನೇ ಅವರಿಗೆ ಅವಳು ಕಳುಹಿಸಿಕೊಡುವಳು— ಇದನ್ನು ಕೇಳಿದ ಆ ಮಕ್ಕಳಲ್ಲಿ ಒಂದು ಯೋಚನೆ ಮಿಂಚಿತು — ತಾವೂ ಅಲ್ಲಿಂದ ಒಂದು ಕಂದನ್ನು ಕೊಂಡುಹೋಗಿ ತಮ್ಮ ಮನೆಯೆದುರು ಮೋರೆ ತೊಳೆವಲ್ಲಿ ನೆಟ್ಟರಾಗದೆ?— ಎಂದು. ಎರಡು ಮೂರು ದಿನ ಅದೇ ಹಂಬಲ ಅವರಿಗೆ. ಕೊನೆಗೆ ಮಾವನು ಅವರಿಗೊಂದು ಕಂದು ಕೊಡುತ್ತೇನೆಂದಾಗ ಅವರಿಗಾದ ಆ ಆನಂದ! ಬರೆದು ಬಣ್ಣಿಸಲಾದೀತೆ? ಮುಂದೇನಾಯಿತೆಂಬುದು ಗೊತ್ತೇ ಇದೆಯಲ್ಲ?

ತಮ್ಮ ಗುಡಿಸಲು ಸೇರಿದ ಆ ಮಕ್ಕಳು—ಬೂದ ತುಕ್ರಿಯರು- ಮರುದಿನ ಬೆಳಗ್ಗೆ ಎಲ್ಲರಿಗಿಂತ ಮೊದಲು ಎಚ್ಚತ್ತು ತೌಡನನ್ನು ಬೇಡಿ ಕಾಡಿ ಅದನ್ನು ನೆಡಿಸಿದರು. ತೌಡನು ದಿನಗೂಲಿ ಮಾಡಿ ಸಂಸಾರ ಹೊರುವ ಕಡುಬಡವ. ಆದರೆ ಇರಲಿಕ್ಕೊಂದು ಮಾಡು ಬೇಕಲ್ಲ? ಅದಕ್ಕಾಗಿ ಕೋಟೆಮನೆ ನಾಗಪ್ಪನವರ ನಾಲ್ಕಾರು ಚೋಕು ತೆಂಗಿನ ಪಾಳು ತೋಟದ ಆ ಗುಡಿಸಲಲ್ಲಿ ಇದ್ದ. ಅದಕ್ಕೂ ಆರು ರೂಪಾಯಿ ಗೇಣಿಕೊಟ್ಟು ಗುಡಿಸಲು ಭಾವಣಿಮಾಡಿಕೊಳ್ಳಬೇಕಿತ್ತು; ಮೇಲಾಗಿ ಧನಿಯರ ಬಿಟ್ಟಿ ಬೇಗಾರಿಯಂತೂ ಇದ್ದದ್ದೇ. ಆ ಜಾಗದಲ್ಲಿ ಏನಾದರೂ ಬಾಳೆ ತರಕಾರಿಗಳನ್ನು ಬೆಳೆಯಿಸಬಹುದೆಂದರೆ ತೌಡನ ಪಾಳು ತೋಟವು ನೆರೆ ಹೊರೆಯ ಆಢ್ಯರ ಆಕಳುಗಳ ಆಹಾರ ಕ್ಷೇತ್ರ. ಅವನ್ನು ಹಾಗೆಲ್ಲ ಬಿಟ್ಟುಬಿಡಬಾರದೆಂದು ಹೇಳುವ ಅಥವಾ ಹೊಡೆದೋಡಿಸುವ ಎದೆಗಾರಿಕೆಯು ಬಡ ತೌಡನಿಗೆಲ್ಲಿಂದ? ನಾಳೆ ಅವರಲ್ಲಿಯೇ ದುಡಿದು ಎರಡು ಸೇರಕ್ಕಿಯ ಪಥ್ಯ ತರಬೇಕಲ್ಲ ಅವನಿಗೆ? ಅಲ್ಲದೆ ಆಢ್ಯರ ಅವಕೃಪೆಗೆ ಈಡಾಗಿ ಬಡವನು ಅವರೆಡೆಯಲ್ಲಿ ದಿನ ದೂಡಲಾಪನೆ? ಅದರಿಂದಾಗಿ ತೌಡನಾವುದನ್ನೂ ನೆಡುತ್ತಿದ್ದಿಲ್ಲ. ಆದರೆ ಈಗ ಮಕ್ಕಳ ಕಾಟಕ್ಕಾಗಿ ನೆಟ್ಟ. ನೆಟ್ಟ ಮೇಲೆ ಕಾಪಾಡಿಕೊಡದಿದ್ದರೆ ಇವರ ಅನುದಿನದ ಗೋಳಾಟ ಅವನು ಮನೆ ಹೊಕ್ಕಾಗಲೆಲ್ಲ ತಪ್ಪುವಂತಿದ್ದಿಲ್ಲ. ಆದುದರಿಂದ ಒಲೆಯೊಟ್ಟುವ ಅನಿವಾರ್ಯ ಆವಶ್ಯಕತೆಗಾಗಿ ಕೂಡಿಟ್ಟ ಕೊತ್ತಳಿಗೆಗಳನ್ನು ಆ ಕಂದಿನ ಸುತ್ತ ನೆಟ್ಟು ಗಟ್ಟಿ ಮುಟ್ಟಿನ ಬೇಲಿ ಮಾಡಿದ. ಅಷ್ಟಾದ ಮೇಲೆಯೇ ಆ ಮಕ್ಕಳು ಅಂದು ಗಂಜಿಯೂಟಕ್ಕೆ ಒಳಗೆ ಹೋದರು.

*

ಅಂದಿನಿಂದ ಬೂದ-ತುಕ್ರಿಯರು ಹೊತ್ತಾರೆ ಎದ್ದು ಕಣ್ಣೊರಸೊರಸಿಕೊಳ್ಳುತ್ತ ಹೋಗಿ ಮೊದಲು ನೋಡುವುದು ಆ ಕಂದನ್ನು. ದಿನದಲ್ಲಿ ಅದನ್ನೆಷ್ಟು ಸಲ ನೋಡುತ್ತಿದ್ದರೋ ಲೆಕ್ಕವಿಟ್ಟವರಾರು? ಮೂಸಂಜೆಗೆ ಗುಡಿಸಲು ಸೇರುವ ಮೊದಲೊಮ್ಮೆ ಅದನ್ನು ನೋಡಿಕೊಂಡು ಬಾರದಿದ್ದರೆ ಅವರಿಗೆ ನಿದ್ದೆ ಹತ್ತದು. ಹೀಗೆ ಅವರು ದಿನದಿನ ನೋಡು—ನೋಡುತ್ತಿದ್ದಂತೆ, ಅದರ ಬುಡದಲ್ಲಿ ಹೋಗಿ ನಿಂತು ಅದರ ಬೆಳವಣಿಗೆಯ ಕುರಿತು ಮಾತುಕತೆಯಾಡುತ್ತಿದ್ದಂತೆ, ಆ ಕಂದು ಸುಳಿಸುಳಿಯಾಗಿ ಬೆಳೆಬೆಳೆದು ಬಾಳೆಯ ಮರವಾಯಿತು. ಬೇಸಿಗೆಯು ಬಂದಾಗ ಬೂದ-ತುಕ್ರಿಯರಿಗೆ ಕುಡಿಕೆ ಹಿಡಿದು ಕೆರೆಯಿಂದ ನೀರು ಹೊತ್ತು ಬಾಳೆಯ ಬುಡಕ್ಕೆ ಸುರಿದಷ್ಟು ಸಾಲದು. ಅದರಿಂದಾಗಿ ಆ ಮಕ್ಕಳ ಮೈಯಿಂದೆಷ್ಟು ಬೆವರು ಸುರಿದಿತ್ತೋ ಅಳೆದವರಾರು?

ಬೇಸಿಗೆಯು ಹೋಗಿ ಮುಂಗಾರು ಮಳೆಯು ಮೋಡವೆದ್ದಿದ್ದ ಅದೊಂದು ರಾತ್ರೆ ಬೂದನೆದ್ದು ಅಳತೊಡಗಿದ— "ಅಯ್ಯೋ ಗಾಳೀ! ಗಾಳೀ! ನಮ್ಮ ಬಾಳೆ ಮುರಿದುಬಿದ್ದರೆ!" ಎಂದು ಬಿಕ್ಕಿ ಬಿಕ್ಕಿ ಕೂಗಿದ. ತೌಡನೆದ್ದು ಹೋಗಿ ಅದಕ್ಕೆ ಸುತ್ತಲೂ ನಾಲ್ಕು ಕೊತ್ತಳಿಗೆಗಳನ್ನು ಊತು ಕೊಟ್ಟು ಕಟ್ಟಿ ತೋರಿಸಿ ಸಮಾಧಾನಗೊಳಿಸಿದ ಮೇಲೆ ಹುಡುಗನು ಹೋಗಿ ತಿರುಗಿ ನಿದ್ದೆಮಾಡಿದ.

ಒಂದು ದಿನ ತುಕ್ರಿಯು ಬಾಳೆಯ ಬುಡದಲ್ಲಿ ನಿಂತು ಕುಣಿ ಕುಣಿದು "ಅಣ್ಣಾ! ಅಣ್ಣಾ!" ಎಂದು ಕೂಗಿದಳು. ಬೂದನು ಓಡಿ ಹೋಗಿ ನೋಡುತ್ತಾನೆ- ಬಾಳೆಯ ತುದಿಯಲ್ಲಿ ಹೂವಿನ ಮೂತಿ! ದಿನ ಹೋದಂತೆ ಹೂವು ಹೊರಬಂತು; ಬೆರಳುಬಿಟ್ಟಿತು. ಬೆರಳುಗಳು ಬಲಿಬಲಿತು ತೋರ ಕಾಯಿಗಳಾದುವು. ಬೂದತುಕ್ರಿಯರೊಂದಿಗೆ ಚಿಕ್ಕ ದೂಮನೂ ಹೋಗಿ ಗೊನೆಯನ್ನು ನೋಡುತ್ತ ನಿಲ್ಲುತ್ತಿದ್ದ. ಅದು ಹಣ್ಣಾದಾಗ ಅವನಿಗೂ ಪಾಲು ಕೊಡುವುದಾಗಿ ಅಕ್ಕ ಅಣ್ಣಂದಿರು ಹೇಳುತ್ತಿದ್ದರು. ಅವರು ಹೊತ್ತು ತಂದ ಕಂದು; ಅವರಪ್ಪ ನೆಟ್ಟ ಕಂದು; ಅವರು ನೀರೆರೆದು ಬೆಳೆಯಿಸಿದ ಕಂದು; ಅದು ಬಿಟ್ಟ ಗೊನೆಯು ಅವರದು. ಅದು ಹಣ್ಣಾದಾಗ ಅದನ್ನೆಲ್ಲರಿಗೆ ಪಾಲು ಮಾಡಿ ಹಂಚುವವರೂ

ಅವರ್ೇ. ಅವರಜ್ಜಿಗೂ ಒಂದು ಪಾಲಿದೆ ಅದರಲ್ಲಿ!

"ತೌಡಾ, ಆ ಗೇಣಿ ಬಾಕಿ ಎರಡು ರೂಪಾ-ಯಿ ಯಾವಾಗ ಕೊಡುವುದೊ? ಅದೇನು ನಿನ್ನ ವರ್ಗದ ತೋಟವೆಂದು ತಿಳಿದೆಯಾ?" ಎಂದು ಗುಡುಗುಡಿಸಿ ನುಡಿದರು ನಾಗಪ್ಪಯ್ಯ. ತೌಡನು ಅವರ ಮೋರೆ ನೋಡದೆ ಕತ್ತು ತಗ್ಗಿಸಿಕೊಂಡೇ ದೀನತೆಯ ಬೀಳುದನಿಯಲ್ಲಿ "ಈ ಮಳೆಗಾಲದ ಬರಗಾಲ ಸಾಗಲಿ! ಕಬ್ಬು ಹೂಡುವ ಆಲಿಯ ಕಾಲದಲ್ಲಿ ಹೇಗಾದರೂ ದುಡಿದು ಉಳಿಸಿ ತೀರಿಸುತ್ತೇನೆ" ಎಂದ. ಧನಿಯರು ಏನೇನೋ ಸಿಟ್ಟು ಮಾತಾಡಿ ಕೊನೆಗೆ, "ಯಾವಾಗ ಕೇಳಿದರೂ— ಇಂದಿಲ್ಲ ಮುಂದೆ—ಎಂದೆನ್ನುವ ನಿನ್ನ ರೋಗ ಇದ್ದೇ ಇದೆ. ಆಗಲಿ, ಆಲಿಯ ಕಾಲದ ವರೆಗೂ ಕಾದುಬಿಡುತ್ತೇನೆ," ಎಂದು ಸಮಾಧಾನಕ್ಕೆ ಬಂದು, "ಆಗ ತೋಟದತ್ತ ಕಡೆಯಿಂದ ಬರುತ್ತಿದ್ದಾಗ ಆ ಬಾಳೆಯ ಗೊನೆಯನ್ನು ನೋಡಿದೆ. ನಾಡದು ಹುಣ್ಣಿಮೆ ನಮ್ಮಲ್ಲೊಂದು ಸತ್ಯನಾರಾಯಣ. ನಾಳೆಯೇ ಅದನ್ನು ಕಡಿದಿಟ್ಟರೆ ಅಂದಿಗೆ ಹಣ್ಣಾದೀತು. ಹುಣ್ಣಿಮೆಯ ಬೆಳಗ್ಗೆ ತಂದುಕೊಟ್ಟುಬಿಡು! ತಿಳಿಯಿತೇ?" ಎಂದರು. ತೌಡನಿಗೆ ಸಿಡಿಲು ಬಡಿದಂತಾಯಿತು! ಅವನೇನು ಹೇಳಿಯಾನು? ಮೌನವಾಗಿದ್ದ. "ಏನು ಹೇಳಿದ್ದು ಕೇಳಿತೇ" ಎಂದರು ತುಸು ಬಿರುಸಿನ ದನಿಯಲ್ಲಿ ಧನಿಯರು. ತೌಡನು ಅಂಜುತ್ತಂಜುತ್ತ ನಾಲಿಗೆ ತಡವರಿಸುತ್ತ, "ಮಕ್ಕಳು ಬಹಳ ಆಶೆಯಿಂದ ಬೆಳೆಸಿದ್ದು. ಕೆಳಗಿನ ಒಂದೆ-ರಡು ಸಣ್ಣ ಹಣ್ಣಿಗೆಯಾದರೂ ಆ ಮಕ್ಕಳಿಗೆ..." ಎನ್ನುವಷ್ಟರಲ್ಲೇ ಧನಿಯರು, "ಮಕ್ಕಳಿಗೆ ರಸಬಾಳೆ ಹಣ್ಣೋ, ಮಣ್ಣೋ! ದೇವರ ಬಾಯಿಗೆ ಬೀಳಲಿ! ಮಕ್ಕಳ ಮೈಕೈ ಸುಖಕೊಡುತ್ತಾನೆ ಸತ್ಯನಾರಾಯಣ! ಮಕ್ಕಳಿಗಿಟ್ಟುಕೊಂಡು ದೇವರಿಗೆ ಕೊಡೋದೇ? ಹೀಗೆಲ್ಲ ಮಾಡೋದ್ರಿಂದ್ಲೇ ನಿತ್ಯ ದರಿದ್ರ, ತಪ್ಪೋದಿಲ್ಲ ನಿಮಗೆಲ್ಲ!" ಎನ್ನುತ್ತ ತಿರುಗಿ ಕೆಂಪೇರತೊಡಗಿದರು.

*

ತೌಡನು ಗುಡಿಸಲಿಗೆ ಬಂದ. ನಡೆದ ಸಂಗತಿಯನ್ನೆಲ್ಲ ಹೆಂಡತಿ ದೆಯ್ಯಿಗೆ ಗುಟ್ಟಾಗಿ ಹೇಳಿದ. ಅವಳು "ಅಯ್ಯೋ ದೇವರೇ, ಮಕ್ಕಳು ಒಂದು ವರ್ಷದಿಂದ ಬೆವರು ಸುರಿದು ನೀರೆರೆದು ಹಣ್ಣು ತಿಂದೇವೆಂದು ಆಶೆ ಮಾಡಿ ಮಾಡಿ ಕಡೆಗೆ. . ." ಎನ್ನುವಷ್ಟರಲ್ಲೇ ಅವಳಿಗೆ ಕಣ್ಣೀರು ಬಂತು, ಕುತ್ತಿಗೆ ಬಿಗಿಯಿತು, ಮಾತು ಮುಂದುವರಿಯದಂತಾಯಿತು. ಆದರೇನು ಮಾಡುವುದು? ಹಣ್ಣಿನ ಗೊನೆಯು ಹುಣ್ಣಿಮೆಯ ದಿನ ಧನಿಯರ ಅಂಗಳವೇರಲೇಬೇಕು! ತೌಡನು ಗೊನೆಯನ್ನು ಕಡಿದ. ಮಕ್ಕಳು ಸಂತೋಷದಿಂದ ಕುಣಿದಾಡಿದುವು. ಹಲವು ಪ್ರಶ್ನೆಗಳನ್ನು ಕೇಳಿದುವು. "ನೀವೆಲ್ಲ ರಗಳೆ ಮಾಡಬೇಡಿರಿ ನೋಡೋಣ" ಎಂದೊಂದೇ ಮಾತಿನಿಂದ ತನ್ನ ರಗಳೆಯನ್ನು ನುಂಗಿಕೊಳ್ಳುತ್ತ ಅವರ ಬಾಯಿ ಕಟ್ಟಿಸಿ, ಗೊನೆಯನ್ನು ಒಳಗೆ ತೂಗುಹಾಕಿ ಹರಕು ಒಟ್ಟಿಸುತ್ತಿದ. ಮಕ್ಕಳು ದಿನದಿನವೂ ಅದು ಹಣ್ಣಾಯಿತೋ ಎಂದು ಹಲವು ಹದಿನೆಂಟು ಸಲ ಎಡೆಯಿದ್ದಲ್ಲಿ ಇಣಿಕಿ ನೋಡುತ್ತಿದ್ದುವು. ಹುಣ್ಣಿಮೆಗೆರಡು ದಿನ ಮುಂಚೆ ಬಟ್ಟೆಯ ಹರುಕಿನೆಡೆಯಲ್ಲಿ ಕಾಯಿಯೊಂದು ಅರಸಿನ ಬಣ್ಣ ತಾಳಿದುದನ್ನು ಬೂದ ಕಂಡು ಹಿರಿಹಿರಿ ಹಿಗ್ಗಿ ತಂದೆಯ ಬಳಿಗೋಡಿ ಹೇಳಿದ. "ಇಲ್ಲ, ಅದಿನ್ನೂ ಚೆನ್ನಾಗಿ ಹಣ್ಣಾಗಿಲ್ಲ. ನೀವು ನಡುನಡುವೆ ಹೀಗೆಲ್ಲ ರಗಳೆ ಮಾಡಿದರೆ ನಾನದನ್ನು ತೆಗೆದು ತೋಡಿಗೆ ಬೀಸಾಡುತ್ತೇನೆ" ಎಂದು ತೌಡನೆಂದುದೇ ತಡ, ಮಕ್ಕಳು ಬೆದರಿ ಮೌನವಾದರು.

ಹುಣ್ಣಿಮೆಯ ದಿನ ಹೊತ್ತಾರೆ ಮಕ್ಕಳೆದ್ದು ನೋಡುತ್ತಾರೆ, ಬಾಳೆಯ ಗೊನೆಯೂ ಇಲ್ಲ! ತಂದೆಯೂ ಇಲ್ಲ! ಗೋಳೇ ಗೋಳು ಮೂರು ಮಕ್ಕಳದು! ದೆಯ್ಯಿಯು ಅವರನ್ನು ಸಮಾಧಾನಗೊಳಿಸುವುದಕ್ಕೆ ಏನೇನೋ ಕಾಳಬೆಕ್ಕು ತಿಂದು ಹೋದ ಕತೆ ಹೇಳಿದಳು; ಅದನ್ನು ಕೇಳಿ ಚಿಕ್ಕ ದೂಮನು, "ಆ–ಆ–ಆ–ಆ ಕಾಲ ಬೆಬ್ಬೆಕ್ಕೊ ಸ–ಸ–ಸ್ಸತ್ತೇ ಒ-ಒ-ಓಗ್ಲೀ!" ಎಂದರೂ

ನಿಮ್ಮ ಧ್ವನಿಯು ಎಷ್ಟೇ ಜೋರಿನಿಂದ ಮಾತಾಡಿದರೂ ದೂರ ತಲುಪದು

ಬೆಲ್ ಹೇಲರ್

ಟ್ರಾನ್ಸಿಸ್ಟರ ಮೆಗಾಫೋನ

ಬೆಲ್ ಹೇಲರವು ಪೋರ್ಟೇಬಲ್, ತೂಕದಲ್ಲಿ ಹಗುರು, ಇಲೆಕ್ಟ್ರಾನಿಕ್ ಮೆಗಾಫೋನ, ವಿದ್ಯುತ್ ಪೂರೈಕೆಗಾಗಿ ಸಾಮಾನ್ಯ ಟಾರ್ಚ್‌ಶೆಲ್ಲುಗಳನ್ನು ಉಪಯೋಗಿಸಬಹುದು. ಮೈಕ್ರೋಫೋನದಿಂದ ಸುಸಜ್ಜಿತವಾಗಿದ್ದರೂ ಸಹಿತಾ ಈಗ ಹೆಚ್ಚಿನ ಧ್ವನಿವಾಹಕಕ್ಕಾಗಿ ಹೊರಗಣ ಮೈಕ್ರೋಫೋನ ಯುನಿಟ್‌ದೊಂದಿಗೆ ಪೂರೈಸಲ್ಪಡುತ್ತಿದೆ.

ಬೆಲ್ ಹೇಲರದಿಂದ ನಿಮ್ಮ ಧ್ವನಿಯನ್ನು ೪೦೦ ಮೀಟರದಷ್ಟು ದೂರ ಸ್ಪಷ್ಟ ಹಾಗೂ ಜೋರಿನಿಂದ ಕೇಳಬಹುದು.

ಕಾರ್ಯಕ್ಕೆ ಸುಲಭ— ಬಳಕೆಯಲ್ಲಿ ಮಿತವ್ಯಯ

ಬೆಲೆ ರೂ. ೪೫೦/- ಎಫ್. ಜ. ಆರ್. ಬೆಂಗಳೂರು


(ಬಲ್ಕ ಆರ್ಡರುಗಳಿಗೆ ೧೦% ವರೆಗೂ ಡಿಸ್ಕೌಂಟ)

ಭಾರತ ಇಲೆಕ್ಟ್ರಾನಿಕ್ಸ್ ಲಿ.

(ಭಾರತ ಸರಕಾರದ ಉದ್ದಿಮೆ) ಜಾಲಹಳ್ಳಿ, ಬೆಂಗಳೂರು-೧೩

EMROS-SB-೭೧-೭೨

AN IDEAL CREAM-POWDER IN COMPACT FORM



LOVE OF BEAUTY
IS TASTE
CREATION OF BEAUTY
IS ART
SHEPUNJ®
AIDS TO THIS ART

SHEPUNJ®
POWDER COMPACT

AVAILABLE IN SEVEN FASHIONABLE SHADES TO MATURE WITH YOUR SKIN

57, Duke Wadi Girgam Road Bombay-2
Distributor Mysore State :
Ms C. R. & Brothers, Avenue Road, Bangalore City

ಬೂದತುಕ್ರಿಯರು ಅಂತಹ ಕತೆಯನ್ನು ನಂಬಿ ಸಮಾಧಾನವಾಗುವಂತಿದ್ದಿಲ್ಲ. ಕೊನೆಗೆ ದೆಯ್ಯಿಯು "ಅದನ್ನು ಧನಿಯರಲ್ಲಿಗೆ ಅಪ್ಪ ಕೊಂಡುಹೋದರು. ಅಲ್ಲಿ ಸತ್ನಾರ್ಣ ದೇವ್ರಿಗೆ ಅದು ಬೇಕಂತೆ!" ಎಂದಳು. "ದೇವ್ರು ಅದನ್ನು ತಿನ್ನುತ್ತಾರೆಯೆ?" ಎಂದು ಬೂದನ ಪ್ರಶ್ನೆ. "ದೇವ್ರಿಗೆ ಅಷ್ಟೂ ಬೇಕಿತ್ತೆ? ನಮಗೆ ಎರಡೆ-ರಡು— ಒಂದೊಂದು ಆದರೂ ಇಡಬಾರದಾಗಿತ್ತೆ?" ಎಂದು ತುಕ್ರಿಯ ತರ್ಕ. "ಹೋಗಲಿ, ಆ ಅಲೋಚನೆ ಬಿಡಿ, ಅದರ ಎರಡು ಮೂರು ಕಂದುಗಳಿವೆ. ಯಾವುದಾದರೊಂದು ಬೇಗನೆ ದೊಡ್ಡದಾಗಿ ಗೊನೆ ಹಾಕೀತು. ಅದು ಪೂರಾ ನಿಮಗೇ" ಎನ್ನುತ್ತ ಮಕ್ಕಳ ಆ ಅಳುಮೋರೆಯನ್ನು ನೋಡಲಾರದೆ ಒಳಗೆ ಹೋಗಿ ಬಿಟ್ಟಳು ತಾಯಿ; ಆದರೆ ಆ ಮಕ್ಕಳು ಮನೆಯಲ್ಲಿ ಏನೋ ಮಹಾವಿಪತ್ತು ಸಂಭವಿಸಿದ್ದಂತೆ ತಲೆಗೊಂದು ಕೈಗೊಟ್ಟು ಜೋಲುಮೋರೆ ಹಾಕಿ ಕಣ್ಣೀರೊರಸಿಕೊಳ್ಳುತ್ತ ಜಗಲಿಯಲ್ಲಿ ಕುಳಿತಿದ್ದುವು. ತುಸು ಹೊತ್ತಾದ ಮೇಲೆ ಅದೇನು ಯೋಚನೆ ಹೊಳೆಯಿತೋ ಆ ಬೂದನಿಗೆ – ನೋಡಿ, ಅವನು ಅಂಗಳಕ್ಕೆ ಹಾರಿದ! "ತುಕ್ರಿ, ಬಾ" ಎನ್ನುತ್ತ ಬಾಳೆಯ ಕಂದುಗಳಿರುವೆಡೆಗೆ ಧಾವಿಸುತ್ತಿದ್ದಾನೆ. ತುಕ್ರಿಯೂ ಓಡಿ ಸೇರಿದ್ದಾಳೆ. ನೋಡಿ, ಬೂದನು ಆ ಕಂದುಗಳನ್ನು ಒಂದೊಂದಾಗಿ ಹಿಡಿಹಿಡಿದು ಬಗ್ಗಿಸಿ, ತಿರುತಿರುವಿ ಮುರಿಯುತ್ತ "ಇ ಇ ಇ ಇ ಇವು ಗೊನೆ ಹಾಕೋದೂ ಬೇಡಾ ಆ ಆ ಆ ಸತ್ತ್ನಾರ್ಣಾ ತಿ ತಿ ತಿತ್ತಿನ್ನೋದೂ ಬೇಡ!" ಎನ್ನುತ್ತ ಅವನ್ನೆಲ್ಲ ಸೀಳಿ ಸೀಳಿ ಮುರಿಮುರಿದು ಹಾಕಿ ಅಲ್ಲೆಲ್ಲ ಕೆಸರೇಳುವಂತೆ ಅವುಗಳ ಮೇಲೆ ತಕತಕ ಕುಣಿಯುತ್ತಿದ್ದಾನೆ! ತುಕ್ರಿಯೂ ಕುಣಿಯುತ್ತಿದ್ದಾಳೆ! ಅದೇನು ಆವೇಶ! ಅದೆಂತಹ ನೃತ್ಯ!★

"ನಂದಾದೀಪ" ಉಡುಪಿಯು "ಕಿರಿಯರ ಪ್ರಪಂಚ"ದ ಪ್ರಕಟನೆಯಾಗಿದೆ.

ಮಹಾಕವಿ ನಿರಾಲಾ ಮತ್ತು ಮುಖ್ಯ ಮಂತ್ರಿ

ಹಿಂದೀ ಮಹಾಕವಿ ನಿರಾಲಾರವರ ವಿಕ್ಷಿಪ್ತ ಸ್ವಭಾವದ ಪರಿಚಯು ಅವರ ಸಹವಾಸ ಬಂದವರೆಲ್ಲರಿಗೂ ಆಗಿದೆ. ಒಮ್ಮೆ ಪ್ರಸಿದ್ಧ ಸಮಾಜ ಸೇವಕ ಮತ್ತು ಸಾಹಿತಿ ಶ್ರೀ ಹರಿಭಾವು ಉಪಾಧ್ಯಾಯರು ನಿರಾಲಾರವರನ್ನು ಕಾಣಲು ಬಂದರು. ಆ ಮಾತು ಈ ಮಾತು ಆಡುತ್ತಾ ನಿರಾಲಾರವರು ಶ್ರೀ ಹರಿಭಾವು ಉಪಾಧ್ಯಾ-ಯರಿಗೆ "ತಾವು ಇತ್ತೀಚಿಗೆ ಏನು ಮಾಡುತ್ತೀರಿ?" ಎಂದು ಪ್ರಶ್ನಿಸಿದರು. ನಿರಾಲಾರವರಿಗೆ ಯಾವುದೇ ಅಧಿಕಾರ ಸ್ಥಾನದ ಬಗ್ಗೆ ತಿರಸ್ಕಾರ ಭಾವನೆಯಿದ್ದುದು ಉಪಾಧ್ಯಾಯರಿಗೆ ತಿಳಿದಿತ್ತು. ಕಾರಣ ಮಹಾಕವಿಯ ಪ್ರಶ್ನೆಗೆ ಉತ್ತರ ಹೇಳಲು ಹಿಂದುಮುಂದು ನೋಡುತ್ತಿರುವಾಗ, ಅವರ ಜೊತೆಯಲ್ಲಿಯೇ ಬಂದ ಕಾರ್ಯ-ದರ್ಶಿಯು ನಿರಾಲಾರವರಿಗೆ "ತಮಗೆ ಗೊತ್ತಿಲ್ಲವೇ? ಶ್ರೀ ಹರಿಭಾವು ಉಪಾ-ಧ್ಯಾಯರು ಮುಖ್ಯ ಮಂತ್ರಿಯಾಗಿದ್ದಾರೆ" ಎಂದು ಹೇಳಿದರು. ಇದನ್ನು ಕೇಳಿದ್ದೇ ತದ, ನಿರಾಲಾರವರ ಹುಬ್ಬುಗಳು ಗಂಟಿಕ್ಕಿದವು. ಕಣ್ಣುಗಳು ರೋಷದಿಂದ ಆರಕ್ತವಾದವು. ಅವರು ಒದರುತ್ತ, ಉಪಾಧ್ಯಾಯರಿಗೆ, "ಈಗ ನೀವು ಮುಖ್ಯ ಮಂತ್ರಿಗಳಾಗಿರುವಿರಿ. ತಾವು ಇಲ್ಲಿಂದ ಹೋಗಬಹುದು" ಎಂದು ಹೇಳಿದರು. ಪುನಃ ಅದೇ ಏರುಧ್ವನಿಯಲ್ಲಿ "ನಿರಾಲಾ ಮತ್ತು ಮುಖ್ಯ ಮಂತ್ರಿಗೆ ಯಾವ ಸಂಬಂಧವೂ ಇಲ್ಲ." ಎಂದು ಗರ್ಜಿಸಿದರು.

ಸಂಗ್ರಾಹಕ: ಪಿ. ಎಮ್. ಗಲಗಲಿ, ರಾಯಚೂರ.

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿ ಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾಗಿ ಅರ್ಥಗಳನ್ನು ವಿವರಿಸಿದೆ.

೧. ಸಮರ್ಥನೆ
(ಅ) ಶಕ್ತಿ (ಆ) ಬೇಡುವಿಕೆ (ಇ) ಬೆಂಬಲಿಸುವುದು (ಈ) ನೀರು ಹೊಯ್ಯುವಿಕೆ

೨. ಅಭ್ಯರ್ಥನೆ
(ಅ) ಹೆದರಿಕೆಯಿಲ್ಲದಿರುವುದು (ಆ) ಬೇಡಿಕೊಳ್ಳುವುದು (ಇ) ಹೆಸರಿಸುವುದು (ಈ) ನಮಸ್ಕಾರ

೩. ಅಭಿವ್ಯಂಜನೆ
(ಅ) ಪ್ರಕಟಪಡಿಸುವುದು (ಆ) ಹೊಂಚುಹಾಕುವುದು (ಇ) ತೆಗಳುವಿಕೆ (ಈ) ಮತ್ಸರ

೪. ಊಟೆ
(ಅ) ನೀರಿನ ಬುಗ್ಗೆ (ಆ) ಮೊಲೆಯುಣಿಸುವಿಕೆ (ಇ) ಬಟ್ಟೆ (ಈ) ನಳಿಕೆ

೫. ನಿವೇಶನ
(ಅ) ಸೋಗು (ಆ) ದೂರಮಾಡುವುದು (ಇ) ಹೊರತಳ್ಳುವಿಕೆ (ಈ) ವಸತಿ

೬. ಪರಾಯಣ
(ಅ) ಓದುವಿಕೆ (ಆ) ಒಂದೇ ವಿಷಯದಲ್ಲಿ ನಿರತ (ಇ) ಪರೋಪಕಾರ (ಈ) ಲಗ್ನ

೭. ಪರಾರ್ಥ
(ಅ) ಒಂದು ದೊಡ್ಡ ಸಂಖ್ಯೆ (ಆ) ವಂದನೆ (ಇ) ಪರಹಿತ (ಈ) ಪಲಾಯನ

೮. ಮಾಯಾವಿ
(ಅ) ಮುಸುಕು (ಆ) ಬೆಳಕು (ಇ) ಮೋಸಗಾರ (ಈ) ಶಿವ

೯. ಮಾರ್ಫತ್ತು
(ಅ) ಬದಲಾವಣೆ (ಆ) ಅಳತೆ (ಇ) ಮಾರಾಟ (ಈ) ಮೂಲಕ

೧೦. ಸಂಲಗ್ನ
(ಅ) ಒಂದಕ್ಕೊಂದು ತಗಲಿದ (ಆ) ಎರಡನೇ ವಿವಾಹ (ಇ) ಜಗಿತ (ಈ) ಮುಳುಗಿದ

೧೧. ಹೂಣಿಗ
(ಅ) ಶಾಪ ಕೊಡುವವ (ಆ) ಶೂರ (ಇ) ಹೆಣ ಹುಗಿಯುವವ (ಈ) ರೈತ

೧೨. ಅವಗಡಿಸು
(ಅ) ಅಪಘಾತ ಮಾಡು (ಆ) ತಾಗು (ಇ) ದರ್ಪ ತೋರಿಸು (ಈ) ಮುಚ್ಚು.

' ಶಬ್ದಭಾಂಡಾರ ' ದ ಸರಿಯಾದ ಅರ್ಥಗಳು

೧. **ಸಮರ್ಥನೆ** (ಇ) ಬೆಂಬಲಿಸುವುದು, ಸರಿಯೆಂದು ಸಾಧಿಸುವುದು, ಸ್ಥಿರಪಡಿಸುವುದು, ದೃಢಪಡಿಸುವುದು, ಪುಷ್ಟಿಕೊಡುವುದು. ಉದಾ:- ತನ್ನ ಹೇಳಿಕೆಗೆ ಅವನು ಅನೇಕ ಸಮರ್ಥನೆಗಳನ್ನು ಕೊಟ್ಟನು. [ಸಂ.]

೨. **ಅಭ್ಯರ್ಥನೆ** (ಆ) ಬೇಡಿಕೊಳ್ಳುವುದು, ಕೋರಿಕೆ, ಅರ್ಜಿ, ಉಮೇದ್ವಾರಿಕೆ. ಉದಾ— ಕೆಲಸಕ್ಕಾಗಿ ಅವನು ಕಳಿಸಿದ ಅಭ್ಯರ್ಥನೆಗಳೆಲ್ಲ ವ್ಯರ್ಥವಾದವು.[ಸಂ.]

೩. **ಅಭಿವ್ಯಂಜನೆ** (ಅ) ಪ್ರಕಟ ಪಡಿಸುವುದು, ಸ್ಪಷ್ಟ ಪಡಿಸುವದು, ಸೂಚಿಸುವಿಕೆ. ಉದಾ— ಭಾವಗಳ ಅಭಿವ್ಯಂಜನೆ ಅವನ ವಾಕ್ಯಗಳಲ್ಲಿ ಚೆನ್ನಾಗಿದೆ. [ಸಂ.]

೪. **ಊಟೆ** (ಅ) ನೀರಿನ ಬುಗ್ಗೆ, ಒರತೆ. [ಕನ್ನಡ]

೫. **ನಿವೇಶನ** (ಈ) ವಸತಿ, ಒಂದು ವರ್ಗದ ಜನರು ವಾಸಿಸುವ ಪ್ರದೇಶ; ಮನೆ ಮೊದಲಾದ್ದನ್ನು ಕಟ್ಟಲು ಗೊತ್ತು ಮಾಡಿದ ಸ್ಥಳ. [ಸಂ. ನಿ = ಒಳಗೆ, ವೇಶನ= ಹೋಗುವಿಕೆ]

೬. **ಪರಾಯಣ** (ಆ) ನಿರತ, ಒಂದೇ ವಿಷಯದಲ್ಲಿ ಮನತೊಡಗಿಸಿದ. ಉದಾ- ಅವಳುಪತಿಪರಾಯಣೆ; ಅವನು ಧನ ಪರಾಯಣ. [ಸಂ.]

೭. **ಪರಾರ್ಥ** (ಇ) ಪರಹಿತ, ಇತರರ ಲಾಭ ಉದಾ — ಅವನು ಪರಾರ್ಥವನ್ನು ಯಾವಾಗಲೂ ಮರೆಯುವುದಿಲ್ಲ. [ಸಂ.]

೮. **ಮಾಯಾವಿ** (ಇ) ಮೋಸಗಾರ, ಮಂತ್ರ ಮಾಡುವವ, ಭ್ರಮೆಯನ್ನುಂಟು ಮಾಡುವಾತ. [ಸಂ]

೯. **ಮಾರ್ಫತ್ತು** (ಈ) ಮೂಲಕ, ಇನ್ನೊಬ್ಬನನ್ನು ನಿಮಿತ್ತವಾಗಿಟ್ಟುಕೊಂಡು. ಉದಾ— ಇವನ ಮಾರ್ಫತ್ತಾಗಿ ಹಣ ಕಳಿಸಿದೆ. [ಉರ್ದು]

೧೦. **ಸಂಲಗ್ನ** (ಅ) ಒಂದಕ್ಕೊಂದು ತಗಲಿದ, ಜೋಡಿಯಾದ, ಕೂಡಿಕೊಂಡ. ಉದಾ— ಅವರಿಬ್ಬರ ಹೊಲಗಳು ಸಂಲಗ್ನವಾಗಿವೆ. ಅಂದರೆ ಒಂದಕ್ಕೊಂದು ತಗಲಿವೆ. [ಸಂ.]

೧೧. **ಹೂಣಿಗ** (ಆ) ಶೂರ, ಧೈರ್ಯಶಾಲಿ, ಸಾಹಸಿಗ; ಕುಶಲ [ಕನ್ನಡ]

೧೨. **ಅವಗಡಿಸು** (ಇ) ದರ್ಪತೋರಿಸು, ಉಗ್ರತನವನ್ನು ಪ್ರದರ್ಶಿಸು; ಅವಸರ ಮಾಡು, ಗಡಿಬಿಡಿಮಾಡು. [ಸಂ. ಅವಘಟ್ಟನದಿಂದ]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	....	ಸಾಧಾರಣ
೯—೧೦ ,,	....	ಉತ್ತಮ
೧೧—೧೨ ,,	....	ಅತ್ಯುತ್ತಮ

ಎದೆಯಲ್ಲಿ ನೋವು ಈ ರೋಗವನ್ನು ಸೂಚಿಸುತ್ತಿರಬಹುದು

ಪ್ಲೂರಸಿ ಬಗ್ಗೆ ನಿಮಗೇನು ಗೊತ್ತಿದೆ?

ಡಾ. ಬಾ. ಶಂ. ಜಾವಡೇಕರ

ಹೃದಯವಿಕಾರದಿಂದ ಮರಣ ಹೊಂದಿದವರ ಸುದ್ದಿಗಳನ್ನು ನಿತ್ಯವೂ ಎಂಬಂತೆ ನಾವು ಪತ್ರಿಕೆಗಳಲ್ಲಿ ಓದುತ್ತೇವೆ. ಎದೆಯಲ್ಲಿ ಒಮ್ಮಿಂದೊಮ್ಮೆ ನೋವು ಕಾಣಿಸಿಕೊಂಡು ಚಹ ಕುಡಿಯುತ್ತಿರುವಾಗಲೂ ಓದುತ್ತಿರುವಾಗಲೂ ಒಮ್ಮಿಂದೊಮ್ಮೆ ಮರಣ ಹೊಂದಿದವರ ವಿಷಯಗಳನ್ನು ಕೇಳುತ್ತೇವೆ. ಆದುದರಿಂದಲೇ ಯಾರ ಎದೆಯಲ್ಲಿ ಆಗಲಿ ನೋವು ಕಾಣಿಸಿದೊಡನೆ ಆತ ಇದು ಹೃದಯ ವಿಕಾರವೇನೋ ಎಂದು ಗಾಬರಿಗೊಳ್ಳುತ್ತಾನೆ.

ಆದರೆ ಎದೆಯಲ್ಲಿ ಅಕಸ್ಮಾತ್ತಾಗಿ ನೋವು ಕಾಣಿಸಿಕೊಂಡರೆ ಅಥವಾ ಕಳವಳ ಉಂಟಾದರೆ ಹೃದಯ ವಿಕಾರವೇ ಅದಕ್ಕೆ ಕಾರಣ ಎಂದೇನೂ ಇಲ್ಲ. ಹೃದಯವಿಕಾರಕ್ಕಿಂತಲೂ ಎದೆಯಲ್ಲಿ ಒಮ್ಮೆಲೆ ಅಸಹ್ಯ ವೇದನೆ ಕಾಣಿಸಿಕೊಳ್ಳುವುದಕ್ಕೆ 'ಪ್ಲೂರಸಿ' ಎಂಬ ರೋಗ ಕಾರಣವಾಗಿದೆ. ಸೂಜಿ ಅಥವಾ ಗುಂಡು ಸೂಜಿಯನ್ನು ಒಮ್ಮೆಲೆ ಎದೆಯಲ್ಲಿ ಚುಚ್ಚಿದರೆ ಆಗುವಂಥ ನೋವು ಪ್ಲೂರಸಿ ಆದಾಗ ಒಮ್ಮಿಂದೊಮ್ಮೆಲೆ ಎದೆಯಲ್ಲಿ ಆಗತೊಡಗುವುದು. ಪ್ಲೂರಸಿಯಲ್ಲಿ ಆಗುವ ನೋವು ಸೂಜಿಯಿಂದ ಹೊಲಿಗೆ ಹಾಕುವಾಗ ಆಗುವ ನೋವಿನಂತಿರುವುದರಿಂದ ಈ ನೋವಿಗೆ ಇಂಗ್ಲೀಷಿನಲ್ಲಿ 'ಸ್ಟಿಚ್' ಎಂಬ ಸಾರ್ಥಕ ಹೆಸರು ಬಂದಿದೆ.

ಪ್ಲೂರಸಿ ಹೇಗಾಗುತ್ತದೆ ಎಂದು ತಿಳಿಯುವುದಕ್ಕೆ ಎದೆಯ ಒಳಗಿನ ರಚನೆ ಹೇಗಿರುತ್ತದೆ ಎಂದು ತಿಳಿಯುವುದು ಅಗತ್ಯ. ಎದೆಯೊಳಗಿನ ಮುಖ್ಯ ಅವಯವಗಳೆಂದರೆ ಎರಡು ಪುಪ್ಪುಸಗಳು ಮತ್ತು ಒಂದು ಹೃದಯ. ಹೃದಯದ ಎರಡೂ ಮಗ್ಗಲಲ್ಲಿ ಎರಡು ಪುಪ್ಪುಸಗಳಿದ್ದು ಈ ಪುಪ್ಪುಸಗಳ ಮೇಲೆ ಒಂದು ತೆಳ್ಳನ್ನ ಪರೆಯ ಆವರಣವಿರುತ್ತದೆ. ಈ ಆವರಣಗಳಿಗೆ 'ಪ್ಲೂರಾ' ಎಂದು ಹೆಸರು. ಪ್ಲೂರಾದ ಆವರಣ ಎದೆಯ ಎಲುವಿನ ಪಂಜರದ ಒಳಭಾಗದಲ್ಲೂ ಇರುತ್ತದೆ. ಪ್ಲೂರಾದ ಈ ಎರಡು ಸ್ತರಗಳ ನಡುವೆ ಒಂದಿಷ್ಟು ಪೊಳ್ಳು ಸ್ಥಳವಿರುತ್ತದೆ. ಈ ಸ್ಥಳಕ್ಕೆ "ಪ್ಲೂರಲ್ ಕ್ಯಾವಿಟಿ" ಎನ್ನುತ್ತಾರೆ.

ಈ ಆವರಣಕ್ಕೆ ಬಾವು ಬಂದಾಗ ಪ್ಲೂರಸಿ ರೋಗವಾಗುತ್ತದೆ. ಇದರಲ್ಲಿ ನಾನಾ ಪ್ರಕಾರಗಳಿವೆ. ಕೇವಲ ಬಾವು ಬಂದಾಗ "ಡ್ರ್ಯಾಯ ಪ್ಲೂರಸಿ" ಎನ್ನುತ್ತಾರೆ. ಬಾವು ಬಂದ ಮೇಲೆ ಪೊಳ್ಳಿನಲ್ಲಿ ಅಂಟುದ್ರವ ದ್ರವಿಸತೊಡಗಿದರೆ ಅದಕ್ಕೆ "ಪ್ಲೂರಸಿ ಇಫ್ಯೂಜನ್" ಎನ್ನುತ್ತಾರೆ. ಈ ದ್ರವ ನೀರಿನಂತೆ ತೆಳ್ಳಗಾಗಿ ದೊಡ್ಡ

"ಅಮೃತ" ದಿಂದ

ಪ್ರಮಾಣದಲ್ಲಿ ಸಂಗ್ರಹವಾದಾಗ "ಹೈಡ್ರೊಥೊರಾಕ್ಸ್" ಎಂಬ ಬೇನೆ ಆಗುತ್ತದೆ. ಈ ದ್ರವ ರಸಿಗೆಯ ರೂಪ ತಾಳಿದಾಗ "ಎಂಪಾಯಿಮಾ" ಆಗಿದೆ ಎನ್ನುವರು. ಈ ಎಲ್ಲ ವಿಧಗಳ ಮೂಲದಲ್ಲಿ ಪ್ಲೂರಸಿ ರೋಗವಿರುತ್ತದೆ ಎಂಬುದನ್ನು ಮರೆಯಲಾಗದು.

ಸಾಮಾನ್ಯವಾಗಿ ಆಗುವುದು "ಡ್ರ್ಯಾಪ್ಲೂರಸಿ" ಮತ್ತು "ಪ್ಲೂರಸಿ ವಿಥ್ ಇಫ್ಯುಜನ್." ಡ್ರ್ಯಾಪ್ಲೂರಸಿ ಆಗಲು ಅನೇಕ ಕಾರಣಗಳಿರುತ್ತವೆ. ವಿಪರೀತ ಚಳಿ ಹವೆಯಲ್ಲಿ ಬೆಚ್ಚನ್ನ ಬಟ್ಟೆಗಳನ್ನು ಉಪಯೋಗಿಸದೆ ಮಲಗಿದರೆ ಈ ರೋಗವಾಗುತ್ತದೆ. ಪುಪ್ಪುಸದಲ್ಲಿ ಕ್ಷಯರೋಗದ ಜಂತುಗಳು ಬೆಳೆಯುತ್ತಿದ್ದರೂ ಪ್ಲೂರಸಿ ಆಗುತ್ತದೆ. ನ್ಯುಮೋನಿಯಾ ಆದ ನಂತರದಲ್ಲಿ ಕೆಲವು ಸಲ ಈ ರೋಗವಾಗುವ ಸಂಭವವಿದೆ. ಎದೆಗೆ ಬಲವಾದ ಪೆಟ್ಟು ಬಿದ್ದರೂ ಪ್ಲೂರಸಿಗೆ ಕಾರಣವಾಗುವುದು.

ಪ್ಲೂರಸಿ ಮತು ಕ್ಷಯ ಎರಡೂ ಒಂದೇ, ಮತ್ತು ಪ್ಲೂರಸಿ ಆದರೆ ಕ್ಷಯ ರೋಗವೇ ಬಂತು ಎಂಬ ತಿಳಿವಳಿಕೆ ತಪ್ಪು. ಕ್ಷಯರೋಗದಲ್ಲಿ ಪ್ಲೂರಸಿ ಆಗುವುದು ನಿಜವಾದರೂ ಪ್ಲೂರಸಿ ಆಯಿತೆಂದರೆ ಕ್ಷಯರೋಗ ಆದಂತೆಯೆ ಎಂದು ತಿಳಿಯಬಾರದು.

ಎದೆಯಲ್ಲಿ ಅಕಸ್ಮಾತ್ ನೋವು ಬಂದು ಪ್ಲೂರಸಿ ಪ್ರಾರಂಭವಾಗುವಂತೆ ಎಷ್ಟೋ ಸಲ ನೋವು ಕಾಣಿಸದಿದ್ದರೂ ಪ್ಲೂರಸಿ ಆಗುತ್ತದೆ. ಥಂಡಿಯಿಂದ ಬರುವ ಪ್ಲೂರಸಿ ಒಮ್ಮಿಂದೊಮ್ಮೆ ಪ್ರಾರಂಭವಾಗುತ್ತದೆ. ಎದೆಯ ಗೂಡಿನಲ್ಲಿ ಯಾವ ಸೂಚನೆಯಿಲ್ಲದೆ ಅಸಹ ವೇದನೆ ಆರಂಭವಾದರೆ ಮತ್ತು ಪ್ರತಿ ಶ್ವಾಸದೊಂದಿಗೂ ನೋವು ಹೆಚ್ಚಾದರೆ ಅದಕ್ಕೆ ಪ್ಲೂರಸಿಯೆ ಕಾರಣವಾಗಿರುವುದು ಹೆಚ್ಚು. ಈ ಪ್ರಸಂಗದಲ್ಲಿ ಶ್ವಾಸ ತೆಗೆದುಕೊಳ್ಳುವುದು ಕಠಿನವಾಗುತ್ತದೆ. ನೋವಿರುವ ಎದೆಯ ಭಾಗವನ್ನು ಅದುಮಿ ಹಿಡಿದರೆ ತುಸು ಆರಾಮೆನಿಸುತ್ತದೆ.

ಹೃದಯವಿಕಾರದಲ್ಲಿ ಎದೆಯಲ್ಲಿ ಕಾಣಿಸಿಕೊಳ್ಳುವ ನೋವು ಬಹುಶಃ ಎದೆಯ ಮಧ್ಯದಲ್ಲಿ ಅಥವಾ ಎಡಬದಿಯಲ್ಲಿ ಇರುತ್ತದೆ. ಪ್ಲೂರಸಿಯ ನೋವು ಯಾವ ಬದಿಯಲ್ಲಾದರೂ ಇರಬಹುದು. ಇವೆರಡರಲ್ಲಿಯ ಈ ಭೇದವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹೃದಯವಿಕಾರದ ನೋವು ಸತತವಾಗಿ ಬರುವುದಾಗಿದು ಆಳವಾಗಿ ಶ್ವಾಸತೆಗೆದುಕೊಂಡಾಗ ಅದು ಹೆಚ್ಚಾಗುವುದಿಲ್ಲ. ಆದರೆ ಪ್ಲೂರಸಿಯ ನೋವು ಮಾತ್ರ ಆಳವಾಗಿ ಶ್ವಾಸ ತೆಗೆದುಕೊಂಡೊಡನೆ ಹೆಚ್ಚಾಗುತ್ತದೆ. ಹೃದಯ ವಿಕಾರದಲ್ಲಿ ನೋವಿರುವ ಭಾಗವನ್ನು ಒತ್ತಿದಾಗ ನೋವು ಕಡಿಮೆಯಾಗುವುದಿಲ್ಲ. ಪ್ಲೂರಸಿಯಲ್ಲಿ ಕಡಿಮೆಯಾಗುತ್ತದೆ.

ಸಾಮಾನ್ಯವಾಗಿ ಪ್ಲೂರಸಿ ಆದಾಗ ಮೈಯಲ್ಲಿ ಜ್ವರವಿರುವುದು. ಸುಮಾರು ೧೦೦ ಡಿಗ್ರಿ ಜ್ವರವಿರುತ್ತದೆ. ರೋಗಿಯ ಶ್ವಾಸೋಚ್ಛ್ವಾಸ ಮಂದವಾಗಿ ಸಾಗಿರುತ್ತದೆ. ಜೋರಾಗಿ ಶ್ವಾಸ ಎಳೆದುಕೊಳ್ಳಲು ಆತ ಹಿಂಜರಿಯುತ್ತಾನೆ. ಯಾವ ಭಾಗದಲ್ಲಿ ಪ್ಲೂರಾಕ್ಕೆ ಬಾವು ಬಂದಿದೆಯೋ ಆ ಭಾಗವಷ್ಟೇ ನೋಯುತ್ತಿರುತ್ತದೆ. ಆದರೆ ಪುಪ್ಪುಸದ ಕೆಳಗಿನ ಭಾಗದ ಪ್ಲೂರಾ ಬಾತರೆ (Diophragmatic Pleuricy) ಮಾತ್ರ ನೋವು ಹೆಗಲಿನ ಹತ್ತಿರ ಇರುತ್ತದೆ. ಹೆಗಲಿನಲ್ಲಿ ನೋವು ಕಾಣಿಸಿದಾಗ ಅಲ್ಲಿಯ ಸಂದಿನಲ್ಲಿ ವಿಕೃತಿಯಿದೆಯೆ ಎಂದು ಪರೀಕ್ಷಿಸುವ ಅಗತ್ಯವಿರುವಂತೆ ಪ್ಲೂರಸಿ ಆಗಿದೆಯೆ ಎಂದು ನೋಡುವುದೂ ಅಗತ್ಯವಾಗುವುದು. ಹೆಗಲಿನ ನೋವಿಗೆ ಕಾರಣವಾಗುವ ಪ್ಲೂರಸಿಯಲ್ಲಿ ಹೊಟ್ಟೆಯಲ್ಲಿ ಕೂಡ ನೋವು ಕಾಣಿಸಿಕೊಳ್ಳುವುದು.

ಹಾಗೆಂದು ಎದೆಯ ಗೂಡಿನ ಅಕ್ಕಪಕ್ಕದಲ್ಲಿ ನೋವು ಬಂತೆಂದ ಮಾತ್ರಕ್ಕೆ ಪ್ಲೂರಸಿಯೆ ಆಗಿರಬೇಕೆಂದೇನೂ ಇಲ್ಲ. ಮಜ್ಜಾತಂತುವಿನ ವಿಕಾರದಲ್ಲಿ, ಎದೆಯ ಗೂಡಿನ ಮೇಲ್ಭಾಗದ ಸ್ನಾಯುಗಳ ವಿಕಾರದಲ್ಲಿ ಕೂಡ ಪ್ಲೂರಸಿಯ ವೇದನೆಯಂಥ ವೇದನೆಯಿರುತ್ತದೆ. ಆದ್ದರಿಂದಲೆ ಎದೆಯ ನೋವು ಎಂದಾಗ ಇವೆಲ್ಲ ಕಾರಣಗಳ

ಬಗ್ಗೆ ವಿಚಾರ ಮಾಡಬೇಕಾಗುವುದು.

ತಂಪು ಹವೆಯಿಂದ ಅಥವಾ ಎದೆಗಾದ ಪೆಟ್ಟಿನಿಂದ ಬಂದ ಪ್ಲೂರಸಿ ಸಾಮಾನ್ಯವಾಗಿ ನಾಲ್ಕೆಂಟು ದಿನಗಳಲ್ಲಿ ಕಡಿಮೆಯಾಗುತ್ತದೆ. ಆದರೆ ನ್ಯುಮೋನಿಯ, ಕ್ಷಯ, ಅಥವಾ ಪುಪ್ಫುಸದ ಕ್ಯಾನ್ಸರ್ ಮುಂತಾದ ಕಾರಣಗಳಿಗಾಗಿ ಪ್ಲೂರಸಿ ಆಗಿದ್ದರೆ ಅದು ಕಡಿಮೆಯಾಗಲು ಬಹಳ ಸಮಯ ಬೇಕಾಗುವುದು.

ಪ್ಲೂರಸಿ ಎಂದು ಖಂಡಿತವಾದೊಡನೆ ರೋಗಿಯನ್ನು ಮಲಗಿಸಿಬಿಡಬೇಕು. ಯಾವ ಬಗೆಯ ಚಲನವಲನಗಳನ್ನೂ ಮಾಡಗೊಡಬಾರದು. ಜ್ವರ ಪೂರ್ಣ ಇಲ್ಲದಂತಾಗುವವರೆಗೆ ಸಂಪೂರ್ಣ ವಿಶ್ರಾಂತಿ ಸಿಗಬೇಕಾದದ್ದು ಈ ರೋಗದಲ್ಲಿ ಬಹು ಮುಖ್ಯವಾಗಿದೆ. ನೋವಿನ ಭಾಗಕ್ಕೆ ಆಯೋಡಿನ್ (ಲಾಯುಕರ್ ಆಯೊಡಿಮಿಟಿಸ್) ಅಥವಾ "ಆ್ಯಂಟಿಫಾ ಜಿಸ್ಟೀನ್" ಹಚ್ಚುವುದರಿಂದ ನೋವು ಬಹಳಷ್ಟು ಕಡಿಮೆಯಾಗುವುದು. ಶ್ವಾಸೋಚ್ಛ್ವಾಸದ ಕಾಲಕ್ಕೆ ನೋವಿನ ಭಾಗದ ಚಲನವಲನ ಕಡಿಮೆಯಾದಷ್ಟೂ ಹಿತಕರವಾಗುವುದು. ಆದ್ದರಿಂದಲೇ ನೋವಿನ ಭಾಗದಲ್ಲಿ ಸ್ಟಿಕಿಂಗ್‌ಪ್ಲಾಸ್ಟರ್ ಹಚ್ಚುತ್ತಾರೆ. ಕೆಮ್ಮಿದರೆ ನೋವು ಹೆಚ್ಚಾಗುವುದರಿಂದ ಕೆಮ್ಮನ್ನು ನಿಲ್ಲಿಸುವ ಔಷಧಿಯನ್ನು ಕೊಡಬೇಕಾಗುತ್ತದೆ. ರಾತ್ರಿ ಚೆನ್ನಾಗಿ ನಿದ್ದೆ ಬರುವ ಅಗತ್ಯವಿರುವುದರಿಂದ ಬ್ರೊಮ್ಯಾಡ್ ಮಿಕ್ಸ್‌ಚರಿನಂಥ ಸೌಮ್ಯ ನಿದ್ರೆ ಬರಿಸುವ ಔಷಧಿಗಳನ್ನು ಉಪಯೋಗಿಸಬೇಕಾಗುವುದು.

ಪ್ಲೂರಸಿಯಲ್ಲಿ ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಸೇವಿಸಬೇಕು. ಬಿಸಿಬಿಸಿ ಚಹ, ಕಾಫಿ, ತೆಳ್ಳನ್ನ ಬಿಸಿ ಗಂಜಿ, ಖೀರು ಇಂಥ ಆಹಾರ ಒಳ್ಳೆಯದು. ಅದರಂತೆ ಮಲ ಪ್ರವೃತ್ತಿ ಸರಿಯಾಗಿರುವಂತೆ ನೋಡಿಕೊಳ್ಳಬೇಕು. ಮಲಬದ್ಧತೆ ನಿವಾರಣೆಗೆ ಎಪ್ಸಂ ಸಾಲ್ಟ್ ತುಂಬ ಉತ್ತಮವಾದದ್ದು.

ಜ್ವರ ನಿಂತು ನೋವು ಇಲ್ಲದಂತಾದ ಮೇಲೆ ಎಕ್ಸ್‌ರೇಯಿಂದ ಎದೆಯ ತಪಾಸಣೆ ಮಾಡಿಸಿಕೊಳ್ಳುವುದು ತುಂಬಾ ಅಗತ್ಯವಾಗಿದೆ. ಏಕೆಂದರೆ ಕ್ಷಯದಂಥ ವಿಕಾರಗಳು ಇಂಥ ಸಮಯದಲ್ಲಿ ಉದ್ಭವಿಸುವವಾದ್ದರಿಂದ ಮೊಳಕೆಯಲ್ಲಿ ಅವನ್ನು ಚಿವುಟಿ ಒಗೆಯಲು ಅನುಕೂಲವಾಗುವುದು. ಪ್ರಾಣಾಯಾಮದಂಥ ಶ್ವಾಸೋಚ್ಛ್ವಾಸದ ವ್ಯಾಯಾಮುಗಳನ್ನೂ ಈ ಕಾಲದಲ್ಲಿ ಮಾಡಬೇಕು. ಪುಪ್ಫುಸದ ಪೂರ್ಣ ಆಕುಂಚನ, ಪ್ರಸರಣಗಳಿಂದ ರೋಗದ ನಿರ್ಮೂಲನೆಗೆ ತುಂಬ ಸಹಾಯವಾಗುವುದು.

ಇದು ಸಾಮಾನ್ಯ ಪ್ಲೂರಸಿಯ ಮಾತಾಯಿತು. ಆದರೆ ಪ್ಲೂರಸಿ ಯಾವಾಗಲೂ ಇಷ್ಟು ಸುಲಭವಾಗಿರುವುದಿಲ್ಲ. ಪ್ಲೂರಸಿ ವಿಥ್ ಇಫ್ಯುಜನ್ ಹೆಚ್ಚು ಭೀಕರ ಪ್ರಕಾರವಾಗಿದೆ. ಇದರಲ್ಲಿ ಪ್ಲೂರಾ ಬಾತಾಗ ಅದರಲ್ಲಿ ಒಂದು ಅಂಟು ದ್ರವ ಒಸರತೊಡಗುತ್ತದೆ ಎಂದು ಮೊದಲೇ ಹೇಳಿದೆ. ಈ ರಸ ಪ್ಲೂರಲ್ ಕ್ಯಾವಿಟಿಯಲ್ಲಿ ಸಂಚಯವಾಗುತ್ತದೆ. ನೀರು ತುಂಬಿದ ರಬ್ಬರ್ ಚೀಲವನ್ನು ಅಲ್ಲಾಡಿಸಿದಾಗ ಆಗುವಂಥ ಸಪ್ಪಳ ಪ್ಲೂರಸಿ ವಿಥ್ ಇಫ್ಯುಜನ್‌ನಲ್ಲಿ ರೋಗಿಯ ಎದೆಯನ್ನು ಕೈಯಿಂದ ತಿಕ್ಕಿದಾಗ ಆಗುವುದು.

ಈ ಬಗೆಯ ಪ್ಲೂರಸಿಗೆ ಹೆಚ್ಚಾಗಿ ಪುಪ್ಫುಸದಲ್ಲಿ ಕ್ಷಯದ ಭಾವನೆಯಿರುವುದೇ ಕಾರಣವಾಗುತ್ತದೆ. ನ್ಯುಮೋನಿಯ, ಸೆಪ್ಟಿಸಿಮಿಯಾಗಳೂ ಕಾರಣವಾಗುತ್ತವೆ. ಆದರೆ ಎಲ್ಲಕ್ಕೂ ಹೆಚ್ಚಾಗಿ ಕ್ಷಯವೇ ಮುಖ್ಯಕಾರಣವಾಗಿರುವುದು. ಇದೂ ಒಂದು ಬಗೆಯ ಕ್ಷಯದ ಅವಸ್ಥೆಯೆ ಎನ್ನಬಹುದಾದ್ದರಿಂದ ಎದೆಯಲ್ಲಿ ನೀರು ತುಂಬಿದೆ ಎಂದು ಗೊತ್ತಾದಾಗ ಆರೋಗ್ಯದ ಕಡೆ ತುಂಬ ಲಕ್ಷ್ಯವಿಡಬೇಕಾಗುವುದು.

ಈ ಪ್ಲೂರಸಿ ಇನ್ನೊಂದು ವಿಧದಲ್ಲೂ ಗಂಡಾಂತರಕಾರಿಯಾಗಿದೆ. ಎದೆಯಲ್ಲಿ ಈ ದ್ರವ ಸಂಗ್ರಹವಾಗತೊಡಗಿದಾಗ ಎದೆಯಲ್ಲಿ ಮೊದಲು ಕಾಣಿಸಿಕೊಂಡಿದ್ದ ನೋವು ಕ್ರಮೇಣ ಕಡಿಮೆಯಾಗುತ್ತದೆ. ಆಗ ರೋಗ ಗುಣವಾಯಿತು

ಎಂಬ ಭ್ರಮೆಯಾಗಿ ನಿಷ್ಕಾಳಜಿಯಿಂದಿರುವಂತಾಗುವುದು. ಆದರೆ ಹೀಗಾಗಲು ನಿಜ ಕಾರಣವೆಂದರೆ ಪ್ಲೂರಾದ ಎರಡು ಥರಗಳ ನಡುವೆ ಈ ಅಂಟು ದ್ರವವಿರುವುದರಿಂದ ಅವು ಒಂದಕ್ಕೊಂದು ಘರ್ಷಿಸುವುದಿಲ್ಲ. ಅದರಿಂದಲೇ ನೋವು ಕಾಣಿಸಿಕೊಳ್ಳುವುದಿಲ್ಲ.

ಪ್ಲೂರಸಿ ವಿಥ್ ಇಫ್ಯುಜನ್‌ನಲ್ಲಿ ೧೦೧ ಡಿಗ್ರಿಯ ವರೆಗೆ ಜ್ವರವಿರುತ್ತದೆ. ಶ್ವಾಸೋಚ್ಛ್ವಾಸದ ಗತಿ ತೀವ್ರವಾಗುತ್ತದೆ. ತುಸು ಕೆಲಸ ಮಾಡಿದರೂ ಶ್ವಾಸ ಹತ್ತುತ್ತದೆ. ತುಟಿ ಮತ್ತು ಉಗುರುಗಳು ನೀಲಿಯಾಗುವವು. ಎಕ್ಸರೇಯಿಂದ ಪರೀಕ್ಷಿಸಿದಾಗ ಎದೆಯಲ್ಲಿ ನೀರು ಸ್ಪಷ್ಟವಾಗಿ ಕಾಣಿಸುವುದು. ಎದೆ ಅಲ್ಲಾಡಿಸಿದಾಗ ನೀರು ತುಳುಕಿದ ಸಪ್ಪಳವೂ ಕೇಳಿಸುವುದು.

ಈ ರೋಗದ ಉಪಚಾರವನ್ನು ಬಹಳ ಸಮಯದ ವರೆಗೆ ಮಾಡಬೇಕಾಗುವುದು. ಒಳಗಿನ ನೀರನ್ನು ಪಿಚಕಾರಿಯಿಂದ ಪುನಃ ಪುನಃ ಹೊರಗೆ ತೆಗೆಯಬೇಕಾಗುವುದು. ನೀರಿನ ಒತ್ತಡದಿಂದ ಪುಪ್ಪುಸವು ಪೂರ್ಣವಾಗಿ ಪ್ರಸರಣ ಹೊಂದಲು ಆತಂಕವಾಗುವುದರಿಂದ ಪುಪ್ಪುಸದಲ್ಲಿ ದೋಷ ಉತ್ಪನ್ನವಾಗುತ್ತದೆ. ಕೆಲವು ಸಲವಂತೂ ಪುಪ್ಪುಸದ ಮೇಲಿನ ಮತ್ತು ಎದೆಯ ಗೂಡಿನ ಮೇಲಿನ ಪ್ಲೂರಾದ ಆವರಣಗಳು ಒಂದಕ್ಕೊಂದು ಗಟ್ಟಿಯಾಗಿ ಅಂಟಿಕೊಂಡು ಎದೆಯಲ್ಲಿ ಶಾಶ್ವತವಾದ ವಿಕಾರವೊಂದು ಉಂಟಾಗಿ ಬಿಡುವುದು.

ಎದೆಯಲ್ಲಿನ ನೀರು ಪೂರ್ತಿ ಇಲ್ಲದಂತಾಗುವ ವರೆಗೂ ರೋಗಿಗೆ ಪೂರ್ಣ ವಿಶ್ರಾಂತಿಯಿರಬೇಕು. ಆತನ ಆಹಾರದಲ್ಲಿ ಉಪ್ಪು ಮತ್ತು ನೀರು ಎಷ್ಟು ಸಾಧ್ಯವೊ ಅಷ್ಟು ಕಡಿಮೆ ಇರಬೇಕು. ಆಹಾರದಲ್ಲಿ ಉಪ್ಪು ಹೆಚ್ಚಿಗಿದ್ದರೆ ಎದೆಯಲ್ಲಿ ದ್ರವ ಹೆಚ್ಚಾಗಿ ಒಸರುತ್ತದೆ. ಮೂತ್ರ ಸರಿಯಾದರೆ ದ್ರವ ಒಸರುವುದು ಕಡಿಮೆಯಾಗುವುದರಿಂದ ಮೂತ್ರ ಸರಿಯಾಗಿ ಹೋಗಲೆಂದು 'ಡಾಯ್ ಯುರೇಟಿಕ್ಸ್' ಔಷಧಿಗಳನ್ನು ಕೊಡಬೇಕಾಗುವುದು.

ಇಷ್ಟಾದ ಮೇಲೆ ತೆಗೆದು ಹಾಕಿದ ನೀರು ಮತ್ತೆ ಸಂಚಯವಾಗಬಾರದೆಂದು ಶ್ವಾಸೋಚ್ಛ್ವಾಸದ ವ್ಯಾಯಾಮ ಮಾಡುವುದು ಅತ್ಯಗತ್ಯವಾಗಿದೆ. ದೀರ್ಘಶ್ವಾಸವೆಳೆದುಕೊಂಡು ತುಸು ಹೊತ್ತು ಅದನ್ನು ತಡೆದು ಆ ಮೇಲೆ ಪೂರ್ಣವಾಗಿ ಬಿಡುವುದನ್ನು ಪ್ರತಿನಿತ್ಯ ಮೂರು ಸಲ ಐದೈದು ಮಿನಿಟುಗಳ ವರೆಗೆ ಮಾಡಬೇಕು. ನೀರಿಲ್ಲದ ನಿರೋಗಿ ಭಾಗವನ್ನು ಆಗ ಅದುಮಿ ಹಿಡಿದು ಅದು ಪ್ರಸರಣವಾಗದಂತೆ ನೋಡಿಕೊಳ್ಳಬೇಕು. ಇದರಿಂದ ರೋಗಿಭಾಗದ ಪುಪ್ಪುಸವು ಪೂರ್ಣ ಪ್ರಸರಣ ಹೊಂದಲು ಬಲು ಅನುಕೂಲವಾಗುವುದು.

ಪಥ್ಯ ಮತ್ತು ವ್ಯಾಯಾಮಗಳಂತೆ ಔಷಧಿಯೋಜನೆಯನ್ನೂ ಕಾಳಜಿಯಿಂದ ಮಾಡುವುದ ಗತ್ಯ. ಪ್ಲೂರಸಿಯ ಕಾರಣಕ್ಕನುಗುಣವಾಗಿ ಔಷಧವಿರಬೇಕು. ಕ್ಷಯದ ಕಾರಣವಿದ್ದರೆ ಕನಿಷ್ಠ ಒಂದು ವರ್ಷದ ವರೆಗಾದರೂ ತಪ್ಪದೆ ಆಗಾಗ ಎಕ್ಸ್‌ರೇ ತಪಾಸಣೆ, ರಕ್ತಪರೀಕ್ಷೆ, ಉಗುಳಿನ ಪರೀಕ್ಷೆ ಮಾಡಿಸಿಕೊಳ್ಳಬೇಕು. ಎಲ್ಲ ಸರಿಯಾಗಿದೆ ಎಂದು ಖಂಡಿತವಾದ ನಂತರವೂ ಕನಿಷ್ಠ ಆರು ತಿಂಗಳ ವರೆಗೆ ಪಥ್ಯವನ್ನೂ ನಿಯಮಿತತನವನ್ನೂ ಮುಂದುವರಿಸಬೇಕು. ಈ ಅವಧಿಯಲ್ಲಿ ಒಣ ಹವೆಯ ಸ್ಥಳಕ್ಕೆ ಹೋದಲ್ಲಿ ಗುಣವು ತ್ವರಿತವಾಗುವುದು.

ಪ್ಲೂರಸಿಯ ಸಾಮಾನ್ಯವಾದ ಈ ಎರಡು ಬಗೆಗಳಲ್ಲದೆ ಇತರ ವಿಧಗಳೂ ಇವೆ. ಎಂಪಾಯಿಮಾ ಅಥವಾ ಪ್ಲೂರಲ್ ಕ್ಯಾವಿಟಿಯಲ್ಲಿ ರಸಿಗೆಯಾಗುವುದು ಇವರಲ್ಲಿ ಮುಖ್ಯವಾದದ್ದು. ನ್ಯುಮೋನಿಯವಾದ ಮೇಲೆ ಎದೆಗೆ ಪೆಟ್ಟಾದಲ್ಲಿ, ಅನ್ನ ನಲಿಕೆಯ ವಿಕೃತಿಯಾದ ನಂತರದಲ್ಲಿ ಪ್ಲೂರಸಿಯು ಈ ವಿಕಾರವಾಗುವುದು. ಪ್ಲೂರಲ್ ಕ್ಯಾವಿಟಿಯಲ್ಲಿ ರಕ್ತಸ್ರಾವವಾಗಿ "ಹಿಮೊಥೊರಾಕ್ಸ್" ಬೇನೆಯಾದಲ್ಲಿ ಈ ಪೊಳ್ಳಿನಲ್ಲಿ ನೀರಿನಂಥ ತೆಳು ದ್ರವ ವಿಪರೀತ ಸಂಗ್ರಹವಾಗಿ "ಹಾಯಡ್ರೊಥೊರಾಕ್ಸ್" ಆಗುವುದು. ಇವೆ

ಲ್ಲವೂ ಪ್ಲೂರಸಿಯ ಮಾದರಿಗಳೇ ಹೌದು.

ಪ್ಲೂರಸಿ ಸಾಂಸರ್ಗಿಕವಲ್ಲ. ಪ್ಲೂರಸಿಯ ಕಾರಣ ಕ್ಷಯರೋಗವಾಗಿದ್ದರೆ ಕ್ಷಯರೋಗ ಇತರರಿಗೆ ತಗಲುವ ಸಂಭವವಿದ್ದರೂ ಪ್ಲೂರಸಿ ಮಾತ್ರ ತಗಲುವುದಿಲ್ಲ. ಪ್ಲೂರಸಿ ಯಾವ ವಯಸ್ಸಿನಲ್ಲೆ ಆದರೂ ಆಗಬಹುದು. ಅಶಕ್ತರು, ಒಳ್ಳೆಯ ಹವೆಯಿಲ್ಲದೆ ಇಕ್ಕಟ್ಟಿನ ಸ್ಥಳದಲ್ಲಿ ವಾಸಿಸುವರು, ಕೆಳ ದರ್ಜೆಯ ಆಹಾರ ಸೇವಿಸುವವರು, ಹೆಚ್ಚಾಗಿ ಪ್ಲೂರಸಿಗೆ ತುತ್ತಾಗುವರು. ೪೦-೪೫ ವರ್ಷಗಳ ಮೇಲಿನವರಲ್ಲಿ ಈ ರೋಗದ ಪ್ರಮಾಣ ಹೆಚ್ಚಿಗಿರುವುದಲ್ಲದೆ ಅವರಲ್ಲಿ ಕೂಡ ಹೆಚ್ಚಿನವರಿಗೆ ಕ್ಷಯರೋಗದ ಆರಂಭ ಲಕ್ಷಣವಾಗಿಯೆ ಪ್ಲೂರಸಿ ಬರುವುದುಂಟು.

ಪ್ಲೂರಸಿಯಾಗದಂತೆ ನೋಡಿಕೊಳ್ಳಲು ಈ ಮುಂದಿನ ನಿಯಮಗಳನ್ನು ಪಾಲಿಸಬೇಕು:

೧. ತಂಪು ಹವೆಯಲ್ಲಿ ಬಯಲಿನಲ್ಲಿ ಬಹಳ ಹೊತ್ತು ಮಲಗಬಾರದು. ವಿಶೇಷತಃ ಬೆವರು ಬಂದಾಗ ಬಯಲಿನಲ್ಲಿ ಕೂಡ್ರಬಾರದು. ಸ್ವಚ್ಛ ಹವೆ ಆರೋಗ್ಯದಾಯಕವಾಗಿದ್ದರೂ ಮೈಗೆ ತಂಪು ಗಾಳಿ ಸತತವಾಗಿ ಬೀಸುವುದು ಒಳ್ಳೆಯದಲ್ಲ. ಮಲಗುವ ಕೋಣೆಯಲ್ಲಿ ಹವೆ ಚೆನ್ನಾಗಿ ಓಡಾಡಬೇಕಾದರೂ ರಾತ್ರಿಯಿಡೀ ಮೈಗೆ ಗಾಳಿ ಹತ್ತದಂತೆ ಜಾಗ್ರತೆ ವಹಿಸಬೇಕು. ವಿದ್ಯುತ್ ಬೀಸಣಿಕೆಯ ಕೆಳಗೇ ನೇರವಾಗಿ ಮಲಗಬಾರದು.

೨ ಎದೆಗೆ ಬಲವಾದ ಪೆಟ್ಟು ಬಿದ್ದಾಗ ಕೂಡಲೆ ಡಾಕ್ಟರರ ಸಲಹೆ ಕೇಳಬೇಕು.


೩. ಪೌಷ್ಟಿಕ ಆಹಾರವನ್ನು ನಿಯಮಿತವಾಗಿ ಸೇವಿಸಬೇಕು. ಬಡವರಿಗೆ ಕೂಡ ಪೌಷ್ಟಿಕ ಆಹಾರ ಸೇವನೆ ಸಾಧ್ಯವಿದೆ. ಗಜ್ಜರಿ, ಟೊಮ್ಯಾಟೊ, ಮೊಳಕೆ ಬಂದ ಬೇಳೆಕಾಳುಗಳು, ಹಸಿರು ತೊಪ್ಪಲಪಲ್ಲೆ, ತತ್ತಿ, ಕಾಡ್‌ಲಿವರ್ ಆಯಿಲ್, ಉದ್ದು ಮುಂತಾದವನ್ನು ಸೇವಿಸುವುದು ಸಕಲರಿಗೂ ಸಾಧ್ಯವಿದೆ.

೪. ನ್ಯುಮೋನಿಯ ಆದ ನಂತರದಲ್ಲಿ ಒಂದೆರಡು ತಿಂಗಳು ಎದೆಯ ಮೇಲೆ ಬೆಚ್ಚನ್ನ ಬಟ್ಟೆ ತೊಟ್ಟುಕೊಳ್ಳಬೇಕು. ಶ್ವಾಸೋಚ್ಛ್ವಾಸದ ವ್ಯಾಯಾಮ ಮಾಡಬೇಕು. ರಾತ್ರಿ ಮಲಗುವಾಗ ಎದೆಗೆ ನೀಲಗಿರಿ ತಿಕ್ಕಿಕೊಳ್ಳಬೇಕು.

೫. ಎದೆಯಲ್ಲಿ ಅಕಸ್ಮಾತ್ ನೋವು ಕಾಣಿಸಿಕೊಂಡಾಗ ಅಲಕ್ಷ್ಯ ಮಾಡಬಾರದು. ಡಾಕ್ಟರರ ಸಲಹೆ ಪಡೆಯಬೇಕು.

೬. ಪ್ಲೂರಸಿ ಮತ್ತು ಕ್ಷಯರೋಗದ ಭೇದವನ್ನು ಚೆನ್ನಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಪ್ಲೂರಸಿ ಅಂದರೆ ಕ್ಷಯವಲ್ಲದಿದ್ದರೂ ಕ್ಷಯರೋಗವಾದಲ್ಲಿ ಪ್ಲೂರಸಿ ಆಗಬಹುದು.

ಪ್ಲೂರಸಿಯ ಮೇಲೆ ಈಗ ಪ್ರಭಾವಿ ಔಷಧಿಗಳು ಲಭ್ಯವಿವೆ. ಅವುಗಳ ಯೋಗ್ಯ ಉಪಯೋಗದಿಂದ ಪ್ಲೂರಸಿಯನ್ನು ಖಂಡಿತವಾಗಿ ಗುಣಪಡಿಸಬಹುದು. *



ಪುಣೆಯ ಒಂದು ಸಿನೆಮಾಗೃಹದ ನಲ್ಲಿಯಲ್ಲಿ ನೀರು ಬರುವುದು ನಿಂತು ಹೋಗಿದೆಯೆಂಬ ದೂರು ಕೇಳಿ ಮುನಸಿಪಾಲಿಟಿಯವರು ಬಂದು ಅದನ್ನು ಬಿಚ್ಚಿ ನೋಡಿದಾಗ ಅದರಲ್ಲೊಂದಡಿ ಉದ್ದದ ನಾಗರ ಹಾವಿನ ಮರಿ ಕಂಡಿತು. ಅದು ನೀರಿನ ಟಾಕಿಯಿಂದ ಬಂದದ್ದಾಗಿರದೆ ಯಾವುದೋ ಯೋಗದಿಂದ ನಲ್ಲಿಯಲ್ಲಿ ಸೇರಿಕೊಂಡ ಹಾವಿನ ತತ್ತಿಯಿಂದ ಹುಟ್ಟಿ ಅಲ್ಲೇ ಜೆಳೆದದ್ದಾಗಿತ್ತು.



ಅಮೇರಿಕದಲ್ಲಿ ಇಂಥ ಮದುವೆಗಳೂ ನಡೆಯುತ್ತವೆ

ಒಂದಿನದ ಗಂಡ ಹೆಂಡಿರು!

ಲೇಖಕ ಅಮೇರಿಕದ ಪ್ರಸಿದ ರೇಡಿಯೋ ತಾರೆಗಳಲ್ಲೊಬ್ಬ. ಅತನ ಮೊದಲ ಹೆಂಡತಿ ಆಗಲೇ ಅವನನ್ನು ಬಿಟ್ಟಿದ್ದಳು; ಕಾರಣ: ತನ್ನ ಕೆಲಸದಲ್ಲೇ ಮುಳುಗಿದ್ದ ಅವನಿಗೆ ಅವಳನ್ನು ಓಲೈಸಲು ಸಮಯವಿರಲಿಲ್ಲ! ಇದು ಅವನ ಎರಡನೇ ಮದುವೆಯ ಕಥೆ.

ಕೈತುಂಬ ಕೆಲಸವಿದ್ದರೆ ಹಲವು ಸಲ ಮನದ ದುಗುಡವನ್ನು ಮರೆಯಲು ಸಾಧ್ಯವಾಗುತ್ತದೆ. ಹಾಗೆಂದು ನಾನೂ ಕೈತುಂಬ ಕೆಲಸ ಮಾಡಿಕೊಂಡೆ. ಜೂಜನ್ನೂ ಆಡಿದೆ. ೧೯೩೪ರಲ್ಲಿ ಕೆಂಟಕಿ ಡರ್ಬಿಯಲ್ಲಿ ೪೩,೦೦೦ ಡಾಲರುಗಳನ್ನು ನಾನು ಗೆದ್ದೆ. ಆದರೆ ಯಾವುದೂ ಉಪಯೋಗವಾಗಲಿಲ್ಲ. ಬಬ್ಸ್‌ಳನ್ನು ಮರೆಯುವುದು ನನ್ನಿಂದಾಗಲಿಲ್ಲ. ನಮ್ಮ ವಿವಾಹವಿಚ್ಛೇದನವಾದ ಮೇಲೆ ಅವಳು ಮತ್ತೆ ಲಗ್ನವಾಗಿದ್ದಳು.

ನಾನು ಇನ್ನೂ ಬಿರುಸಾಗಿ ಕೆಲಸ ಮಾಡತೊಡಗಿದೆ. ಜೂಜಾಟವೂ ಅಳತೆ ಮೀರಿತು. ಹೆಂಗಸರ ಕಡೆ ನೋಡುವುದು ಹೆಚ್ಚಾಯಿತು. ಆದರೆ ಇಷ್ಟಾದರೂ ನಾನು ಒಳಗೊಳಗೇ ಅಸುಖಿಯಾಗಿದ್ದೆ. ಕುದಿಯುತ್ತಿದ್ದೆ.

ಒಂದು ರಾತ್ರಿ ಒಂದು ಮದ್ಯದಂಗಡಿಯಲ್ಲಿ ಕುಳಿತಿದ್ದೆ. ಅನೇಕರು ಬಂದು ನನ್ನನ್ನು ಮಾತಾಡಿಸಿದರು. ನಾನು ಮಿತವಾಗಿ ಕುಡಿಯುವವ. ಎಂದಾದರೊಮ್ಮೆ ಒಂದಿಷ್ಟು ಹೆಚ್ಚಿಗೆ ತೆಗೆದುಕೊಳ್ಳುತ್ತಿದ್ದೆ. ಇಂದು ಆ ಅಪವಾದದ ದಿನವಾಗಿತ್ತು.

ನನ್ನ ಮಗ್ಗಲಲ್ಲಿ ಕುಳಿತಿದ್ದವನೊಬ್ಬ ಇಷ್ಟರಲ್ಲೊಮ್ಮೆ ನನ್ನ ಹೆಸರು ಉಚ್ಚರಿಸಿದ್ದ. ನನಗೆ ಮಾತ್ರ ಅವನ ಹೆಸರು ನೆನಪಿಗೆ ಬರಲಿಲ್ಲ. ಅವನ ಭುಜಮುಟ್ಟಿ ನಾನು ಒಮ್ಮೆಲೆ ಹೇಳಿದೆ: "ಬಾಗಿಲತ್ತ ಕಣ್ಣಿಟ್ಟಿರಿ."

"ಯಾಕೆ?" ಕೇಳಿದನಾತ.

"ಯಾಕೆಂದರೆ ಇನ್ನು ಮೇಲೆ ಬಾಗಿಲಿಂದ ಒಳಬರುವ ಮೊಟ್ಟಮೊದಲನೆಯ ಹುಡುಗಿಯನ್ನು ನಾನು ಲಗ್ನವಾಗಲಿದ್ದೇನೆ."

ನಾವಿಬ್ಬರೂ ಬಾಗಿಲ ಕಡೆ ಕಣ್ಣಿಟ್ಟು ಕುಳಿತೆವು.

"ಅದು ಸರಿ. ಆದರೆ ಬರುವವಳಿಗೆ ಲಗ್ನವಾಗಿದ್ದರೆ?" ನನ್ನ ಮಿತ್ರ ಸಂದೇಹವೆತ್ತಿದ.

"ಹುಂ! ನೋಡೋಣ ಅಂಥ ಪ್ರಸಂಗ ಬಂದಾಗ" ನಾನು ಉತ್ತರವಿತ್ತೆ.

ಬಾಗಿಲು ತೆರೆಯಿತು. ಒಬ್ಬಾಕೆ ಒಳಗೆ ಬಂದಳು.

"ನಾನೊಬ್ಬ ನಟಿ" ಎಂದಳವಳು.

"ನಾನೊಬ್ಬ ರೇಡಿಯೋ ನಿವೇದಕ," ಎಂದೆ ನಾನು.

"ನಿಮ್ಮ ಧ್ವನಿ ಸುಂದರವಾಗಿದೆ."

"ನಿನ್ನನ್ನು ನಾನು ಪ್ರೀತಿಸುತ್ತೇನೆ. ನೀನು ನನ್ನನ್ನು ಪ್ರೀತಿಸುವಿಯಾ?"

"ಮತ್ತೆ? ಖಂಡಿತವಾಗಿಯೂ ಪ್ರೀತಿಸುತ್ತೇನೆ" ಎಂದಳಾಕೆ.

"ಹೊರಗೆ ಹೋಗೋಣ. ನಾನು ನಿನಗೊಂದು ಮಿಂಕ್ ಕೋಟು ಕೊಡಿಸಿ ಆ ಮೇಲೆ ನಿನ್ನನ್ನು ಗ್ರೀನ್‌ವಿಚ್‌ಗೆ ಕರೆದೊಯ್ದು ಲಗ್ನವಾಗಬೇಕೆಂದು...."

"ಹೌದೆ? ಹಾಗೇ ಮಾಡಿರಲ್ಲ?"

ಇಬ್ಬರೂ ಹೊರಟೆವು. ಅವಳಿಗೆ ಮಿಂಕ್ ಕೋಟು ಕೊಡಿಸಿದೆ. ಕೊನೆಕ್ಟಿಕಟ್‌ಗೆ ಅವಳನ್ನು ಕಾರಿನಲ್ಲಿ ಒಯ್ದು ಅಲ್ಲಿ ಅವಳನ್ನು ಲಗ್ನವಾದೆ. ಇಬ್ಬರೂ ನನ್ನ ಮನೆಗೆ ಮರಳಿದೆವು.

ಬೆಳಗಾಗಿ ಇಬ್ಬರೂ ಎಚ್ಚತ್ತಾಗ ಒಬ್ಬರನ್ನೊಬ್ಬರು ನೋಡಿದೆವು. ಇಬ್ಬರಿಗೂ ಅಸಾಧ್ಯ ತಲೆನೋವಿತ್ತು. ಒಂದೈದು ನಿಮಿಷ ಮಾತಾಡಿದ ಮೇಲೆ ನಾವು ತಪ್ಪು ಮಾಡಿದೆವು ಎಂಬ ನಿರ್ಧಾರಕ್ಕೆ ಬಂದೆವು. ಕೂಡಲೆ ವಿವಾಹವಿಚ್ಛೇದನ ಮಾಡಿಕೊಳ್ಳಲು ನಿಶ್ಚಯಿಸಿದೆವು.

"ಆ ಮಿಂಕ್ ಕೋಟನ್ನು ಈ ಘಟನೆಯ ನೆನಪೆಂದು ಇಟ್ಟುಕೊ" ಎಂದೆ ಅವಳಿಗೆ. ★

ರಾಯರು (ಬಡಿಸಿಟ್ಟ ತಟೆಯನ್ನು ನೋಡಿ)- ಏನೇ ಇದು? ಕೇಸರಿ ವಡೆ, ಖೀರು, ಪಾಯಸ, ಎಲ್ಲ ಇದೆಯಲ್ಲ? ನೀನು ಹುಟ್ಟಿದ ದಿನವಾ? ಅಲ್ಲ ನಾನೊ! ಒಂದೂ ಹೇಳಲೇ ಇಲ್ಲವಲ್ಲ!

ಹೆಂಡತಿ- ಇಲ್ಲಾರೀ ಯಾರದೂ ಹುಟ್ಟಿದ ಹಬ್ಬವಲ್ಲ! ನಿನ್ನೆ ನೀವು ತಂದ ಪತ್ರಿಕೆಯಲ್ಲಿ ವಾರ ಭವಿಷ್ಯ ನೋಡಿದೆ. ನಿಮ್ಮ ರಾಶಿಯಲ್ಲಿ ೭ ನೇ ತಾರೀಕು "ಮೃಷ್ಟಾನ್ನ ಭೋಜನ" ಅಂತ ಇತ್ತು. ಅದಕ್ಕೋಸ್ಕರ ಮಾಡಿದೆ ಅಷ್ಟೆ. ಭವಿಷ್ಯ ಸುಳ್ಳಾಗಬಾರದಲ್ಲಾ ಅಂತ.

—ಪ್ರಭಾ ಸದಾಶಿವ ರಾವ್

ಯಾತ್ರಿಕನೊಬ್ಬನು ಪ್ರಾಚೀನ ಭಗ್ನಾವಶೇಷ ಅರಮನೆಯೊಂದರಲ್ಲಿ ರಾತ್ರಿ ಕಳೆಯುತ್ತಿದ್ದ. ಯಾಕೋ ಅವ್ಯಕ್ತ ಭಯದಿಂದ ಅವನಿಗೆ ನಿದ್ದೆಯೆ ಹತ್ತಲಿಲ್ಲ. ಎದ್ದು ಕುಳಿತು ಮುಂದೆ ನಿಂತಿದ್ದ ಹಣ್ಣುಮುಖದ ಕಾವಲುಗಾರನನ್ನು ಕೇಳಿದ:

"ಇಲ್ಲಿ ಎಂದಾದರೂ ಏನಾದರೂ ಅಸಾಧಾರಣ ಘಟನೆ ಆಗಿತ್ತೇ?"

"ನಾಲ್ವತ್ತು ವರ್ಷಗಳಿಂದ ಇಲ್ಲ."

"ನಾಲ್ವತ್ತು ವರ್ಷ ಹಿಂದೆ ಏನಾಗಿತ್ತು?"

ಕತ್ತಲೆಯಲ್ಲಿ ಕಾವಲುಗಾರನ ಕಣ್ಣುಗಳು ತಳತಳಿಸತೊಡಗಿದವು. ಹೇಳಿದ: "ನಾಲ್ವತ್ತು ವರ್ಷ ಹಿಂದ ಈ ಕೋಣೆಯಲ್ಲಿ ಮಲಗಿದ್ದವನೊಬ್ಬ ಬೆಳಿಗ್ಗೆ ಸಜೀವವಾಗಿ ಎದ್ದು ಹೋದ."

—"ಜ್ಞಾನೋದಯ"

ಸಿನೆಮಾ ಮನೋವಿಜ್ಞಾನ

ನೀವು ಎಂಥ ಚಿತ್ರಗಳನ್ನು ಮೆಚ್ಚುತ್ತೀರಿ? ಅದು ನಿಮ್ಮ ಸ್ವಭಾವದ ಗುಟ್ಟು ಹೇಳುತ್ತದೆ

ಈ ದಿನಗಳಲ್ಲಿ ಆಗಾಗ ಸಿನೆಮಾ ನೋಡದಿರುವವರು ತೀರ ವಿರಳ. ಬೇಕಾದವರನ್ನು ಕೇಳಿದರೂ "ಏನೋ ಮನರಂಜನೆಗಾಗಿ ಸಿನೆಮಾ ನೋಡುತ್ತೇವೆ" ಎಂಬ ಉತ್ತರ ಸಿಗುತ್ತದೆ. ಅದು ಸರಿ. ಆದರೆ ಎಲ್ಲರಿಗೂ ಎಲ್ಲ ಚಿತ್ರಗಳು ಮನರಂಜನೆ ಒದಗಿಸುವುದಿಲ್ಲ. ಕೆಲವರಿಗೆ ಸಂಗೀತಪ್ರಧಾನ ಚಿತ್ರಗಳು ಹಿಡಿಸಿದರೆ, ಹಲವರಿಗೆ ಮಾರಾಮಾರಿ ಚಿತ್ರಗಳು ಬೇಕು; ಇನ್ನು ಕೆಲವರಿಗೆ ಧಾರ್ಮಿಕ ಚಿತ್ರಪಟಗಳು ಮೆಚ್ಚಿಕೆಯಾದರೆ ಮತ್ತಿತರಿಗೆ ಐತಿಹಾಸಿಕ ಚಿತ್ರಗಳ ಆಕರ್ಷಣೆಯಿರುತ್ತದೆ. ಯಾಕೆ ಹೀಗೆ? ಅವರವರ ಸ್ವಭಾವ ಧರ್ಮಕ್ಕನುಸರಿಸಿ ಈ ಅಭಿರುಚಿ ಇರುತ್ತದೆ ಎಂಬ ಮಾತನ್ನೇನಾದರೂ ಬಲ್ಲಿರಾ?

ನಮ್ಮ ಮೂಲ ಸ್ವಭಾವ ಪರಿಚಯವನ್ನು ನಾವು ನೋಡುವ ಸಿನೇಮಾಗಳ ಮಾದರಿಯು ಮಾಡಿ ಕೊಡುತ್ತದೆ ಎಂದು ಮಾನಸಶಾಸ್ತ್ರಜ್ಞರು ಬಹು ಕಾಲದಿಂದಲೂ ಅಭಿಪ್ರಾಯಪಡುತ್ತಿದ್ದಾರೆ. ಪೋರ್ಟ್‌ಲಂಡ್ ವಿಶ್ವವಿದ್ಯಾಲಯದ ಮಾನಸಶಾಸ್ತ್ರಜ್ಞ ಡಾ ಎಡ್ವರ್ಡ್ ಎಂ. ಸ್ಕಾಟರು ಅನೇಕ ವಿದ್ಯಾರ್ಥಿಗಳ ಮೇಲೆ ಪ್ರಯೋಗಮಾಡಿ ಅವರಿಂದ ಪ್ರಶ್ನೆಗಳಿಗೆ ಉತ್ತರ ಪಡೆದು ಮಾನಸಶಾಸ್ತ್ರಜ್ಞರ ಅಭಿಪ್ರಾಯ ಬಹುಮಟ್ಟಿಗೆ ನಿಜವೆಂದು ಸಿದ್ಧಮಾಡಿಕೊಟ್ಟಿದ್ದಾರೆ.

ಈ ರೀತಿಯಲ್ಲಿ ಒಬ್ಬನ ಸ್ವಭಾವಧರ್ಮವನ್ನು ತಿಳಿಯುವುದಾದರೆ ಮೊದಲು ಸಾಮಾನ್ಯವಾಗಿ ಚಿತ್ರಪಟಗಳಲ್ಲಿ ಎಷ್ಟು ಬಗೆಗಳಿರುತ್ತವೆ, ಅವುಗಳಲ್ಲಿ ಅವನು ಯಾವಾವುದನ್ನು ಮೆಚ್ಚುತ್ತಾನೆ, ಯಾವಾವುದನ್ನು ಇಲ್ಲ ಎಂದು ನೋಡಬೇಕಾಗುತ್ತದೆ. ಚಿತ್ರಪಟಗಳಲ್ಲಿ ಸಾಮಾನ್ಯವಾಗಿ ಈ ಮುಂದಿನ ಒಂಬತು ಪ್ರಕಾರಗಳನ್ನು ಹೇಳಬಹುದು.

೧) ಸಂಗೀತಪ್ರಧಾನ
೨) ಐತಿಹಾಸಿಕ
೩) ಮಾರಾಮಾರಿ, ಅಪರಾಧ
೪) ಯಾವನಾದರೂ ಕ್ರೀಡಾಪಟು ನಾಯಕನಾಗಿರುವಂಥವು
೫) ಧಾರ್ಮಿಕ
೬) ಕೇವಲ ಪ್ರಣಯ ಕಥೆಗಳು
೭) ಹಾಸ್ಯಮಯ ಚಿತ್ರ
೮) ವೈಜ್ಞಾನಿಕ ಮಹತ್ವವುಳ್ಳದ್ದು
೯) ಸಾಹಸೀ ವ್ಯಕ್ತಿಗಳ ಕಥೆ

ಈ ಬಗೆಗಳಲ್ಲಿ ನಿಮಗೆ ಯಾವವು ಹೆಚ್ಚು ಸೇರುತ್ತವೆ, ಯಾವವು ಇಲ್ಲ ಎಂದು ಗುರುತು ಹಾಕಿಕೊಳ್ಳಿ. ಆ ಮೇಲೆ ಈ ಮುಂದೆ ಕೊಟ್ಟಿರುವ ವಿವರಣೆಯ ಮೇಲಿಂದ ನೀವೆಂಥ ವ್ಯಕ್ತಿಗಳು ಎಂಬುದನ್ನು ಗುರುತಿಸಿಕೊಳ್ಳಬಹುದು. ಅಥವಾ ನಿಮ್ಮ ಮಿತ್ರ, ಪರಿಚಿತರನ್ನು ಸೂಕ್ಷ್ಮವಾಗಿ ನೋಡಿ ಅವರ ನೈಜ ಸ್ವಭಾವವನ್ನರಿಯಬಹುದು.

ಸಂಗೀತ ಪ್ರಧಾನವಾದ ಚಿತ್ರಗಳ

ಯಾರಿಗೆ ಮೆಚ್ಚಿಕೆಯಾಗುತ್ತವೆಯೊ ಅಂಥವರು ನಿನ್ನೆ ನಾಳೆಗಳ ಯೋಚನೆಯನ್ನು ಅಷ್ಟಾಗಿ ಮಾಡದೆ ಕೇವಲ "ಇಂದಿ"ಗಾಗಿಯೇ ಬದುಕು ತ್ತಾರೆ. ಇವರು ಆ ಆ ಕ್ಷಣಕ್ಕೆ ತೋಚಿದಂತೆ ಮಾಡುತ್ತಾರೆ ಭಾವನಾಪ್ರದರಾಗಿರುತ್ತಾರೆ. ಅದೇ ಅದೇ ಎಂದರೆ ಇವರಿಗೆ ಬೇಸರ. ನಾವೀನ್ಯ ವನ್ನು ಹುಡುಕುತ್ತಲೇ ಇರುತ್ತಾರೆ. ಇವರು ಸದಾ ನಗುವವರು, ಜನಪ್ರಿಯ ಸ್ವಭಾವದವರು ಮತ್ತು ಕುಶಲ ಸಂಭಾಷಣಕಾರರಾಗಿರುತ್ತಾರೆ. ಇವರು ಹೊಣೆಗಾರಿಕೆಯ ಮಹತ್ವವನ್ನು ಅಷ್ಟಾಗಿ ಗಮ ನಿಸುವುದಿಲ್ಲ ಸಂಪ್ರದಾಯ— ರೂಢಿಗಳನ್ನು ಅಷ್ಟಾಗಿ ಪಾಲಿಸುವವರಲ್ಲ ಪರಿಣಾಮವನ್ನು ಯೋಚಿಸದೆಯೆ ಅವಸರದಿಂದ ಕಾರ್ಯ ಮಾಡಿ ಬಿಡುತ್ತಾರೆ. ಈ ಜನರ ಬುದ್ಧಿಶಕ್ತಿ ಚೆನ್ನಾಗಿ ದ್ದರೂ ಜೀವನದ ಗಂಭೀರ ಚಿಂತನೆಗಿಳಿಯದೆ ಲಘುವಿಚಾರಗಳಲ್ಲಿಯೆ ಸಂತುಷ್ಟರಾಗಿರುತ್ತಾರೆ.

ಐತಿಹಾಸಿಕ ಅಥವಾ ವೈಜ್ಞಾನಿಕ ಚಿತ್ರ ಗಳನ್ನು ಮೆಚ್ಚಿ ಕ್ರೀಡಾಪಟುಗಳಿಗೆ ಸಂಬಂಧಿಸಿದ ವುಗಳನ್ನು ಬಯಸದವರು ವಿಚಾರವಂತರೂ ಕಲ್ಪನಾಶಕ್ತಿಯುಳ್ಳವರೂ ಸಾರಾಸಾರ ಬುದ್ಧಿ ಯುಳ್ಳವರೂ ಆಗಿರುತ್ತಾರೆ ಲೌಕಿಕ ದೃಷ್ಟಿ ಗಿಂತಲೂ ಇವರಲ್ಲಿ ಸಾಂಸ್ಕೃತಿಕ ಮತ್ತು ವೈಚಾ ರಿಕ ದೃಷ್ಟಿ ಹೆಚ್ಚಾಗಿರುತ್ತದೆ. ಕೃತಿಗಿಂತಲೂ ಇವರಲ್ಲಿ ವಿಚಾರವೇ ವಿಶೇಷವಾಗಿರುತ್ತದೆ. ಇವರು ತಮ್ಮ ಮಿತ್ರವರ್ಗವನ್ನು ಹುಡುಕುವಾಗ ಹೆಚ್ಚು ವಿಚಾರ ಮಾಡುತ್ತಾರೆ ಪ್ರತಾಪ ವೃತ್ತಿ ಗಿಂತಲೂ ಇವರಲ್ಲಿ ಸ್ನೇಹವೃತ್ತಿ ಅಧಿಕವಾಗಿರು ತ್ತದೆ. ತನ್ನತನದ ಅರಿವು ಇವರಲ್ಲಿ ಹೆಚ್ಚಾಗಿದ್ದು ಆತ್ಮ ಪರೀಕ್ಷಣೆ ಮತ್ತು ಸ್ವಂತದ ಗುಣಾವಗುಣ ಗಳ ಪರಿಶೀಲನೆಯಲ್ಲಿ ಮಗ್ನರಾಗಿರುತ್ತಾರೆ.

ಧಾರ್ಮಿಕ ಚಿತ್ರಗಳನ್ನು ಮೆಚ್ಚುವವರು ದೃಢ ಚಿತ್ತರೂ ಜಿಗುಟು ಸ್ವಭಾವದವರೂ ಶಬ್ದಗಳಲ್ಲಿ ತಮ್ಮ ವಿಚಾರಗಳನ್ನು ಮಂಡಿಸುವುದರಲ್ಲಿ ಚತುರರೂ ಆಗಿರುತ್ತಾರೆ. ಇವರಿಗೆ ತರ್ಕ ವಾದಗಳಲ್ಲಿ ಪ್ರೀತಿಯಿದ್ದು ಎದುರಾಳಿಗಳ ಮನ ವೊಲಿಸುವುದರಲ್ಲಿ ನಿಪುಣರಿರುತ್ತಾರೆ. ಗಂಭೀರ ಪ್ರಕೃತಿಯುಳ್ಳ ಇವರು ಉನ್ನತ ಧ್ಯೇಯಗಳನ್ನು ಹೊಂದಿ ಪುನಃ ಪುನಃ ಅಪಯಶಸ್ಸು ಬಂದರೂ ಧ್ಯೇಯ ಸಾಧನೆಯ ಪ್ರಯತ್ನಗಳನ್ನು ಮುಂದು ವರಿಸುವವರಾಗಿರುತ್ತಾರೆ. ಸುಲಭದಲ್ಲಿ ಮನಸು ನೋಯಿಸಿಕೊಳ್ಳುವವರಾದ್ದರಿಂದ ಇವರಿಗೆ ಟೀಕೆ ಸಹನವಾಗುವುದಿಲ್ಲ. ಜನರು ಇವರನ್ನು 'ಪಾತ್ರ' ಮಾಡಿಕೊಳ್ಳುವ ಸಂದರ್ಭಗಳೂ ಇರುತ್ತವೆ.

ಕ್ರೀಡಾಪಟುಗಳಿಗೆ ಸಂಬಂಧಿಸಿದ ಚಿತ್ರಗ ಳನ್ನು ಸೇರದೆ ಮಾರಾಮಾರಿ ಮತ್ತು ಅಪರಾಧ ಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಬಯಸುವ ವವರು ಯಾವಾಗಲೂ ಯಾವ ವಿಷಯದಲ್ಲೂ ಅತಿಯಾಗಿ ಉದ್ರಿಕ್ತರಾಗುವುದಿಲ್ಲ ತಮ್ಮ ಪಾಡು ತಮಗೆ ನಿಮ್ಮ ಪಾಡು ನಿಮಗೆ ಎನ್ನುವ ಜಾತಿ ಇದು. ಹೊಗಳಿಕೆ ತೆಗಳಿಕೆ ಎರಡೂ ಅಷ್ಟೇ ಇವ ರಿಗೆ. ಯಾವುದರಿಂದಲೂ ಇವರು ಪ್ರಭಾವಿತ ರಾಗುವುದಿಲ್ಲ. ಯಾತರ ಬಗ್ಗೆಯೂ ವಿಶೇಷ ಚಿಂತೆ ಹಚ್ಚಿಕೊಳ್ಳದ ಇವರು ಇತರರ ಮೇಲೆ ತಮ್ಮ ಪ್ರಭಾವ ಬೀರಲು ಯತ್ನಿಸುವುದೂ ಇಲ್ಲ. ತಮ್ಮದು ಮುಗಿಯಿತು ಎಂಬ ಭಾವ ಇವರ ಲ್ಲೆಂದೂ ಮೂಡುವುದಿಲ್ಲವಾದರೂ ಇವರಲ್ಲಿ "ಇನ್ನು ಪರಿವೆಯಿಲ್ಲ" ಎಂಬ ಭಾವನೆಯೂ ಮೂಡುವುದಿಲ್ಲ ಇತರರನ್ನು ಕಂಗೆಡಿಸಬಹುದಾ ದಂಥ ಪರಿಸ್ಥಿತಿ ಇವರನ್ನು ಕಂಗೆಡಿಸುವುದಿಲ್ಲ. ದೊಡ್ಡ ಗುರಿಯನ್ನು ಇಟ್ಟುಕೊಳ್ಳದ್ದರಿಂದ ಈ ಜನ ಅತಿ ಕಷ್ಟಪಟ್ಟು ದುಡಿಯುವವರೂ ಅಲ್ಲ. ಜೀವನವನ್ನು ಹಗುರಾಗಿ ಕಾಣಬೇಕೆನ್ನುವವರು ಇವರು.

ಅಪರಾಧ ಮತ್ತು ಮಾರಾಮಾರಿಗೆ ಸಂಬಂಧ ಪಟ್ಟ ಚಿತ್ರಗಳನ್ನು ಮೆಚ್ಚಿ ಧಾರ್ಮಿಕ ಮತ್ತು ಐತಿ ಹಾಸಿಕ ಚಿತ್ರಗಳನ್ನು ಸೇರದವರು ಸಂತೋಷ ವೃತ್ತಿಯವರು, ಆಕ್ರಮಣಶೀಲರು, ಚತುರರು ಮತ್ತು ನಾಲ್ಕು ಜನರಲ್ಲಿ ಬೆರೆತು ಅಡ್ಡಾಡುವವ ರಾಗಿರುತ್ತಾರೆ. ಆದರೆ ಇವರ ಉದ್ದೇಶಕ್ಕೆ ಆತಂಕವಾದರೆ ಇವರ ಸಂತಸವೃತ್ತಿ ಕೋಪದಲ್ಲಿ

ಪರಿವರ್ತಿತವಾಗುವ ಸಂಭವವಿದೆ. ಇವರು ಕೆಲ ಸಲ ತಾವೇ ಯಜಮಾನರು ಎಂಬಂತೆ ನಡೆಯುತ್ತಾರೆ. ಇವರು ಉತ್ಸಾಹಿಗಳೂ ಆತ್ಮವಿಶ್ವಾಸವುಳ್ಳವರೂ ಆಗಿರುತ್ತಾರೆ. ಯಾವಾಗಲೂ ಏನನ್ನಾದರೂ ಮಾಡುವುದರಲ್ಲಿ ಆನಂದಪಟ್ಟುಕೊಳ್ಳುತ್ತಾರೆ. ಭವಿತವ್ಯದ ಹಂಚಿಕೆ ಹಾಕುವುದರಲ್ಲಿ ಮುಂದಾಗಿ ಕೆಲ ಸಲ ಒಮ್ಮೆಲೆ ಹಲವಾರು ಕಾರ್ಯಗಳಲ್ಲಿ ಕೈಹಾಕಿ ತೊಂದರೆಗೂ ಸಿಲುಕುತ್ತಾರೆ. ಆಗಾಗ ಇವರ ಲಹರಿ ಬದಲಾಗುವುದಾದರೂ ಇವರ ಆಶಾವಾದಿತ್ವ ಇವರನ್ನು ನಿರುತ್ಸಾಹಿಗಳನ್ನಾಗಿ ಮಾಡಗೊಡುವುದಿಲ್ಲ. ಇವರು ಹಣವನ್ನು ಧಾರಾಳವಾಗಿ ವೆಚ್ಚಮಾಡುತ್ತಾರೆ. ತಮಗೆ ಕಷ್ಟ ಬಂದಿತು ಎಂಬ ಮಾತಿನಲ್ಲಿ ಇವರಿಗೆ ನಂಬಿಕೆಯಾಗುವುದೇ ಕಷ್ಟ. ಹಾಗಾದಲ್ಲಿ ಈ ಜನ ಅಂಥ ದಿನಗಳಿಗಾಗಿ ಎಂದು ಹಣ ಕೂಡಿಟ್ಟುಕೊಂಡಾರು. *

ಆಹಾ ! ಆ ದಿನಗಳೇ ದಿನಗಳು !

ಬಂಗಾಲದಲ್ಲಿ ಶಾಯಿಸ್ತೆಖಾನನು ನವಾಬನಾಗಿದ್ದಾಗ ಅಕ್ಕಿಯ ಬೆಲೆ ಇಳಿದು ರೂಪಾಯಿಗೆ ೮ ಮಣದಷ್ಟಾಗಿ ಹೋಯಿತು. ಆಗ ನವಾಬನು ಡಾಕಾ ಕೋಟೆಯ ಒಂದು ಬಾಗಿಲಿಂದ ಹೊರಬಿದ್ದು ಆ ಬಾಗಿಲು ಮುಚ್ಚಿಸಿಬಿಟ್ಟನು. "ಇನ್ನೊಮ್ಮೆ ಅಕ್ಕಿಯ ಬೆಲೆ ರೂಪಾಯಿಗೆ ೮ ಮಣಕ್ಕೆ ಬಂದಾಗ ಈ ಬಾಗಿಲು ತೆರೆಯಿಸಲಾಗುವುದು" ಎಂದಾತ ಸಾರಿದನಂತೆ. ಇದು ಇಸವಿ ೧೬೬೪ ರ ಕಥೆ.

ಅಕ್ಕಿ ಇಷ್ಟು ಅಗ್ಗವೇ ಎಂದು ಬಾಯಿ ತೆರೆಯುವ ಅಗತ್ಯವಿಲ್ಲ. ೧೬೩೨ ರಲ್ಲಿ ಬಂಗಾಲಕ್ಕೆ ಬಂದ ಯಾತ್ರಿಕನಾದ ಸೆಬಾಸ್ಟಿಯನ್ ಮಾನ್ರಿಜಿ ಅಕ್ಕಿ ಅಲ್ಲಿ ರೂಪಾಯಿಗೆ ೮ ಮಣ ಮಾರುತ್ತಿತ್ತೆಂದು ಬರೆದಿಟ್ಟಿದ್ದಾನೆ. ಡಾಕಾ ಪಟ್ಟಣವು ಬಂಗಾಲದ "ಭತ್ತದ ಕಣಜ"ದ ನಡುವೆ ಇದ್ದುದರಿಂದ ಅಲ್ಲಿ ಅಕ್ಕಿ ಇನ್ನೂ ಅಗ್ಗವಿತ್ತು.

೧೭೮೯ ರಷ್ಟು ಹೊತ್ತಿಗೆ ದರಗಳು ಬಹಳ ಏರಿಬಿಟ್ಟಿದ್ದವು. ಆದರೂ ರೂಪಾಯಿಗೆ ೮ ಮಣ ಭತ್ತ ಸಿಗುತ್ತಿತ್ತು. ಮರುವರ್ಷವೇ ಅದು ಇನ್ನೂ ತುಟ್ಟಿಯಾಗಿ ರೂಪಾಯಿಗೆ ೨ ಮಣವಾಯಿತು: ಎಂದು ಕೋಲ್‌ಬ್ರುಕ್ ಬರೆದಿದ್ದಾನೆ.

ಆದರೆ ಎಂಟು ಶತಮಾನಗಳ ಹಿಂದೆ ಹಿಂದೂ ಯುಗದಲ್ಲಿ ಅಕ್ಕಿಯ ದರ ಹೇಗಿತ್ತು? ನಿಖರವಾದ ಯಾವ ಉಲ್ಲೇಖಗಳೂ ಸಿಗುವುದಿಲ್ಲ. ಆದರೂ ೧೧೦೦-೧೨೦೦ ನಡುವೆ ಆಳಿದ ಸೇನ ವಂಶದ ರಾಜರ ಕಾಲದಲ್ಲಿ ಪ್ರತಿ "ದ್ರೋಣ" ಭೂಮಿಗೆ ೧೫ "ಪುರಾಣ" ಭೂಕಂದಾಯವಿತ್ತೆಂದು ತಿಳಿಯುತ್ತದೆ. ಇದರ ಮೇಲಿಂದ ಲೆಕ್ಕಹಾಕಿ ಯತೀಂದ್ರ ಮೋಹನ ದತ್ತರು ರೂಪಾಯಿಗೆ ಆಗ ೯.೭ ಮಣ ಅಕ್ಕಿ ಸಿಗುತ್ತಿರಬೇಕೆಂದು ಅಂದಾಜು ಮಾಡಿದ್ದಾರೆ.

"ಚಂದ್ರನ ಹಾಗೆ ಸ್ತ್ರೀಯರು ಎರವಲು ಬೆಳಕಿನಲ್ಲಿ ಶೋಭಿಸುತ್ತಾರೆ"

—ಜರ್ಮನ್ ಗಾದೆ

"ಸ್ತ್ರೀಯ ಮುಖ್ಯ ಆಯುಧ ನಾಲಗೆ; ಅದನ್ನು ಅವರೆಂದಿಗೂ ತುಕ್ಕುಹಿಡಿಯಗೊಡುವುದಿಲ್ಲ."

—ಫ್ರೆಂಚ್ ಗಾದೆ

ಸಂಗ್ರಹ: ಸಾವಿತ್ರೀತನಯ



ಷರತ್ತುಗಳೊಡನೆ ಕಸರತ್ತು

ಬಿ. ವಿ. ಶೆಣೈ

ಕುಪ್ಪುಸ್ವಾಮಿ ಹಾಡಿದ. ನಾಲ್ಕು ರಸ್ತೆ ಕೂಡುವಲ್ಲಿ ಕುಪ್ಪುಸ್ವಾಮಿ ಹಾಡಿದ! ಮೈತುಂಬ ಎಣ್ಣೆ, ಮರ್ಯಾದೆ ಮುಚ್ಚುವಷ್ಟು ವಸ್ತ್ರ, ಹೆಗಲ ಮೇಲೆ ತೂಗುತ್ತಿತ್ತೊಂದು ಮೃದಂಗ; ಗವಿಯಂತೆ ತೆರೆದ ಕೆಂಬಾಯಿಯಿಂದ ಸುಮಧುರ ಕರ್ನಾಟಕ ಸಂಗೀತ ಹೊರಬಿದ್ದಿತ್ತು! ಮಕ್ಕಳಿಂದ ಮುದುಕರು ಅವನನ್ನು ಸುತ್ತುಗಟ್ಟಿದ್ದರು ಅವರಿಗೆ ಅದೇ ಮೋಜು!

"ಅಯ್ಯೋ, ಪಾಪ! ಮನುಷ್ಯನ ಅವಸ್ಥೆಯೇ! ಮದುವೆಯಾಗಿ ಒಂದೆರಡು ವರ್ಷ ಇನ್ನೂ ಕಳೆದಿಲ್ಲ. ಚೊಚ್ಚಲ ಮಗು ಮತ್ತೆ..— ಹೀಗಿರುವಾಗ ಈ ದುರ್ಗತಿಯೇ ... ಇವನ ಹೆಂಡತಿ ಮಕ್ಕಳಿಗೆ ಯಾರು ಗತಿ ದೇವರೇ! ನಿನ್ನೆ ಆರೋಗ್ಯವಿದ್ದ ಗಂಡಸು ಇಂದು ಈ ರೀತಿ ಬತ್ತಲೆ ತಿರುಗುತ್ತಿದ್ದರೆ.."

"ಕುಪ್ಪೂ, ಕುಪ್ಪೂ" ನಾನು ಸ್ವರ ಎತ್ತಿ ಕರೆದೆ. ಕುಪ್ಪು ನನ್ನೆಡೆಗೆ ಒಮ್ಮೆ ದೃಷ್ಟಿ ಹಾಯಿಸಿ, ಮತ್ತೆ ನೋಡಿಯೂ ನೋಡದವನಂತೆ ನಟಿಸಿದ. ಮೃದಂಗವನ್ನು ಮತ್ತೂ ಜೋರಾಗಿ ಬಾರಿಸಿದ!

ಹತ್ತು ನಿಮಿಷಗಳ ನಂತರ ಕುಪ್ಪುಸ್ವಾಮಿ ಎದ್ದು ನಿಂತ. ಮೃದಂಗ ಬಾರಿಸುತ್ತ ಬ್ರಾಹ್ಮಣವಾಡಾ ರಸ್ತೆಯಲ್ಲಿರುವ ತನ್ನ ಮನೆಯೆಡೆಗೆ ನಡೆದ. ಜನರ ಗುಂಪಿನೊಡನೆ ನಾನೂ ಹಿಂಬಾಲಿಸಿ ಅವನ ಮನೆ ಸೇರಿದೆ: ಅಲ್ಲಿ ಶ್ರೀಮತಿ ಕುಪ್ಪುಸ್ವಾಮಿಯವರು ನಗುತ್ತಿದ್ದುದನ್ನು ಕಂಡು ನಾನು ದಂಗುಬಡಿದವನಂತೆ ನಿಂತುಬಿಟ್ಟೆ.

ಶ್ರೀಮತಿ ಕುಪ್ಪುಸ್ವಾಮಿಯವರು ನುಡಿದರು:

"ವೆಂಕೋಜಿಯವರೇ, ಇದೊಂದು ಕೇವಲ ಷರತ್ತು. ಗಾಬರಿಗೊಳ್ಳದಿರಿ. ನನ್ನ ತಮ್ಮ ಈವತ್ತು ಬಂದಾಗ ಯಜಮಾನರು ತೈಲಾಭ್ಯಂಗ ಸ್ನಾನಮಾಡಲೆಂದು ಮೈಗೆ ಎಣ್ಣೆ ಹಚ್ಚಿ ಕುಳಿತಿದ್ದರು. ಮಾತಿಗೆ ಮಾತಾಗಿ ನನ್ನ ತಮ್ಮ ಅವರಿಗೆ, ಇದ್ದಕ್ಕಿದ್ದಂತೆ ಮೃದಂಗಬಾರಿಸುತ್ತ ಕಿಂಗ್ ಸರ್ಕಲ್ ಗಾರ್ಡನಿನ ಬಳಿ ಹೋಗಿ ಅರ್ಧ ಗಂಟೆ ಹಾಡಿ ಮರಳಿದಲ್ಲಿ ತನ್ನ ೩೦೦ ರೂಪಾಯಿಯ ಹೊಸ ಕೈಗಡಿಯಾರವನ್ನು ಬಹುಮಾನವಾಗಿ ಕೊಡುವೆನೆಂದು ಹೇಳಿ ಷರತ್ತು ಹೂಡಿದ. ಮುಂಬಯಿಯಲ್ಲಿ ಯಾರ ಪರಿಚಯ ಯಾರಿಗುಂಟು? ಪಕ್ಕದ ಮನೆಯಲ್ಲಿ ಯಾರಾದರೂ ಸ್ವರ್ಗಸ್ಥರಾದರೆ ಇಲ್ಲಿ ಗೊತ್ತಾಗುವುದಿಲ್ಲ. ಹೀಗಿರುವಾಗ ನಮ್ಮ ಯಜಮಾನರು ಷರತ್ತಿಗೆ ಒಪ್ಪಿ, ಆ ರೀತಿ ಮಾಡಿದುದರಲ್ಲಿ ಏನು ಮಹಾ! ಅಂತೂ ನಮ್ಮ ಯಜಮಾನರೇ ಗೆದ್ದರು" ಎಂದು ಹೇಳುತ್ತಿದ್ದಂತೆಯೇ ಕುಪ್ಪುಸ್ವಾಮಿಯು ಎಡಕೈಯಲ್ಲಿ

ಅವರ ಭಾವನ ಹೊಸ ಕೈಗಡಿಯಾರ ಶೋಭಿಸುತ್ತಿತ್ತು!

ಜೀವನದಲ್ಲಿ ಇಂತಹ ಎಷ್ಟೋ ಕುಪ್ಪುಸ್ವಾಮಿಗಳನ್ನು ಭೆಟ್ಟಿಯಾಗುತ್ತೇವೆ. ಆದರೆ ಎಲ್ಲರೂ ಯಶಸ್ವಿಯಾಗುತ್ತಾರೆಂದು ಹೇಳಬರುವುದಿಲ್ಲ. ಇಂತಹ ಕುಪ್ಪುಸ್ವಾಮಿಗಳ ಯಾದಿಯನ್ನು ಈ ಲೇಖನದಲ್ಲಿ ನಿಮ್ಮ ಮುಂದಿಟ್ಟಿದ್ದೇನೆ. ಹೆಸರುಗಳನ್ನು ಬಿಟ್ಟಲ್ಲಿ ಇವು ಅಕ್ಷರಶಃ ಸತ್ಯ.

ಹಿಂದೊಮ್ಮೆ ಮುಂಬೈಯ ಎಸ್. ಎಸ್. ಸಿ ಪರೀಕ್ಷೆಯಲ್ಲಿ ನಾಪಾಸಾದಲ್ಲಿ ಕಟ್ಟಡದ ಮೇಲಿಂದ ಕೆಳಗೆ ಹಾರಿ, ಪ್ರಾಣತ್ಯಾಗ ಮಾಡುವೆನೆಂದು ಓರ್ವನು ಪಣತೊಟ್ಟನು. ದುರ್ದೈವವಶಾತ್ ಕೇವಲ ಕೆಲವು ಅಂಕಿಗಳಿಗೋಸ್ಕರ ಆತನು ನಾಪಾಸಾದನು. ನಾಪಾಸಾದ ದುಃಖ, ಪಣತೊಟ್ಟ ಗರ್ವ ಅವನನ್ನು ಕಟ್ಟಡದ ಮೇಲೆ ಏರಿಸಿ ಬಿಟ್ಟಿತ್ತು. ಮೂರನೇ ಮಹಡಿಯಿಂದ ಕಣ್ಣು ಮುಚ್ಚಿ ಆತನು ಕೆಳಗೆ ಹಾರಿಬಿಟ್ಟನು.



ಆದರೆ ವಿಧಿಸಂಕಲ್ಪ ಬೇರೆಯಾಗಿತ್ತು. ಕೆಳಗೆ ಹಾರಿದಾಗ ಬಡ ದಾರಿಹೋಕನೋರ್ವನ ತಲೆಯ ಮೇಲೆಯೇ ಬಿದ್ದುದರಿಂದ ಆ ದಾರಿಹೋಕನು ತತ್‌ಕ್ಷಣ ಸ್ವರ್ಗಸ್ಥನಾದನು! ಈ ನಿರಾಶಾವಾದಿಯು ಕೈಕಾಲು ಮುರಿದುಕೊಂಡು ಆಸ್ಪತ್ರೆ ಸೇರಿದನು. ಆತನನ್ನು ಬದುಕಿಸಲೋಸುಗ ಎರಡೂ ಕೈಕಾಲುಗಳನ್ನು ಕತ್ತರಿಸುವಂತಾಯಿತು. ಆಸ್ಪತ್ರೆಯಲ್ಲಿ ಗುಣಹೊಂದಿದ ಬಳಿಕ ಪೋಲೀಸರು ಆತನನ್ನು ದಸ್ತಗಿರಿ ಮಾಡಿದರು. ಓರ್ವ ನಿರಪರಾಧಿಯನ್ನು ಕೊಂದ ಆಪಾದನೆ ಮತ್ತು ಸ್ವತಃ ಆತ್ಮಹತ್ಯೆಮಾಡಲು ಪ್ರಯತ್ನಿಸಿದ ಆರೋಪ ಆತನ ಮೇಲೆ ಹೊರಿಸಲಾಗಿತ್ತು.

ಮಂಗಳೂರಿನ ಪತಿವ್ರತಾ ಶಿರೋಮಣಿಯೋರ್ವಳ ಕತೆ ಮತ್ತೂ ಸ್ವಾರಸ್ಯಮಯವಾಗಿದೆ. ಪರಪುರುಷರ ಮೈಸೋಂಕದಂತೆ ಆಜನ್ಮ ಬಾಳುವೆನೆಂದು ಆಕೆ ಪಣತೊಟ್ಟಿದ್ದಳು. ಒಮ್ಮೆ ಸಮುದ್ರಯಾನ ಮಾಡುವ ಪ್ರಸಂಗ ಆಕೆಗೆ ಒದಗಿತು. ಮಂಗಳೂರಿನ ಬಂದರಿನ ಬಳಿ ನೀರು ಸಾಕಷ್ಟಿಲ್ಲದಿರುವುದರಿಂದ ಹಡಗು ತೀರ ಬಿಟ್ಟು ದೂರ ನಿಲ್ಲುವುದು. ಪ್ರಯಾಣಿಕರು ಮಂಜಿಯೊಂದರಲ್ಲಿ (ದೊಡ್ಡ ನಾವೆ) ಕುಳಿತು ಹಡಗಿನ ಬಳಿ ಸಾಗುವರು ತೆರೆಯೊಡನೆ ಮಂಜಿ ಹಡಗಿನ ಸಮೀಪ ಬಂತೆಂದರೆ ಕೂಡಲೆ ಏಣಿಯೇರಿ ಹಡಗು ಹತ್ತಬೇಕು. ಏಕೆಂದರೆ ಮರುನಿಮಿಷಕ್ಕೆ ಡೋಣಿ ಹಿಂದೆ ಸರಿಯುವುದುಂಟು. ತರಬೇತಿ ಹೊಂದಿದ ಮಾಪಿಳ್ಳೆಯವರು ಫಕ್ಕನೆ ಪ್ರಯಾಣಿಕರ ಕೈಹಿಡಿದು ಅವರು ನೀರಲ್ಲಿ ಬೀಳದಂತೆ ಏಣಿಯ ಮೇಲೇರಲು ಸಹಾಯ ಮಾಡುವರು.

ಮೇಲೆ ಹೇಳಿದ ಇಪ್ಪತ್ತನೇ ಶತಮಾನದ ಸೀತಾದೇವಿ ತಾನಾಗಿ ಏಣಿಯೇರುವೆನೆಂದು, ಮಾಪಿಳ್ಳೆಗಳ ಸಹಾಯ ತನಗವಶ್ಯವಿಲ್ಲೆಂದು ಛಲ ಹಿಡಿದಳು. ಹಡಗಿನ ಮಾಲಕರು ನಿರುಪಾಯರಾಗಿ ಅನುಮತಿಯಿತ್ತರು. ಸರಿ, ಮಂಜಿ ಹಡಗಿನ ಬಳಿ ಬಂದೊಡನೆ ಆಕೆ ಏಣಿಯೆಡೆ ಕೈ ಚಾಚಿದಳು. ಆದರೆ ಸಮಯ ಮೀರಿಹೋಗಿತ್ತು.

ಮಂಜಿ ಹಿಂದೆ ಸರಿದು ಏಣಿ ಸ್ವಲ್ಪ ದೂರ ಉಳಿಯಿತು. ಆಕೆ ನೀರಲ್ಲಿ ದೊಪ್ಪನೇ ಬಿದ್ದುಬಿಟ್ಟಳು. ಮತ್ತೇನಾಯಿತೆಂದು ಹೇಳುವ ಅವಶ್ಯಕತೆಯೇ ಇಲ್ಲ. ಮೈ ಮುಟ್ಟಲಾಗದೆಂದು ಛಲ ಹಿಡಿದ ಸೀತಾದೇವಿಯನ್ನು ಮಾಪಿಳ್ಳೆಗಳು ಸಶರೀರ ಹಿಡಿದು ಮೇಲೆ ತರುವಂತಾಯಿತು!

ಮೋಜಿಗೆಂದು ಷರತ್ತು ಹೊಡೆದು ಪ್ರಾಣ ಕಳೆದುಕೊಂಡ ಮಹಾನುಭಾವರೂ ಇದ್ದಾರೆ. ದಕ್ಷಿಣಕನ್ನಡ ಜಿಲ್ಲೆಯ ಬಂಟ್ವಾಳ ಊರಿನಲ್ಲಿ ನಡೆದ ಸಂಗತಿಯಿದು. ಅಲ್ಲಿಯ ಭೀಮಭಟ್ಟರು ಹಲ್ವಪ್ರಿಯರು. ಒಂದು ಸಂದರ್ಭದಲ್ಲಿ ಮಾತಿಗೆ ಮಾತಾಗಿ ತಾನು ಹತ್ತು ಸೇರು ಹಲ್ವ ತಿಂದು ಒಂದು ಕುತಿ ಖೀರು ಕುಡಿಯುವೆನೆಂದು ರಾಗ ಎಳೆದರು. ಊರಿನ ಸಾಹುಕಾರರೊಬ್ಬರು ಭಟ್ಟರ ಪಣಕ್ಕೆ ಒಪ್ಪಿ ಹಲ್ವದ ಖರ್ಚು, ಮೇಲೆ ನಗದು ರೂಪಾಯಿ ನೂರು ಜಾಹೀರು ಮಾಡಿದರು. ಶುಭದಿನ ನೋಡಿ ಭಟ್ಟರು ನೆರೆದ ಮಂದಿಯ ಎದುರು ಹರಿವಾಣ ತುಂಬ ಹಲ್ವ ತಿಂದು ಖೀರು ಕುಡಿದರು.

ರಾತ್ರಿ ಭಟ್ಟರಿಗೆ ವಿಪರೀತ ಹೊಟ್ಟೆನೋವು ಮತ್ತು ವಾಂತಿ ಶುರುವಾಯಿತು. ಈಗಣ ಉತ್ತಮ ಮದ್ದುಗಳು, ಡಾಕ್ಟರರು ಅಂದು ಅವರ ನೆರವಿಗೆ ಇರಲಿಲ್ಲ. ಜೀವನದ ಕಷ್ಟ ಕಾರ್ಪಣ್ಯದಿಂದ ನವೆದು ಎಲುಬಿನ ಹಂದರವಾಗಿತ್ತು ಅವರ ದೇಹ. ಈ ಸಂಕಷ್ಟ ಎದುರಿಸಲಾರದೆ ಅವರ ಪ್ರಾಣಪಕ್ಷಿ ಹಾರಿಹೋಯಿತು.

ಕಾಲೇಜು ವಿದ್ಯಾರ್ಥಿಯೋರ್ವನು ಷರತ್ತು



ಹೊಡೆದು ಸಂಭವಿಸಿದ ದುರ್ಘಟನೆ ಇಂತಿದೆ. 'ಭೂತರಾಜನು' ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ. ಭೂತಪಿಶಾಚಿಗಳು ಮನುಷ್ಯನ ಸೃಷ್ಟಿ ಅರ್ಥಾತ್ ಮನೋವಿಕಾರವೆಂದು ಆತನ ಅಭಿಪ್ರಾಯವಾಗಿತ್ತು. ಭೂತರಾಜನು ಭೂತಪಿಶಾಚಿಗಳನ್ನು ನಂಬುವುದಿಲ್ಲವಾದರೆ ಒಬ್ಬಂಟಿಗನಾಗಿ ರಾತ್ರಿ ಒಂದು ಗಂಟೆಗೆ ಕಾಲೇಜಾಸ್ಪತ್ರೆಯ ಶವದ ಕೊಟಡಿಯನ್ನು ಹೊಕ್ಕು ಶವವೊಂದರ ಬೆರಳಿಗೆ ತನ್ನ ಉಂಗುರವೊಂದನ್ನು ತೊಡಿಸಿ ಬರಬೇಕೆಂದು, ಇಲ್ಲದಿದ್ದರೆ ಅವನು ಉತ್ತರಕುಮಾರನೆಂದು ಅವನ ಗೆಳೆಯರು ಗೇಲಿ ಮಾಡಿದರು.

ರಾತ್ರೆಯೆಲ್ಲ ನಿಶ್ಶಬ್ದವಾಗಿತ್ತು. ಭೂತರಾಜನು ಶವದ ಕೊಟಡಿಯ ಬೀಗವನ್ನು ಧೈರ್ಯದಿಂದ ತೆಗೆದು ಬ್ಯಾಟರಿಯ ಬೆಳಕಿನಲ್ಲಿ ಶವದ ಪೆಟ್ಟಿಗೆಯ ಕಡೆಗೆ ನೇರ ನಡೆದನು. ಬಿಳಿ ಒಟ್ಟೆಯು ಶವವನ್ನು ಮುಸುಕಿತ್ತು. ಮೆಲ್ಲನೆ ಶವದ ಕೈಯನ್ನು ಹಿಡಿದು ನಡು ಬೆರಳಿನಲ್ಲಿ ಉಂಗುರ ತೊಡಿಸುವಷ್ಟರಲ್ಲಿ ಅದೇ ಕೈ ಅವನ ಕೈಯನ್ನು ಬಲವಾಗಿ ಹಿಡಿಯಿತು; ಮತ್ತೊಂದು ಕೈ ನೇರ ಭೂತರಾಜನ ಕತ್ತಿಗೇ ಕೈಹಾಕಿತು! 'ಅಯ್ಯೋ' ಎಂದು ಭೂತರಾಜ ನೆಲಕ್ಕುರುಳಿದನು.

ಶವದ ಪೆಟ್ಟಿಗೆಯಲ್ಲಿ ಶವವಿರಲಿಲ್ಲ; ಬದಲು ಆತನ ಮಿತ್ರನಿದ್ದನು. ಮೊದಲು ಹೂಡಿದ ಸಂಚಿನಂತೆ ಆತನು ಭೂತರಾಜನ ಕುತ್ತಿಗೆಗೆ ಕೈಹಾಕಿದ್ದನು. ಭೂತರಾಜನಿಗೆ ಆಘಾತ (Shock) ವಾಗಿ ಕೂಡಲೇ ಹೃದಯಸ್ತಂಭನವಾಗಿತ್ತು. ಆ ಶವದ ಪೆಟ್ಟಿಗೆಯೇ ಭೂತರಾಜನಿಗೆ ಮೀಸಲಾಯ್ತು!

ಮೇಲಿನಂತಹ ಇನ್ನೊಂದು ಘಟನೆ ಹಿಂದೆ ನಡೆದು ಹೋಯಿತು. ಅದು ಹೀಗಿದೆ:

ಊರಿನ ಸ್ಮಶಾನಕ್ಕೆ ಅಮಾವಾಸ್ಯೆಯ ಹನ್ನೆರಡು ಗಂಟೆಗೆ ಒಬ್ಬಂಟಿಗನಾಗಿ ಹೋಗಿ ಮೂರು ಇಂಚು ಉದ್ದದ ಮೊಳೆ ಒಂದನ್ನು ಸ್ಮಶಾನದಲ್ಲಿ ಹೆಣ ಸುಡುವ ಪಾಯಕ್ಕೆ ಹೊಡೆದು ಬರಬೇಕು— ಇದೇ ಷರತ್ತು. ಅಂತೆಯೇ ಕೆಚ್ಚೆದೆಯ ತರುಣ



ಸೋರ್ವನು ನಡು ರಾತ್ರಿಯಲ್ಲಿ ನಡೆದು ಮೊಳೆಯನ್ನು ಪಾಯಕ್ಕೆ ಹೊಡೆದನು. ತಾನು ಗೆದ್ದೆನೆಂದು ಸಂತೋಷದಿಂದ ಹಿಂದಿರುಗುವಾಗ ಶರ್ಟನ್ನು ಯಾರೋ ಹಿಡಿದೆಳೆದಂತಾಯಿತು. ಆತನು ಅಲ್ಲಿಯೇ ಮೂರ್ಛೆ ಹೋದನು.

ಆದದ್ದು ಇಷ್ಟು: ಪಾಯದ ಮೇಲೆ ಕೂತುಕೊಂಡು ಅವಸರವಸರವಾಗಿ ಮೊಳೆಯನ್ನು ನೆಲಕ್ಕೆ ಸಿಕ್ಕಿಸುವ ಭರದಲ್ಲಿ ಆತನು ತನ್ನ ಷರ್ಟಿನ ಕೊನೆಗೆ ಮೊಳೆಯನ್ನು ಸಿಕ್ಕಿಸಿದನು. ಆತನಿಗೆ ಅರಿವಾಗಲಿಲ್ಲ; ಕತ್ತಲಲ್ಲಿ ಕಾಣಿಸುವಂತೆಯೂ ಇರಲಿಲ್ಲ. ಹೀಗೆ ಷರ್ಟು ಬಲವಾಗಿ ಮೊಳೆಯಲ್ಲಿ ಸಿಕ್ಕಿಬಿದ್ದುದರಿಂದ ಎಳೆದ ಭಾಸವಾಯಿತು. ಒಂದು ಘಂಟೆಯಾದರೂ ಆತನು ಮರಳಿ ಬಾರದಿದ್ದುದನ್ನು ಕಂಡು ಸಂಶಯಗೊಂಡು ಉಳಿದ ಮಂದಿಗಳು ಸ್ಮಶಾನಕೆ ಬಂದಾಗ ಎಲ್ಲವೂ ಅರಿವಾಯಿತು! ಸ್ಮಶಾನ ಯಾತ್ರೆಯ ತೊಂದರೆಯನ್ನೂ ಕೊಡದೆನೇ ಸ್ವರ್ಗವಾಸಿಯಾಗಿದ್ದ ಪುಣ್ಯಾತ್ಮ.

ಪಣ ತೊಟ್ಟು ವಿಜಯೀಭವರಾದವರಲ್ಲಿ ಬಾಪೂಜಿ ಅಗ್ರಗಣ್ಯರು. ಒಮ್ಮೆ 'ಬಾ' ರವರಿಗೆ ಅನಾರೋಗ್ಯವಾಗಿ ಅವರು ಉಪ್ಪು ತಿನ್ನಕೂಡದೆಂತಾಯಿತು. ಸ್ವತಃ ಬಾಪೂಜಿಯವರಿಗೆ ಇದು ಸಾಧ್ಯವಾದೀತೊ ಎಂದು ಬಾರವರು ಸಂಶಯಪಟ್ಟಾಗ ಗಾಂಧೀಜಿ ತಾನು ಆರೋಗ್ಯವಾಗಿದ್ದಾಗ್ಯೂ ಬಾ ಗಾಗಿ ಒಂದು ವರ್ಷ ಉಪ್ಪು ತಿನ್ನುವುದಿಲ್ಲವೆಂದು ಪಣ ತೊಟ್ಟು ವಿಜಯಶಾಲಿಯಾದರು.

ಇನ್ನೊಮ್ಮೆ ಒಂದು ಸಂದರ್ಭದಲ್ಲಿ ಅವರ ನೂಲುವ ತಕಲಿ ಕೆಲವರ ಅಜಾಗರೂಕತೆಯಿಂದ ಕಾಣೆಯಾಗಲು ಜೀವಕ್ಕಿಂತ ಪ್ರೀತಿಯ ವಸ್ತು ಎಂದೆನಿಸಿದ ಆ ತಕಲಿ ಸಿಗುವನಕ ತಾನು ಅನ್ನೋದಕ ವರ್ಜಿಸುವೆನೆಂದು ಛಲ ಹಿಡಿದರು. ಕೊನೆಗೆ ಕಚರಾ ಡಬ್ಬಿಯಲ್ಲಿ ಆ ತಕಲಿ ಸಿಗಲು ಕಳಕೊಂಡ ಮಗು ಸಿಕ್ಕಿದ ತಾಯಿಯಂತೆ ಆನಂದಬಾಷ್ಪವನ್ನು ಸುರಿಸಿದರು. ಆಮೇಲೆಯೇ ಆಹಾರ ಸ್ವೀಕರಿಸಿದರು.

ವಿಚಿತ್ರರೀತಿಯ ಪಣಗಳನ್ನು ಅನಾವಶ್ಯಕವಾಗಿ ಹಾಕಿ ಜೀವನದ ದುರುಪಯೋಗ ಮಾಡುವವರಿದ್ದಾರೆ. ತನಗೆ ಕೆಲಸ ಸಿಗುವ ತನಕ ಗಡ್ಡ ಮೀಸೆ ಬೋಳಿಸೆನೆಂದು ಕಲಿತ ಓರ್ವ ನಿರುದ್ಯೋಗಿ ಈ ಲೇಖನ ಬರೆಯುತ್ತಿರುವಾಗಲೂ ಗಡ್ಡ ಮೀಸೆಯ ಬೇಕಾರಿಯಾಗಿ ಕುಳಿತಿದ್ದಾನೆ. 'ಮದುವೆಯಾಗದೆ ಹುಚ್ಚು ಬಿಡದು; ಹುಚ್ಚು ಬಿಡದೆ ಮದುವೆಯಾಗದು' ಎಂಬಂತೆ ಗಡ್ಡ ಮೀಸೆ ಬೋಳಿಸದೆ ಕೆಲಸ ಸಿಗದು; ಕೆಲಸ ಸಿಗದೇ ಗಡ್ಡ ಬೋಳಿಸಲಾಗದು ಎಂಬ ಸ್ಥಿತಿ ಈ ಸಾಹುವರ್ಯರದಾಗಿದೆ!

ಸಿಗರೇಟನ್ನು ಸೇದುವುದಿಲ್ಲವೆಂದು ಪಣತೊಟ್ಟು ಚಟ್ಟಾ ಸೇದುವ ಹವ್ಯಾಸಕ್ಕೆ ಇಳಿದವರ ಕತೆ ರಮ್ಯವಾಗಿದೆ. ಸಿಗರೇಟು ಬಿಟ್ಟು ಬೀಳ್ಯದೆಲೆ, ಬೀಳ್ಯದೆಲೆ ಬಿಟ್ಟು ನಸ್ಯ, ನಸ್ಯ ಬಿಟ್ಟು ಹೊಗೆಸೊಪ್ಪು, ಹೊಗೆಸೊಪ್ಪಿನಿಂದ ಗಾಂಜಾ, ಕೊನೆಗೆ ಗಾಂಜಾಬಿಟ್ಟು ತಿರುಗಿ ಚುಟ್ಟಾಸಳಿಕೆ! ಇಲ್ಲಿಗೆ ಇತಿಶ್ರೀ ಹಾಡಿದಂತಾಯಿತು. ಕೆಲವರಂತೂ ಕೊನೆಗೆ ಮೇಲಿನ ಆರರ ಗುಲಾಮರೂ ಆಗಿಬಿಟ್ಟಿದ್ದಾರೆ; ಜೀವನಸಾರ್ಥಕಗೊಳಿಸಿದ್ದಾರೆ. *

ಪುಸ್ತಕ ವಿಭಾಗ

ಚಕ್ರವರ್ತಿ ನೀರೋ



ಪೋಲಿಶ್ ಕಾದಂಬರಿಕಾರ ಹೆನ್ರಿಕ್ ಸಿಕಿವೀಜನ
“ಕೋವಾಡಿಸ್” ಕಾದಂಬರಿಯ ಸಾರ

ಚಕ್ರವರ್ತಿ ನೀರೋ

ಮೂರು ವರ್ಷಗಳ ವರೆಗೆ ಒಂದೇ ಸಮನೆ ಯುದ್ಧ ಮಾಡಿ ಇಂಗ್ಲಂಡನ್ನು ಸೋಲಿಸಿದ ರೋಮನ್ ಸೇನೆ ಸ್ವದೇಶಕ್ಕೆ ಮರಳಿತು ಗುಡ್ಡದ ತುದಿಯ ಮೇಲಿಂದ ರೋಮ್ ನಗರವನ್ನು ಕಂಡೊಡನೆ ಆ ವಿಜಯೀ ಸೈನಿಕರ ಕಣ್ಣುಗಳ ಹೊಳಪು ದ್ವಿಗುಣಿತವಾಯಿತು. ಆದರೆ ರಥದ ಗಾಲಿಗಳಿಗೆ ಬಿಗಿಯಲ್ಪಟ್ಟು ಎಳೆದು ತರಲ್ಪಡುತ್ತಿದ್ದ ಯುದ್ಧ ಕೈದಿಗಳ ಕುತ್ತಿಗೆಗಳು ಇನ್ನಷ್ಟು ಬಾಗಿದವು.

ವಿಜಯಿ ಸೇನಾಪತಿ ಮಾರ್ಕಸ್ ತನ್ನ ಸಹ ಸೇನಾಪತಿ ಫೇಬಿಯಸ್‌ನಿಗೆ ಉಲ್ಲಾಸದಿಂದ, "ನೋಡಿ, ನಮ್ಮ ರೋಮ್ ಕಾಣಿಸುತ್ತಿದೆ. ಮೂರು ವರ್ಷಗಳ ಕಾಲವೆಂದರೆ ಬಹಳವಾಗಿ ಹೋಯಿತು" ಎಂದ.

"ಹೌದು. ಮೂರು ವರ್ಷಗಳ ನಂತರ ನಾ-ವಿಂದು ರಾತ್ರಿ ನಮ್ಮ ಹೆಂಡರು ಮಕ್ಕಳೊಡನೆ ಕುಳಿತು ಊಟಮಾಡಬಲ್ಲೆವು" ಎಂದ ಫೇಬಿಯಸ್.

ಅಷರಲ್ಲಿ ಓರ್ವ ತರುಣ ಸೈನಿಕ ಮುಂದೆ ಬಂದು ಮಾರ್ಕಸ್‌ನ ಕೈಲಿ ಸಮ್ರಾಟ್ ನೀರೋನ ಫರ್ಮಾನನ್ನು ಕೊಟ್ಟ. ಮಾರ್ಕಸ್ ಒಂದೇ ನೋಟಕ್ಕೆ ಅದನ್ನೋದಿ ಕೃದ್ಧನಾಗಿ ಫರ್ಮಾನನ್ನು ಫೇಬಿಯಸನ ಕೈಗೆ ಕೊಡುತ್ತ "ನೋಡಿ; ಮೂರು ವರ್ಷಗಳ ವರೆಗೆ ಒಂದೇ ಸಮನೆ ರಕ್ತ ಸುರಿಸಿದ್ದಕ್ಕಾಗಿ ಈ ಬಹುಮಾನ ಸಿಗುತ್ತಿದೆ" ಎಂದವನೇ ಕುದುರೆಯ ಲಗಾಮನ್ನು ಜಗ್ಗಿದ. ಕುದುರೆ ಗಾಳಿಯಂತೆ ಓಡಿತು. "ಯಾಕೆ?" ಎಂದು ಫೇಬಿಯಸ್ ಕೂಗಿ ಕೇಳಿದ್ದಕ್ಕೆ ಮಾರ್ಕಸ್, "ಒಂದು ವಾರದ ವರೆಗೆ ಸೈನ್ಯ ರೋಮ್ ನಗರದ ಹೊರಗೇ ಇರಬೇಕು ಎಂದು ನೀರೋ ಆಜ್ಞಾಪಿಸಿದ್ದಾನೆ. ಹೋಗಿ ಯಾಕೆ ಎಂದು ಕೇಳುತ್ತೇನೆ" ಎಂದ.

ಸಮ್ರಾಟ್ ನೀರೋನ ಅರಮನೆ. ಅಲ್ಲಿದ್ದ ಸಂಗಮವರಿ ಕಲ್ಲಿನ ಅನೇಕಾನೇಕ ಸುಂದರ ಮೂರ್ತಿಗಳ ಕಡೆಗೆ ದೃಷ್ಟಿ ಕೂಡ ಹಾಯಿಸದೆ ಮಾರ್ಕಸ್ ನಡೆದ. ಅರಮನೆಯ ದ್ವಾರದಲ್ಲಿದ್ದ ಸಮ್ರಾಟನ ಅಂಗರಕ್ಷಕರು ಅವನಿಗೆ ದಾರಿ ಬಿಟ್ಟರು. ಮಾರ್ಕಸ್ ಬಾಗಿಲ ಪಡದೆಯನ್ನು ಸರಿಸಿ ನೋಡಿದಾಗ ನೀರೋ ಸ್ನಾನ ಮಾಡುತ್ತಲಿದ್ದ. ನಾಲ್ವರು ಸುಂದರಿಯರು ಅವನಿಗೆ ಸ್ನಾನ ಹಾಕುತ್ತಿದ್ದರು. ಇನ್ನೊಬ್ಬಳು ಮದ್ಯದ ಬಟ್ಟಲನ್ನು ಹಿಡಿದುಕೊಂಡು ನಿಂತಿದ್ದಳು.

ಮೂವತ್ತು ವರ್ಷ ಪ್ರಾಯದ ಸೀಜರ್ ನೀರೋನ ಹಣೆ ವಿಶಾಲವೂ ಭವ್ಯವೂ ಆಗಿತ್ತು. ನೀರೋ ಅಹಂಕಾರಿಯೂ ಹಟಮಾರಿಯೂ ಕ್ರೂರನೂ ಆಗಿದ್ದ. ಆತನ ಬಳಿ ರಾಜದರಬಾರಿನಲ್ಲಿ ಪ್ರಮುಖನೂ ಮಾರ್ಕಸ್‌ನ ದೊಡ್ಡಪ್ಪನೂ ಆದ ಪೆಟ್ರೊನಿಯಸ್ ನಿಂತಿದ್ದ. ಮಾರ್ಕಸ್‌ನನ್ನು ಕಂಡು ಸಂತೋಷಭರಿತನಾದರೂ ಅದನ್ನು ತೋರಗೊಡದೆ ಪೆಟ್ರೊನಿಯಸ್ ನೀರೋಗೆ "ಬ್ರಿಟನ್ನನ್ನು ಜಯಿಸಿ ಮಾರ್ಕಸ್ ತನ್ನ ಸೈನ್ಯದೊಂದಿಗೆ ಬಂದಿದ್ದಾನೆ ಆದರೆ ತಮ್ಮ ಆಜ್ಞೆಯಂತೆ ಸೈನ್ಯವನ್ನು ನಗರದ ಹೊರಗೇ ತಡೆದು ನಿಲ್ಲಿಸಲಾಗಿದೆ," ಎಂದ.

ಆದರೆ ತನ್ನ ಗುಂಗಿನಲ್ಲಿಯೆ ಇದ್ದ ನೀರೋ ತನ್ನ ಈ ಆಜ್ಞೆಯನ್ನು ಇಷ್ಟರಲ್ಲೆ ಮರೆತುಬಿಟ್ಟಿದ್ದ. ಆತ ತಟ್ಟನೆ "ಮಾರ್ಕಸ್ ಮತ್ತು ಸೈನಿಕರಿಗೆ ಸ್ವಾಗತ ನಡೆಯಲಿ" ಎಂದ.

ಮಾರ್ಕಸ್‌ನಿಗೆ ಸಂಜ್ಞೆ ಮಾಡಿ ಪೆಟ್ರೊನಿಯಸ್ ಅವನೊಂದಿಗೆ ಹೊರಗೆ ನಡೆದ. ದೊಡ್ಡಪ್ಪನು ಕೇಳಿದ ಕುಶಲ ಪ್ರಶ್ನೆಗಳಿಗೆ ಉತ್ತರವೀಯುತ್ತ ಮಾರ್ಕಸ್, "ನೀವು ನಿಮ್ಮ ಸಿಸಿಲಿ ರಾಜ್ಯಕ್ಕೆ ಹೋಗುವ ಮೊದಲು ಕೆಲ ದಿನ ನನ್ನಲ್ಲಿ ಇರುವಿರಲ್ಲವೆ? ನಾನು ಖರೀದಿ ಮಾಡಿಕೊಂಡು ಬಂದಿರುವ ಒಂಬತ್ತು ಹುಡುಗಿಯರಲ್ಲಿ ಒಬ್ಬಾಕೆ ಸ್ಪೇನಿನವಳು. ಹುಣ್ಣಿಮೆಯ ಚಂದ್ರ

ನಂತಿವ್ವಾಳೆ. ಅವಳು ನಿಮಗೆ ನನ್ನ ಕಾಣಿಕೆ" ಎಂದ. ದೊಡ್ಡಪ್ಪ ಅವಕ್ಕೆ, "ಆ ಮಾತು ಕೇಳಬೇಕೆ? ಕೆಲ ದಿನ ಏಕೆ, ತಿಂಗಳೆರಡು ತಿಂಗಳು ಬೇಕಾದರೂ ಇರುತ್ತೇನೆ" ಎಂದ.

ಒಳಿಕ ಮಾರ್ಕಸ್ ತಾನಿಲ್ಲದಾಗ ನಡೆದ ಸಮಾಚಾರಗಳ ಬಗ್ಗೆ ಕೇಳಿದ. ಪೆಟ್ರೋನಿಯಸ್ ಹೇಳಿದ: "ನೀನು ಕೇಳಿರಬೇಕು, ಹೆಂಡತಿ ಅಗ್ರಿಯಿನಾ ಮತ್ತು ತಾಯಿ ಆಕ್ಟೇವಿಯಾಳನ್ನು ನೀರೋ ಕೊಲ್ಲಿಸಿದ್ದಾನೆ. ಅವರಿಬ್ಬರೂ ರಾಜ್ಯದಲ್ಲಿ ಸುವ್ಯವಸ್ಥೆ ಇರಬೇಕು ಎಂದು ಬಯಸಿದ್ದೇ ಅವರ ಅಪರಾಧವಾಯಿತು. ನೀರೋ ಈಗ ಪಿಪಯಿಯಾ ಎಂಬ ಲಂಪಟಳೂ ಸ್ವಚ್ಛಂದಳೂ ಆದ ಹೆಂಗಸನ್ನು ಲಗ್ನವಾಗಿದ್ದಾನೆ. ಅದರಿಂದ ದರಬಾರಿನಲ್ಲಿ ಅಸಂತೋಷ ಹಬ್ಬಿದೆ. ಕೆಲವರಂತೂ ನೀರೋನ ಬದಲು ಗಾಲ್ಬಾನನ್ನು ಸೀಜರನನ್ನಾಗಿ ಮಾಡಲು ಬಯಸುತ್ತಿದ್ದಾರೆ."

"ಯಾರು ಸೀಜರ್ ಆದರೇನು? ಎಲ್ಲ ಒಂದೇ. ಸೈನಿಕರಿಗೆ ಸಂಬಳ ಕೊಡಲು ರಾಜಬೊಕ್ಕಸದಲ್ಲಿ ಧನವಿರುವ ವರೆಗೆ ರೋಮ್ ಅಮರವಾಗಿರುವುದು."

ಪೆಟ್ರೋನಿಯಸ್ ನಕ್ಕ. "ನೀನಿನ್ನೂ ತಾರುಣ್ಯದ ಮದದಲ್ಲಿರುವ ಯೋಧ. ಆದರೆ ಆಗೊಮ್ಮೆ ಈಗೊಮ್ಮೆಯಾದರೂ ಪರಮಾತ್ಮನನ್ನು ನೆನೆಸುತ್ತಿರು."

ಮಾರ್ಕಸ್‌ನಿಗೆ ಈ ಮಾತಿನ ಮರ್ಮ ಹೊಳೆಯಲಿಲ್ಲ.

ಮರುದಿನ ನಿವೃತ್ತ ವೃದ್ಧ ಸೇನಾಪತಿ ಪ್ಲಾಟಿಯೆಸನ ಹೂದೋಟದಲ್ಲಿ ಅಡ್ಡಾಡುತಿದ್ದಾಗ ಮಾರ್ಕಸ್‌ನಿಗೆ ಹೂಗಿಡಗಳ ನಡುವೆ ಕುಳಿತಿದ್ದ ಕುಮಾರಿ ಲೀಜಿಯಾಳು ಕಂಡಳು. ಸೈನಿಕ ವೇಷದಲ್ಲಿ ಅಡಗಿದ್ದ ಮಾರ್ಕಸ್‌ನ ಕಲಾಸಕ್ತಿ ಕೆರಳಿತು. ಈ ಸುಂದರಿಗಾಗಿಯೇ ಆತ ಬದುಕಿದ್ದನೊ ಎನಿಸಿತು. ಎಲಾ! ಇದು ವರೆಗೆ ಈ ಗುಲಾಬಿ ಹೂವಿನಂಥ ಹುಡುಗಿ ಎಲ್ಲಿ ಅಡಗಿದ್ದಳು!

ಲೀಜಿಯಾ ಕೂಡ ಮುಗ್ಧಳಾಗಿ ಪ್ರೇಮಭರಿತ ದೃಷ್ಟಿಯಿಂದ ಮಾರ್ಕಸ್‌ನನ್ನು ನೋಡುತ್ತಲಿದ್ದಳು.

"ನಿನ್ನ ಹೆಸರು?" ಮಾರ್ಕಸ್ ಕೇಳಿದ.

"ಲೀಜಿಯಾ."

"ನೀನಿಲ್ಲಿ ನೌಕರಳೆ?"

"ಈ ಮನೆಯಲ್ಲಾರೂ ನೌಕರರಿಲ್ಲ. ವೃದ್ಧ ಸೇನಾಪತಿಯು ಮಗಳೆನ್ನಿಸಿಕೊಳ್ಳುವ ಭಾಗ್ಯ ನನ್ನದಾಗಿದೆ."

ಹತಪ್ರಭನಂತಾದ ಮಾರ್ಕಸ್ "ಮೂರು ವರ್ಷ ಒಂದೇ ಸವನೇ ಯುದ್ಧ ಮಾಡುತ್ತ ಮಾಡುತ್ತ ನನ್ನ ಬುದ್ಧಿ ಭ್ರಂಶವಾಗಿ ಹೋಗಿದೆ," ಎಂದ.

ಊಟ ಮಾಡುತ್ತಿದ್ದಾಗ ಮತ್ತೆ ಮಾರ್ಕಸನ ಕಣ್ಣು ಲೀಜಿಯಳನ್ನು ಸಂಧಿಸಿತು. ಇಬ್ಬರ ಹೃದಯಗಳೂ ಬೆಸೆದುಕೊಳ್ಳತೊಡಗಿದವು. ಲೀಜಿಯಳ ಮೇಲೆ ತನ್ನ ಪ್ರಭಾವ ಬೀರಲೆಂದು ಮಾರ್ಕಸ್ ತನ್ನ ಶೌರ್ಯದ ಕಥೆಗಳನ್ನು ಹೇಳತೊಡಗಿದ. ವೃದ್ಧ ಸೇನಾಪತಿಯ ಹೆಂಡತಿ ಪಂಪಾನಿಯಳಿಗೆ ಗುಟ್ಟು ಗೊತ್ತಾಗಿ ಅವಳು ಅವರಿಬ್ಬರ ಪರಿಚಯ ಮಾಡಿಕೊಟ್ಟಳು. "ಇವಳ ಹೆಸರು ಕಲೀನಾ ಎಂದಿತ್ತು. ಆದರೆ ಇವಳು ಲೀಜಿಯದವಳಾದ್ದರಿಂದ ನಾವಿವಳನ್ನು ಲೀಜಿಯ ಎಂದು ಕರೆಯುತ್ತಿದ್ದೇವೆ. ಇವಳು ನನ್ನ ಸಾಕು ಮಗಳು. ಇವಳ ಕಥೆ ದಾರುಣವಾದದ್ದು. ಇವಳ ತಂದೆ ಲೀಜಿಯದ ಬಾದಶಾಹನಾಗಿದ್ದ. ಲೀಜಿಯವನ್ನು ಗೆದ್ದಾಗ ಇವಳು ದಾಸಿಯೆಂದು ನನಗೆ ದೊರೆತಳು."

ಮಾರ್ಕಸ್ ಲೀಜಿಯಳ ಬಗ್ಗೆ ಇನ್ನೂ ಮಾತನಾಡಬೇಕೆಂದಿದ್ದಾಗ ಪ್ಲಾಟಿಯೆಸನ ಭೆಟ್ಟಿಗಾಗಿ ಟಾರ್ಸಸ್‌ನ ಪಾಲ್ ಬಂದಿದ್ದಾರೆಂದು ಸುದ್ದಿ ಬಂತು. ಪಾಲ್ ಒಬ್ಬ ಯಹೂದಿ ಧರ್ಮಾಧಿಕಾರಿ. ಅವನನ್ನು ಕಾಣಲೆಂದು ಪ್ಲಾಟಿಯೆಸ್ ಎದ್ದು ಹೋದ. ಇನ್ನೊಂದು ಕೋಣೆಯಲ್ಲಿ ಪೌಲ್‌ಗೆ ಪ್ಲಾಟಿಯೆಸ್ ಕೇಳಿದ: "ಪಾಲ್, ಪೀಟರನ ಪತ್ತೆ ಹತ್ತಿತೆ?"

"ಸರಿಯಾಗಿ ಹತ್ತಲಿಲ್ಲ. ಅವರು ಜೆರುಸಲೇಮ್, ಪರ್ಶಿಯ ಮತ್ತು ಪೂರ್ವದಿಕ್ಕಿನತ್ತ ಹೋಗಿದ್ದಾರಂತೆ. ಆದರೆ ಅವರು ಇನ್ನು ಯಾವ ದಿನವಾದರೂ ಇಲ್ಲಿಗೆ ಬರಬಹುದು."

"ಇಲ್ಲಿಗೆ? ರೋಮ್‌ಗೆ?" ಪ್ಲಾಟಿಯಸ್ ಪ್ರಸನ್ನನಾದ.

"ಪೀಟರ್ ಆರಂಭಿಸಿದ ಕಾರ್ಯಕ್ಕೆ ಫಲ ಪ್ರಾಪ್ತಿಯ ದಿನಗಳು ಬಂದಂತಿವೆ. ನೆಲದ ಮೇಲೆ ಮೀನಿನ ಚಿತ್ರ ಬಿಡಿಸುವ ಜನರು ನನಗೆ ಎಲ್ಲೆಲ್ಲಿಯೂ ಕಂಡುಬಂದರು. ನಾನವರೊಡನೆ ನಮ್ಮ ಕಾರ್ಯದ ಚರ್ಚೆ ಮಾಡಿದೆ" ಪಾಲ್ ಹೇಳಿದ.

"ಕಾರ್ಯ ಭಯಂಕರವಾದದ್ದು. ಕ್ರಿಶ್ಚನ್ನರ ಮೇಲೆ ಸಂಶಯ ತಾಳುತ್ತಿದ್ದಾರೆ. ಆಗಲಿ. ಏನಾಗುವುದೋ ನೋಡಿಯೆಬಿಡೋಣ."

ಅಂದೇ ರಾತ್ರಿ ತೋಟದ ಕೆರೆಯ ದಂಡೆಯಲ್ಲಿ ಕುಳಿತು ಲೀಜಿಯ ಮಾರ್ಕಸನನ್ನು ಕುರಿತು ಯೋಚಿಸುತ್ತಿದ್ದಳು. ಪಾಲ್ ಬಂದ ಸುದ್ದಿ ಕೇಳಿ ಅವಳೂ ಉತ್ತೇಜಿತಳಾಗಿದ್ದಳು. ಅವಳು ಕೂಡ ತನಗರಿವಿಲ್ಲದಂತೆಯೆ ನೆಲದ ಮೇಲೆ ಮೀನಿನ ಚಿತ್ರ ಬಿಡಿಸತೊಡಗಿದ್ದಳು. ಚಿತ್ರ ಬಿಡಿಸುವುದರಲ್ಲಿ ತನ್ಮಯಳಾಗಿದ್ದ ಅವಳಿಗೆ ತನ್ನ ಸೆರಗು ಜಾರಿ ಬಿದ್ದಿರುವುದೂ ಗಮನಕ್ಕೆಬರಲಿಲ್ಲ.

ಅಷ್ಟರಲ್ಲಿ ಅವಳೆದುರು ಬಂದು ನಿಂತ ಮಾರ್ಕಸ್ "ಯಾರನ್ನಾದರೂ ಕಾಯುತ್ತಿರುವಿಯಾ? ನನಗಂತೂ ನಿನ್ನ ವಿಚಾರದಿಂದ ನಿದ್ದೆಯೆ ಬರಲಿಲ್ಲ" ಎಂದ.

"ಹೌದು. ಯಾರನ್ನೊ ಕಾಯುತ್ತಿದ್ದೆ."

"ನಿನ್ನ ಇಚ್ಛೆ ಪೂರ್ತಿಯಾಯಿತೆ?"

"ಹಂ."

ಅಷ್ಟರಲ್ಲಿ ನೆಲದ ಮೇಲೆ ಮೀನಿನ ಚಿತ್ರವನ್ನು ಕಂಡ ಮಾರ್ಕಸ್ "ನಾನೊಂದು ಮೀನು ಎಂದು ತಿಳಿಯುತ್ತೀಯಾ?" ಎಂದು ಕೇಳಿದ. ಲೀಜಿಯಾ ನಾಚಿಕೊಂಡು ಉತ್ತರವೀಯಲಿಲ್ಲ ಮಾರ್ಕಸನೇ ಮತ್ತೆ "ನಾಳೆ ನಮ್ಮ ವಿಜಯೋತ್ಸವವನ್ನು ನೋಡಲು ಬರುವಿ ತಾನೆ?" ಎಂದು ಕೇಳಿದ.

"ಇಲ್ಲ. ನಾನೀಗ ಹೋಗುತ್ತೇನೆ."

"ಯಾಕೆ? ನಾನು ಮತ್ತು ನನ್ನ ವಿಜಯ ನಿನಗೆ ಮೆಚ್ಚಿಕೆಯಾಗಿಲ್ಲವೆ?" ಅವಳನ್ನು ತಡೆಯುತ್ತ ಮಾರ್ಕಸ್ ಕೇಳಿದ.

"ರಕ್ತಪಾತದಿಂದ ಪ್ರಾಪ್ತವಾದ ವಿಜಯ ನನಗೆ ಸೇರುವುದಿಲ್ಲ.

"ರಕ್ತಪಾತ? ಅಲ್ಲ. ಜಗತ್ತಿನ ಸಾಂಸ್ಕೃತಿಕ ಐಕ್ಯಕ್ಕಾಗಿ.."

"ಆದರೆ ಐಕ್ಯಕ್ಕಾಗಿ ರಕ್ತವನ್ನೇಕೆ ಹರಿಸುತ್ತೀರಿ? ಸೆರೆಯಾಳುಗಳಿಂದ ರಥವನ್ನೇಕೆ ಎಳೆಸುತ್ತೀರಿ? ಯಾವ ಸಮಾಜದಲ್ಲಿ ಗುಲಾಮರಿಲ್ಲವೊ ಅಂಥ ಸಮಾಜದ ಕಲ್ಪನೆಯನ್ನು ಪಾಲ್ ಮಾಡಿದ್ದಾರೆ."

"ಆ ಮುದಿ ದಾರ್ಶನಿಕ! ಹುಂ! ಅವನ ತಲೆ ಕೆಟ್ಟಿದೆ" ಎನ್ನುತ್ತ ಮಾರ್ಕಸ್ ಲೀಜಿಯಳನ್ನು ತನ್ನ ಬಾಹುಗಳಲ್ಲಿ ಬಂಧಿಸಿದ.

ಲೀಜಿಯ ತಿರಸ್ಕಾರದಿಂದ "ಹೆಣ್ಣಿನ ಹೃದಯವನ್ನು ಗೆಲ್ಲುವ ರೀತಿಯೇನು ಇದು? ಇಂಥ ವ್ಯವಹಾರ ಪ್ರೇಮವನ್ನು ತಿರಸ್ಕಾರವನ್ನಾಗಿ ಮಾಡುತ್ತದೆ" ಎಂದಳು.

ಅವಳ ಮಾತಿನ ಪೆಟ್ಟು ತಗಲಿದ ಮಾರ್ಕಸ್ ಸಿಟ್ಟಿನಿಂದ "ರೋಮ್‌ನಲ್ಲಿ ನೀನು ತಲೆಹೊಣೆಯ ದಾಸಿ ಎಂಬುದನ್ನು ಮರೆಯದಿರು" ಎಂದ.

ಕೊಸರಿಕೊಂಡು ಅವನ ಬಾಹುಗಳಿಂದ ಮುಕ್ತಳಾದ ಲೀಜಿಯ ಅಲ್ಲಿಂದ ಹೋಗಿಬಿಟ್ಟಳು. ಮಾರ್ಕಸ್ ಅವಳತ್ತ ಧಾವಿಸಿದಾಗ ಕತ್ತಲೆಯಿಂದ ಹೊರಬಿದ್ದು ಬಂದ ಯುರೂಸಸ್ ಅವನನ್ನು ತಡೆಗಟ್ಟಿ "ಸೇನಾಪತಿ, ತಡೆಯಿರಿ" ಎಂದ.

"ಸರಿ, ನೀನಾರು?"

"ನಾನವಳ ಸಂರಕ್ಷಕ. ಮೊದಲು ಇವಳ ತಂದೆ ಬಾದಶಾಹನ ಸಂರಕ್ಷಕನಾಗಿದ್ದೆ. ಈಗ ಇವಳ ಸಂರಕ್ಷಕನಾಗಿದ್ದೇನೆ."

ಅಲ್ಲಿಂದ ಹೋಗುತ್ತ ಮಾರ್ಕಸ್ "ಮುದಿ ಗೂಬೆಯೆ, ಅವಳನ್ನು ಸಂರಕ್ಷಿಸಿಕೊ ಹಾಗಾದರೆ" ಎಂದನು.

ಲೀಜಿಯ ಪ್ಲಾಟಿಯಸ್‌ನ ಕೋಣೆಯಲ್ಲಿದ್ದ ಯೇಸುವಿನ ಮೂರ್ತಿಯ ಎದುರು ಪ್ರಾರ್ಥನೆ ಮಾಡುತ್ತ, "ದೇವಾ, ನನ್ನ ಕ್ರೋಧ-ಈರ್ಷೆಗಳನ್ನು ಕ್ಷಮಿಸು. ನನಗೇನಾಗಿದೆಯೊ ತಿಳಿಯೆನು" ಎಂದು ಬೇಡಿಕೊಂಡಳು.

ವಿಜಯೋತ್ಸವ! ರೋಮ್ ನಗರವೆಲ್ಲ ಉಲ್ಲಾ

ಸದಿಂದ ಕುಣಿಯುತ್ತಲಿತ್ತು. ಅರಮನೆಯ ಎದುರಿನಲ್ಲಿ ಬಲಿ ಪೀಠದ ಮೇಲೆ ದೇವತೆಗಳಿಗೆ ಬಲಿ ಕೊಡಲೆಂದು ನಾನಾ ಮೃಗಗಳನ್ನು ತಂದು ನಿಲ್ಲಿಸಿದ್ದರು. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ನೆರೆದಿದ್ದ ಜನಸ್ತೋಮ ಸೀಜರ್ ನೀರೋನ ಜಯಜಯಕಾರ ಮಾಡುತ್ತಲಿತ್ತು. ಅರ್ಧನಗ್ನ ಸ್ತ್ರೀಯರ ನರ್ತನ ನಡೆದಿತ್ತು.

ಆದರೆ ನೀರೋನನ್ನು ಅರಮನೆಯ ಮಾಳಿಗೆಗೆ ಕರೆತರಲು ದರಬಾರಿನವರು ತುಂಬ ಪ್ರಯತ್ನಿಸಬೇಕಾಯಿತು. ಅಂತೂ ಕೊನೆಗೆ ಆತ ಸಮ್ರಾಜ್ಞಿ ಪಿಪಯಿಯಾಳೊಂದಿಗೆ ಮಾಳಿಗೆಯ ಮೇಲೆ ಬಂದು ನಿಂತ. ಜನ "ನೀರೋ, ನೀರೋ" ಎಂದು ಕೇಕೆ ಹಾಕಿದರು.

ದೂರ, ಬಹು ದೂರದಲ್ಲಿ ನಿಂತಿದ್ದ ಗಿಡ್ಡ ಹೆಂಗಸೊಬ್ಬಳು ತಿರಸ್ಕಾರದಿಂದ, "ನೀರೊ! ಹೆಂಡತಿ ಮತ್ತು ತಾಯಿಯನ್ನು ಕೊಲೆಗೈದ ಪಾಪಿ!" ಎಂದಳು.

ಅವಳ ಗಂಡ, "ಸುಮ್ಮನಿರು ಮೂರ್ಖಳೆ. ನಮ್ಮನ್ನೆಲ್ಲ ಕೊಲ್ಲಿಸಬೇಕೆಂದಿರುವಿಯೇನು?" ಎಂದು ಗದರಿಸಿದ. ಅಲ್ಲಿಯೆ ಧೂಳಿನಿಂದ ಮಲಿನವಾದ ಬಟ್ಟೆ ತೊಟ್ಟ, ಉದ್ದ ಬಿಳಿಗಡ್ಡದ ವೃದ್ಧನೊಬ್ಬ ನಿಂತಿದ್ದ. ಆತನೇ ಸಂತ ಪೀಟರ್. ಆತ ಆ ಹೆಂಗಸಿನ ಬಳಿ ಬಂದು ನಿಂತ. ಅವಳು ಮತ್ತೆ, "ಯಾರಿಗೆ ಗೊತ್ತಿಲ್ಲ ಈ ಮಾತು? ನೀರೋ ಪಶು, ಕೊಲೆಪಾತಕಿ" ಎಂದಳು.

ಅವಳನ್ನು ಹೊಡೆಯಲೆಂದು ಎತ್ತಿದ ಅವಳ ಗಂಡನ ಕೈ ಪೀಟರನನ್ನು ಕಂಡು ಕೆಳಗಿಳಿಯಿತು. ಸಂತ ಆ ಹೆಂಗಸನ್ನು ಸಮಾಧಾನಪಡಿಸುತ್ತ "ಯಾವ ಮನುಷ್ಯನೂ ಪಶುವಾಗಲಾರ" ಎಂದ.

ಅಷ್ಟರಲ್ಲಿ ಹೂಗಳಿಂದ ಶೃಂಗರಿಸಲ್ಪಟ್ಟ ರಥದಲ್ಲಿ ಮಾರ್ಕಸ್ ಬಂದ. ಜನರೆಲ್ಲ ಅವನನ್ನೇ ನೋಡುತ್ತಿದ್ದರು. ಆತ ಮಾತ್ರ ಲೀಜಿಯಳನ್ನು ಹುಡುಕುತ್ತಿದ್ದ. ಅವಳು ನಿಜವಾಗಿಯೂ ಬಂದಿಲ್ಲವೆ? ರಥ ನೀರೋನ ಎದುರು ಬಂತು. ಮಾರ್ಕಸ್ ನೀರೋನಿಗೆ ವಂದನೆ ಸಲ್ಲಿಸಿದ.

"ಇವನೇ ಏನು ಮಾರ್ಕಸ್? ಬಹಳ ಸುಂದರ ತರುಣನಾಗಿದ್ದಾನೆ" ಎಂದು ಪಿಪಯಿಯಾ ತನ್ನ ಬಳಿ ಇದ್ದವರಲ್ಲೊಬ್ಬಳಿಗೆ ಹೇಳಿದಳು.

ಅಂದು ರಾತ್ರಿ ಬಹು ಖಿನ್ನ ಸ್ವರದಲ್ಲಿ ಮಾರ್ಕಸ್ ಪೆಟ್ರೊನಿಯಸನನ್ನು ಕೇಳಿದ: "ತಲೆಹೊಣೆಗೆಂದು ದಾಸರಾಗಿರುವವರನ್ನು ಮಾರಾಟ ಮಾಡಲು ಬರುವುದಿಲ್ಲವೆ?"

"ನಿನಗೆ ಇಜಿಪ್ತದ ರಾಜ್ಯವನ್ನು ನೀರೋ ಕೊಡಲಿದ್ದಾನೆ. ಇವೆಲ್ಲ ವಿಚಾರಗಳಿಂದ..."

"ಮೊದಲು ಹೇಳಿ, ಅಂಥವರ ಬಗ್ಗೆ ಕಾಯದೆ ಏನಿದೆ?"

"ಯಾರನ್ನು ಕೊಳ್ಳಬೇಕೆಂದಿರುವಿ?"

"ಪ್ಲಾಟಿಯೆಸನಲ್ಲಿ ಹೊಣೆಯ ದಾಸಿಯಾಗಿರುವ ಲೀಜಿಯಳನ್ನು."

"ಅಂಥವರು ರಾಜನ ಸಂಪತ್ತು. ನಿನಗೆ ಇಜಿಪ್ತದ ರಾಜ್ಯ . . ."

"ನನಗೆ ಲೀಜಿಯ ಬೇಕು."

"ಸರಿ. ವಿಚಾರ ಮಾಡೋಣ" ಎಂದ ಪೆಟ್ರೊನಿಯಸ್ ಗಂಭೀರ ಸ್ವರದಲ್ಲಿ.

ಮರುದಿನ ಬಲವಂತದಿಂದ ಲೀಜಿಯಾಳನ್ನು ರಾಜಭವನಕ್ಕೆ ಕರೆಸಿದರು. ಅವಳು ಅಳುತ್ತ ಕರೆಯುತ್ತಲೇ ಹೋದಳು. ಆದರೆ ಅವಳು ಹೋಗುವಾಗ ನೀರೋನ ಪರಿತ್ಯಕ್ತ ಪತ್ನಿ ಏಕ್ಟೆಗೆ ಒಂದು ಗುಪ್ತ ಪತ್ರವನ್ನು ಪಂಪಾನಿಯ ಕೊಟ್ಟಿದ್ದಳು.

ಲೀಜಿಯಾ ರಾಜಭವನದಲ್ಲಿ ಮೊಟ್ಟಮೊದಲು ಏಕ್ಟೆಯನ್ನು ಭೆಟ್ಟಿಯಾದಳು. "ನನ್ನನ್ನೇಕೆ ಇಲ್ಲಿ ಕರೆಸಿದ್ದಾರೆ?" ಎಂದು ಅವಳು ಪ್ರಶ್ನೆ ಮಾಡಿದಳು. ಲೀಜಿಯಳ ಕ್ರೋಧವೆಲ್ಲ ಏಕ್ಟೆಯ ಸುಂದರ ಮುಖವನ್ನು ಕಂಡು ಕರಗಿದಂತಾಯಿತು. ಏಕ್ಟೆ ಅಂದಳು: "ಸಮ್ರಾಟ ನಿನ್ನನ್ನು ಕರೆಸಿದ್ದಾನೆ."

"ಆದರೆ ಆತ ನನ್ನನ್ನೆಂದೂ ನೋಡಿಲ್ಲ."

"ಇರಬಹುದು. ಹತ್ತು ವರ್ಷಗಳ ಹಿಂದೆ ನನ್ನನ್ನಿಲ್ಲಿಗೆ ತಂದಾಗಲೂ ಆತ ಮೊದಲು ನನ್ನನ್ನು ನೋಡಿರಲಿಲ್ಲ. ಆದರೆ ಈಗ ನಿನ್ನನ್ನು ಕರೆಸಿರುವ ಕಾರಣ ಬೇರೆಯೆ ಇರಬೇಕು. ಏಕೆಂದರೆ ಈಗ ಸಮ್ರಾಟನ ಮೇಲೆ ಪಿಪಯಿಯಾಳ ಅಧಿಕಾರ ನಡೆಯುತ್ತಿದೆ. ಇರಲಿ ಆ ಮಾತು. ನೀನೀಗ ಸ್ನಾನ ಮಾಡು. ನಿನಗಾಗಿ ಬಟ್ಟೆಗಳು ಸಿದ್ಧವಿವೆ"

ಎಂದಳು ಏಕ್ಟೆ.

ಒಟ್ಟೆ ಧರಿಸಿಯಾದ ಮೇಲೆ ಲೀಜಿಯಳನ್ನು ಸಮ್ರಾಟ್ ನೀರೋನ ಖುರ್ಚಿಯ ಎದುರಿದ್ದ ಒಂದು ಮಂಚದ ಮೇಲೆ ಒಯ್ದು ಕೂಡ್ರಿಸಿದರು. ಅವಳು ಕುಳಿತುಕೊಳ್ಳುತ್ತಿದ್ದಂತೆ ಮಾರ್ಕಸ್ ಮತ್ತು ಪೆಟ್ರೊನಿಯಸ್ ಅಲ್ಲಿಗೆ ಬಂದರು. ಏಕ್ಟೆ ಹೇಳಿದಂತೆ ತನ್ನನ್ನು ಕರೆಸಿದ್ದರ ಕಾರಣ ಬೇರೆಯೇ ಇರಬೇಕು ಎಂದು ಲೀಜಿಯಳಿಗೆ ಅನಿಸಿತು. ಅವಳು ಕ್ರೋಧದಿಂದ ಉರಿದೆದ್ದಳು. ಸರದಾರರು, ದಾಸದಾಸಿಯರು ಬರತೊಡಗಿದರು. ಹುಲಿಗಳ ಮಧ್ಯ ಇರುವ ಚಿಗರಿಯಂತಾದಳು ಲೀಜಿಯ.

ಮಾರ್ಕಸ್ ಅವಳ ಬಳಿ ಬಂದು ನಿಂತು ಮುಗುಳ್ನಕ್ಕ. ಲೀಜಿಯ ಸಿಟ್ಟಿನಿಂದಲೇ "ನನ್ನನ್ನು ಮನೆಗೆ ಕಳಿಸಿರಿ" ಎಂದಳು.

ಮಾರ್ಕಸ್ ಉತ್ತರ ಕೊಡುವ ಮೊದಲೇ ನೀರೋ ಮತ್ತು ಪಪಯಿಯಾ ಬಂದರು. "ಇವಳೇ ಏನು ಆ ದಾಸಿ ?" ಎಂದು ಕೇಳಿದ ನೀರೋ.

"ಹೌದು ಪ್ರಭೊ, ಇವಳೇ ಅವಳು. ತಾವು ಉದಾರರು. ಮಹಾಪುರುಷರು" ಮಾರ್ಕಸ್ ಉತ್ತರವಿತ್ತ.

"ನಿನ್ನ ಆಯ್ಕೆಯನ್ನು ಮೆಚ್ಚುತ್ತಿದ್ದೇನೆ. ಇನ್ನು ಇವಳನ್ನು ಒಂದಿಷ್ಟು ಸಮೀಪದಿಂದ ನೋಡುತ್ತೇನೆ" ಎಂದು ನೀರೋ ಆಸನ ಬಿಟ್ಟೆದ್ದು ಲೀಜಿಯಳ ಬಳಿ ಬಂದು ನಿಂತು, "ದಾಸಿ, ಯುದ್ಧದಲ್ಲಿ ತೋರಿದ ಸಾಹಸ ಮತ್ತು ಸ್ವಾಮಿಭಕ್ತಿಗಾಗಿ ಮಾರ್ಕಸನಿಗೆ ನಿನ್ನನ್ನು ಬಹುಮಾನವೆಂದು ಕೊಡುತ್ತಿದ್ದೇನೆ. ಇಂದಿನಿಂದ ಪ್ಲಾಟಿಯೆಸ್ ನಿನ್ನ ಸಂರಕ್ಷಕನಲ್ಲ" ಎಂದ.

ನೀರೊ ಹೊರಟುಹೋದ. ಲೀಜಿಯಳನ್ನು ಮತ್ಸರದಿಂದ ನೋಡುತ್ತ ಪಪಯಿಯಾ ಅವನ ಹಿಂದೆಯೆ ಹೋದಳು.

ಅಲ್ಲಿದ್ದ ಎಲ್ಲರೂ ಒಬ್ಬೊಬ್ಬರಾಗಿ ಹೊರಟು ಹೋದರು. ಏಕಾಂತ ಲಭಿಸಿದೊಡನೆ ಮಾರ್ಕಸ್ ನುಡಿದ: "ಲೀಜಿಯಾ, ಇನ್ನು ನಿನ್ನ ಹೃದಯದಲ್ಲಿ ನನಗಾಗಿ ಪ್ರೇಮವನ್ನು ಹುಟ್ಟಿಸಿಕೊ. ಜೀವನದ ಆನಂದದ ಕ್ಷಣ ಬಂದಿದೆ ಈಗ."

"ನನ್ನ ದೇಹದ ಮೇಲೆ ನಿಮ್ಮ ಅಧಿಕಾರವಿದೆ, ನಿಜ. ಆದರೆ ನಾನು ನಿಮಗೆ ನನ್ನ ಪ್ರೇಮವನ್ನು ಅರ್ಪಿಸಲಾರೆ" ಲೀಜಿಯ ದುಃಖಿತ ಸ್ವರದಲ್ಲಿ ಹೇಳಿದಳು.

"ಪ್ರೇಮ ಮಾಡದಿದ್ದರೆ ನಿನ್ನನ್ನು ಚಾಬೂಕಿನಿಂದ ಹೊಡೆಯಿಸುವೆ"

"ಏನು ಬೇಕಾದ್ದು ಮಾಡಿರಿ. ನಿಮಗಾಗಿ ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವೆ"

ಮಾರ್ಕಸ್ ಉದ್ವಿಗ್ನತೆಯಿಂದ ಅವಳ ಭುಜವನ್ನು ಹಿಡಿದುಕೊಂಡನೊ ಇಲ್ಲವೊ, ಅಷ್ಟರಲ್ಲಿ ಸೇವಕನೊಬ್ಬ ಬಂದು "ಸೇನಾಪತಿ, ಸಮ್ರಾಜ್ಞಿಯವರು ತಮ್ಮನ್ನು ಈಗಿಂದೀಗಲೇ ಬರ ಹೇಳಿದ್ದಾರೆ" ಎಂದ.

ಲೀಜಿಯಳನ್ನು ಒಬ್ಬ ಸೇವಕನೊಡನೆ ಪೆಟ್ರೊನಿಯಸನ ಮನೆಗೆ ಕಳಿಸಿ ಮಾರ್ಕಸ್ ಸಮ್ರಾಜ್ಞಿಯ ಬಳಿಗೆ ನಡೆದ. ಕೋಣೆಯಲ್ಲಿ ಅವಳೊಬ್ಬಳೇ ಕುಳಿತಿದ್ದಳು. ಮಾರ್ಕಸನನ್ನು ತನ್ನ ಮಗ್ಗುಲಲ್ಲಿಯೆ ಕೂಡ್ರಿಸಿಕೊಂಡಳು ಪಪಯಿಯಾ. ಕೈಲಿದ್ದ ಮದ್ಯದ ಬಟ್ಟಲನ್ನು ಒರಿದು ಮಾಡಿದಳು. ಅವಳು "ಮಾರ್ಕಸ್, ಇನ್ನೂ ನಿನಗೆ ಲೀಜಿಯಳ ಹೃದಯವನ್ನು ಗೆಲ್ಲುವುದಾಗಿಲ್ಲವೆಂದು ಕಾಣಿಸುತ್ತದೆ" ಎಂದಳು.

"ಹೌದು ಸಮ್ರಾಜ್ಞಿ. ಹೊಸ ಕುದುರೆ ಬೇಗನೆ ಸಾಧುವಾಗುವುದಿಲ್ಲ."

ಪಪಯಿಯಾ ಕೊಟ್ಟ ಮದ್ಯದ ಬಟ್ಟಲನ್ನು ಮಾರ್ಕಸ್ ನಿರಾಕರಿಸಲಾರದೆ ಹೋದ. ಪಪಯಿಯಾ ತುಂಬ ನಾಟಕೀಯ ಸ್ವರದಲ್ಲಿ ಹೇಳಿದಳು: "ಗಂಡು-ಹೆಣ್ಣುಗಳ ಜಗಳದಲ್ಲಿ ನನಗೆ ಕಾಣಿಸುವುದು ಕೇವಲ ಸಮಯದ ಅಪವ್ಯಯ. ಈ ಜಗಳದಲ್ಲಿ ಶಕ್ತಿಯ ಅಪವ್ಯಯ ಎಷ್ಟಾಗುತ್ತದೊ ಹೇಳಲು ಬಾರದು."

ಮಾರ್ಕಸನಿಗೆ ಸಮ್ರಾಜ್ಞಿಯ ಇಂಗಿತ ತಿಳಿದು ಆತ ಅವಾಕ್ಕಾದ. ಸಮ್ರಾಜ್ಞಿ ಹೇಳಿದಳು: "ಮಾರ್ಕಸ್, ನಿನ್ನ ಮಟ್ಟಿಗೆ ನಾನು ಸಮ್ರಾಜ್ಞಿಯಲ್ಲ. ನನ್ನ ಹೃದಯವನ್ನು ಗುರುತಿಸು. ನೀನು ಸರ್ಪ. ನಿನ್ನ ಮುಖದಲ್ಲಿ ವಿಷವಿದೆ. ನನಗೆ ಆ ವಿಷ ಬಲು ರುಚಿಯಾಗಿರುತ್ತದೆ."

ಮಾರ್ಕಸ್ ನಿರುಪಾಯನಾಗಿದ್ದ. ಆತ ಸಮ್ರಾಜ್ಞಿಯ ಆಜ್ಞಾಪಾಲನೆ ಮಾಡದೆ ವಿಧಿ

ಯಿರಲಿಲ್ಲ.

ಲೀಜಿಯ ಹೋಗುತ್ತಿದ್ದಾಗ ಅವಳನ್ನು ಒಯ್ಯುತ್ತಿದ್ದ ಸೇವಕನನ್ನು ಏನೋ ನೆಪದಿಂದ ಹೊರಗೆ ಕಳಿಸಿ ಏಕ್ಟೆ ತನ್ನ ದಾಸಿಗೆ ಹೇಳಿ ಲೀಜಿಯಳಿಗಾಗಿ ಶಾಲು ತರಿಸಿದಳು. ಲೀಜಿಯ ಶಾಲನ್ನು ಹೊದ್ದುಕೊಳ್ಳುತ್ತಿದ್ದಾಗ ಬೇಕೆಂದೇ ಮೇಜಿನ ಮೇಲಿಂದ ಪೌಡರಿನ ಡಬ್ಬಿಯನ್ನು ಉರುಳಿಸಿದಳು. ಪೌಡರನ್ನು ಬಳಿಯುವ ನೆಪದಲ್ಲಿ ಕಳಕ್ಕೆ ಬಾಗಿ ನೆಲದ ಮೇಲೆ ಮೀನಿನಾಕೃತಿಯನ್ನು ಬರೆದಳು. ಅದನ್ನು ಕಂಡು ಲೀಜಿಯ ಆಶ್ಚರ್ಯಚಕಿತಳಾಗುತ್ತಿದ್ದಂತೆ ಏಕ್ಟೆ ಮೀನಿನ ಚಿತ್ರವನ್ನಳಿಸಿಬಿಟ್ಟಳು. ಆಮೇಲೆ ಶಾಲನ್ನು ಸರಿಪಡಿಸುವ ನೆಪ ಮಾಡಿಕೊಂಡು ಮೆಲ್ಲಗೆ "ಧೈರ್ಯದಿಂದ ಕೆಲಸ ಮಾಡಬೇಕು" ಎಂದಳು.

ಸಿಟ್ಟಿನಿಂದ ಉರಿಯುತ್ತಲೇ ಮಾರ್ಕಸ್ ಪ್ಲಾಟಿಯಸ್‌ನಲ್ಲಿಗೆ ಬಂದು, "ಲೀಜಿಯಾ ಎಲ್ಲಿ?" ಎಂದು ಕೇಳಿದ.

"ನನಗೆ ಗೊತ್ತಿಲ್ಲ" ಪ್ಲಾಟಿಯಸ್ ಉತ್ತರವಿತ್ತ

"ಇಲ್ಲ. ನಿಮಗೆ ಖಂಡಿತ ಗೊತ್ತಿದೆ. ನನಗೆ ಅವಳನ್ನು ಒಪ್ಪಿಸಿರಿ."

"ನೀನೇಕೆ ನನ್ನ ಮಾತು ನಂಬುವುದಿಲ್ಲ? ಅವಳು ನಮ್ಮಲ್ಲಿಂದ ಹೋದ ಮೇಲೆ ತಿರುಗಿ ನಾನವಳ ಮುಖ ನೋಡಿಲ್ಲ." ಅಷ್ಟರಲ್ಲಿ ಬಂದ ಪಂಪೋನಿಯಾ ಕೂಡ ಹಾಗೆಯೆ ಹೇಳಲು ಮಾರ್ಕಸ್ ಶಾಂತನಾದ. ಲೀಜಿಯ ಅಲ್ಲಿಲ್ಲವೆಂದು ಅವನಿಗೆ ಖಾತ್ರಿಯಾಗಲು ಆತ ಪೆಟ್ರೊನಿಯಸನಲ್ಲಿಗೆ ಹೋದ. ಆಗ ಪೆಟ್ರೊನಿಯಸ್ ತನ್ನ ಸ್ಪೇನಿನ ಪ್ರೇಯಸಿಯೊಂದಿಗೆ ಉಪಾಹಾರ ಮಾಡುತ್ತಲಿದ್ದ. ಮಾರ್ಕಸ್ ಬರಿಗೈಯಿಂದ ಬಂದು, "ಅವರಿಗೇನೂ ತಿಳಿಯದು" ಎನ್ನಲು ಆತ "ಅದೆಲ್ಲ ಸುಳ್ಳು. ಆದರೆ ನೀನು ಹೀಗೆ ಒಬ್ಬ ಸಾಮಾನ್ಯ ಹೆಂಗಸಿನ ಬೆನ್ನು ಹತ್ತಿ ಹುಚ್ಚನಂತೆ ಅಲೆಯುವುದು ಸರಿಯಲ್ಲ. ಅವಳಿನ್ನು ನಿನಗೆ ಸಿಗಲಾರಳು. ನೀನು ಅವಳ ಹಂಬಲ ಬಿಟ್ಟು ನಾಳೆ ನನ್ನೊಡನೆ ಎಂಟಿಯಮ್ಮಿಗೆ ನಡೆ. ಅಲ್ಲಿ ನಿನ್ನ ಮನರಂಜನೆಗೆ ಬೇಕಷ್ಟು ಸಾಧನಗಳಿವೆ" ಎಂದ ಪೆಟ್ರೊನಿಯಸ್.

"ಆದರೆ ಸಮ್ರಾಟ ಇತ್ತ ಬಹುಮಾನವನ್ನು ನಾನು ಪಡೆಯಲೇಬೇಕು."

"ನಿಮಗೆ ಪ್ಲಾಟಿಯಸನ ಪರಿಚಯವಿಲ್ಲ. ಆತನ ಮಿತ್ರನಾದ ಆ ದಾರ್ಶನಿಕ ಪಾಲ್-ಟಾರ್ಸಸ್ ಬಲು ಗತ್ತುಗಾರ. ಆತನ ಮೇಲೆ ಸಮ್ರಾಟ ಎರಡು ಬಾರಿ ಆರೋಪವಿರಿಸಿದ್ದಾನೆ."

"ಎಂಥ ಆರೋಪ?"

"ಆತ ಕ್ರಿಶ್ಚನ್ನನಲ್ಲವೆ? ನೀನೀಗ ಈ ತರುಣಿಯ ಶೋಧಕ್ಕಾಗಿ ಕ್ರಿಶ್ಚನ್ನರ ಗೂಡುಗಳಲ್ಲಿ ಹುಡುಕಬೇಕಾದೀತು. ಕ್ರಿಶ್ಚನ್ನರೆಲ್ಲ ಯೇಸು ಎಂದು ಕರೆಯಲ್ಪಡುವ ಆ ರಾಜದ್ರೋಹಿ ಯಹೂದಿಯನ್ನೆ ದೇವರೆಂದು ಭಾವಿಸುತ್ತಾರೆ. ಪಾಲಿಸ್ತೈನಿನಲ್ಲಿ ಯೇಸುವನ್ನು ಶಿಲುಬೆಗೇರಿಸಿದರು ಎಂದು ಕೇಳಿದ್ದೇನೆ. ಈ ಯಹೂದಿ ಮತ್ತು ಗ್ರೀಕರಿಬ್ಬರೂ ಈ ಧರ್ಮದ ಅನುಯಾಯಿಗಳಾಗಿದ್ದಾರೆ. ಅವರು ಗುಪ್ತವಾಗಿ ಸೇರಿ ರೋಮನ್ ಜನರಲ್ಲಿ ಅಶ್ರದ್ಧೆ, ಅಪನಂಬಿಕೆಗಳನ್ನು ಹಬ್ಬಿಸುತ್ತಾರೆ"

"ಹಾಗಾದರೆ ನಾನು ಸೈನ್ಯದ ಸಹಾಯದಿಂದ ಲೀಜಿಯಳ ಶೋಧ ಮಾಡುತ್ತೇನೆ"

"ಎಚ್ಚರದಿಂದ ಕಾರ್ಯ ಮಾಡು. ಈ ಕ್ರಿಶ್ಚನ್ನರು ಬಲು ಧೂರ್ತರು ನೀನು ಬಹಿರಂಗವಾಗಿ ಸೈನಿಕರನ್ನ ಶೋಧದಲ್ಲಿ ತೊಡಗಿಸಿದರೆ ಅವರು ನೀನೇನು ಮಾಡಿದರೂ ಲೀಜಿಯ ಸಿಗದಂತೆ ಮಾಡಿಬಿಡುತ್ತಾರೆ."

"ಹಾಗಾದರೆ ಏನು ಮಾಡಲಿ?"

"ನಾನೊಬ್ಬ ಗ್ರೀಕ್ ಜ್ಯೋತಿಷಿಯನ್ನು ಬಲ್ಲೆ. ಆತ ಬಲು ಆಸೆಬುರುಕ. ನೀನು ಒಂದಿಷ್ಟು ಹಣ ಚೆಲ್ಲಿದರೆ ಆತ ನಿನಗೆ ಸಹಾಯ ಮಾಡುವ. ಆತ ಮನಸ್ಸು ಮಾಡಿದರೆ ತನ್ನ ಜ್ಯೋತಿಷ್ಯದ ಬಲದಿಂದ ಲೀಜಿಯಳನ್ನು ಇಂದೇ ನಿನಗೆ ದೊರಕಿಸಿಕೊಡಬಲ್ಲ. ಆತನ ಹೆಸರು ಚಿಲೋ ಎಂದು."

ರೋಮ್‌ನ ಒಂದು ಕಿರಿದಾದ ಓಣಿಯ ಹೊಲಸು ಮನೆಯಲ್ಲಿ ಕುಳಿತು ಮಾರ್ಕಸ್ ಚಿಲೋನ ಹತ್ತಿರ ಲೀಜಿಯಳ ವಿಚಾರವಾಗಿ ಪ್ರಶ್ನೆ

ಕೇಳುತ್ತಲಿದ್ದ. ಬಹಳಷ್ಟು ಲೆಕ್ಕಹಾಕಿ ಚಿಲೊ ಹೇಳಿದ. "ಎಲಾ, ಈ ಹುಡುಗಿ ಕ್ರಿಶ್ಚನ್ ಧರ್ಮವನ್ನು ಮನ್ನಿಸುತ್ತಾಳಲ್ಲ. ನೋಡಿಲ್ಲಿ, ಅವಳ ಭಾಗ್ಯ ಪ್ರತೀಕ 'ಇಕ್ಥುನ್' ಆಗಿದೆ. ಗ್ರೀಕ್ ಭಾಷೆಯಲ್ಲಿ ಹಾಗೆಂದರೆ ಮೀನು ಎಂದಾಗುತ್ತದೆ."

"ಹೌದು. ಅವಳೊಮ್ಮೆ ನೆಲದ ಮೇಲೆ ಮೀನಿನ ಚಿತ್ರ ಬರೆದದ್ದನ್ನು ಕಂಡಿದ್ದೆ. ಆದರೆ ಈಗ ಅವಳೆಲ್ಲಿ? ಅವಳನ್ನು ಹೇಗೆ ಪಡೆಯಬಹುದು?"

"ನನ್ನ ಗಣಿತದಂತೆ ಅವಳು ಕ್ರಿಶ್ಚನ್ನರ ಗುಂಪು ಇರುವಲ್ಲಿ ಇರಬೇಕು. ಇವರು ನಗರದ ಹೊರಗೆ ಗವಿಗಳಲ್ಲಿ ಕಂದಕಗಳಲ್ಲಿ ವಾಸಿಸುತ್ತಾರೆ. ಅವರು ಸಮಾಜ ಶತ್ರುಗಳು. ಪರಧರ್ಮದವರಿಗೆ ವಿಷ ಕೂಡ ಹಾಕುತ್ತಾರೆ. ಅವರಲ್ಲಿಗೆ ಹೋಗುವುದು ತುಂಬ ಕಷ್ಟ."

"ಆದರೆ ಹೋಗಲೇ ಬೇಕು."

"ಅವರು ಬಲು ಭೀಕರರು. ನೂರಕ್ಕಿಂತಲೂ ಹೆಚ್ಚು ಜನ ಇದ್ದಾರೆ. ಆದರೂ ಹೋಗೋಣ. ಅಂಗಿಯ ಒಳಗಡೆ ಶಸ್ತ್ರಗಳನ್ನಿಟ್ಟುಕೊಳ್ಳಬೇಕಾದೀತು. ಆದರೆ ನಾನು ಮುದುಕ. ಅಲ್ಲೇನು ಮಾಡಬಲ್ಲೆ?"

"ನೀವು ಚಿಂತಿಸಬೇಡಿ. ನಿಮ್ಮ ರಕ್ಷಣೆಗಾಗಿ ಕ್ರಾಟನ್ನನನ್ನೂ ಕರೆತರುತ್ತೇನೆ."

ರಾತ್ರಿ ಈ ಮೂವರೂ ನಗರದ ಹೊರಗಿನ ಗವಿಗಳ ಹತ್ತರ ನಡೆದರು. ಮೂವರೂ ಕ್ರಿಶ್ಚನ್ನರಂತೆ ಉಡುಪು ಧರಿಸಿದ್ದರು. ಅಲ್ಲಿ ಕ್ರಿಶ್ಚನ್ನರು ಸಾಲಾಗಿ ನಿಂತಿದ್ದರು. ವೃದ್ಧ ಪಾಲ ಅವರ ಕೈಗಳನ್ನು ಸ್ಪರ್ಶಿಸುತ್ತ ಅವರಿಗೆ ದೀಕ್ಷೆಯನ್ನು ಕೊಡುತ್ತಲಿದ್ದ. ಈ ಮೂವರೂ ದೂರ ನಿಂತು ಅದನ್ನು ನೋಡತೊಡಗಿದರು.

ಪಾಲ್ ಭಾಷಣ ಮಾಡತೊಡಗಿದ. . ."ನಮ್ಮ ಪ್ರಭು ಯೇಸು ಎಲ್ಲವನ್ನೂ ತಿಳಿದುಕೊಳ್ಳುತ್ತಾನೆ. ಬಹುದಿನಗಳಿಂದ ಜನ ನಿರೀಕ್ಷಿಸಿದ್ದ ಒಂದು ವ್ಯಕ್ತಿ ಇಂದು ನಮ್ಮಲ್ಲಿಗೆ ಬಂದಿದೆ. ಈ ವ್ಯಕ್ತಿ ಯೇಸುವಿನ ವಾಣಿಯನ್ನು ಕೇಳಿದೆ. ಈತ ಯೇಸುವನ್ನು ಸ್ಪರ್ಶಿಸಿದ್ದಾನೆ ಕೂಡ. ಈತ ಜೆರುಸಲೇಮಿನ ಅಂಬಿಗ. ಈತನ ಹೆಸರು ಪೀಟರ್. ಈತ ಪ್ರಭು ಯೇಸುವಿನ ಪ್ರಥಮ ದೂತ." ಇಷ್ಟೆಂದು ಪಾಲ್ ಬೊಟ್ಟುಮಾಡಿ ಪೀಟರನನ್ನು ತೋರಿಸಿದ. ಎಲ್ಲರೂ ಆತನನ್ನು ನೋಡಿದರು. ಉತ್ತಮ ಬಟ್ಟೆ ಧರಿಸಿದ್ದ ಪೀಟರ್ ಮುಂದೆ ಬಂದು ಮಾತಾಡತೊಡಗಿದ:

"ಯೇಸು ನನಗೆ ರೋಮ್‌ನ ರಸ್ತೆಯನ್ನು ತೋರಿದ—ಇಲ್ಲೊಂದು ಚರ್ಚು ಕಟ್ಟಲು ನನಗೆ ಸಾಧ್ಯವಾಗಲೆಂದು. ಯೇಸುವನ್ನು ನೋಡದೆಯೆ ನೀವಾತನಲ್ಲಿ ಇಷ್ಟೊಂದು ಶ್ರದ್ಧೆಯನ್ನಿಟ್ಟಿರುವುದನ್ನು ಕಂಡು ನನಗೆ ಆನಂದವಾಗುತ್ತಿದೆ. ನಾನು ಆತನ ಧ್ವನಿಯನ್ನು ಗೆಲಿಲಿಯ ಸಮುದ್ರ ತೀರದಲ್ಲಿ ಕೇಳಿದ್ದೆ. ಅಂದು ರಾತ್ರಿಯಿಡೀ ಯತ್ನಿಸಿದರೂ ನನಗೆ ಒಂದು ಮೀನೂ ದೊರೆತಿದ್ದಿಲ್ಲವಾದ್ದರಿಂದ ನಾನು ನಿರಾಶನಾಗಿದ್ದೆ. ಆಗ ಆತ ನನ್ನನ್ನು ಕರೆದು 'ಇನ್ನು ನಿನ್ನ ಬಲೆಯನ್ನು ಒಣಗಿಸು. ಇಂದಿನಿಂದ ಮನುಷ್ಯರ ಬಲೆಗಾರನಾಗು,' ಎಂದ. ನಾನು ಮಂತ್ರಮುಗ್ಧನಂತೆ ಆತನ ಹಿಂದೆ ನಡೆದೆ. ಆದರೆ ಜಗತ್ತು ನಮ್ಮ ಮೇಲೆ ಆರೋಪವಿಟ್ಟು ನನ್ನನ್ನು ಸೆರೆಮನೆಗಟ್ಟಿತು. ಆತನನ್ನು ಶಿಲುಬೆಗೇರಿಸಿತು. ಆತನ ತಲೆಯ ಮೇಲೆ ಮುಳ್ಳಿನ ಕಿರೀಟವಿತ್ತು. ಆತನ ಮೃತಶರೀರವನ್ನು ಕಂಡಾಗ ಆತ ಈಶ್ವರನೇ ಎಂದು ನನಗೆ ತಿಳಿದುಹೋಯಿತು. ಶತ್ರುಗಳನ್ನೂ ಪ್ರೀತಿಸಿರಿ, ಯಾರಾದರೂ ಎಡಗಲ್ಲಕ್ಕೆ ಹೊಡೆದರೆ ಬಲಗಲ್ಲವನ್ನು ಮುಂದೆ ಮಾಡಿರಿ. ನಿಮ್ಮನ್ನು ತಿರಸ್ಕರಿಸುವವರನ್ನೂ ಪ್ರೀತಿಸಿರಿ ಎಂದಾತ ಉಪದೇಶಿಸಿದ್ದ."

ಪೀಟರನ ಭಾಷಣದಿಂದ ಮಾರ್ಕಸನೂ ತುಂಬ ಪ್ರಭಾವಿತನಾದ. ಅಷ್ಟರಲ್ಲಿ ನಸುಕು ಹರಿಯತೊಡಗಲು ಎಲ್ಲರೂ ಹೊರಟುಹೋಗತೊಡಗಿದರು. ಅವರೆಲ್ಲ ಹಾಡುತ್ತ ಹೊರಟಿದ್ದಾಗ ಮಾರ್ಕಸ್, ಚಿಲೊ ಮತ್ತು ಕ್ರಾಟನ್ ಅವರನ್ನು ಕಣ್ಣಿಟ್ಟು ನೋಡುತ್ತಿದ್ದರು.

ಅಷ್ಟರಲ್ಲಿ ಮಧುರ ಸ್ವರದಿಂದ ಹಾಡುತ್ತ ಹೊರಟಿರುವ ಲೀಜಿಯಾ ಮಾರ್ಕಸನ ದೃಷ್ಟಿಗೆ ಬಿದ್ದಳು. ಮೂವರೂ ಅವಳ ಬೆನ್ನ ಹಿಂದೆಯೆ ನಡೆದರು. ಲೀಜಿಯಳ ಜೊತೆಯಲ್ಲಿ ಮರಿಯಮ್ ಮತ್ತು ಅವಳ ಮಗ ನಜಾರಿಯಸ್ ಇದ್ದರು. ಲೀಜಿಯ

ಸಾವಿತ್ರಿಯ ಸೌಂದರ್ಯದ ಗುಟ್ಟು...

'ಲಕ್ಸ್‌ನಿಂದ ನನ್ನ ಸೌಂದರ್ಯ ಅರಳುತ್ತದೆ'



'ಬಣ್ಣಗಳೆಷ್ಟು ರಮ್ಯ, ಸಾಬೂನು ಎಷ್ಟು ಸೌಮ್ಯ!' ಅನ್ನುತ್ತಾಳೆ ಸಾವಿತ್ರಿ

ಹಿಂದುಸ್ತಾನ್ ಲೀವರ್ ಅವರ ತಯಾರಿಕೆ

G6—16

ಅವರಲ್ಲಿಯೆ ಅಡಗಿದ್ದಳು. ಅವರು ಒಂದು ಓಣಿಯಲ್ಲಿ ತಿರುಗುತ್ತಿದ್ದಾಗ ಯುರೂಸಸ್ ಮಾರ್ಕಸನ ಗುಂಪಿನ ಎದುರು ಬಂದು, "ಸೇನಾಪತಿ, ಮುಂದಕ್ಕೆ ಹೋಗಲಾಗದು" ಎಂದ.

ಮಾರ್ಕಸ್ ತಟ್ಟನೆ ಟೊಂಕದಿಂದ ಚೂರಿ ಹಿರಿದ. ಯುರೂಸಸ್ ಹಾರಿ ಅವನ ಕೈಹಿಡಿದು ಒದ್ದ ರಭಸಕ್ಕೆ ಮಾರ್ಕಸ್ ಒಂದು ಗೋಡೆಗೆ ಅಪ್ಪಳಿಸಿ ಮೂರ್ಛೆ ಹೋದ. ಕ್ರಾಟನ್ ಮತ್ತು ಯುರೂಸಸ್‌ರಲ್ಲಿ ಕುಸ್ತಿ ಶುರುವಾಗಲು ಯುರೂಸಸ್ ಕ್ರಾಟನ್ನನ್ನು ಎತ್ತಿ ಒಗೆದು ಎಚ್ಚರ ತಪ್ಪಿಸಿ ಓಣಿಯ ತುದಿಗಿದ್ದ ನದಿಯ ಸೇತುವೆಯ ಮೇಲೆ ಒಗೆದ. ಕ್ರಾಟನ್ನನ ದೇಹ ಉರುಳುತ್ತ ಹೋಗಿ ನದಿಯಲ್ಲಿ ಬಿದ್ದುಬಿಟ್ಟಿತು. ಆತ ಸತ್ತನೆಂದು ತಿಳಿದು ಯುರೂಸಸ್ ತುಸು ಗಾಬರಿಯಾದ. ಆತ ಮಾರ್ಕಸ್‌ನನ್ನೆತ್ತಿಕೊಂಡು ಮರಿಯಮ್ಮಳ ಮನೆಗೆ ಒಯ್ದ. ಮಾರ್ಕಸನ ತಲೆಗಾದ ಗಾಯದಿಂದ ರಕ್ತ ಸೋರುತ್ತಿತ್ತು. ಈ ಹೊಡೆದಾಟ ಆರಂಭವಾಗುತ್ತಲೇ ಚಿಲೊ ಹೆದರಿ ಓಡಿ ಹೋಗಿಬಿಟ್ಟಿದ್ದ.

ಮರಿಯಮ್ಮನ ಮನೆಯಲ್ಲಿ ಮಾರ್ಕಸನಿಗೆ ಎಚ್ಚರವಾದಾಗ ಅವನ ತಲೆಯ ಗಾಯವನ್ನು ಲೀಜಿಯು ತೊಳೆಯುತ್ತಿದ್ದಳು. ಆತನಿಗೆ ಪೂರ್ತಿ ಎಚ್ಚರವಾದಾಗ ತುಂಬ ಹುಶಾರಿಯೆನಿಸಿತು. ಕೋಣೆಯಲ್ಲಿ ಮಾತ್ರ ಯಾರೂ ಇರಲಿಲ್ಲ. ಆತ ಎದ್ದು ತನ್ನ ಬಟ್ಟೆಗಳನ್ನು ಹಾಕಿಕೊಳ್ಳುತ್ತಿದ್ದಾಗ ಲೀಜಿಯ ಮತ್ತು ಯುರೂಸಸ್ ಕೋಣೆಗೆ ಬಂದರು. "ಯುರೂಸಸ್ ಏನೊ ಹೇಳಬಯಸುತ್ತಾನೆ" ಎಂದಳು ಲೀಜಿಯ. "ನಿಮ ಮಿತ್ರನನ್ನು ನಾನು ಕೊಂದುಬಿಟ್ಟೆ. ನನ್ನನ್ನು ಕ್ಷಮಿಸಬೇಕು" ಎಂದ ಯುರೂಸಸ್.

ಮಾರ್ಕಸ್ ಆಶ್ಚರ್ಯದಿಂದ "ಆಂ! ನೀನು ಕ್ರಾಟನ್ನನನ್ನು ಕೊಂದು ಬಿಟ್ಟೆಯಾ! ಶಹಬಾಸ್. ಮತ್ತೆ ಆ ಮುದಿ ಗ್ರೀಕನನ್ನು...."

"ಇಲ್ಲ. ಆತ ಮೊದಲೇ ಓಡಿ ಹೋಗಿಬಿಟ್ಟಿದ್ದ."

"ಯುರೂಸಸ್‌ನನ್ನು ಕ್ಷಮಿಸಿ" ಎಂದಳು ಲೀಜಿಯ.

ಮಾರ್ಕಸ್ ತುಸು ವ್ಯಂಗ್ಯವಾಗಿ, "ನೀನು ನನ್ನನ್ನೂ ಏಕೆ ಕೊಲ್ಲಲಿಲ್ಲ?" ಎಂದು ಯುರೂಸಸ್‌ನನ್ನು ಕೇಳಿದ.

"ಹತ್ಯೆ ನಮ್ಮ ಧರ್ಮಕ್ಕೆ ವಿರುದ್ಧವಾದದ್ದು."

"ಅದಕ್ಕಾಗಿಯೆ ಗಾಯಗೊಳಿಸಿ ಇಲ್ಲಿ ತಂದು ಉಪಚರಿಸಿದಿರೇನು?"

ಯುರೂಸಸ್ ಹೋದ ಮೇಲೆ ಮಾರ್ಕಸ್ ಹೇಳಿದ: "ಲೀಜಿಯ, ನಾನು ಸೋತೆ. ನೀನಿನ್ನು ಸ್ವತಂತ್ರಳು. ನಾನು ಇನ್ನು ಮೇಲೆ ನಿನ್ನ ಹಿಂದೆ ಬರುವುದಿಲ್ಲ. ಈಗಲಾದರೂ ಸಂತೋಷವಾಯಿತೆ?" ಇಷ್ಟೆಂದು ಆತ ಬಾಗಿಲತ್ತ ಹೊರಟ. ಲೀಜಿಯ ಮುಂದೆ ಬಂದು ಆತನನ್ನಾಲಿಂಗಿಸಿಕೊಂಡು, "ಮಾರ್ಕಸ್, ಪ್ರಿಯ ಮಾರ್ಕಸ್" ಎಂದಳು.

ಚುಂಬನಗಳ ಆವೇಗ ಇಳಿದ ಬಳಿಕ ಮಾರ್ಕಸ್ ನುಡಿದ. "ಇಷ್ಟು ಕಷ್ಟಪಟ್ಟು ದೊರಕಿಸಿದ ವಸ್ತು ತುಂಬ ಬೆಲೆಯುಳ್ಳದ್ದು. ಲೀಜಿಯ, ನೀನು ನನ್ನ ಪತ್ನಿಯಾಗಲಾರೆಯಾ?"

'ಆಗುವೆ."

"ಹಾಗಾದರೆ ನನ್ನ ಸಂಗಡ ಎಂಟಿಯಮ್ಮಿಗೆ ನಡೆ. ಅಲ್ಲಿ ನಮ್ಮ ವಿವಾಹ ಸಮಾರಂಭ ಜರುಗುವುದು."

ಲೀಜಿಯ ಅವನನ್ನು ಪುನಃ ಚುಂಬಿಸಿ ನುಡಿದಳು: "ಪಾಲ್ ಇಷ್ಟರಲ್ಲೆ ಬರಲಿದ್ದಾರೆ. ನಾನವರ ಆಶೀರ್ವಾದ ಪಡೆಯಬೇಕು."

"ಸರಿ. ಇದೇನು?" ಎಂದು ಮಾರ್ಕಸ್ ಕೋಣೆಯಲ್ಲಿದ್ದ ಕಟ್ಟಿಗೆಯ ಶಿಲುಬೆಯನ್ನು ತೋರಿಸುತ್ತ ಕೇಳಿದ.

"ಅದು ಯೇಸುವನ್ನು ಬಲಿ ತೆಗೆದುಕೊಂಡ ಶಿಲುಬೆ."

"ಅಂದರೆ ಇದೇ ನಿಮ್ಮ ಪರಮಾತ್ಮನ ಪ್ರತೀಕವೇನು? ಸಿಸಿಲಿಯಲ್ಲಿ ನಮ್ಮ ತೋಟದಲ್ಲಿ ದೊಡ್ಡದೊಂದು ಶಿಲುಬೆಯನ್ನು ಮಾಡಿಸಿಕೊಡುತ್ತೇನೆ" ಎಂದ ಮಾರ್ಕಸ್ ವ್ಯಂಗ್ಯ ಸ್ವರದಲ್ಲಿ.

ಲೀಜಿಯ ಹೇಳಿದಳು. "ನೋಡಿ, ಇಲ್ಲದ ಚೇಷ್ಟೆ ಮಾಡಬೇಡಿ. ನಾನು ನಿಮ್ಮನ್ನು ವಿವಾಹವಾಗಲು ಯಾವ ಕರಾರೂ ಹಾಕುವುದಿಲ್ಲ. ಆದರೆ ನಿಮ್ಮ ಮನಸ್ಸಿನಲ್ಲೂ ಯೇಸುವಿನ ಬಗೆ ಪ್ರೀತಿ ಹುಟ್ಟೀತೆಂದು ಆಶಿಸುತ್ತಿದ್ದೇನೆ."

"ನನ್ನ ಮನಸ್ಸಿನಲ್ಲಿ ನಿನಗೊಬ್ಬಳಿಗೇ ಸ್ಥಳವಿದೆ. ಅಲ್ಲಿ ಮತ್ತಾರಿಗೆ ಸ್ಥಾನ ಸಿಕ್ಕೀತು?"

ಅಷ್ಟರಲ್ಲಿ ಪಾಲ್ ಒಳಗೆ ಬಂದ. ಎಲ್ಲವನ್ನೂ ಗ್ರಹಿಸಿಕೊಂಡ ಆತ ಮಾರ್ಕಸನಿಗೆ "ನಾವು ನಿಮ್ಮ ಪ್ರತೀಕ್ಷೆಯಲ್ಲೇ ಇದ್ದೆವು" ಎಂದ.

"ಮಾರ್ಕಸ್ ನನ್ನನ್ನು ಲಗ್ನವಾಗುತ್ತೇನೆಂದಿದ್ದಾರೆ. ನಾನಿವರನ್ನು ಎಷ್ಟು ಪ್ರೀತಿಸುತ್ತೇನೆಂದು ನೀವು ಬಲ್ಲಿರಿ. ಆದರೆ ಜಗತ್ತಿನಲ್ಲಿ ಈ ಪ್ರೇಮದ ಹೊರತು ಬೇರೇನೋ ಇದೆಯೆಂಬುದನ್ನೂ ಅರಿಯಬಯಸುತ್ತೇನೆ" ಎಂದು ಲೀಜಿಯ ಪಾಲನಿಗೆ ಹೇಳಿದಳು.

ಆಗ ಮಾರ್ಕಸ್ ಸಿಟ್ಟಿಗೆದ್ದು ಹೇಳಿದ, "ನನಗೇನೂ ಹೇಳಬೇಡಿ. ನೀವಿಬ್ಬರೂ ಕೂಡಿ ನನ್ನನ್ನು ಮೂರ್ಖನನ್ನಾಗಿ ಮಾಡುತ್ತಿದ್ದೀರೆಂದು ನನಗೆ ತಿಳಿದಿದೆ. ನಾನೇನು ಮಾಡಬೇಕೊ ತಿಳಿಯದಾಗಿದೆ."

ಪಾಲ್ ನುಡಿದ: "ಯುದ್ಧ ಮತ್ತು ರಕ್ತಪಾತವಿಲ್ಲದೆ ಪ್ರೇಮಬಲದಿಂದ ವಿಜಯ ಸಂಪಾದಿಸಬೇಕು ಎಂದು ನಿಮಗಿನ್ನೂ ಗೊತ್ತಾಗಿಲ್ಲವೆ? ಮನುಷ್ಯನನ್ನು ಗುಲಾಮನನ್ನಾಗಿ ಮಾಡಿಡುವುದು ಎಂಥ ದೊಡ್ಡ ತಪ್ಪು! ನೀವು ನಿಮ್ಮ ಗುಲಾಮರಿಗೇಕೆ ಸ್ವಾತಂತ್ರ್ಯ ಕೊಡುವುದಿಲ್ಲ?"

ಈ ಮಾತುಗಳಿಂದ ಅಸಮಾಧಾನಗೊಂಡು ಮಾರ್ಕಸ್ ಲೀಜಿಯಳ ಕಡೆ ತಿರುಗಿ ಹೇಳಿದ: "ಅಂತೂ ಇಂದು ನಾನು ಮೂರ್ಖನಾಗಬಿಟ್ಟೆ. ಆದರೆ ನನ್ನ ವಚನವನ್ನು ನಾನು ತಿರುಗಿ ತೆಗೆದುಕೊಳ್ಳುವುದಿಲ್ಲ. ನಾನು ನಿನಗೆ ನಿನ್ನ ಸ್ವಾತಂತ್ರ್ಯವನ್ನು ಕೊಡುವೆನು. ನಿನಗೆ ಇಷ್ಟಬಿದ್ದ ಮಾರ್ಗ ಹಿಡಿ. ನನ್ನ ನಿನ್ನ ಈ ಭೆಟ್ಟಿಯ ಪ್ರಸ್ತಾಪವನ್ನೂ ನಾನಿನ್ನು ಮಾಡುವುದಿಲ್ಲ."

ಸಿಟ್ಟಿನಿಂದ ಥರಥರ ಕಂಪಿಸುತ್ತಿದ್ದ ಮಾರ್ಕಸ್ ಮುಂದೆ ನಡೆದು ಗೋಡೆಗೆ ಆನಿಸಿಟ್ಟಿದ್ದ ಶಿಲುಬೆಯನ್ನು ಕೆಳಗುರುಳಿಸಿದ. ಲೀಜಿಯ ಮುಂದೆ ಬಂದು ಶಿಲುಬೆಯನ್ನೆತ್ತಿ ಹಿಡಿದು ಅಳುದನಿಯಲ್ಲಿ ಹೇಳಿದಳು: "ಪ್ರಿಯಕರಾ, ನನ್ನನ್ನು ಅರ್ಥಮಾಡಿಕೊಳ್ಳಲು ಯತ್ನಿಸು. ನನ್ನ ಭಕ್ತಿಶ್ರದ್ಧೆಗಳನ್ನು ಗುರುತಿಸು. ನನ್ನನ್ನು ಧರ್ಮಸಂಕಟಕ್ಕೆ ಗುರಿ ಮಾಡಬೇಡ."

"ಇಲ್ಲ ಲೀಜಿಯ. ಇದೆಲ್ಲ ನಡೆಯದು. ನೀನು ಯೇಸು ಅಥವಾ ನನ್ನನ್ನು ಆರಿಸಿಕೊಳ್ಳಬೇಕಾಗುವುದು. ನಿನ್ನನ್ನು ನಾನು ಈಶ್ವರನೆಂದುಕೊಳ್ಳುವ ಆ ಯೇಸುವಿನ ಕೈಗೊಪ್ಪಿಸೆನು. ಹಾಗೆ ಮಾಡುವಾಗ ನೀನು ನನಗೆ ಸಿಕ್ಕದೆ ಹೋದರೂ ಸರಿ."

ಮಾರ್ಕಸ್ ಹೋಗಿಬಿಟ್ಟ. ಲೀಜಿಯ ಅಳುತ್ತಲೇ ಇದ್ದಳು.

ನೀರೋ ಪರಿವಾರದೊಂದಿಗೆ ಬೇಸಿಗೆಯನ್ನು ಕಳೆಯಲು ಎಂಟಿಯಮ್ಮಿಗೆ ಬಂದಿದ್ದ. ಅವನ ಸಂಗಡ ಪೆಟ್ರೊನಿಯಸ್ ಮತ್ತು ಅವನ ಪ್ರೇಯಸಿ ಇದ್ದರು. ಇಲ್ಲಿ ಬಂದ ಮೇಲೆ ನೀರೋ ಶಿಲ್ಪಕಾರನೊಬ್ಬ ತಯಾರಿಸಿದ್ದ ರೋಮ್ ನಗರದ ಹೊಸ ನಕಾಶೆಯನ್ನು ಮನ್ನಿಸಿದ.

ಮರುದಿನ ಮಾರ್ಕಸ್ ಎಂಟಿಯಮ್ಮಿಗೆ ಬಂದೊಡನೆ ಸೇವಕನೊಬ್ಬ ಬಂದು, "ಅಂತಃಪುರದಲ್ಲಿ ಸಮ್ರಾಜ್ಞಿಯವರು ನಿಮ್ಮ ಹಾದಿ ಕಾಯುತ್ತಲಿದ್ದಾರೆ" ಎಂದ.

ಮಾರ್ಕಸ್ ಪಪಯಿಯಾಳ ಅಂತಃಪುರಕ್ಕೆ ಹೋಗಬೇಕಾಯಿತು. ಮದ್ಯ ಕುಡಿದು ಮತ್ತಳಾದ ಪಪಯಿಯಾ ಮಂಚದ ಮೇಲೆ ಒರಗಿಕೊಂಡಿದ್ದಳು. ಆವಳ ಸನಿಹದಲ್ಲಿ ಎರಡು ಚಿರತೆಗಳನ್ನು ಸರಪಳಿಗಳಿಂದ ಕಟ್ಟಿಹಾಕಿದ್ದರು. "ಬಾ ಸೇನಾಪತಿ ಮಾರ್ಕಸ್, ನಿನ್ನ ಹಾದಿಯನ್ನೆ ಕಾಯುತ್ತಲಿದ್ದೆ. ನೀನು ಸಿಸಿಲಿಗೆ ಹೋಗಲಿದ್ದೀಯಾ?" ಎಂದು ಪಪಯಿಯಾ ಕೇಳಿದಳು.

"ಹೌದು ಸಮ್ರಾಜ್ಞಿ. ಮೂರು ವರ್ಷಗಳಿಂದ ನಾನಲ್ಲಿಗೆ ಹೋಗಿಲ್ಲ."

"ಇರಲಿ ನಿನ್ನ ಆ ಕ್ರಿಶ್ಚನ್ ಪ್ರೇಯಸಿಯ ಕಥೆ ಎಲ್ಲಿಗೆ ಬಂತು?"

"ಅವಳ ವಿಚಾರವನ್ನು ಬಿಟ್ಟುಕೊಟ್ಟಿದ್ದೇನೆ. ಅವಳ ಹಂಬಲದಲ್ಲಿ ಇನ್ನೂ ಹುಚ್ಚನಾಗಬಯಸುತ್ತಿಲ್ಲ."

"ಭೇಷ್. ಅಂತೂ ನಿನಗೆ ಬುದ್ಧಿ ಬಂತು. ಮತ್ತೆ, ನಿನ್ನೆ ರಾತ್ರಿ ಸ್ವಪ್ನವೊಂದನ್ನು ಕಂಡೆ. ಯಾವುದೋ ಯುದ್ಧದಲ್ಲಿ ನೀನು ಮಡಿದಿದ್ದೆ. ನಾನು ನಿನ್ನ ರುಂಡವನ್ನು ಎದೆಗವಚಿಕೊಂಡು



ತಲೆಗೂದಲುಗಳಲ್ಲಿ ನನ್ನ ಬೆರಳುಗಳನ್ನಾಡಿಸಿದ್ದೆ. ನೀನು ಮುಗುಳ್ನಗುತ್ತಿದ್ದೆ."

"ಸಮ್ರಾಜ್ಞಿ, ನಾನೇ ಇಲ್ಲಿರುವಾಗ ಕತ್ತರಿಸಿ ಬಿದ್ದ ನನ್ನ ರುಂಡದ ಮಾತೇಕೆ?"

"ಯಾರನ್ನು ತಿರಸ್ಕರಿಸುವಿಯೋ ಅವರನ್ನು ಕೊಲ್ಲಬೇಡ. ಏಕೆಂದರೆ ಸತ್ತು ಆತ ದುಃಖದಿಂದ ಬಿಡುಗಡೆ ಹೊಂದುತ್ತಾನೆ. ಮಾರ್ಕಸ್, ನಾನು ನಿನ್ನನ್ನು ತಿರಸ್ಕರಿಸಿದ್ದೇನೆ. ನೀನು ನನ್ನ ಅವಹೇಳನೆ ಮಾಡಿ ಆ ಕ್ರಿಶ್ಚನ್ನಳ ಬೆನ್ನು ಹತ್ತಿದ್ದಿ. ಆದರೆ ನೆನಪಿರಲಿ, ಇನ್ನೊಮ್ಮೆ ಏನಾದರೂ ಅವಳು ತನ್ನ ಜಾಲವನ್ನು ನಿನ್ನ ಮೇಲೆ ಬೀಸಿದರೆ ನಾನು ನಿಮ್ಮಿಬ್ಬರನ್ನೂ ಕೊಲ್ಲಿಸಿಬಿಡುವೆ."

ಪಿಪಯಿಯಾ ಬಗ್ಗಿ ಎದುರು ನಿಂತಿದ್ದ ಮಾರ್ಕಸನ ತುಟಿಗಳನ್ನು ಚುಂಬಿಸಿದಳು. ತಾನು ಲೀಜಿಯಳನ್ನು ಶಾಶ್ವತವಾಗಿ ಅಗಲಿದಂತಾಯಿತು ಎಂದು ಮಾರ್ಕಸನಿಗೆ ಅನಿಸಿತು.

ಅದೇ ಸಮಯದಲ್ಲಿ ಅತ್ತ ಬಂದ ನೀರೊ ಕಿಟಿಕಿಯಿಂದಲೇ ಈ ದೃಶ್ಯವನ್ನು ಕಂಡು ಮನಸ್ಸಿನಲ್ಲಿಯೇ ಉರಿದೆದ್ದ.

ಏನು ಮಾಡಲಿ ಎಂದು ಅವನಿಗೆ ತಿಳಿಯಲಿಲ್ಲ. ಒಬ್ಬಳು ಅವನ ರಾಣಿ, ಇನ್ನೊಬ್ಬ ಸೇನಾಪತಿ. ಆತ ಕಿಟಿಕಿಯಿಂದ ತನ್ನ ಕೋಣೆಯವರೆಗೆ ಶತಪಥ ಮಾಡತೊಡಗಿ 'ಪೆಟ್ರೊನಿಯಸ್' ಎಂದು ಕೂಗಿದ.

ಪೆಟ್ರೊನಿಯಸನನ್ನು ಕಂಡೊಡನೆ ನೀರೊ "ನನ್ನನ್ನು ರಕ್ಷಿಸು" ಎಂದ.

"ಪ್ರಭು, ಅಂಥ ವಿಪತ್ತೇನು?" ಎಂದು ಕೇಳಿದ ಪೆಟ್ರೊನಿಯಸ್.

"ಇಂದು ನನ್ನ ನಂಬಿಕೆ ಹಾಳಾಗಿ ಹೋಯಿತು. ಇಂದು ನನ್ನ ದೇವತ್ವ ಅಳಿಯಿತು. ಬಹುಶಃ ನಾಳೆ ಇಡೀ ರೋಮ್ ನನ್ನ ಹೆಸರಿನ ಮೇಲೆ ಉಗುಳೀತು. ಇಂದಿನದು ಸತ್ಯರಾತ್ರಿ. ನನ್ನ ಹೃದಯವನ್ನು ತೆರೆದಿಡುವೆ. ಇಡೀ ರೋಮ್ ನನ್ನನ್ನು ಪತ್ನಿ ಮತ್ತು ಮಾತೆಯ ಕೊಲೆಪಾತಕಿ ಎಂದು ಭಾವಿಸಿದೆಯೆನ್ನುವುದನ್ನು ಬಲ್ಲೆ. ಆದರೆ ಅವರ ಕೊಲೆಯಿಂದ ನಾನು ಎಂಥ ಮಹಾ ತ್ಯಾಗ ಮತ್ತು ಬಲಿದಾನಗಳನ್ನು ಮಾಡಬಲ್ಲೆ ಎಂದು ಜಗತ್ತಿಗೆ ತೋರಬಯಸಿದ್ದೆ."

ಪೆಟ್ರೋನಿಯಸ್ ತೆಪ್ಪಗೆ ನಿಂತು ಈ ಬಡಬಡಿಕೆಯ ಅರ್ಥ ಮಾಡಿಕೊಳ್ಳಲೆತ್ನಿಸುತ್ತಿದ್ದ.

ನೀರೋ ಹುಚ್ಚನಂತೆ ತನ್ನ ಬಡಬಡಿಕೆಯನ್ನು ಮುಂದುವರಿಸಿದ. "ಹೌದು, ಪೆಟ್ರೋನಿಯಸ್, ನಾನೊಬ್ಬ ಕಲಾಕಾರ. ಆದರೆ ನೀನೇ ಒಮ್ಮೆ ಹೇಳಿದ್ದೆ ನನ್ನ ಜ್ವಾಲಾ ಗೀತವು ಸಾಕಷ್ಟು ಶಕ್ತಿಯುತವಾಗಿಲ್ಲೆಂದು. ನೀನು ಹೇಳಿದ್ದು ಸರಿಯೆಂದು ಕಾಣುತ್ತದೆ. ನಾನಾವಾಗಲೂ ಉರಿಯುತ್ತಿರುವ ಬೆಂಕಿಯ ಜ್ವಾಲೆಯನ್ನು ಕಂಡಿಲ್ಲ, ಉರಿಯುವ ನಗರಗಳನ್ನು ಕಂಡಿಲ್ಲ, ಮನೆಗಳನ್ನು ಕಂಡಿಲ್ಲ. ಅಂದ ಮೇಲೆ ನನ್ನ ಜ್ವಾಲಾಗೀತೆಯಲ್ಲಿ ವಾಸ್ತವಿಕತೆ ಹೇಗೆ ಬಂದೀತು! ಮತ್ತೆ, ಟ್ರಾಯ್ ಉರಿದುಹೋದದ್ದರಿಂದ ನಿನಗೆ ಪಶ್ಚಾತ್ತಾಪವಾಗುವುದೆ?"

"ಎಳ್ಳಷ್ಟೂ ಇಲ್ಲ ಪ್ರಭು. ಟ್ರಾಯ್ ಸುಟ್ಟುಹೋಗಿರದಿದ್ದರೆ ಗ್ರೀಕರು ಪ್ರಿಯಮ್ ಮೇಲೆಂದೂ ಯುದ್ಧ ಮಾಡುತ್ತಿರಲಿಲ್ಲ. ಟ್ರಾಯ್ ಯುದ್ಧವಾಗಿರದಿದ್ದರೆ ಹೋಮರನು ಇಲಿಯಡ್‌ನ್ನು ರಚಿಸುತ್ತಲೇ ಇರಲಿಲ್ಲ."

"ಅಂದಮೇಲೆ ರೋಮ್ ನಗರವನ್ನು ಸುಟ್ಟು ನಿಜಾನುಭವ ಪಡೆಯಬಾರದೇಕೆ?" ನೀರೋ ತತ್‌ಕ್ಷಣ ಹೇಳಿದ.

ಪೆಟ್ರೋನಿಯಸ್ ದಂಗಾದ. ಇದೆಂಥ ಹುಚ್ಚು! ಈ ಮೂರ್ಖ ವಿಕ್ಷಿಪ್ತ ಸಮ್ರಾಟ ಒಂದು ಗೀತಕ್ಕಾಗಿ ರೋಮ್. ನಗರವನ್ನು ಸುಟ್ಟು ಭಸ್ಮ ಮಾಡುವನೇ? ಪೆಟ್ರೋನಿಯಸ್ ಮೌನವಾಗಿರುವುದನ್ನು ಕಂಡು ಅಸ್ವಸ್ಥನಾದ ನೀರೋ ಅವನಿಗೆ ರೋಮ್ ನಗರದ ಹೊಸ ನಕ್ಷೆಯನ್ನು ತೋರಿಸಿ, "ನೋಡು, ಇದು ನನ್ನ ಮೆಚ್ಚಿಕೆಯ ರೋಮ್. ಹಳೆಯದನ್ನು ಸುಟ್ಟು ಹೊಸದನ್ನು ಕಟ್ಟಬೇಕು. ಈ ಹೊಸ ರೋಮ್‌ನ ಹೆಸರು ನಿರೋಪೋಲಿಸ್ ರೋಮ್ ಎಂದಾಗುವುದು" ಎಂದ.

ಸುಮ್ಮನಿರಲಾರದೆ ಪೆಟ್ರೋನಿಯಸ್ ಹೇಳಿದ: "ಪ್ರಭು, ನಮ್ಮ ಪ್ರಾಚೀನ ರೋಮ್, ನಮ್ಮ ಪ್ರಿಯಭೂಮಿ...."

"ಸುಮ್ಮನಿರು. ಜಗತ್ತಿನ ನಕಾಶೆಯನ್ನು ಬದಲಿಸುವುದೇ ನಮ್ಮ ಕಾವ್ಯ. ನವನಿರ್ಮಾಣದಲ್ಲೇ ಮನುಷ್ಯಜೀವನದ ಸಾರ್ಥಕತೆ ಇದೆ. ಇಂದು ರಾತ್ರಿಯೆ ನಾನು ಉರಿಯುವ ರೋಮ್‌ವನ್ನು ಕಂಡು ದೇವಲೋಕಕ್ಕಿಂತಲೂ ಮೇಲೇರುವೆ. ಆಗ ನಿನಗೆ ನನ್ನ ಗೀತೆಯಲ್ಲಿ ಜೀವಕಳೆ ಕಂಡೀತು."

ನೀರೋನ ಹುಚ್ಚು ಹಟವನ್ನು ಬಲ್ಲ ಪೆಟ್ರೋನಿಯಸ್ ಭವಿಷ್ಯದ ಕಲ್ಪನೆಯಿಂದ ಬಿಳುಪೇರಿ ಹೋದ

ರೋಮ್ ಉರಿಯುತ್ತಲಿತ್ತು. ಇಡೀ ರೋಮ್ ನಗರದಲ್ಲಿ ಅಗ್ನಿಯ ಜ್ವಾಲೆಗಳು ಆಕಾಶದತ್ತ ಚಾಚುತ್ತಿದ್ದವು. ಈ ಪ್ರಚಂಡ ಉರಿಯನ್ನು ಕಂಡೊಡನೆ ಮಾರ್ಕಸ್‌ನಿಗೆ ಲೀಜಿಯಳ ನೆನಪಾಯಿತು. ಆತ "ನದಿಯ ಆಚೆ ದಡದ ಗತಿ ಏನು?" ಎಂದು ಕೂಗಿದ.

ಯಾರೋ ಅಂದರು: "ಎಲ್ಲ ಮನೆಗಳೂ ಒಣಗಿದ ಕಟ್ಟಿಗೆಗಳಂತೆ ಉರಿಯುತ್ತಿವೆ."

ಪಿಪಯಿಯಾಳ ಆಲಿಂಗನದಿಂದ ಬಿಡಿಸಿಕೊಂಡು ಮಾರ್ಕಸ್ ಹೊರಗೋಡಿದ. ಅಡ್ಡಗಟ್ಟಿದ ಪಿಪಯಿಯಾಳನ್ನು ಬದಿಗೆ ಸರಿಸಿ ಮಾರ್ಕಸ್ ಒಂದು ರಥವನ್ನೇರಿ ಉರಿಯುತ್ತಿದ್ದ ರೋಮ್‌ನತ್ತ ಧಾವಿಸಿದ.

ಪಿಪಯಿಯಾಳ ಕಣ್ಣುಗಳಲ್ಲಿ ಅತೃಪ್ತ ವಾಸನೆ ಮತ್ತು ಈರ್ಷೆಗಳ ಪ್ರತಿಬಿಂಬ ಮೂಡಿತು. ಮಾರ್ಕಸ್‌ನನ್ನು ತಡೆಯಲು ಅವಳು ಆಜ್ಞಾಪಿಸಿದಳು. ಸೈನ್ಯಕ್ಕೆ ಸೈನ್ಯವೇ ಅವಳ ಆಜ್ಞೆ ಪಾಲಿಸಲು ಧಾವಿಸಿತು.

ಮಾರ್ಕಸ್‌ನನ್ನು ರಸ್ತೆಯಲ್ಲಿ ಅಡ್ಡಗಟ್ಟಲಾಯಿತು. ಆದರೆ ಆತ ಖಡ್ಗ ಬೀಸಿದ ಚಮತ್ಕಾರದಿಂದ ಎದುರಾಳಿ ಸರದಾರನ ಕೈತುಂಡಾಯಿತು. ಅವನ ರಥದ ಕುದುರೆಗಳು ಬೆದರಿದ್ದರಿಂದ ರಥ ಲಾಗ ಹಾಕಿತು.

ಮಾರ್ಕಸ್ ರೋಮ್‌ನತ್ತ ಓಡುತ್ತಲಿದ್ದ. "ರೋಮ್ ಉರಿಯುತ್ತಿದೆ. ಲೀಜಿಯ ಬೆಂದು ಹೋಗುತ್ತಿದ್ದಾಳೆ" ಎಂದು ಯಾರೊ ಅವನ ಕಿವಿಯಲ್ಲಿ ಹೇಳುತ್ತಿದ್ದಂತಿತ್ತು.

ರೋಮ್ ನಗರವನ್ನು ನಾಲ್ಕೂ ಕಡೆಗಳಿಂದ ಸುತ್ತುಗಟ್ಟಿದ್ದ ಗುಡ್ಡಗಳ ಸಾಲಿನ ಮೇಲೆ ಮಾ-

ರ್ಕಸ್ ಆ ಭಯಾನಕ ದೃಶ್ಯವನ್ನು ನೋಡಿದ. ಹೊಗೆಯಲ್ಲಿ ಏನೂ ಕಾಣಿಸುತ್ತಿರಲಿಲ್ಲ. ಅಷ್ಟರಲ್ಲಿ ಅವನಿಗೆ ಓಡಿ ಹೋಗುತ್ತಿದ್ದ ಜನರ ಗುಂಪೊಂದು ಕಾಣಿಸಲು ಆತ ಅವರತ್ತ ಧಾವಿಸಿದ. ಆ ಜನ "ನೀರೊ ಮತ್ತು ಬೆಂಕಿ ಹಚ್ಚಿದವರ ಸರ್ವನಾಶವಾಗಲಿ" ಎಂದು ಚೀರುತ್ತಿದ್ದರು. ಮಾರ್ಕಸ್ ಹೆದರಿ ಅವರತ್ತ ಹೋಗದೆ ಖಡ್ಗಧಾರಿಯಾಗಿ ನಡೆಯುತ್ತಲೇ ಆ ಹೊಗೆಯಲ್ಲಿ ರೋಮ್‌ದತ್ತ ಹೋಟ. ಸ್ವರಕ್ಷಣೆಗಾಗಿ ಆತ ಬಾಯಿ ಮೂಗುಗಳಿಗೆ ಬಟ್ಟೆ ಕಟ್ಟಿಕೊಂಡ. ಶ್ವಾಸೋಚ್ಛ್ವಾಸ ಅವನಿಗೆ ಕಠಿಣವಾಗತೊಡಗಿತ್ತು. ಅವನ ಪುಪ್ಫುಸ ಬಿರಿದು ಹೋಗುವಂತೆನಿಸಿತು. ಅದರೂ ಆತ ಬೀಳುತ್ತೇಳುತ್ತ ಮರಿಯಮ್ಮಳ ಮನೆಯನ್ನು ಮುಟಿದ. ಅಲ್ಲಿಯೆ ಅಲ್ಲವೇ ಆತ ಒಂದು ದಿನ ಅಳುತ್ತಿದ್ದ ಲೀಜಿಯಳನ್ನು ಬಿಟ್ಟು ಬಂದಿದ್ದು ?

ರೋಮ್‌ನ ಸ್ಥಿತಿ ಭಯಾನಕವಾಗಿತ್ತು. ಎಲ್ಲೆಲ್ಲಿಯೂ, ಓಣಿ ಓಣಿ, ಬೀದಿ ಬೀದಿಗಳಲ್ಲಿ ಬೆಂಕಿ ಧಗಧಗ ಉರಿಯುತ್ತಲಿತ್ತು. ಸುಡುತ್ತಿರುವ ಕಟ್ಟಿಗೆಗಳ ಭೀಕರ ಸದ್ದು ಕೇಳುತ್ತಿತ್ತು. ಹೆಂಗಸರು ಮಕ್ಕಳ ಆರ್ತನಾದ ಗಗನವನ್ನು ಭೇದಿಸುತ್ತಿತ್ತು. ಗಂಡಸರು ಮನೆಯ ಸಾಮಾನುಗಳನ್ನು ಉಳಿಸಿಕೊಳ್ಳುವ ಪ್ರಯತ್ನ ನಡೆಸಿದ್ದರು.

ಮರಿಯಮ್ಮಳ ಮನೆ ದೊಡ್ಡ ಚಿತೆಯಂತೆ ಕಾಣಿಸುತ್ತಿತ್ತು. ಬೆಂಕಿಯ ಹೊರತು ಮನೆಯಲ್ಲಿ ಮತ್ತೇನೂ ಕಾಣಿಸುತ್ತಿರಲಿಲ್ಲ. ಮನೆಯವರಾರೂ ಬದುಕುಲಿದಂತಿರಲಿಲ್ಲ. ಆದರೆ ಲೀಜಿಯಳ ವಿಚಾರದಲ್ಲಿ ಯಾವುದನ್ನೂ ನಿಶ್ಚಿತವಾಗಿ ತಿಳಿಯದೆ ಮಾರ್ಕಸನಿಗೆ ಸಮಾಧಾನವಾಗುವಂತಿರಲಿಲ್ಲ.

ಧೈರ್ಯದಿಂದ ಆತ ಉರಿಯುತ್ತಿದ್ದ ಆ ಮನೆಯೊಳಗೆ ನುಗ್ಗಿದ. ಆದರೆ ಯಾರೂ ಕಾಣಿಸಲಿಲ್ಲ. ಮನೆ ದೊಡ್ಡ ಭಟ್ಟಿಯಾಗಿಬಿಟ್ಟಿತ್ತು. ನಿರಾಶೆಯಿಂದ ಆತ ಮನೆಯ ಹೊರಗೆ ಬಂದ. ಆಗ ಆತನಿಗೆ ಅಲ್ಲಿಯೆ ತುಸು ದೂರದಲ್ಲಿದ್ದ ಒಂದು ಚಿಕ್ಕ ಬಯಲಿನಲ್ಲಿ ಕೆಲ ನಾಗರಿಕರು ಕಾಣಿಸಿದರು. ಮಾರ್ಕಸ್ ಅವರನ್ನು ಸಮೀಪಿಸುವಷ್ಟರಲ್ಲಿ ಬಯಲಿನ ಮಗ್ಗಲಲ್ಲಿದ್ದ ಮನೆಯ ಮಾಡು ಉರಿಯುತ್ತಲೆ ಮುರಿದುಬಿತ್ತು. ಅದರಡಿಗೆ ಅಲ್ಲಿ ನೆರೆದಿದ್ದವರಲ್ಲಿ ಅರ್ಧದಷ್ಟು ಜನ ಸಿಕ್ಕಿಬೀಳಲು ಹಾಹಾಕಾರವೆದ್ದಿತು. ನಾಲ್ಕೂಕಡೆ ಉರಿ– ನಡುವೆ ಈ ಚಿಕ್ಕ ಬಯಲು. ಬಳಿಯಲ್ಲಿ ಒಂದು ಕಾಲುವೆ ಇತ್ತು. ಈ ಕಾಲುವೆ ನಗರದ ನಡುವೆ ಅನೇಕ ಮೈಲುಗಳ ವರೆಗೆ ಸಾಗಿ ಆ ಮೇಲೆ ನದಿಯನ್ನು ಮುಟ್ಟುತ್ತಿತ್ತು. ಈ ಕಾಲುವೆಯಲ್ಲಿ ನಡೆದುಹೋದರೆ ಉಳಿದುಕೊಳ್ಳಬಹುದು ಎಂದು ಮಾರ್ಕಸನಿಗೆ ಹೊಳೆಯಲು ಆತ ಅದರ ದ್ವಾರವನ್ನು ತೆರೆದ. ಆತನೂ ಆತನ ಹಿಂದೆ ಹೆಂಗಸರೂ ಮಕ್ಕಳೂ ಗಂಡಸರೂ ಕಾಲುವೆಯಲ್ಲಿ ನುಗ್ಗಿದರು. ಅಷ್ಟರಲ್ಲಿ ಇನ್ನೊಂದು ಗೋಡೆ ಬೀಳಲು ಕಾಲುವೆಯ ದ್ವಾರ ಮುಚ್ಚಿಹೋಯಿತು. ಕಾಲುವೆಯೊಳಗೆ ಬಂದಿದ್ದವರೊಡನೆ ಮಾರ್ಕಸ್ ಮುಂದುವರಿದ.

ಬಹಳಷ್ಟು ದೂರ ಸಾಗಿದ ಮೇಲೆ ಕಾಲುವೆಯ ನೀರು ನದಿಗೆ ಬೀಳುವ ಜಾಗೆಗೆ ಅವರೆಲ್ಲ ಬಂದರು. ಟೊಂಕಮಟ ನೀರಿತ್ತು. ಒಬ್ಬೊಬ್ಬ-ರನ್ನೇ ಎತ್ತಿ ಮಾರ್ಕಸ್ ನದಿಯ ಸೇತುವೆಯ ರಸ್ತೆ ಆರಂಭವಾಗುತ್ತಿದ್ದ ಸ್ಥಳದಲ್ಲಿದ್ದ ಬಂಡೆಗಲ್ಲಿನ ಮೇಲೆ ಕೂಡ್ರಿಸಿದ. ಸೇತುವೆಯ ಮೇಲೆ ಪ್ರಾಣವುಳಿಸಿಕೊಳ್ಳಲು ಓಡುತ್ತಿದ್ದ ಸಹಸ್ರಾರು ರೋಮ್ ನಿವಾಸಿಗಳ ಗದ್ದಲವಿದ್ದಿತು. ಆ ಗದ್ದಲದಲ್ಲಿ ಮಾರ್ಕಸನಿಗೆ ಅಕಸ್ಮಾತ್ತಾಗಿ ಯುರೂಸಸ್ ಕಾಣಿಸಿದ. ಅವನ ಜೊತೆಯಲ್ಲಿಯೇ ಲೀಜಿಯಳೂ ಓಡುತ್ತಿದ್ದಳು. ಮಾರ್ಕಸ್ "ಲೀಜಿಯಾ, ಲೀಜಿಯಾ" ಎಂದು ಕೂಗುತ್ತ ಅವರತ್ತ ಓಡಿದ.

ಅವನ ಕರೆ ಕೇಳಿದ ಲೀಜಿಯ ಓಡಿ ಬಂದು ಅವನಿಗೆ ತೆಕ್ಕೆ ಬಿದ್ದು, "ಮಾರ್ಕಸ್, ನನ್ನ ಮಾರ್ಕಸ್" ಎಂದಳು.

"ಲೀಜಿಯ, ನೀನು ಬದುಕಿಕೊಂಡೆ."

"ಹೌದು. ಆದರೆ ಮರಿಯಮ್ ಸುಟ್ಟು ಬೂದಿಯಾಗಿ ಹೋದಳು" ಎಂದು ಲೀಜಿಯ ಮತ್ತಾರಿಗೂ ಕೇಳಿಸದಷ್ಟು ಮೆಲ್ಲಗೆ "ಸೇತುವೆಯ ಆಚೆ ಬದಿಯಲ್ಲಿ ನಿಂತಿರುವ ನೀರೋನ ಸೈನ್ಯ ಯಾರನ್ನೂ ಮುಂದಕ್ಕೆ ಹೋಗಲು ಬಿಡುತ್ತಿಲ್ಲ" ಎಂದಳು.

ಮಾರ್ಕಸ್ ನೆಟ್ಟಗೆ ಅಲ್ಲಿಗೆ ಹೋಗಿ "ಯಾರು ಇಲ್ಲಿಯ ನಾಯಕರು ? ದಾರಿ ಬಿಡಿ" ಎಂದು ಕಟ್ಟಾಜ್ಞೆಯಿತ್ತ.

" ಇಲ್ಲ. ಅರಸರ ಅಪ್ಪಣೆಯಂತೆ ಯಾರನ್ನೂ ಮುಂದಕ್ಕೆ ಬಿಡಲಾರೆವು "

" ನನ್ನ ಆಜ್ಞೆಯನ್ನು ಮನ್ನಿಸಿ. ನಾನು ಸೇನಾ ಪತಿ ಮಾರ್ಕಸ್. "

ಸೈನ್ಯ ದಾರಿ ಬಿಡಲು ಜನ ಮುಂದಕ್ಕೆ ನಡೆದರು.

ಮುಂದೆ ಹೋದಾಗ ಎಲ್ಲೆಲ್ಲಿಯೂ ವಿದ್ರೋಹದ ಚಿಹ್ನೆಗಳು ಜನರಿಗೆ ಕಾಣಿಸಿದವು. ನೀರೊ ಹುಚ್ಚನಾಗಿ ಬಿಟ್ಟಿದ್ದಾನೆ ಎಂಬ ಭೀಕರ ವಾರ್ತೆಯೂ ಹಬ್ಬಿತ್ತು. ಜನರ ಕಗ್ಗೊಲೆಯಾಗುತಿದೆಯಂತೆ; ನೀರೋನ ಸಾಕು ಪ್ರಾಣಿಗಳೂ ಸುಟ್ಟು ಹೋಗುತ್ತಲಿವೆ; ಬೆಂಕಿಯಿಂದ ಗಾಯಗೊಂಡ ಹುಲಿಗಳು ಹುಚ್ಚೆದ್ದಿವೆ; ಆನೆಗಳಂತೂ ನೂರಾರು ಜನರನ್ನು ತುಳಿದು ಹಾಕಿವೆ– ಒಂದೇ ಎರಡೇ, ನೂರಾರು ಭಯಂಕರ ಸುದ್ದಿಗಳು ಹಬ್ಬುತ್ತಿದ್ದವು.

ರಸ್ತೆಯೂ ಕಾದು ಕೆಂಡದಂತಾಗಿತ್ತು. ಬೆಂಕಿಯಿಂದ ತಪ್ಪಿಸಿಕೊಂಡು ಬಂದ ಜನರಿಗೆ ಸೈನಿಕರ ಅತ್ಯಾಚಾರದಿಂದ ತ್ರಾಹಿತ್ರಾಹಿಯೆನಿಸಿತ್ತು. " ಪ್ರಳಯದ ದಿನ ಬಂತು. ಯಮರಾಜ ಬರುತ್ತಿದ್ದಾನೆ " ಎಂದು ಜನ ಕೂಗುತ್ತಿದ್ದರು.

ಅಷ್ಟರಲ್ಲಿ ಎದುರಿನ ಗುಡ್ಡದ ಮೇಲಿಂದ ಕೈಲಿ ವೇಣಬತ್ತಿಗಳನ್ನು ಹಿಡಿದುಕೊಂಡು ಕೆಲವರು ಬರುತ್ತಿರುವುದು ಕಾಣಿಸಿತು. ಆ ಜನ ಸಮೀಪ ಬಂದಂತೆ ಅವರು "ಯೇಸು, ಯೇಸು" ಎನ್ನುತ್ತಿರುವುದು ಕೇಳಿಸಿತು. ಆ ಗದ್ದಲದ ನಡುವಿನಿಂದ ಒಮ್ಮಿಂದೊಮ್ಮೆ ಒಂದು ಗಂಭೀರವಾಣಿ ಕೇಳಿ ಬಂತು : " ಶಾಂತಿ, ಶಾಂತಿ! ಶಾಂತಿ ನಿಮ್ಮ ಜೊತೆಗಿದೆ."

ಯೇಸುವಿನ ದೂತ ಪೀಟರನ ಈ ಅಮೃತ ವಾಣಿಯು ಉರಿಯುತ್ತಿದ್ದ ನಾಗರಿಕರ ಮೇಲೆ



ಮಳೆಗರೆದಂತೆ ಮಾಡಿತು. ಎಲ್ಲರೂ ಅವನಿಗೆ ಅಡ್ಡಬೀಳತೊಡಗಿದರು. ಪೀಟರ ತನ್ನ ಕೈಗಳ ನ್ನೆತ್ತಿ ಉಪದೇಶ ಮಾಡತೊಡಗಿದ : "ನೀವು ದುಃಖಿಗಳಾಗಬೇಡಿರಿ. ಮುಂದಿನ ಕ್ಷಣದಲ್ಲಿ ಏನಾಗುವುದೆಂದು ಯಾರು ಹೇಳಬಲ್ಲರು? ಯೇಸುವಿನ ಸ್ಮರಣೆ ಮಾಡಿರಿ. ಆತ ನಿಮಗೆ ಪಾವಿತ್ರ್ಯವನ್ನೂ ಶಾಂತಿಯನ್ನೂ ಕರುಣಿಸು ವನು" ಭಯಭೀತರಾದ ನಾಗರಿಕರಿಗೆ ಈ ಮಾತುಗಳಿಂದ ತುಂಬ ಸಾಂತ್ವನ ದೊರಕಿತು.

ರೋಮ್‌ನಗರದ ಬೆಂಕಿ ಪ್ರಚಂಡವಾದಂತೆ ನೀರೋನ ಪ್ರಸನ್ನತೆ ಹೆಚ್ಚಿತು. ಬೆಂಕಿಯ ಧಗ ಧಗ ಸಪ್ಪಳದೊಡನೆ ಆತ ಹುಚ್ಚರಂತೆ ಅಟ್ಟ ಹಾಸದ ಧ್ವನಿಯನ್ನು ಕೂಡಿಸುತ್ತಿದ್ದ. ಸರದಾರ ನೊಬ್ಬ ಬಂದು ರೋಮ ನಗರದ ಮನೆಮ- ನೆಯೂ ಸುಟ್ಟು ಬಿತ್ತು ಎಂದಾಗ ನೀರೊ ಸರ ದಾರರೊಡನೆ ಆ ದೃಶ್ಯವನ್ನು ನೋಡಲು ಹೊರಟ.

ತನ್ನ ಅರಮನೆಯ ಅತಿ ಎತ್ತರದ ಸ್ಥಾನದಲ್ಲಿ ನಿಂತು ನೀರೋ ಈ ಅಗ್ನಿತಾಂಡವವನ್ನು ನೋಡು ತ್ತಲಿದ್ದ. ಆತ "ಪೆಟ್ರೊನಿಯಸ್, ನೋಡು. ಈ ನಾಶ ಮತ್ತು ಇದರ ನಂತರದಲ್ಲಿ ನನ್ನ ನಿರ್ಮಾ ಣವನ್ನು. ನನ್ನ ಕೊಳಲನ್ನು ತಾ. ನಾನು ಜ್ವಾಲಾ ಗೀತವನ್ನು ನುಡಿಸುತ್ತೇನೆ" ಎಂದ.

ಸೇವಕ ತಂದಿತ್ತ ಕೊಳಲನ್ನು ಆತ ಬಾರಿಸ ತೊಡಗಿದ. ತುಸು ಹೊತ್ತಿನ ಮೇಲೆ ಆತ "ಪೆಟ್ರೊನಿಯಸ್, ನನ್ನ ಗೀತದ ಮಹತ್ವ ವನ್ನು ಇತಿಹಾಸ ಅರಿತೀತೆ? ನನ್ನ ಗೀತ ಈ ಮಹಾಪ್ರಳಯದ ಯಥಾರ್ಥ ಚಿತ್ರಣವನ್ನು ಮಾಡೀತೇ?" ಎಂದು ಕೇಳಿದ.

ತನ್ನ ಮನಸ್ಸಿನ ತಿರಸ್ಕಾರವನ್ನು ಹತ್ತಿಕ್ಕಿ ಪೆಟ್ರೊನಿಯಸ್ ಹೇಳಿದ : "ಪ್ರಭು, ಈ ವಿನಾ ಶವು ನಿಮ್ಮ ಗೀತಗಳ ಸಾರ್ಥಕತೆಗೆ ಅತಿದೊಡ್ಡ ಸಾಕ್ಷಿ."

"ಸರಿ. ಟ್ರಾಯನ್ನು ಸುಟ್ಟ ಗೀತೆಗಿಂತಲೂ ನನ್ನ ಈ ಜ್ವಾಲಾಗೀತ ಹೆಚ್ಚು ಪ್ರಭಾವಶಾಲಿ ಯಾಗಿದೆ. ಏಕೆಂದರೆ ರೋಮ್ ಟ್ರಾಯ್ ಗಿಂತ ಮಹತ್ವಪೂರ್ಣವಾದದ್ದು."

ರೋಮ್ ನಗರದ ಹರಕ್ಯುಲಸ್, ಜುಪಿಟರ್ ಮೊದಲಾದ ಮಂದಿರಗಳು ಸುಟ್ಟುಭಸ್ಮವಾಗುತ್ತಿ ದ್ದಾಗ ನೀರೊನ ರಾಜಮಹಲು ಅಚ್ಚಳಿಯದೆ ನಿಂತು ಬೆಳಗುತ್ತಿತ್ತು. ರೋಮ್ ವಿನಾಶದಲ್ಲಿ ನೀರೋ ಸ್ಫೂರ್ತಿ ಪಡೆಯುತ್ತಲಿದ್ದ.

ಬಹುಶಃ ಆ ಅಗ್ನಿಕಾಂಡವನ್ನು ಕಂಡು ನೀರೋಗೂ ಭಯವಾಯಿತೇನೊ. ಆತ "ನಡ ಯಿರಿ, ಥಂಡಿಯಾಗುತ್ತಿದೆ" ಎಂದ.

ಅಸಹಾಯರಾದ ರೋಮ್ ನಿವಾಸಿಗಳು ನೀರೋನನ್ನು ಶಪಿಸುತ್ತಿದ್ದರು. ಅರಮನೆಯ ಮೇಲೆ ಕಲ್ಲುಗಳನ್ನು ತೂರುತ್ತಿದ್ದರು. ಸೈನ್ಯವು ಅವರನ್ನು ನಿಯಂತ್ರಿಸಲು ಖಡ್ಗ ಪ್ರಯೋಗ ಮಾಡುತ್ತಲಿತ್ತು. ಜನರ ಬೈಗಳ ಕೂಗು ನೀರೋನ ಕಿವಿಗೂ ಬೀಳಲು ಆತ "ಇವರ ಬಾಯನ್ನೇಕೆ ಮುಚ್ಚುವುದಿಲ್ಲ?" ಎಂದು ಚೀರಿದ.

ಪೆಟ್ರೊನಿಯಸ್ ತಡೆಯಲಾರದೆ ಹೇಳಿದ: "ಪ್ರಭು, ಜನರೀಗ ರಾಜಮಹಲನ್ನು ಪ್ರವೇಶಿಸಿ ದ್ದಾರೆ ನಮ್ಮೆಲ್ಲರ ಕೊಲೆಯಾಗುತ್ತದೆ. ಯಾವ ಶಕ್ತಿಯೂ ನಮ್ಮನ್ನು ಅವರಿಂದ ಉಳಿಸಲಾರದು. ಆದರೆ ತಾವು ಈಶ್ವರರು. ಅಮರರು. ತಾವು ಬದುಕುಳಿಯುವಿರಿ. ನಾನು—ನಾನು ರೋಮ್‌ನ್ನು ಪ್ರೀತಿಸುತ್ತೇನೆ. ಈ ಹತ್ಯಾಕಾಂಡದ ನಂತರ ನಾನು ಬದುಕಿರಲು ಬಯಸುವುದೂ ಇಲ್ಲ."

"ನಿನ್ನ ಸಲಹೆ ಪಡೆದೇ ನಾನು ನನ್ನ ಗೀತೆಗೆ ಸ್ಫೂರ್ತಿ ಪಡೆಯಲೆಂದು ನಗರವನ್ನು ಸುಟ್ಟೆ. ಹೊಸ ರೋಮ್‌ನ್ನು ಕಟ್ಟುವೆವೆಂದು ಈ ಜನ ರಿಗೆ ತಿಳಿಸು. ಬಹಳ ಸುಂದರವಾಗಿ ಕಟ್ಟುವೆವು, ಬಂಗಾರದ ಮನೆಗಳನ್ನು ಕಟ್ಟಿಸಿ ಕೊಡುವೆವು ಎಂದು ಹೇಳು."

"ಈಗ ಅವರಿಗೆ ಆಶ್ರಯಕ್ಕಾಗಿ ಗುಡಿಸಲು ಕೂಡ ಇಲ್ಲ. ತಾವು ಬಂಗಾರದ ಮನೆಗಳ ಕಲ್ಪನೆಯನ್ನು ಕಟ್ಟುತ್ತಿದ್ದೀರಿ."

"ಹಾಗಾದರೆ ಅವರಿಗೇನು ಬೇಕಂತೆ?"

"ನ್ಯಾಯ."

"ನ್ಯಾಯವೆಂದೂ ಸಮಾಜದೊಂದಿಗೆ ಇರಲಾ ರದು. ತನ್ನಾಜ್ಞೆಯಂತೆ ರೋಮ್ ನಗರವನ್ನು ಸುಡಲಾಯಿತು ಎಂದು ಸೇನಾಪತಿ ಟಿಜೆಲಿನಸ್ ಜನರೆದುರು ಹೋಗಿ ಹೇಳಲಿ."

ನಾಲ್ಕು ಔಷಧಗಳಿಂದ ಕೂಡಿದ

'ಅನಾಸಿನ್'

ನೋವನ್ನು ಉಪಶಮನಗೊಳಿಸಲು ಅಧಿಕ ಉತ್ತಮವಾಗಿದೆ


1. 'ಅನಾಸಿನ್' ನೋವನ್ನು ಅತಿ ಶೀಘ್ರವಾಗಿ ಗುಣಪಡಿಸುತ್ತದೆ. ಡಾಕ್ಟರರ ಸುರಕ್ಷಿತ ಔಷಧದಂತೆ ಶಾಸ್ತ್ರೀಯ ಕ್ರಮದಲ್ಲಿ ಸಮ್ಮಿಲಿತವಾದ ನಾಲ್ಕು ಔಷಧಗಳಿಂದ ಕೂಡಿದ ಅನಾಸಿನ್ ತಲೆನೋವು, ಶೀತ, ಜ್ವರ, ಹಲ್ಲುನೋವು ಮತ್ತು ಸ್ನಾಯುಗಳ ನೋವನ್ನು ಸಂಪೂರ್ಣವಾಗಿ ಅತಿ ಶೀಘ್ರವಾಗಿ ಉಪಶಮನಗೊಳಿಸುತ್ತದೆ.

2. 'ಅನಾಸಿನ್' ಗಾಬರಿಗೊಳಿಸುವ ದುರ್ಬಲ ನರಗಳಿಗೆ ಶಾಂತತೆಯನ್ನೀಯುತ್ತದೆ. ಅನಾಸಿನ್ ನರಗಳ ಬಿಗಿತವನ್ನು ಬಹಳ ಪ್ರಭಾವಪೂರ್ಣವಾಗಿ ತೆಗೆದು ನೀವು ಆರಾಮದಲ್ಲಿರುವಂತೆ ಮಾಡುತ್ತದೆ.

3. 'ಅನಾಸಿನ್' ನಿರುತ್ಸಾಹವನ್ನು ಹೋಗಲಾಡಿಸುತ್ತದೆ. ಹೆಚ್ಚಾಗಿ ನೋವಿನೊಡನೆ ಬರುವ ನಿರುತ್ಸಾಹವನ್ನು ಅನಾಸಿನ್ ಹೋಗಲಾಡಿಸುತ್ತದೆ.

4. 'ಅನಾಸಿನ್' ಜ್ವರವನ್ನು ಕಡಿಮೆ ಮಾಡುತ್ತದೆ. ಅನಾಸಿನ್‌ನ ತಯಾರಿಕೆಯಲ್ಲಿ ಕ್ವೀನಿನ್ ಸೇರಿರುವುದರಿಂದ ಔಷಧಗಳ ಆ ಸಮ್ಮಿಲನವು ಜ್ವರವನ್ನು ತಗ್ಗಿಸುವುದಕ್ಕೆ ಅತ್ಯುತ್ತಮವಾಗಿದೆ.

* ನಿರ್ಮಲವಾಗಿ ಸೀಲ್ ಮಾಡಿದ ಸೆಲೋಫೇನ್ ಪ್ಯಾಕ್‌ನಲ್ಲಿ 2 ಬಿಲ್ಲೆಗಳೂ, ಭದ್ರವಾಗಿ ಪಿಲ್ಫರ್-ಪ್ರೂಫ್ ಕ್ರಮದಲ್ಲಿ ಮುಚ್ಚಲ್ಪಟ್ಟ ಸೀಸೆಯಲ್ಲಿ 32 ಬಿಲ್ಲೆಗಳೂ,–ಮನೆಗಳಲ್ಲಿ ಉಪಯೋಗಿಸಲು ಅನುಕೂಲವಾಗುವಂತೆ— ದೊರೆಯುತ್ತವೆ.





Registered User: GEOFFREY MANNERS & CO. LIMITED.

KAN. 2 44. (A)

ಅಲ್ಲಿಯೆ ಇದ್ದ ಟಿಜೆಲಿನಸ್ ಹೇಳಿದ: "ಸರಿ ಪ್ರಭು. ಆದರೆ ನನ್ನ ಮರಣಾನಂತರದಲ್ಲಿ ಸೈನ್ಯವು ಖಂಡಿತವಾಗಿಯೂ ಬಂಡೇಳುವುದು. ಆಗ ನಾನಿಲ್ಲದೆ ಹೋದರೆ ಹೇಗೆ?"

ಟಿಜೆಲಿನಸ್‌ನ ಮಾತುಗಳಲ್ಲಿಯ ಮರ್ಮ ಎಲ್ಲರಿಗೂ ಹೊಳೆಯಿತು. ಎಲ್ಲರ ಮನದಲ್ಲೂ ವಿದ್ರೋಹದ ವಿಚಾರಗಳು ಮೂಡಿದ್ದವು. ಅಷ್ಟರಲ್ಲಿ ಪಿಪಯಿಯಾಳ ದಾಸಿಯೊಬ್ಬಳು ಬಂದು ಟಿಜೆಲಿನಸ್‌ನಿಗೆ "ಸಮ್ರಾಜ್ಞಿ ಕರೆಯುತ್ತಿದ್ದಾರೆ" ಎಂದು ತಿಳಿಸಿದಳು. ಅವಳಲ್ಲಿಗೆ ಹೋದ ಟಿಜೆಲಿನಸ್‌ನಿಗೆ ಅವಳು ಲೀಜಿಯಳ ನಾಶಕ್ಕಾಗಿ ಸೂಚನೆಗಳನ್ನು ಕೊಟ್ಟು ಕಳಿಸಿದಳು.

ಟಿಜೆಲಿನಸ್ ತಿರುಗಿ ಬಂದು ನೀರೋನಿಗೆ "ಪ್ರಭು, ನಾನೊಂದು ಹಾದಿ ಹುಡುಕಿದ್ದೇನೆ. ಇಂದಿನ ವಿನಾಶದ ಸೇಡೆಂದು ಜನ ಸಹಸ್ರಾರು ಬಲಿಗಳನ್ನು ಬೇಡುತ್ತಾರೆ. ತಾವು ಯೇಸು ಮತ್ತು ಅವನ ಅನುಯಾಯಿಗಳ ಬಗ್ಗೆ ಕೇಳಿರಬೇಕು" ಎಂದ.

"ಹೌದು. ಅವರು ಪತಿತರು. ವಿದ್ರೋಹಿಗಳು."

"ಹೌದು. ಅವರೆಂದೂ ತಮ್ಮ ಜಯಜಯಕಾರ ಮಾಡಿಲ್ಲ. ಅವರು ರೋಮ್‌ನ ಶತ್ರುಗಳು. ಅವರೇ ರೋಮ್‌ಗೆ ಬೆಂಕಿ ಹಚ್ಚಿ ನಮ್ಮ ಮೇಲೆ ಅಪವಾದ ಹೊರಿಸಿದ್ದಾರೆ."

ಅಷ್ಟರಲ್ಲಿ ಅಲ್ಲಿಗೆ ಬಂದ ಪಿಪಯಿಯಾ "ಅವರು ಜಗತ್ತಿನ ಶತ್ರುಗಳು. ಸಮ್ರಾಟ್ ನೀರೋನ ಶತ್ರುಗಳು" ಎಂದಳು.

"ಈ ದುಷ್ಟರಿಗೆ ಯಾವ ಶಿಕ್ಷೆ ವಿಧಿಸಬೇಕು?" ನೀರೊ ಕೇಳಿದ.

ಪೆಟ್ರೊನಿಯಸ್‌ನಿಗೆ ಪಿಪಯಿಯಾಳ ಗತ್ತು ಗೊತ್ತಾಯಿತು. ಆತ ಹೇಳಿದ: "ಪ್ರಭು, ತಾವು ಅಪರಾಧಿಗಳ ಪತ್ತೆ ಹಚ್ಚಿರುವಿರಿ. ಅವರಿಗೆ ಯೋಗ್ಯ ಶಿಕ್ಷೆ ವಿಧಿಸಿ. ಆದರೆ ಮುಂಬರುವ ಯುಗದ ವಿಚಾರವನ್ನೂ ಸ್ವಲ್ಪ ಮಾಡಿರಿ. ಜಗತ್ತಿನ ಶಾಸಕ ಮತ್ತು ದೇವರು ರೋಮ್‌ನ್ನು ಸುಟ್ಟು ಹಾಕಿದ ಎಂದು ಜಗತ್ತೆಂದೂ ಹೇಳದಿರಲಿ. ಕವಿ ನೀರೊ ಕವಿತೆಗಾಗಿ ರೋಮ್‌ನ್ನು ಸುಟ್ಟ ಎನ್ನದಿರಲಿ. ಅದಕ್ಕಾಗಿ ಪ್ರಭೊ, ತಾವು ತಮ್ಮ ಕೀರ್ತಿಯ ಬಗ್ಗೆ ದಕ್ಷತೆ ವಹಿಸಬೇಕು. ತಮ್ಮ ಗೌರವಕ್ಕೆ ಕುಂದು ತರುವಂಥ ಯಾವ ಕಾರ್ಯವನ್ನೂ ತಾವು ಮಾಡಲಾಗದು. ರೋಮ್‌ನ್ನು ಸುಡಿಸಿದ್ದು ಒಳ್ಳೆಯದಾಗಲಿಲ್ಲ. ಸಭ್ಯ ಜನತೆ ಯಾವಾಗಲೂ ತನ್ನ ಸಮ್ರಾಟನ ತಪ್ಪುಗಳನ್ನು ಮನ್ನಿಸುತ್ತ ಬಂದಿದೆ. ಅವರನ್ನು ತಮ್ಮವರನ್ನಾಗಿ ಮಾಡಿಕೊಳ್ಳಿ. ಅಂದರೆ ತಮ್ಮ ವಿರುದ್ಧ ಒಂದು ಮಾತೂ ಏಳದು."

ನೀರೋನ ಮೇಲೆ ಈ ಮಾತುಗಳ ಪ್ರಭಾವ ಬಿದ್ದಿತು. ಆತನ ಮುಖದ ಮೇಲೆ ಚಿಂತೆ ಭಯಗಳು ಕಾಣಿಸಲು ಪಿಪಯಿಯಾ ಮೊದಲಾದವರು ಗಾಬರಿಯಾದರು. ಟಿಜೆಲಿನಸ್ ತಟ್ಟನೆ ಇನ್ನೊಂದು ದಾಳವನ್ನೆಸೆದ: "ಪ್ರಭು, ತಮ್ಮ ವಿಚಾರದಲ್ಲಿ ಇಂಥ ಮಾತುಗಳನ್ನು ಕೇಳುವ ರೂಢಿ ನನಗಿಲ್ಲ. ಈತನ ಮಾತುಗಳಲ್ಲಿ ತಾವು ನೀಚರು, ಅಂಜುಬುರುಕರು, ಉಪದ್ರವಿಗಳು, ವಿದೂಷಕರು ಎಂದೆಲ್ಲ ಅರ್ಥವಿದೆ. ಇದುವರೆಗೆ ತಮ್ಮೆದುರಿನಲ್ಲಿ ಯಾರೂ ಇಂಥ ಮಾತುಗಳನ್ನಾಡಿಲ್ಲ. ಈತ ತಮ್ಮ ಶತ್ರುಗಳ ಮಿತ್ರನಿರುವಂತೆ ಕಾಣುತ್ತದೆ."

ಆಗ ನೀರೋ "ಪೆಟ್ರೊನಿಯಸ್, ನೀನೇಕೆ ಆ ಜನರ ಪಕ್ಷ ಹಿಡಿದು ಮಾತಾಡುವಿ?" ಎಂದು ಕೇಳಿದ. ಇದೇ ಸಮಯ ಸಾಧಿಸಿ ಪಿಪಯಿಯಾ ನುಡಿದಳು: "ಪ್ರಭು, ಇವನ ತಮ್ಮನ ಮಗ ಮಾರ್ಕಸ್ ಒಬ್ಬ ಕ್ರಿಶ್ಚನ್ ಹುಡುಗಿಯನ್ನು ಪ್ರೀತಿಸುತ್ತಾನೆ. ಮಾರ್ಕಸ್ ಮತ್ತು ಈತ ಇಬ್ಬರೂ ಕ್ರಿಶ್ಚನ್ನರಾಗಿರಲೂ ಬಹುದು. ಹಾಗಿದ್ದರೆ ಇವರು ನಿಮ್ಮ ಗುಪ್ತ ಶತ್ರುಗಳೇ ಸರಿ."

"ನೀನು ಕ್ರಿಶ್ಚನ್ನನೇನು?" ನೀರೊ ಕೇಳಲು ಪೆಟ್ರೊನಿಯಸ್ ಗಾಬರಿಯಾಗಿ "ಹೀಗೆ ಕೇಳಿ ತಾವು ನನ್ನ ಮೇಲೆ ಅನ್ಯಾಯವೆಸಗುತ್ತಿದ್ದೀರಿ ಪ್ರಭು" ಎಂದ.

ನೀರೋ ಹೇಳಿದ: "ಕ್ರಿಶ್ಚನ್ನರು ದೇಶದ್ರೋಹಿಗಳು. ಇಡೀ ಜಗತ್ತನ್ನು ಸುಡಬಯಸಿರುವ ಅವರು ರೋಮ್‌ನ್ನು ಸುಟ್ಟು ತಮ್ಮ ಕಾರ್ಯಾರಂಭ ಮಾಡಿದ್ದಾರೆ. ತಾವು ರೋಮ್‌ವನ್ನು ಸುಟ್ಟು ನನ್ನ ಮೇಲೆ ಅಪವಾದ ಹೊರಿಸಿದ್ದಾರೆ. ಈ ಕ್ರಿಶ್ಚನ್ ಜಾತಿಯ ನಿರ್ಮೂಲನವೇ ನನ್ನ ಏಕ

ಮಾತ್ರ ಕರ್ತವ್ಯವಾಗಿದೆ. ತಾನು ಕ್ರಿಶ್ಚನ್ ಎಂದು ಹೇಳಿಕೊಳ್ಳುವ ಎದೆ ಯಾರಿಗೂ ಇನ್ನು ಮುಂದೆ ಉಂಟಾಗದ ರೀತಿಯಲ್ಲಿ ನಾನಿವರನ್ನು ಶಿಕ್ಷಿಸುವೆ."

ಯುರೂಸಸ್ ಮತ್ತು ಲೀಜಿಯಳನ್ನು ರಕ್ಷಿಸುತ್ತ ಹೇಗೋ ಮಾರ್ಕಸ್ ಪ್ಲಾಟಿಯೆಸನ ಮನೆಯನ್ನು ತಲುಪಿದ. ಬಂದವನೆ ದಣಿವಿನಿಂದ ನಿದ್ದೆಹೋದ. ಆತ ಎದ್ದಾಗ ಲೀಜಿಯ ಅವನ ತಲೆಯ ಬಳಿ ಕುಳಿತಿದ್ದಳು. ಆತ ಅವಳನ್ನು ಬರಸೆಳೆದು ಚುಂಬಿಸಿ ತಾನವಳನ್ನು ಹುಡುಕಲು ಪಟ್ಟ ಶ್ರಮವನ್ನು ವಿವರಿಸಿದ.

ಅಷ್ಟರಲ್ಲಿ ಹೆಜ್ಜೆ ಸಪ್ಪಳ ಕೇಳಿಸಿತು. ಧರ್ಮದೂತ ಪೀಟರ್ ಬಂದಿದ್ದ. ಲೀಜಿಯ ಅವನ ಬಳಿ ಓಡಿದಳು. ಆತ "ಇವನೇ ಮಾರ್ಕಸ್ ಏನು? ಕೇಳಿದ್ದೆ, ಆದರೆ ನೋಡಿರಲಿಲ್ಲ" ಎಂದ.

ಕ್ರಿಶ್ಚನ್ ಧರ್ಮದಲ್ಲಿ ಒಂದಿಷ್ಟೂ ಸಹಾನುಭೂತಿ ಇರದಿದ್ದರೂ ಪೀಟರನ ಭವ್ಯ ವ್ಯಕ್ತಿತ್ವವನ್ನು ಕಂಡು ಮಾರ್ಕಸ್ ಪ್ರಭಾವಿತನಾದ. ಆತ ಏನನ್ನೋ ಹೇಳಬೇಕೆನ್ನುವಷ್ಟರಲ್ಲಿ ಒಬ್ಬಾತ ಬಂದು "ಹೊರಗೆ ಜನ ಪರಸ್ಪರರನ್ನು ಕೊಲ್ಲುತ್ತಿದ್ದಾರೆ. ಸೈನ್ಯ ಜನರನ್ನು ತುಂಡರಿಸುತ್ತಿದೆ" ಎಂದ.

ಮಾರ್ಕಸ್ ಪ್ರಶ್ನಾರ್ಥಕ ದೃಷ್ಟಿಯಿಂದ ಪೀಟರನನ್ನು ನೋಡಿದ. ಪೀಟರ್ ಹೇಳಿದ: "ಇದೆಲ್ಲ ಮಾಯೆಯ ಆಟ. ಬಹುಶಃ ವಿಧ್ವಂಸವು ಸಾಕಾರವಾಗಿ ಪ್ರಕಟವಾಗಲಿದೆಯೆಂದು ಕಾಣುವುದು." ಆ ಮೇಲೆ ಲೀಜಿಯಳತ್ತ ಬೊಟ್ಟು ಮಾಡಿ "ದೇವರು ಈ ರಮಣಿಯನ್ನು ನಿನ್ನ ಭಾಗ್ಯದೊಂದಿಗೆ ಜೋಡಿಸಿದ್ದಾನೆ. ಇವಳ ರಕ್ಷಣೆ ಮಾಡು. ಯುರೂಸಸನನ್ನೂ ನಿನ್ನೊಂದಿಗೆ ಕರೆದೊಯ್ಯು" ಎಂದ.

"ಆದರೆ ನಿಮ್ಮೊಬ್ಬರನ್ನೆ ಈ ವಿನಾಶದ ನಡುವೆ ಬಿಟ್ಟು ಹೇಗೆ ಹೋಗಲಿ ?"

"ದೇವರು ನಿನ್ನನ್ನು ರಕ್ಷಿಸಲಿ. ನಿನ್ನ ಮೇಲೆ ಹೆಚ್ಚಿನ ಹೊಣೆ ಇದೆ; ನೀನು ನಿನ್ನ ಕೆಲಸ ಮಾಡು. ನಾನು ನನ್ನದನ್ನು ಮಾಡುತ್ತೇನೆ."

ಹೊರಗಿನ ಹಾಹಾಕಾರ ಕೇಳಿ ಬೆಚ್ಚಿದ ಮಾರ್ಕಸ್ ಲೀಜಿಯಳಿಗೆ ಹೇಳಿದ: "ನೀನು ಮತ್ತು ಯುರೂಸಸ್ ಇಲ್ಲಿಯೆ ಇರಿ. ನಾನೊಮ್ಮೆ ನಗರದತ್ತ ಹೋಗಿ ಬರುತ್ತೇನೆ. ಬಹುಶಃ ನೀರೊ ಹುಚ್ಚನಾಗಿ ಹೋಗಿರಬೇಕು. ಅವನಿಗಾಗಿ ಏನಾದರೂ ಮಾಡಲೇಬೇಕು. ನಾನು ಸಂಜೆಯೊಳಗೆ ಬರುತ್ತೇನೆ. ಬರಲಾಗದಿದ್ದರೆ ಹೇಳಿ ಕಳಿಸುತ್ತೇನೆ"

ಮಾರ್ಕಸ್ ತನ್ನ ಖಡ್ಗ ಹಿಡಿದುಕೊಂಡು ಹೊರಬಿದ್ದ. ಆತ ನೆಟ್ಟಗೆ ಪೆಟ್ರೊನಿಯಸನ ಮನೆಗೆ ಹೋದ ಹಾದಿಯಲ್ಲಿ ತನ್ನಿಬ್ಬರು ಸಹಾಯಕ ಸೇನಾಪತಿಗಳಾದ ಫೇಬಿಯಸ್ ಮತ್ತು ಸೀಪಿಯರನ್ನು ಸಂಗಡ ಕರೆದೊಯ್ದ.

ಮಾರ್ಕಸನನ್ನು ಕಂಡೊಡನೆ ಪೆಟ್ರೊನಿಯಸ್ ಹೇಳಿದ: "ಬಹಳ ಕೆಟ್ಟ ಕಾಲ ಬಂದಿದೆ. ನೀರೊ ನಿನ್ನ ನಾಶವನ್ನೂ ಯೋಜಿಸಿರುವುದರಿಂದ ನಿನ್ನ ಬಗ್ಗೆ ತುಂಬ ಕಾಳಜಿಯಾಗಿತ್ತು. ಪಿಪಯಿಯಾ ನಿನ್ನ ಮತ್ತು ಲೀಜಿಯಳ ರಕ್ತಕ್ಕಾಗಿ ಕಾತರಳಾಗಿದ್ದಾಳೆ. ರೋಮ್‌ನಲ್ಲಿ ರಕ್ತದ ಸಮುದ್ರ ಹರಿಯುವ ವರೆಗೂ ನೀರೋನ ದಾಹ ಶಾಂತವಾಗದಾದ್ದರಿಂದ ನೀನು ಲೀಜಿಯಳನ್ನು ಎಲ್ಲಿಯಾದರೂ ದೂರ ಕರೆದುಕೊಂಡು ಹೋಗು. ಕ್ರಿಶ್ಚಿಯನ್ನರೆ ರೋಮ್‌ವನ್ನು ಸುಡಲು ಕಾರಣರೆಂದು ನೀರೊ ಪ್ರಚಾರ ಮಾಡಿದ್ದಾನೆ. ಇಂಥ ಭೀಕರ ಸಮಯದಲ್ಲಿ ಮರುಳು ಜನತೆ ಎಂಥ ಮಾತನ್ನೂ ನಂಬುವುದು."

ಮಾರ್ಕಸ್ ನಡುವೆಯೆ ಹೇಳಿದ: "ನಾವೆಲ್ಲ ಯೋಚನೆ ಮಾಡಿದ್ದೇವೆ. ಈಗ ಹೇಗಾದರೂ ಮಾಡಿ ನೀರೊನನ್ನು ಪದಚ್ಯುತನನ್ನಾಗಿ ಮಾಡಿ ಗಾಲ್ಬಾನನ್ನು ಪಟ್ಟಕ್ಕೇರಿಸುವ ಕಾಲ ಸನ್ನಿಹಿತವಾಗಿದೆ. ಸೀಪಿಯಾ ನಮ್ಮ ಸಂದೇಶವನ್ನು ಗಾಲ್ಬಾನಿಗೊಯ್ದು ಮುಟ್ಟಿಸುವನು. ಆದರೆ ನಿಮ್ಮ ಸಹಿಯಿಲ್ಲದೆ ಹೋದರೆ ನಮ್ಮ ಕಾಗದದಲ್ಲಾತ ನಂಬಿಕೆಯಿಡಲಿಕ್ಕಿಲ್ಲ. ಆದ್ದರಿಂದ ಈ ಕಾಗದದ ಮೇಲೆ ಸಹಿಮಾಡಿ."

ಪೆಟ್ರೊನಿಯಸ್ ಸಹಿ ಹಾಕಿದ. ಮಾರ್ಕಸ್ ಪತ್ರವನ್ನು ಸೀಪಿಯನ ಕೈಗಿತ್ತು "ಒಂದು ಕ್ಷಣದ ವಿಲಂಬವಾದರೂ ಕೆಲಸ ಕೆಟ್ಟೀತು. ಹೋಗು" ಎಂದ. ಸೀಪಿಯ ಹೋದ ಬಳಿಕ

ಪೆಟ್ರೊನಿಯಸ್ ಹೇಳಿದ: "ನೀರೋ ನನಗೆ ಬರಲು ಹೇಳಿಕಳಿಸಿದ್ದಾನೆ. ನಾನು ಕೂಡ ಅವನ ಕಣ್ಣಲ್ಲಿ ಕುಕ್ಕುತ್ತಿದ್ದೇನೆ. ನೀನು ಹೋಗಿ ನಿನ್ನ ಸಿದ್ಧತೆ ಮಾಡಿಕೊ. ಸಂಜೆ ಮತ್ತೆ ಭೆಟ್ಟಿಯಾಗೋಣ."

ಸಂಜೆ ಮಾರ್ಕಸನನ್ನು ಕಂಡಾಗ ಖಿನ್ನ ಸ್ವರದಲ್ಲಿ ಪೆಟ್ರೊನಿಯಸ್ ಕೇಳಿದ: "ಏನು ಸಮಾಚಾರ?"

ಕ್ರೋಧಸಂತಪ್ತ ಧ್ವನಿಯಲ್ಲಿ ಮಾರ್ಕಸ್ "ಲೀಜಿಯಳನ್ನು ಬಂಧಿಸಿ ಮೆಮಾಟಾಯಿನ್ ಜೇಲಿನಲ್ಲಿಟ್ಟಿದ್ದಾರೆ" ಎಂದ.

ಪೆಟ್ರೊನಿಯಸ್ ವ್ಯಂಗ್ಯವಾಗಿ ನುಡಿದ: "ನಿನ್ನ ಹತ್ತಿರ ಇರುವ ಸಮಾಚಾರ ಇಷ್ಟೇ ತಾನೇ? ಕೇಳು, ಇಡೀ ನಗರದಲ್ಲಿ ಹುಡುಕಿ ಹುಡುಕಿ ಕ್ರಿಶ್ಚಿಯನ್ನರನ್ನು ಹಿಡಿಯುತ್ತಿದ್ದಾರೆ. ಅವರನ್ನೆಲ್ಲ ಜನರ ಸಮ್ಮುಖದಲ್ಲಿ ಹುಚ್ಚು ನಾಯಿಗಳು ಮತ್ತು ಹುಲಿಗಳ ಬಾಯಿಗೆ ಕೊಡಲಿದ್ದಾರೆ. ಈ ಹತ್ಯಾಕಾಂಡವನ್ನು ಒಂದು ಉತ್ಸವವನ್ನಾಗಿ ಆಚರಿಸಲಿದ್ದಾರೆ. ಬೇಗನೆ ಏನಾದರೂ ಮಾಡಲೇಬೇಕು."

ಈ ಮಾತುಗಳನ್ನು ಕೇಳಿದ ಮಾರ್ಕಸ್ ಹತಪ್ರತಿಭನಂತಾದ. ಆತ ಏನೂ ಉತ್ತರ ಕೊಡದೆ ಖಡ್ಗಧಾರಿಯಾಗಿ ಮೆಮಾಟಾಯಿನ್ ಜೇಲಿನತ್ತ ಧಾವಿಸಿದ. ಜೇಲಿನ ಸೈನಿಕರೆಲ್ಲ ಅವನನ್ನು ಬಲ್ಲರು. ಮಾರ್ಕಸನನ್ನು ಕಂಡೊಡನೆ ಜೇಲರ್ "ಕ್ಷಮಿಸಬೇಕು. ಒಳಗೆ ಹೋಗಲು ಯಾರಿಗೂ ಅಪ್ಪಣೆಯಿಲ್ಲ" ಎಂದ. ಆ ಮೇಲೆ ಮಾರ್ಕಸನ ಕಿವಿಯಲ್ಲಿ "ನೀವು ಚಿಂತಿಸಬೇಡಿ. ಯುರೂಸಸ್ ಮತು ಇತರರು ಲೀಜಿಯಳನ್ನು ಕಾಯುತ್ತಲಿದ್ದಾರೆ" ಎಂದ. ಮಾತಾಡುತ್ತಲೇ ಆತ ನೆಲದ ಮೇಲೆ ತನ್ನ ಖಡ್ಗದ ತುದಿಯಿಂದ ಮೀನಿನ ಚಿತ್ರವನ್ನು ಬರೆದು ಅದನ್ನು ಹಾಗೆಯೆ ಅಳಿಸಿಬಿಟ್ಟ. ಮಾರ್ಕಸ್‌ನ ಆಶ್ಚರ್ಯಕ್ಕೆ ಪಾರವೇ ಉಳಿಯಲಿಲ್ಲ.

ಅಷ್ಟರಲ್ಲಿ ಎಲ್ಲಿಂದಲೊ ಬಂದ ಟಿಜೆಲಿನಸನ ಸಂಜ್ಞೆಯಂತೆ ನಾಲ್ವರು ಸೈನಿಕರು ಮಾರ್ಕಸನನ್ನು ಹಿಡಿದರು. ಮಾರ್ಕಸ್ ಮೂಢನಂತಾಗಲು ಟಿಜೆಲಿನಸ್ ಹೇಳಿದ: "ಸೇನಾಪತಿ, ನೀವಿಂದು ಪ್ರೇಮದ ಜಾಲದಲ್ಲಿ ಸಿಲುಕಿಬಿಟ್ಟಿರಿ. ನೀವಿಲ್ಲಿ ಬರುತ್ತೀರಿ ಎಂದು ಗೊತ್ತಿತ್ತಾದರೂ ಇಷ್ಟು ಸುಲಭದಲ್ಲಿ ಸಿಕ್ಕೀರೆಂಬ ಕಲ್ಪನೆಯಿರಲಿಲ್ಲ. ಸಮ್ರಾಟ್ ನೀರೊ ನಿಮಗಾಗಿ ಭೀಕರ ಮೃತ್ಯುವಿನ ಯೋಜನೆ ಮಾಡಿದ್ದಾನೆ. ಹ್ಹ—ಹ್ಹಾ—ಹ್ಹಾ. ಸೈನಿಕರೇ, ಇವನನ್ನೂ ಇವನ ಕ್ರಿಶ್ಚನ್ ಸಂಗಡಿಗರ ಬಳಿ ಕಳಿಸಿಬಿಡಿ."

ಸೈನಿಕರು ಮಾರ್ಕಸನನ್ನು ಜೇಲಿನ ಕತ್ತಲೆ ಕೋಣೆಗೊಯ್ದು ಹಾಕಿದರು. ಕೋಣೆ ಕ್ರಿಶ್ಚನ್ ಸೆರೆಯಾಳುಗಳಿಂದ ತುಂಬಿಹೋಗಿತ್ತು. ಯುರೂಸಸ್ ಮತ್ತು ಲೀಜಿಯ ಕೂಡ ಇದ್ದರು. ಲೀಜಿಯ ಓಡಿಬಂದು ಮಾರ್ಕಸನನ್ನು ತಬ್ಬಿಕೊಂಡು ಅಳುತ್ತ, "ನಿಮ್ಮನ್ನೇಕೆ ಹಿಡಿದರು? ನಿಮ್ಮ ಮೇಲೇನು ವೈರ ಅವರಿಗೆ?" ಎಂದು ಕೇಳಿದಳು.

"ಲೀಜಿಯಾ, ನಾನು ಕೂಡ ನಿಮ್ಮ ಬಳಿ ಬಂದಿದ್ದೇನೆ. ದೇವರು ಬೇಗನೆ ನಿಮ್ಮನ್ನು ಬಂಧಮುಕ್ತಮಾಡಿ ರಕ್ಷಿಸಲಿ."

"ಮಾರ್ಕಸ್, ನನಗೆ ಜಡ್ಡಾಗಿದೆ. ಸಾಯುವೆನೊ ಏನೊ. ಸಾಯುವ ಮೊದಲು ನಿಮ್ಮನ್ನು ಕಾಣಲು ಸಿಗಲಿ ಎಂದು ಯೇಸುವನ್ನು ಪ್ರಾರ್ಥಿಸಿಕೊಂಡಿದ್ದೆ. ಆತ ನನ್ನ ಪ್ರಾರ್ಥನೆ ಕೇಳಿದ."

"ಇಲ್ಲ ಲೀಜಿಯ, ನೀನು ಸಾಯುವುದಿಲ್ಲ. ಪೀಟರ್ ನಿನಗಾಗಿ ಪ್ರಾರ್ಥನೆ ಸಲ್ಲಿಸುವನು. ನೀನು ಬದುಕಬೇಕು, ನನಗಾಗಿ ಬದುಕಲೇಬೇಕು."

"ಇಲ್ಲ ಮಾರ್ಕಸ್. ನಾನಿನ್ನು ಬದುಕಿದ್ದು ನಿಮಗೆ ಇನ್ನೂ ಕಷ್ಟ ಕೊಡಲಾರೆ. ಮಾರ್ಕಸ್, ನನಗಾಗಿ ಅಳಲಾಗದು. ಇಲ್ಲಿ ಅಲ್ಲದಿದ್ದರೆ ಸ್ವರ್ಗದಲ್ಲಿಯಾದರೂ ನಮ್ಮ ಮಿಲನವಾಗಿಯೆ ತೀರುವುದು. ನಾನು ಯೇಸುವನ್ನು ಬೇಡಿಕೊಳ್ಳುತ್ತೇನೆ" ಮಾತಾಡುತ್ತಿರುವಂತೆಯೇ ಲೀಜಿಯಳ ಶ್ವಾಸವೆಳೆಯತೊಡಗಿತು. ಮಾರ್ಕಸ್ ಅವಳನ್ನು ಎದೆಗವಚಿಕೊಂಡ. ಮಾರ್ಕಸನ ಕೈಗಳೆರಡನ್ನೂ ತನ್ನ ತುಟಿಗಳ ಬಳಿ ತಂದುಕೊಂಡು ಲೀಜಿಯ "ನಾನು ನಿನ್ನವಳು, ನಿನ್ನ ಹೆಂಡತಿ" ಎಂದಳು.

ಕತ್ತಲೆ ಕೋಣೆಯಲ್ಲಿದ್ದ ನಸುಮಂದ ಬೆಳಕಿ

ನಲ್ಲಿ ಲೀಜಿಯಳ ಬಿಳುಪೇರಿದ ಮುಖ ಮಿನುಗುತ್ತಲಿತ್ತು. ಅತ್ತ ಗೋಡೆಯಾಚೆ ಸೈನಿಕರು ಮದ್ಯಪಾನದಿಂದ ಮತ್ತರಾಗಿ ಮದ್ಯಕ್ಕಾಗಿ ಜಗಳಾಡುತ್ತಿದ್ದರು.

ನೀರೋ ತನ್ನನ್ನು ಕೊಲ್ಲಿಸಲಿರುವನೆಂದು ತಿಳಿದೊಡನೆ ಪೆಟ್ರೊನಿಯಸ್ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿ ನೀರೋಗೆ ಒಂದು ಪತ್ರ ಬರೆದ:

"ಸೀಜರ್,

ನೀನು ನನ್ನ ಮಾರ್ಗ ಪ್ರತೀಕ್ಷೆ ಮಾಡುತ್ತಿದ್ದೀ, ನನಗೆ ಇಂದು ಕಲ್ಪನಾತೀತವಾದ ಪುರಸ್ಕಾರ ಕೊಡಲಿದ್ದೀ ಎಂದು ಬಲ್ಲೆ. ಆದರೆ ಕ್ಷಮಿಸು, ನಿನ್ನ ಮುಖ ನೋಡಲು ಕೂಡ ನಾನು ಹೇಸುತ್ತೇನೆ.

ನಾನು ಆತ್ಮಹತ್ಯೆ ಮಾಡಿಕೊಳ್ಳುವೆ. ನಾನು ಸತ್ತ ಬಳಿಕ ನೀನು ಅತ್ತು ಕರೆದು ನನ್ನ ಮೇಲಿನ ಕಪಟ ಪ್ರೇಮವನ್ನು ಪ್ರಕಟಿಸುವಿ. ಆದರೆ ಆ ನಾಟಕ ನೋಡಲು ನಾನು ಬದುಕಿರುವುದಿಲ್ಲ.

ನೀನು ನೀಚ, ಕೊಲೆಪಾತಕಿ. ನೀನು ನಿನ್ನ ಹೆಂಡತಿ ಮತ್ತು ತಾಯಿಯ ಕೊಲೆ ಮಾಡಿದಿ. ರೋಮ್ ನಗರಕ್ಕೆ ಬೆಂಕಿ ಹಚ್ಚಿದಿ. ರೋಮ್‌ನ ಸದ್ಗೃಹಸ್ಥರನ್ನು ಇರೆಬಸ್‌ಗೆ ಕಳಿಸಿದಿ.

ನೀನು ಕಲಾಕಾರ ಎಂದು ನೀನು ಅಂದುಕೊಳ್ಳುವಿ. ಆದರೆ ನೀನು ಕಲೆಯ ಹೆಸರಿಗೆ ಒಂದು ಕಲಂಕವಾಗಿರುವಿ. ಕೊಳಲು ಬಾರಿಸಿ ನೀನು ರೋಮ್‌ನ್ನು ಭಸ್ಮಮಾಡಿದಿ. ಜನ ನಿನ್ನ ಕವಿತೆಗೆ ರೋಸಿಹೋಗಿದ್ದಾರೆ. ಇನ್ನು ಇಂಥ ರೀತಿಯಲ್ಲಿ ಕೊಳಲು ಬಾರಿಸಬೇಡ. ಇದೇ ನನ್ನ ಕೊನೆಯ ವಿನಂತಿ."

ಪತ್ರವನ್ನು ನೀರೋಗೆ ಕಳಿಸಿಕೊಟ್ಟು ಪೆಟ್ರೊನಿಯಸ್ ತನ್ನ ಭುಜಗಳ ನರಗಳನ್ನು ಕತ್ತರಿಸಿಕೊಂಡ. ರಕ್ತಪಾತದಿಂದ ಅವನ ಮರಣವಾಯಿತು.

Estd 1943 Tel:-"Sunandafac"

ಸುಗಂಧ ಸುಮಧುರವಾದ ಸುಗಂಧ ದ್ರವ್ಯಗಳಿಗೆ ನಾಡಿನಾದ್ಯಂತ

ಪ್ರ ಖ್ಯಾ ತ ವಾ ದ

- ★ ಸುನಂದರಾಜ ಅಗರಬತ್ತಿ
- ★ ಸುನಂದ ರೋಸ್ ಬತ್ತಿ
- ★ ಪೂಜಾರಿಣಿ ಬತ್ತಿ
- ★ ಗುಲಾಬ್-ಕೆ-ಫೂಲ್ ಅಗರಬತ್ತಿ

ಸುನಂದ ಅಂಬರ್ ಬತ್ತಿ, ಅಲ್ಲದೆ ಸುನಂದ ಡೀಲಕ್ಸ ಪರ್‌ಫ್ಯೂಮ್ಡ ಬ್ಯಾಗ್, ಮತ್ತು ಪರಿಮಳಯುಕ್ತವಾದ ದ್ರವ್ಯಗಳನ್ನೇ ಯಾವಾಗಲೂ ಉಪಯೋಗಿಸಿರಿ.

ತಯಾರಕರು:— ಕೆ. ರಾಮಕೃಷ್ಣಪ್ಪ

ಮಾಲೀಕರು:— ಸುನಂದ ಅಗರಬತ್ತಿ ಫ್ಯಾಕ್ಟರಿ

ಸಯ್ಯಾಜಿರಾವ ರಸ್ತೆ-ಬಿ, ಮೈಸೂರು.

ಪತ್ರ ಕಂಡೊಡನೆ ನೀರೊ "ಪೆಟ್ರೊನಿಯಸ್, ಪ್ರಿಯ ಪೆಟ್ರೊನಿಯಸ್" ಎಂದು ಪ್ರಲಾಪಿಸಿದ. ಆದರೆ ಪತ್ರವನ್ನೋದಿದೊಡನೆ ಕ್ರೋಧ ಸಂತಪ್ತನಾಗಿ, "ಛಿ! ಆತ ವಿದ್ರೋಹಿ. ನನ್ನ ಶತ್ರು. ಅವನ ಮನೆಯನ್ನು ಸುಟ್ಟುಹಾಕಿ. ಅವನ ದನಕರುಗಳನ್ನು ಕೊಂದುಹಾಕಿ. ಅವನ ಸೇವಕರನ್ನು ಗಲ್ಲಿಗೇರಿಸಿ. ಅವನ ಹೆಸರೇ ಉಳಿಯದಂತೆ ಸರ್ವನಾಶ ಮಾಡಿ" ಎಂದು ಚೀರಿದ.

ನಸುಕಿನ ಮಂದ ಬೆಳಕಿನಲ್ಲಿ ಪೀಟರ್ ಮತ್ತು ನಜಾರಿಯಸ್ ಹಾದಿಯನ್ನು ಕ್ರಮಿಸುತ್ತಿದ್ದರು. ಉದಯಿಸುತ್ತಿದ್ದ ಸೂರ್ಯನ ಪ್ರಥಮ ಕಿರಣಗಳ ಸ್ಪರ್ಶವಾಗಲು ಪೀಟರ್ ನಿಂತ. ಪ್ರಸನ್ನತೆಯಿಂದ "ನಮ್ಮ ಕಡೆ ಬರುತ್ತಿರುವ ಆ ದಿವ್ಯ ಪ್ರಕಾಶವನ್ನು ನೋಡಿದೆಯಾ?" ಎಂದ.

"ಇಲ್ಲ. ಏನೂ ಕಾಣುವುದಿಲ್ಲವಲ್ಲ" ನಜಾರಿಯಸ್ ಹೇಳಿದ.

"ನೋಡು. ಆ ಪ್ರಕಾಶದ ಹಿಂದೆ ಯಾವುದೊ ಮೂರ್ತಿಯೂ ಇದೆ."

ನಜಾರಿಯಸನಿಗೆ ಏನೂ ಕಾಣಲಿಲ್ಲ. ಯಾರೋ ಗಿಡಗಳನ್ನು ಅಲ್ಲಾಡಿಸುತ್ತಿರುವಂತೆ ಅವನಿಗನಿಸಿತು. ಪ್ರಕಾಶ ಹೆಚ್ಚುತ್ತಲಿತ್ತು. ಆತ ಗಾಬರಿಯಿಂದ "ನಿಮಗೇನಾಗಿದೆ?" ಎಂದು ಪೀಟರನನ್ನು ಕೇಳಿದ.

ಪೀಟರನ ಕೈಯ ಕೋಲು ಕೆಳಗೆ ಬಿತ್ತು. ಆತ ದೂರ ದಿಟ್ಟಿಸಿ ನೋಡುತ್ತಿದ್ದ. ಮೊಳಕಾಲ ಮೇಲೆ ಕುಳಿತು ಆತ ಕೈ ಬೀಸಿ, "ದೇವಾ, ಯೇಸು" ಎಂದ.

ಪೀಟರ ಯಾವನದೊ ಪಾದಗಳನ್ನು ಚುಂಬಿಸುವವನಂತೆ ನೆಲನ ಮೇಲೆ ಮಲಗಿಕೊಂಡು "ಎಲ್ಲಿ ನಿನ್ನ ರಾಜಮಾರ್ಗ?" ಎಂದು ಬಡಬಡಿಸಿದ.

ನಜಾರಿಯಸನಿಗೆ ಏನೂ ಅರ್ಥವಾಗಲಿಲ್ಲ. ಅಷ್ಟರಲ್ಲಿ ಪೀಟರನ ಕಿವಿಯಲ್ಲಿ ಯಾರೋ "ನೀನು ಹೀಗೆ ರೋಮ್‌ನ್ನು ಬಿಟ್ಟು ಹೋದರೆ ನಾನು ಅಲ್ಲಿ ಎರಡನೆಯ ಸಲ ಶಿಲುಬೆಗೇರಬೇಕಾದೀತು" ಎಂದು ಹೇಳಿದಂತಾಯಿತು.

ಪೀಟರ್ ಒಮ್ಮೆ ಧೂಳಿನಲ್ಲಿ ಹೊರಳಾಡಿ ಶಾಂತನಾದ. ಪೀಟರ್ ಸತ್ತನೇ ಎಂಬ ಸಂದೇಹದಿಂದ ನಜಾರಿಯಸ್ ಅವನನ್ನು ಅಲುಗಾಡಿಸಿದ. ಪೀಟರ್ ಬಹು ಕಷ್ಟದಿಂದ ಏಳಲು "ನಾವೀಗ ಎಲ್ಲಿ ಹೋಗೋಣ?" ಎಂದು ನಜಾರಿಯಸ್ ಕೇಳಿದ.

"ರೋಮ್‌ಗೆ ಹೋಗಲು ಯೇಸು ನನಗೆ ಆಜ್ಞೆ ಮಾಡಿದ್ದಾನೆ."

ಪೀಟರನ ಶಾಂತಿಯಾತ್ರೆ ಆರಂಭವಾಯಿತು. ಅವನ ಅನುಯಾಯಿಗಳ ಸಂಖ್ಯೆ ಹೆಚ್ಚುತ್ತ ಹೋಯಿತು.

ಇತ್ತ ಸಾರ್ವಜನಿಕ ರೀತಿಯಲ್ಲಿ ಕ್ರಿಶ್ಚನ್ನರ ವಧೆಯ ಏರ್ಪಾಡನ್ನು ನೀರೊ ಮಾಡತೊಡಗಿದ್ದ. ವಧಸ್ಥಳದಲ್ಲಿ ಪ್ರೇಕ್ಷಕರ ಗದ್ದಲ ಬೆಳೆಯುತ್ತಲಿತ್ತು. ಹಸಿದ ಹುಲಿಗಳ ಗರ್ಜನೆಯಿಂದ ಪ್ರಸಂಗದ ಭೀಕರತೆಯ ಕಲ್ಪನೆ ಬರುತ್ತಲಿತ್ತು. ಸೂರ್ಯೋದಯವಾದೊಡನೆ ವಧಸ್ಥಳದಲ್ಲಿ ಸೆರೆಯಾಳು ಕ್ರಿಶ್ಚನ್ನರ ಪ್ರಾರ್ಥನೆ ದುಮುದುಮಿಸತೊಡಗಿತು.

ಪ್ರೇಕ್ಷಕರ ಕುತೂಹಲ, ಉತ್ಸಾಹಗಳು ಹೆಚ್ಚುತ್ತಲಿದ್ದವು. ಹುಲಿಗಳು ಹೆಚ್ಚು ಜನರನ್ನು ಕೊಲ್ಲುವವೋ, ಚಿರತೆಗಳೋ ಎಂದು ಅವರು ತಮ್ಮ ತಮ್ಮಲ್ಲಿ ಪಂಥ ಕಟ್ಟತೊಡಗಿದ್ದರು. ಸೈನಿಕರು ಬಂದರು. ಅವರ ಹಿಂದೆ ಗಾಡಿಗಳ ತುಂಬ ಶವಪೆಟ್ಟಿಗೆಗಳು ಬಂದವು. ಅವುಗಳನ್ನು ಕಂಡು ಎಷ್ಟು ಜನ ಕ್ರಿಶ್ಚನ್ನರ ವಧೆಯಾಗಲಿದೆ ಎಂದು ಅಂದಾಜು ಕಟ್ಟಬಹುದಿತ್ತು.

ವಧಸ್ಥಳದ ನಟ್ಟನಡುವೆ ನೀರೊನ ಆಸನವಿತ್ತು. ರತ್ನಖಚಿತ ಉಡುಪನ್ನು ತೊಟ್ಟು ಆತ ಠೀವಿಯಿಂದ ಕುಳಿತಿದ್ದ. ಮಗ್ಗಲಲ್ಲಿ ಪಿಪಯಿಯಾ ಮತ್ತು ದಾಸಿಯರು ಕುಳಿತಿದ್ದರು. ಅವರ ಹಿಂದೆ ಅಧಿಕಾರಿಗಳು, ಸರದಾರರು ಅಕ್ಕಪಕ್ಕದಲ್ಲಿ ನಗರದ ಸಾಹುಕಾರರು, ನಾಯಕರು, ಸೈನಿಕರು ಕುಳಿತಿದ್ದರು.

ಮೂರು ಸಲ ಗಂಟೆ ಬಾರಿಸಿತು. ಇದೇ ಮೃತ್ಯುವಿಗೆ ಸೂಚನೆಯಾಗಿತ್ತು. ನಾಲ್ಕು ದಿಕ್ಕುಗಳಲ್ಲಿ ಕಹಳೆ ಊದಿದವು. ಸೈನಿಕರು ಖಡ್ಗ ಹಿಡಿದುಕೊಂಡು ವಧ ಸ್ಥಳದಲ್ಲಿ ಸಿದ್ಧರಾಗಿ ನಿಂತರು. ಕೆಲ ಸಾಮಾನ್ಯ ಪ್ರಾಣಿಗಳನ್ನು ಬಿಡಲಾಯಿತು.

ಸೈನಿಕರು ಮನಬಂದಂತೆ ಖಡ್ಗ ಚಲಾಯಿಸಿದರು. ರಕ್ತದ ಕಾರಂಜಿ ಚಿಮ್ಮಿತು. ಪ್ರೇಕ್ಷಕರು ಆನಂದದಿಂದ ಕೇಕೆ ಹಾಕಿದರು.

ಒಂದು ಬಾಗಿಲು ತೆರೆಯಿತು. ಸೆರೆಯಾಳುಗಳು ಹೊರಗೆ ತರಲ್ಪಟ್ಟರು. ಜನ "ಕ್ರಿಶ್ಚನ್-ಕ್ರಿಶ್ಚನ್" ಎಂದು ಕೂಗಿದರು. ಕ್ರಿಶ್ಚನ್ ಸೆರೆಯಾಳುಗಳು ತಲೆ ತಗ್ಗಿಸಿ ಪ್ರಾರ್ಥನಾಗೀತಗಳನ್ನು ಅನ್ನ ತೊಡಗಿದರು. ಪ್ರೇಕ್ಷಕರು ಅವರ ಮೇಲೆ ಬಾಟ್ಲಿಗಳನ್ನೂ ಎಲುವುಗಳನ್ನೂ ಎಸೆದರು. ಕೋಲಾಹಲವೋ ಕೋಲಾಹಲವೆದ್ದಿತು.

ಮತ್ತೊಂದು ಬಾಗಿಲು ತೆರೆಯಲು ಹಸಿವಿನಿಂದ ಹುಚ್ಚೆದ್ದ ಅಸಂಖ್ಯ ನಾಯಿಗಳು ಹೊರಬಂದು ಅತ್ತಿತ್ತ ಓಡಿದವು. ಕ್ರಿಶ್ಚನ್ನರ ಗುಂಪಿನ ಮೇಲೆ ಆ ನಾಯಿಗಳು ಎರಗಿದವು. ಭೀಕರ ಚೀತ್ಕಾರ ಕೇಳಿಸಿತು. ಹೆಂಗಸರು— ಮಕ್ಕಳ ಆರ್ತನಾದ ಗಗನವನ್ನು ಭೇದಿಸಿತು. ನೀರೋ ಅಟ್ಟಹಾಸಗೈದ. ಜನ ಉತ್ಸಾಹಾತಿರೇಕದಿಂದ "ಹುಲಿ. ಹುಲಿ ಬರಲಿ, ಚಿರತೆ ಬರಲಿ" ಎಂದು ಕೂಗಿದರು.

ಮರುದಿನದ ಕಾರ್ಯಕ್ರಮಕ್ಕೆಂದು ಹುಲಿ ಚಿರತೆಗಳನ್ನು ಮೀಸಲಿಟ್ಟಿದ್ದರೂ ಜನದ ಆಗ್ರಹ—ಉತ್ಸಾಹ ಕಂಡು ಅವನ್ನೂ ಬಿಡಲಾಯಿತು. ಹುಲಿ, ಚಿರತೆ, ನಾಯಿಗಳು ಸೆರೆಯಾಳುಗಳ ಮೇಲೆ ಆಕ್ರಮಣ ಮಾಡಿದವು. ಹಸಿವಿನಿಂದ ಕಂಗಾಲಾದ ಅವಕ್ಕೆ ಸರಿಯಾಗಿ ಬೇಟೆ ಕೂಡ ಆಡಲಾಗುತ್ತಿರಲಿಲ್ಲ. ಎಷ್ಟೋ ಸಲ ಅವು ತಮ್ಮ ತಮ್ಮಲ್ಲೇ ಕಚ್ಚಾಡುತ್ತಿದ್ದವು. ಸೆರೆಯಾಳುಗಳ ಯಾತನೆಯನ್ನು ಕಂಡು, ಅವರ ಆರ್ತನಾದವನ್ನು ಕೇಳಿ ಜನತೆ ಪ್ರಸನ್ನವಾಗುತ್ತಲಿತ್ತು. ರಕ್ತದ ನದಿ ಹರಿದು ಬೇಟೆಯಾಡುತ್ತಿದ್ದ ಪ್ರಾಣಿಗಳೂ ತೊಯ್ದು ಹೋದುವು.

ಅಷ್ಟರಲ್ಲಿ ಇನ್ನೊಂದು ಬಾಗಿಲಿನಿಂದ ಇನ್ನಷ್ಟು ಕ್ರಿಶ್ಚನ್ನರನ್ನು ತರಲಾಯಿತು. ಅವರು ಪ್ರಾರ್ಥನಾಗೀತಗಳನ್ನು ಪಠಿಸುತ್ತಿದ್ದರು. ಎಲ್ಲ ಸರಿಯಾಗಿರುವಂತೆ ಸ್ಥಿರಚಿತ್ತರಾಗಿದ್ದರು. ಅವರು ಅವಿಚಲರಾಗಿರುವುದನ್ನು ಕಂಡು ಸಿಟಿಗೆದ್ದು ನೀರೋ "ಅವರು ಹಾಡುತ್ತ ಬರುತ್ತಲಿದ್ದಾರೆ. ಅವರೇಕೆ ಅಂಜಿ ನಡುಗುತ್ತಿಲ್ಲ?" ಎಂದು ಕೇಳಿದ.

ಅಷ್ಟರಲ್ಲಿ "ಮಾರ್ಕಸ್ ಮತ್ತು ಅವನ ಪ್ರೇಯಸಿ ಲೀಜಿಯಳನ್ನೂ ತರೋಣವೆ?" ಎಂದು ಟಿಜೆಲಿನಸ್ ಕೇಳಿದ.

"ಓಹೋ! ಹೌದು. ಅವರನ್ನು ತಂದು ಎಲ್ಲಕ್ಕೂ ಹೆಚ್ಚಾಗಿ ಹಸಿದ ಕ್ರೂರ ಹುಲಿಗಳ ಮುಂದೆ ನಿಲ್ಲಿಸಿ."

ಆಗ ಪಿಪಯಿಯಾ, "ಸ್ವಾಮಿ, ಮಾರ್ಕಸ್ ಮತ್ತು ಅವನ ಪ್ರೇಯಸಿಯನ್ನು ರಾತ್ರಿಯ ಬೇಟೆಗಾಗಿ ಕಾಯ್ದಿರಿಸಬೇಕೆಂದು ನನ್ನ ಇಚ್ಛೆ. ನಾನೊಂದು ತುಂಬ ರೋಮಾಂಚಕಾರಿಯಾದ ಯೋಜನೆ ಮಾಡಿದ್ದೇನೆ. ಹೊಸ ಬಗೆಯ ಆಟ

ಪ್ರಕಟಣೆ

ಸಾರ್ವಜನಿಕರ ಅಪೇಕ್ಷೆ ಮೇರೆಗೆ

ಪೈಸನ್ಸ್ ಕಾಫಿ ಹುಡಿಯು

ನೂರು ಗ್ರಾಮ್ ಪೆಕೆಟುಗಳಲ್ಲಿ ಮಾರಾಟಕ್ಕೆ ಸಿದ್ಧವಾಗಿದೆ.

ರಖಂ ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

PAISONS' COFFEE MFG Co. (Regd)
Post Box No. 13
CHIKMAGALUR (Mysore State)

ಅದು. ಅದರಿಂದ ತುಂಬ ಮನರಂಜನೆಯಾದೀತು" ಎಂದಳು.

"ಆಗಲಿ."

ಸೆರೆಮನೆಯ ಕೋಣೆಯಲ್ಲಿ ಇನ್ನೂ ಉಳಿದಿದ್ದ ಕ್ರಿಶ್ಚನ್ನರಿಗೆ ಪೀಟರ್ ತನ್ನ ಉಪದೇಶದಿಂದ ಧೈರ್ಯ ತುಂಬುತ್ತಲಿದ್ದ. "ದೇವಾ, ನಿನ್ನ ಇಚ್ಛೆಯಿದ್ದಂತಾಗಲಿ. ನನ್ನ ಈ ಜನ ಸತ್ಯಕ್ಕಾಗಿ ಪ್ರಾಣಾರ್ಪಣೆ ಮಾಡುತ್ತಲಿದ್ದಾರೆ. ದೇವಾ, ಇವರನ್ನು ನಿನ್ನ ಪಾದಕ್ಕೆ ಸೇರಿಸಿಕೊ. ನಾವು ಗಾಬರಿಯಾಗುವುದಿಲ್ಲ. ಏಕೆಂದರೆ ಯೇಸುವಿನ ಶಿಲುಬೆಯ ಸುವಿಚಾರ ನಮಗೆ ಗೊತ್ತಿದೆ. ಭೂಮಿ, ಸಮುದ್ರ,-ಪರ್ವತಗಳನ್ನೆಲ್ಲ ಮುಚ್ಚಿರುವ ಆಕಾಶದಂತೆ ದೇವರ ದಯೆ ವಿಶಾಲವಾಗಿದೆ. ರೋಮ್‌ನ ಇಂದಿನ ದೃಶ್ಯ ಅದರ ಇತಿಹಾಸದಲ್ಲಿ ಅಮರವಾಗಿರುವುದು. ಸತ್ಯದ ರಕ್ಷಣೆಗಾಗಿ ಏನೆಲ್ಲ ಆಗಿಲ್ಲ? ಎಲ್ಲರೂ ಹಾಡಿರಿ, ಪ್ರಾರ್ಥನೆ ಮಾಡಿರಿ. ದೇವರು ನಿಮ್ಮ ಸ್ವಾಗತಕ್ಕಾಗಿ ಕಾದಿದ್ದಾನೆ."

ಸಂಜೆಯಾಗುತ್ತಲೂ ಜನಸಮ್ಮರ್ದ ಕರಗಿತು. ಚಂದ್ರೋದಯವಾದ ಮೇಲೆ ಗುಲಾಮರು ವಧಸ್ಥಳವನ್ನು ಸಾರಿಸಿದರು. ಆಗಲೂ ರಕ್ತದ ಕಲೆಗಳು ಅಳಿಯದಿರಲು ಅಲ್ಲಲ್ಲ ಉಸುಕನ್ನು ಉದುರಿಸಿದರು.

ರಾತ್ರಿಯ ಶಾಂತತೆಯಲ್ಲಿ ಟಿಜೆಲಿನಸನ ಸಂಗಡ ನೀರೋ ಮತ್ತೆ ವಧಸ್ಥಾನಕ್ಕೆ ಬಂದ. ಹಾದಿಯಲ್ಲಿ ಕ್ರಿಶ್ಚನ್ ಸೆರೆಯಾಳುಗಳ ಕೋಣೆಗಳಿದ್ದವು. ಅವುಗಳ ಎದುರಿನಲ್ಲಿ ಬರುತ್ತಿದ್ದಾಗ ದೂರ ಅನಂತದತ್ತ ಆಶಾಭರಿತ ನೇತ್ರಗಳಿಂದ ನೋಡುತ್ತ ಮುಗುಳ್ನಗುತ್ತಿದ್ದ ಪೀಟರ್ ನೀರೊನಿಗೆ ಕಾಣಿಸಿದ. ಲೀಜಿಯಳ ಕೈಹಿಡಿದುಕೊಂಡು ಮಾರ್ಕಸ್ ಗೋಡೆಯ ಬಳಿ ಕುಳಿತಿದ್ದ. ಅವರನ್ನು ಕಂಡು ತಪ್ತನಾದ ನೀರೋ ಮೆಲ್ಲಗೆ "ಟಿಜೆಲಿನಸ್, ನೋಡು, ಆತ ಮುಗುಳ್ನಗುತ್ತಿದ್ದಾನೆ. ಮೃತ್ಯುವಿನ ಛಾಯೆಯಲ್ಲಿ ನಗುವುದು ಎಂಥ ಭಯಾನಕವಾದದ್ದು" ಎಂದ.

"ಹೌದು ಪ್ರಭು. ಆತನೇ ದುಷ್ಟನಾದ ಪೀಟರ್. ಜನ ಎಂದೆಂದಿಗೂ ನೆನಪಿನಲ್ಲಿಡುವಂಥ ಶಿಕ್ಷೆಯನ್ನು ಅವನಿಗೆ ಕೊಡಬೇಕು."

ಕೆಲ ಕೈದಿಗಳು ಬಿಕ್ಕುತ್ತಲಿದ್ದರು. ಅವರನ್ನುದ್ದೇಶಿಸಿ ಪೀಟರ್ ಹೇಳಿದ: "ಇದು ಆನಂದಪಡಬೇಕಾದ ಸಮಯ. ನಿಮ್ಮ ಅಶ್ರುಗಳನ್ನು ವ್ಯರ್ಥ ಹಾಳುಮಾಡದೆ ಆ ಪ್ರಭುವಿಗರ್ಪಿಸಿ."

ಒಬ್ಬಳು ತನ್ನ ಮಗನನ್ನು ಕೊಲೆಮಾಡಿದರೆಂದು ಅತ್ತಳು. ಇನ್ನೊಬ್ಬಳು ತನ್ನ ಮಗಳನ್ನು ಕೆಡಿಸಿದರೆಂದು ಶೋಕಿಸಿದಳು. ಆಗ ಪೀಟರ್, "ಹೀಗೆಲ್ಲ ಶೋಕಿಸುವುದು ಅರ್ಥವಿಲ್ಲದ ಮಾತು. ದೇವರು ಸ್ವತಃ ಶಿಲುಬೆಗೇರಿ ಮೃತ್ಯುವನ್ನು ಸ್ವೀಕರಿಸಿದ ನಿಮ್ಮ ಮಗ ಮತ್ತು ಮಗಳನ್ನೂ ನಿಮ್ಮನ್ನೂ ಆತ ಪವಿತ್ರನನ್ನಾಗಿ ಮಾಡುವ" ಎಂದ.

ಅಷ್ಟರಲ್ಲಿ ಲೀಜಿಯ ಮಾರ್ಕಸನಿಗೆ "ಮಾರ್ಕಸ್, ನಾನು ಪೀಟರನ ಸಮ್ಮುಖದಲ್ಲಿ ನಿನ್ನ ಹೆಂಡತಿಯಾಗಬಯಸುತ್ತೇನೆ. ಅದರಿಂದ ನಾವಿಬ್ಬರೂ ಮರಣ ಸಮಯದಲ್ಲಿ ಒತ್ತಟ್ಟಿಗಿದ್ದು ಶಾಂತಿ ಪಡೆಯಲು ಸಾಧ್ಯವಾಗುವುದು"ಎಂದಳು.

ಮಾರ್ಕಸ್ ಏನೂ ಹೇಳಲಿಲ್ಲ. ಲೀಜಿಯ ಅವನ ಕೈ ಹಿಡಿದುಕೊಂಡು ಪೀಟರನ ಎದುರು ಹೋಗಿ ನಿಂತು, "ಸಾಯುವ ಮೊದಲೇ ನಾನು ಮಾರ್ಕಸನನ್ನು ಲಗ್ನವಾಗಬಯಸುತ್ತೇನೆ" ಎಂದಳು.

"ಬಹು ಪವಿತ್ರವಾದ ವಿಚಾರ" ಎಂದು ಪೀಟರ್, ಮಾರ್ಕಸ್ ಮತ್ತು ಅವಳ ಕೈಗಳನ್ನು ಕೂಡಿಸಿ "ದೇವರು ನಿಮ್ಮ ವಿವಾಹದಿಂದ ಸಂತುಷ್ಟನಾಗಿದ್ದಾನೆ. ಇನ್ನುಳಿದಿರುವ ಜೀವನದ ಕ್ಷಣಗಳಲ್ಲಿ ಅವನ ಸ್ಮರಣೆ ಮಾಡುತ್ತ ದಾಂಪತ್ಯ ಜೀವನದ ಸುಖವನ್ನು ಅನುಭವಿಸಿ" ಎಂದ.

ಇತ್ತ ಈ ವಿವಾಹ ನೆರವೇರುತ್ತಿದ್ದಾಗ ಅತ್ತ ನಾಗಿಣಿಯಂತೆ ಫೂತ್ಕರಿಸುತ್ತ ಪಿಪಯಿಯಾ ಕ್ರೂರ ಮೃಗಗಳ ನಿರೀಕ್ಷಣೆ ನಡೆಸಿದ್ದಳು. ಅವಳು ಜರ್ಮನಿಯ ಒಂದು ಕಾಡು ಕೋಣದ ಪಂಜರದ ಎದುರು ನಿಂತು "ಸರಿ. ಇದೇ ಯೋಗ್ಯವಾದದ್ದು" ಎಂದಳು.

ರಾತ್ರಿಯ ನೀರವತೆಯಲ್ಲಿ ನಾಲ್ವರು ಸಿಪಾಯಿಗಳು ಪೀಟರನನ್ನು ಹೊರಗೆ ಎಳತಂದರು. ಹೊರಗೆ ರಾಜಾಜ್ಞೆಯನ್ನು ಹಿಡಿದುಕೊಂಡು



ಮನೆಯೇ ತಾಯಿಯ ಮಮತೆಯ ಜಗತ್ತು—ಉತ್ತಮ ವಸ್ತುಗಳೇ ಅಲ್ಲಿ ಬೇಕು.

ರಕ್ಷಿಸುವ ತಾಯಿ ಡಾಲ್ಡವನ್ನೇ ಬಳಸುತ್ತಾಳೆ

ತಾಯಿಯ ಪ್ರತಿಯೊಂದು ಕ್ರಿಯೆಯಲ್ಲಿಯೂ ಅವಳ ಅಪಾರ ಪ್ರೇಮವನ್ನು ಕಾಣಬಹುದು. ರಕ್ಷಿಸುವ ತಾಯಿ ತನ್ನವರ ಹಿತಕ್ಕಾಗಿ ಉತ್ಕೃಷ್ಟ ವಸ್ತುಗಳನ್ನೇ ಉಪಯೋಗಿಸುತ್ತಾಳೆ ಎಂಬುದಕ್ಕೆ ಅವಳು ಮಾಡುವ ಉತ್ತಮ ಅಡಿಗೆಯೇ ಸಾಕ್ಷಿ. ಆಕೆ 'ಡಾಲ್ಡ'ದಿಂದ ತಯಾರಿಸುವ ಹಬ್ಬದ ತಿಂಡಿಗಳಾಗಲೀ ನಿತ್ಯದ ತೋವೆ, ಹುಳಿಯನ್ನಗಳೇ ಆಗಲಿ, ಅತ್ಯಂತ ರುಚಿಕರವಾಗುತ್ತವೆ. ಡಾಲ್ಡ ವನಸ್ಪತಿ ಉತ್ತಮ ವನಸ್ಪತಿ ಎಣ್ಣೆಗಳಿಂದ ತಯಾರಿಸಲ್ಪಡುತ್ತದೆ. ಅದಕ್ಕೆ ಮಕ್ಕಳ ಬೆಳವಣಿಗೆಗೆ ಬೇಕಾಗುವ ವಿಟಮಿನ್‌ಗಳು ಸೇರಿಸಲ್ಪಡುತ್ತವೆ. ನಿಮ್ಮ ಮನೆಯಲ್ಲಿಯೂ 'ಡಾಲ್ಡ' ಅದರ ನ್ಯಾಯವಾದ ಸ್ಥಾನವನ್ನು ಪಡೆಯಲಿ!



ಡಾಲ್ಡ ವನಸ್ಪತಿ–ರುಚಿಕರ ಅಡಿಗೆಗೆ ಸೊಗಸಾದ ಸಾಧನ

DL. 71-X29 KN

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

ನಿಂತಿದ್ದ ಒಬ್ಬ ಅಧಿಕಾರಿ "ನೀನೇ ಏನು ಪೀಟರ್ ಎಂದರೆ?" ಎಂದು ಕೇಳಿದ

"ನನ್ನ ಹೆಸರು ಸೈಮನ್. ಪೀಟರ ಎಂದು ಜನ ಕರೆಯುತ್ತಾರೆ"

"ಹಾಗಾದರೆ ಕೇಳು ಈ ರಾಜಾಜ್ಞೆಯನ್ನು: ಪೀಟರನೆಂಬಾತ ಕಾಯದೆ ಮತ್ತು ನೀರೊನ ವಿರುದ್ಧ ಭಾಷಣವಿತ್ತಿದ್ದಾನೆ. ಆ ಅಪರಾಧಕ್ಕಾಗಿ ಆತನನ್ನು ಪರ್ವತದ ಮೇಲೊಯ್ದು ಶಿಲುಬೆಗೇರಿಸಬೇಕೆಂದು ವಿಧಿಸಲಾಗಿದೆ. ಮುಂದೆಂದೂ ಯಾವ ಕ್ರಿಶ್ಚನ್ನನೂ ಭಾಷಣ ಕೊಡದಿರಲಿ ಎಂದು ಈ ಆಜ್ಞೆ ಮಾಡಿದೆ."

ಬೆಳಗಾಗುತ್ತಲೆ ವೆಟಿಕನ್ ಪರ್ವತ ಮತ್ತು ಅದರತ್ತ ಹೋಗುವ ರಸ್ತೆಗಳೆಲ್ಲ ಪ್ರೇಕ್ಷಕರಿಂದ ತುಂಬಿಹೋದವು.

ಸೈನಿಕರ ನಡುವೆ ವಿನಮ್ರನಾಗಿ, ಶಾಂತನಾಗಿ, ಗಂಭೀರನಾಗಿ ತಾನೇ ಸಮ್ರಾಟನೊ ಎಂಬಂತೆ ಪೀಟರ್ ನಡೆದು ಹೋಗುತ್ತಲಿದ್ದ. ಜನರಲ್ಲಿ ಆಗಾಗ "ಪೀಟರ್ ತನ್ನ ದೇವರ ಭೆಟ್ಟಿಗಾಗಿ ಹೋಗುತ್ತಲಿದ್ದಾನೆ" ಎಂಬ ಕೂಗು ಏಳುತ್ತಿತ್ತು

ಎಲ್ಲಿಂದಲೋ ಕೆಲವು ಕ್ರಿಶ್ಚನ್ನರು ಪ್ರಾರ್ಥನೆ ಮಾಡುತ್ತಿರುವುದು ಕೇಳಿಸಲು ಪೀಟರ್ ಹೇಳಿದ: "ಜಗತ್ತಿನ ಮೇಲೆ ಪ್ರಭುತ್ವ ನಡೆಸುವ ನಗರದ ಮೇಲೆ ವಿಜಯ ಸಂಪಾದಿಸಲು ದೇವರು ನನಗೆ ಆಜ್ಞಾಪಿಸಿದ್ದ. ನಾನು ಅದನ್ನು ಪಾಲಿಸಿದೆ. ಈಗ ನಿಮ್ಮ ನಗರವನ್ನು ನಿಮಗೊಪ್ಪಿಸಿ ಹೋಗುತ್ತಿದ್ದೇನೆ." ಹಾದಿಯಲ್ಲಿದ್ದ ಬಂಡೆಗಳನ್ನುದ್ದೇಶಿಸಿ ಆತ "ನೀವೆಲ್ಲ ಯೇಸುವಿನ ಮಂದಿರಗಳಾಗುವಿರಿ" ಎಂದ. ಜನರಿಗೆ "ನಿಮ್ಮ ಮಕ್ಕಳು ಯೇಸುವಿನ ಭಕ್ತರಾಗುವರು" ಎಂದ.

ಅದನ್ನು ಕೇಳಿದ ಜನತೆ ಒಮ್ಮಿಂದೊಮ್ಮೆ ಸ್ತಬ್ಧವಾಯಿತು. ಯೇಸುವನ್ನು ಶಿಲುಬೆಗೇರಿಸಿದಾಗ ಭೂಮಿ ಇಬ್ಭಾಗವಾಗಿತ್ತು. ಶವಗಳು ಗೋರಿಯಿಂದ ಮೇಲಕ್ಕೆದ್ದಿದ್ದವು ಎಂದು ಅವರಿಗೆ ತಿಳಿದಿತ್ತು. ಇಂದು ಕೂಡ ಅಂಥ ಅದ್ಭುತವೇನಾದರೂ ಘಟಿಸುವುದೆ? ಈ ಕಲ್ಪನೆಯಿಂದ ಜನ ಗಾಬರಿಯಾಗಿ ಪೀಟರನ ಹಿಂದೆ ಮೆರವಣಿಗೆಯೋಪಾದಿಯಲ್ಲಿ ಹೊರಟರು.

ಪರ್ವತದ ಮೇಲೆ ಮೆರವಣಿಗೆ ನಿಂತಿತು. ಪೀಟರ್ ಜನರತ್ತ ತಿರುಗಿ "ನನ್ನ ಜೊತೆಯಲ್ಲಿ ಎಲ್ಲರೂ ಮುಕ್ತರಾಗುವರು" ಎಂದ.

ಸೈನಿಕರು ಪೀಟರನನ್ನು ಶಿಲುಬೆಯ ಬಳಿ ಒಯ್ದರು. ಪೀಟರ್ ತನ್ನ ಶರೀರವನ್ನು ಸೆಟೆಯಿಸಿದ. ಅವನ ಭವ್ಯಾಕೃತಿಯನ್ನು ಕಂಡು ಹಂತಕರ ಕೈ ಕೂಡ ನಿಃಸತ್ವವಾದವು. ಪೀಟರ್ ಕೊನೆಯ ಕ್ಷಣದಲ್ಲಿ ಏನನ್ನಾದರೂ ಹೇಳಿಯಾನೆಂದು ಜನ ಭಾವಿಸಿದರು. ಆದರೆ ಆತ ಮಾತಾಡಲಿಲ್ಲ.

ನೀರೋನ ಅತ್ಯಾಚಾರ ಇಲ್ಲಿಗೆ ನಿಲ್ಲಲಿಲ್ಲ.

ಮರುದಿನ ವಧಸ್ಥಳದಲ್ಲಿ ಮತ್ತೆ ಜನಸಂದಣಿ ಸೇರಿತು. ಕಾರಾಗೃಹದ ಎಲ್ಲ ಬಾಗಿಲುಗಳನ್ನೂ ತೆರೆದು ಕ್ರಿಶ್ಚನ್ ಸೆರೆಯಾಳುಗಳನ್ನೆಲ್ಲ ಹೊರದಬ್ಬಿದರು. ಚಿಂದಿ ಬಟ್ಟೆಗಳಲ್ಲಿದ್ದ ಅವರ ಮೇಲೆ ಸೈನಿಕರು ಲಾಠಿ ಪ್ರಹಾರ ಮಾಡಲು ಅವರ ಆರ್ತನಾದ ಕೇಳಿ ನೀರೋ ವಿಕಟಹಾಸಗೈದ. ಆ ಮೇಲೆ ಕಟ್ಟಿಗೆಯ ಶಿಲುಬೆಗಳನ್ನು ತರಿಸಿ ಅವುಗಳ ಮೇಲೆ ವೃದ್ಧ ಕ್ರಿಶ್ಚನ್ನರನ್ನು ಮಲಗಿಸಿ ಮೊಳೆ ಜಡಿದರು. ಈ ದೃಶ್ಯವನ್ನು ಕಂಡ ಜನರ ಉತ್ಸಾಹವೆಲ್ಲ ಉಡುಗಿಹೋದಂತಾಗಿ ಅವರು ಸ್ತಬ್ಧರಾದರು.

"ಎಲಾ! ಎಲ್ಲೊ ನೋಡಿದಂತಿದೆ. ಇದಾರ ದೇಹ?" ಎಂದು ನೀರೋ ಶಿಲುಬೆಯೊಂದಕ್ಕೆ ಬಡಿದಿದ್ದ ಒಂದು ದೇಹವನ್ನು ತೋರಿಸಿ ಕೇಳಿದ.

"ಈತ ಪ್ಲಾಟಿಯೆಸ್, ಪ್ರಭು."

"ವ್ಹಾ! ಈಗ ಈತ ಸೋಲನ್ನೊಪ್ಪಿಕೊಂಡಂತಾಯಿತು. ನಾನಿನ್ನು ಕವಿತೆ ಬರೆಯುತ್ತೇನೆ."

ಪ್ಲಾಟಿಯೆಸ್ ಇನ್ನೂ ಸತ್ತಿರಲಿಲ್ಲ. ನೀರೊನ ಧ್ವನಿ ಕೇಳಿ ಆತ ಕೂಗಿದ. "ರೋಮ್‌ನ ನಾಗರಿಕರೆ, ನಾನು ಪ್ಲಾಟಿಯೆಸ್. ನಿಮ್ಮ ಸೈನ್ಯದ ಮಾಜಿ ಸೇನಾಪತಿ. ಇಂದು ರೋಮ್ ಸಾಮ್ರಾಜ್ಯವು ರೋಮ್‌ನಗರವನ್ನು ಸುಡಿಸಿ ಕ್ರಿಶ್ಚನ್ನರ ಮೇಲೆ ಅಪವಾದ ಹೊರಿಸಿರುವ ಒಬ್ಬ ರಾಕ್ಷಸನ ಕೈಲಿದೆ. ಆತ ಅಪರಾಧಿ, ಕೊಲೆಪಾತಕಿ. ಆತ ತನ್ನ ತಾಯಿ ಮತ್ತು ಪತ್ನಿಯನ್ನು ಕೊಲ್ಲಿಸಿದ ಅಧಮ. ರೋಮ್‌ನ್ನು ಹಾಳುಮಾಡಿದ. ಇವನಿಂದ ಉಳಿದುಕೊಳ್ಳಿರಿ. ಈತ ಕೊಲೆಗಡಕ.

ಎಷ್ಟು ರುಚಿಕರ !



ಮನೆಗಳಿಗೆ
—ಹೋಟೆಲುಗಳಿಗೆ

ಬ್ರೂಕ್ ಬಾಂಡ್
ಸ್ಪೆಷಲ್ ಹೋಟೆಲ್ ಬ್ಲೆಂಡ್

ಡಸ್ಟ್ ಟೀ

★ ಸದಾ ಚಹ ತೋಟದಲ್ಲಿರುವಷ್ಟೇ ತಾಜಾವಾಗಿ ನೀವು ಪಡೆಯುವಿರಿ
★ ನಿಪುಣ ಮಿಶ್ರಣದ ನಿಮಿತ್ತ ನೀವು ಒಳ್ಳೆಯ ಸ್ವಾದವನ್ನು ಪಡೆಯುವಿರಿ
★ ಇದು ಮಿಲಿಯಗಟ್ಟಲೆ ಜನರ ಆಯ್ಕೆ

3 ಗಾತ್ರಗಳಲ್ಲಿ ದೊರೆಯುತ್ತದೆ
500 ಗ್ರ್ಯಾಮ್, 100 ಗ್ರ್ಯಾಮ್,
50 ಗ್ರಾಮ್

JWT BB 387

ನನ್ನ ಮಾತನ್ನು ನಂಬಿ." ಈ ಮಾತುಗಳನ್ನಾಡುತ್ತಿದ್ದಂತೆ ಅವನ ಪ್ರಾಣಪಕ್ಷಿ ಹಾರಿಹೋಯಿತು.

ನೀರೋನ ಮುಖ ವಿಕೃತವಾಯಿತು. ಜನರಲ್ಲಿ ಗುಸು ಗುಸು ಎದ್ದಿತು. "ಪ್ಲಾಟಿಯುಸ್ ಹೇಳಿದ್ದು ನಿಜ" ಒಬ್ಬನೆಂದ. "ಹೌದು. ನೀರೋ ಕೊಲೆಪಾತಕಿ" ಇನ್ನೊಬ್ಬ ನುಡಿದ. "ಇವನಿಂದ ಹೇಗೆ ಪಾರಾಗಬೇಕು?" ಮೂರನೆಯವ ಕೇಳಿದ.

ಆಗ ಯಾವನೊ ಕೂಗಿದ "ಈ ಸಮಯದಲ್ಲಿ ಜನರಲ್ ಗಾಲ್ಬಾನೊಬ್ಬನೇ ಸಹಾಯ ಮಾಡಬಲ್ಲ."

ಇಷ್ಟರಲ್ಲಿ ಒಂದು ಕೋಣೆಯಲ್ಲಿದ್ದ ಮಾರ್ಕಸ್, ಯುರೂಸಸ್ ಮತ್ತು ಲೀಜಿಯುರನ್ನು ಬಿಟ್ಟು ಉಳಿದೆಲ್ಲ ಕ್ರಿಶ್ಚನ್ ಸೆರೆಯಾಳುಗಳನ್ನು ವಧಸ್ಥಳಕ್ಕೆ ತಂದು ಕೂಡಿಸಿದ್ದರು.

ಸೇನಾನಾಯಕನೊಬ್ಬ ನಾಲ್ವರು ಸೈನಿಕರೊಂದಿಗೆ ಆ ಕೋಣೆಗೆ ಬಂದ ಆತ ಯುರೂಸಸ್‌ನನ್ನು ಸೈನಿಕರ ವಶಕ್ಕೊಪ್ಪಿಸಿ ಮಾರ್ಕಸನಿಗೆ ತನ್ನ ಸಂಗಡ ಬರಲು ಆಜ್ಞಾಪಿಸಿದ. ಲೀಜಿಯ "ಮಾರ್ಕಸ್, ಇವರು ನಮ್ಮಿಬ್ಬರನ್ನು ಅಗಲಿಸುತ್ತಿದ್ದಾರೆಯೆ?" ಎಂದು ಕೇಳಿದಳು.

ಮಾರ್ಕಸನನ್ನು ಸೈನಿಕರು ಎಳೆದುಕೊಂಡು ಹೋದರು. ಆ ಮೇಲೆ ಮೂವರು ಭೀಮಕಾಯ ದಾಸಿಯರು ಬಂದು ಲೀಜಿಯಳ ಉಡುಪನ್ನು ಕಳಚಿ ಒಂದು ಅತ್ಯಂತ ತಿಳುಬಟ್ಟೆಯನ್ನುಡಿಸಿದರು. ಅದನ್ನುಟ್ಟೂ ಅವಳು ನಗ್ನಳಂತಿದ್ದಳು. ಆಮೇಲೆ ಅವಳ ಕೂದಲು ಬಾಚಿ ಹೂಮಾಲೆಗಳನ್ನು ಹಾಕಿದರು.

ಕತ್ತಲಾಯಿತು. ವಧಸ್ಥಳದಲ್ಲಿ ಪಿಲಾಲುಗಳನ್ನು ಹಚ್ಚಿದರು. ಮಾರ್ಕಸನ ಎರಡೂ ಕೈಗಳನ್ನು ಚರ್ಮದ ಪಟ್ಟಿಗಳಿಂದ ಬಿಗಿದು ನೀರೋ ಮತ್ತು ಪಿಪಯಿಯಾಳ ನಡುವೆ ನಿಲ್ಲಿಸಿದರು. ಪಿಪಯಿಯಾ ತಿರಸ್ಕಾರದಿಂದ "ಸ್ವಾಮಿ, ಇವನೇ ಇಂದಿನ ಅತಿಥಿ" ಎಂದಳು.

"ಈತನನ್ನು ವಧಸ್ಥಳದಲ್ಲಲ್ಲದೆ ಇಲ್ಲೇಕೆ ನಿಲ್ಲಿಸಿದ್ದಾರೆ?" ನೀರೋ ಕೇಳಿದ.

"ಅಲ್ಲಿಗೇ ಒಯ್ಯುತ್ತಾರೆ, ಸ್ವಾಮಿ" ಎಂದಳು ಪಿಪಯಿಯಾ.

ಆನೆಯನ್ನು ಕಟ್ಟುವಂತೆ ಕಟ್ಟಿದ ಯುರೂಸಸ್‌ನನ್ನು ವಧಸ್ಥಳಕ್ಕೆ ತಂದುದನ್ನು ನೀರೋ ನೋಡಿದ. ಅಂಥ ಬಲವಾದ ಮೈಕಟ್ಟನ್ನು ರೋಮ್ ನಿವಾಸಿಗಳು ಅದುವರೆಗೂ ಕಂಡಿರಲಿಲ್ಲ.

ಅಷ್ಟರಲ್ಲಿ ಕಹಳೆ ಊದಿತು. ಬಾಗಿಲೊಂದು ತೆರೆಯಿತು. ಮೃತ್ಯುವಿನೋಪಾದಿಯಲ್ಲಿ ಕಾಡುಕೋಣವೊಂದು ಹೊರಬಂತು. ಅದರ ಭಯಾನಕ ಕೋಡುಗಳಿಗೆ ಲೀಜಿಯಳ ಅರ್ಧನಗ್ನ ಶರೀರ ಅಂಟಿಕೊಂಡಿತ್ತು. ಕೋಣ ಹುಚ್ಚೆದ್ದು ಅತ್ತಿತ್ತ ಓಡತೊಡಗಿತು.

"ಲಿಜೀಯ, ಲೀಜಿಯಾ, ಯೇಸು ರಕ್ಷಿಸಲಿ"

ಹಣದ ಜೋಪಾಸನೆಗೆ . .

ಅಂಗಿಯ ಕಿಸೆಗಿಂತ ಮನೆ ಮೇಲು;
ಬೇಂಕುಗಳು ಮನೆಗಿಂತ ಎಷ್ಟೋ ಮೇಲು.

ಕೊರ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಡುಪಿ :: ಆಡಳಿತ ಆಫೀಸು: ಮಂಗಳೂರು - 1

ಎಂದು ಮಾರ್ಕಸ್ ಕೂಗಿದ.

ಒಂದೇ ಒಂದು ಸಲ ಮೈ ಝಾಡಿಸಿ ಯುರೂಸಸ್ ತನ್ನ ಬಂಧನವನ್ನು ಹರಿದೊಗೆದು ಜಿಗಿದು ಕೋಣನ ಕೋಡುಗಳನ್ನು ಹಿಡಿದುಕೊಂಡ. ಇಂಥ ಮಲ್ಲಯುದ್ಧವನ್ನು ರೋಮ್‌ನ ಜನ ಹಿಂದೆಂದೂ ಕಂಡಿರಲಿಲ್ಲ. ಯುರೂಸಸ್ ಕೋಣವನ್ನು ಮೆತ್ತಗೆ ಮಾಡಿದ. ರಕ್ತದಂತೆ ಕೆಂಪಾಗಿದ್ದ ಅವನ ಭುಜದ ಸ್ನಾಯುಗಳು ಇನ್ನೇನು ಬಿರಿಯಲಿವೆಯೆಂಬಂತೆ ಕಾಣಿಸುತ್ತಿದ್ದವು ಜನರಿಗೆ ಹರ್ಕ್ಯುಲಸನ ನೆನಪಾಯಿತು. ಕೋಣನ ಕಾಲುಗಳು ಉಸುಬಿನಲ್ಲಿ ಹೂತಿದ್ದವು. ಅದೊಂದು ದೊಡ್ಡ ಚಂಡಿನಂತೆ ಮಗ್ಗಲಾಗಿ ಉರುಳಿತು. ಯುರೂಸಸ್ ಅದರ ಕುತಿಗೆಯನ್ನು ಹೊರಳಿಸಿದ. ಅದರ ನಾಲಿಗೆ ಹೊರಗೆ ಬಂದಿತ್ತು. ಬಾಯಿಂದ ನೊರೆ ಬರುತ್ತಿತ್ತು. ಯುರೂಸಸ್ ನಿರಾಯಾಸದಿಂದ ಲೀಜಿಯಳನ್ನು ಬಿಡಿಸಿದ.

ಯುರೂಸಸನ ಅಮಿತ ಬಲವನ್ನು ಕಂಡು ಜನ ಹರ್ಷದಿಂದ ಅವನ ಜಯಜಯಕಾರ ಮಾಡತೊಡಗಿದರು. ಲೀಜಿಯಳ ಅರ್ಧನಗ್ನ ದೇಹವನ್ನು ಕಂಡಾಗ ಅವರ ಉತ್ಸಾಹವೆಲ್ಲ ಕರಗಿಹೋಯಿತು. ನೀರೋ ನಿರುತ್ಸಾಹಿತನಾದ. ಕೋಣನಿಂದ ಲೀಜಿಯಳ ಕೋಮಲ ಶರೀರವನ್ನು ಛಿನ್ನವಿಚ್ಛಿನ್ನ ಗೊಳಿಸುವ ಆಟವನ್ನು ಅವನಿಗೆ ತೋರಿಸಲು ಪಿಪಯಿಯಾ ಅಸಫಲಳಾದಳು.

ಸೆರೆಯಾಳುಗಳ ಬಗ್ಗೆ ಜನರ ಸಹಾನುಭೂತಿಯನ್ನು ಕಂಡು ನೀರೋ ಗಾಬರಿಯಾದ. ಯಾವ ದಿಕ್ಕಿನಲ್ಲಿಯೂ ಅವನಿಗೆ ಸಹಾನುಭೂತಿ ಕಾಣಲಿಲ್ಲ. ಅವನ ಜನ್ಮಜಾತ ಹೇಡಿತನ ಅವನ ಮುಖವನ್ನು ತುಂಬಿಕೊಂಡಿತು.

ಅಷ್ಟರಲ್ಲಿ ಅದು ಹೇಗೊ ಮಾರ್ಕಸ್ ಕೂಡ ತನ್ನ ಬಂಧನ ಹರಿದುಕೊಂಡು ಯುರೂಸಸ್ ಮತ್ತು ಲೀಜಿಯಳನ್ನು ಕೂಡಿಕೊಂಡ. ತನ್ನ ಮೈಮೇಲಿನ ಗಾಯಗಳನ್ನು ಜನ ಕಾಣಲೆಂದು ಆತ ತನ್ನ ಬಟ್ಟೆಗಳನ್ನು ಕಳಚಿದ. ನೀರೋನತ್ತ ಸಂಜ್ಞೆಮಾಡಿ ಆತ ಹೇಳತೊಡಗಿದ. " ನೀರೋ ಕೊಲೆಪಾತಕಿ. ಈತನೇ ರೋಮ್‌ವನ್ನು ಸುಡಿಸಿದ. ನಿರ್ದೋಷಿಗಳ ಕೊಲೆ ಮಾಡಿಸಿದ. ಈಗ ಇವನ ಆಳಿಕೆ ಮುಗಿಯಿತು. ಜನರಲ್ ಗಾಲ್ಬಾ ತನ್ನ ಸೈನ್ಯದೊಂದಿಗೆ ಬರುತ್ತಲಿದ್ದಾನೆ. ಆತನೇ ರೋಮ್‌ದ ನೂತನ ಸಾಮ್ರಾಟ. ಇನ್ನು ನಮ್ಮದೇ ಪ್ರಭುತ್ವವಾಗುವದು. "


ಜನ "ಸಮ್ರಾಟ್ ಗಾಲ್ಬಾನಿಗೆ ಜಯವಾಗಲಿ. ನೀರೋನ ನಾಶವಾಗಲಿ" ಎಂದು ಕೂಗಿತು. ಮಾರ್ಕಸ್‌ನ ಭಕ್ತ ಸೈನಿಕರು ನೀರೋನತ್ತ ಧಾವಿಸಿದರು. ನೀರೋನ ಅಂಗರಕ್ಷಕರು ಪಲಾಯನ ಹೇಳಿದರು.

ಅಂಜಿದ ನೀರೋ ಪಿಪಯಿಯಾಳನ್ನು ಬಿಟ್ಟು-ಕೊಟ್ಟು ಓಡಿದ. ಟಿಜೆಲಿನಸನೂ ಓಡಿದ. ಆದರೆ ಯಾವನೊ ಸೈನಿಕನ ಖಡ್ಗಕ್ಕೆ ಆಹುತಿಯಾದ.

ಅಡಗುತ್ತ ಓಡುತ್ತ ನೀರೋ ತನ್ನ ಅರಮನೆ

THE
SADVAIDYASALA
(PRIVATE) LTD
NANJANGUD

Mysore Mallik
KERCHIEF PERFUME


ಮಾಲತಿಗೆ ತಿಳಿದಿರಲಿಲ್ಲ....
ಅಮ್ಮಾ, ರಾಜುವಿನ ತಾಯಿ ಅದ್ಭುತ ವಾದ ದೋಸೆಗಳನ್ನು ನಮಗೆ ಕೊಟ್ಟಳು. ನೀನು ಅಂಥಹ ದೋಸೆಗಳನ್ನು ಏಕೆ ಮಾಡಬಾರದು.
ನಮ್ಮ ಹುಡುಗರು ನಾನು ಮಾಡುವ ಅಡಿಗೆಯನ್ನು ಸಹಿಸುವುದಿಲ್ಲ. ಅಡಿಗೆ ವಿಷಯದಲ್ಲಿ ನಾನು ಸೋತಂತೆ ಸರಿ.
ಅಡಿಗೆಯ ವಿಧಾನದಲ್ಲಿ ಲೋಪ ವಿರಲಾರದು, ಆದರೆ ಅದು ನೀವು ಉಪಯೋಗಿಸುವ ಎಣ್ಣೆಯಲ್ಲಿ ದೋಷವಿರಬೇಕು. ಮುಂದಿನ ಸಲ ತುಷಾರ್ ವನಸ್ಪತಿಯನ್ನು ಅಡಿಗೆಯಲ್ಲಿ ಉಪಯೋಗಿಸು.
ಮಾಲತಿ ತನ್ನ ಸ್ನೇಹಿತಳ ಸಲಹೆ ತೆಗೆದುಕೊಳ್ಳುತ್ತಾಳೆ
ಈಗ ತಿಳಿಯಿತು ಮಾಲತಿಗೆ ರುಚಿಕರವಾದ ಅಡಿಗೆಯ ಗುಟ್ಟು. ಅದೇ ಆರೋಗ್ಯಕರವಾದ ಮತ್ತು ರುಚಿಕರವಾದ ತುಷಾರ್ ವನಸ್ಪತಿ.
ನಾನು ತಿಂದಿರುವ ದೋಸೆಗಳಲ್ಲಿ ಇವು ತುಂಬಾ ರುಚಿಕರವಾಗಿವೆ. ಅಮ್ಮಾ, ನೀನು ಅಡಿಗೆ ವಿಷಯದಲ್ಲಿ ಶ್ರೇಷ್ಠಳೆ ಸರಿ.
ತುಷಾರ್
ವಿಟಮಿನ್‌ಗಳನ್ನೊಳಗೊಂಡ ವನಸ್ಪತಿ
(ವಿಟಮಿನ್ A ಮತ್ತು D ಒಳಗೊಂಡಿದೆ)
ಮತ್ತು
ಶುದ್ಧೀಕರಿಸಿದ ತುಷಾರ್ ಎಣ್ಣೆ
ತುಂಗಭದ್ರಾ ಇಂಡಸ್ಟ್ರೀಸ್ ಲಿಮಿಟೆಡ್, ಕರ್ನೂಲ್.

ASP/TI/5

ಯನ್ನು ಮುಟ್ಟಿದ. ಅಲ್ಲಿ ಆತ ಸಲಹೆ ಕೇಳಲೆಂದು ಪೆಟ್ರೊನಿಯಸನನ್ನು ಕರೆಯತೊಡಗಿದ. ಆತ ಆತ್ಮಹತ್ಯೆ ಮಾಡಿಕೊಂಡಿದ್ದುದು ಅವನಿಗೆ ಮರೆತೇಹೋಗಿತ್ತು.

ಅರಮನೆಯ ಹೊರಗಡೆಯಲ್ಲಿ ಜನ ಮತ್ತು ಸೈನಿಕರು "ರಾಕ್ಷಸ ನೀರೋ ಸಾಯಲಿ, ನೀರೋನ ಸರ್ವನಾಶವಾಗಲಿ" ಎಂದು ಕೂಗುತ್ತಿದ್ದರು.

ನೀರೊ ಒಂದು ಕೋಣೆಯಲ್ಲಿ ಅಡಗಿಕೊಂಡ ಅಕಸ್ಮಾತ್ತಾಗಿ ಪಿಪಯಿಯಾ ಅವನ ಕಣ್ಣಿಗೆ ಬಿದ್ದಳು. ನೀರೋ ಓಡಿ ಅವಳ ಕುತ್ತಿಗೆ ಹಿಡಿದು "ನನ್ನ ದುರ್ಬುದ್ಧಿಗೆ ನೀನೇ ಕಾರಣ. ನೀನೇ ನನ್ನಿಂದ ಕೊಲೆಮಾಡಿಸಿದೆ. ರೋಮ್‌ನ್ನು ಸುಡಿಸಿದೆ" ಎಂದು ಕೂಗಿದ. ಪಿಪಯಿಯಾಳ ಕುತ್ತಿಗೆ ಹಿಚುಕಿದ್ದರಿಂದ ಅವಳ ಶ್ವಾಸ ಕಟ್ಟಿ ಅವಳು ಕೆಳಗುರುಳಿದಳು.

ಅಷ್ಟರಲ್ಲಿ ಏಕ್ಟೆ ಅಲ್ಲಿಗೆ ಬಂದಳು. ''ನಾನು ನಿನ್ನನ್ನು ಅರಮನೆಯಿಂದ ಹೊರಗೆ ಹಾಕಿದ್ದೆ. ನೀನು ಹೇಗೆ ಇಲ್ಲಿಗೆ ಬಂದೆ?" ಎಂದು ನೀರೋ ಕೂಗಿದ.

ಅವಳು ಮೆಲ್ಲಗೆ "ನಿನಗೆ ನನ್ನ ಅಗತ್ಯವಿರುವಾಗ ನಾನು ಬರುವೆನೆಂದು ಹೇಳಿದ್ದೆನಲ್ಲವೆ?" ಎಂದಳು.

"ನಾನು ನಿನ್ನ ಮುಖವನ್ನು ಕೂಡ ನೋಡುವುದಿಲ್ಲ" ಎಂದು ನೀರೋ ಮತ್ತೊಂದು ಕೋಣೆಗೆ ಓಡಿದ.

ಅಷ್ಟರಲ್ಲಿ ಬಂಡುಗಾರರು ಬಾಗಿಲ ವರೆಗೆ ಬಂದಿದ್ದರು. ನೀರೋ ಅವರಿಂದ ಉಳಿದುಕೊಳ್ಳುವ ಆಶೆಯುಳಿಯಲಿಲ್ಲ. ಏಕ್ಟೆ ಆತನಿಗೆ "ನೀನು ತಾಯಿ ಮತ್ತು ಹೆಂಡತಿಯ ಕೊಲೆ ಮಾಡಿರುವಿ. ಜನ ನಿನ್ನನ್ನು ಕೊಲ್ಲುವರು" ಎಂದಳು.

ನೀರೋ ಹಣೆ ಜಜ್ಜಿಕೊಂಡ. ಏಕ್ಟೆ ಖಡ್ಗವನ್ನು ನೀರೊಗೆ ಕೊಟ್ಟು "ನೀನು ರಾಕ್ಷಸನಾಗಿಯೇ ಬಾಳಿದೆ. ಈಗ ಆತ್ಮಹತ್ಯೆ ಮಾಡಿಕೊ" ಎಂದಳು.

ನೀರೊ ಮಾತಾಡಲಿಲ್ಲ. ಏಕ್ಟೆ ಕೂಗಿದಳು, "ತಡಮಾಡಬೇಡ. ಇಲ್ಲವಾದರೆ ಅವರ ಕೈಗೆ ಸಿಗುವಿ."

"ಜಗತ್ತಿನ ಸಮ್ರಾಟ್ ನೀರೋನ ಅಂತ್ಯ ಈ ರೀತಿಯಲ್ಲಾಗುವುದೆ? ಮಹಾಶಾಸಕನೊಬ್ಬ, ಕಲಾಕಾರನೊಬ್ಬ ಈ ರೀತಿ ಸಾಯುವುದೆ?"

ಆತನಿಂದ ಆತ್ಮಹತ್ಯೆ ಮಾಡಿಕೊಳ್ಳುವುದಾಗಲಿಲ್ಲ. ಏಕ್ಟೆ ಅವನ ಕೈಯಿಂದ ಖಡ್ಗ ಕಸಿದುಕೊಂಡು ವಿಷಯುಕ್ತವಾಗಿದ್ದ ಅದನ್ನು ಅವನ ಎದೆಯಲ್ಲಿ ಇರಿದಳು. ನೀರೊ ಕೆಳಗೆ ಬಿದ್ದ. ಏಕ್ಟೆ ಅವನ ತಲೆಯನ್ನು ಚುಂಬಿಸಿದಳು.

ಸಮ್ರಾಟ್, ರಾಕ್ಷಸ, ಕಲಾಕಾರ ನೀರೋನ ಅಂತ್ಯವಾಯಿತು.

ಮರುದಿನ ಮುಂಜಾನೆ ಇಡೀ ರೋಮ್ ಜಯಜಯಕಾರ ಮಾಡುತ್ತಲಿತ್ತು.

"ಸಮ್ರಾಟ್ ಗಾಲ್ಬಾ ಚಿರಾಯುವಾಗಲಿ."

"ರೋಮ್ ಚಿರಾಯುವಾಗಲಿ."

ಫೇಬಿಯಸನೊಂದಿಗೆ ರಥವನ್ನೇರಿ ಮಾರ್ಕಸ್ ಗಾಲ್ಬಾನ ಸ್ವಾಗತಕ್ಕಾಗಿ ತೆರಳಿದ.

ಒಂದು ತಾಸಿನ ನಂತರ ಗಾಲ್ಬಾ ಮತ್ತು ಮಾರ್ಕಸನ ಎದುರು ಧರ್ಮದೂತ ಪೀಟರ್ ಬಂದುನಿಂತ. ಅವನ ಜೊತೆಯಲ್ಲಿ ಲೀಜಿಯ, ಯುರೂಸಸ್ ಮತ್ತು ನಜಾರಿಯಸ್ ಇದ್ದರು. ಮಾರ್ಕಸ್ ಲೀಜಿಯಳನ್ನು ಅಪ್ಪಿಕೊಂಡ.

ನೀರೋನ ಸಮಾಪ್ತಿಯಾಯಿತು. ಅಂತಕನ ರಾಜ್ಯ ಮುಗಿಯಿತು. *

ನಿನ್ನ ನೆರಳನ್ನು ನೋಡು ಮತ್ತು ಅರ್ಥ ಮಾಡಿಕೋ: ನೀನೆಷ್ಟು ಚಿಕ್ಕವನಾಗಬಲ್ಲೆ ಮತ್ತು ಎಷ್ಟು ದೊಡ್ಡವನೂ ಆಗಬಲ್ಲೆ ಎಂದು ಅದು ತನ್ನ ಮೂಕ ಭಾಷೆಯಲ್ಲಿ ನಿನಗೆ ಹೇಳುತ್ತಿರುತ್ತದೆ.

—ಸ್ಫೂರ್ತಿ: ಶಕುಂತ ಠಾಕುರ

Statement about ownership and other particulars about newspaper **Kasturi,** *a Kannada Monthly Digest to be published in the first issue every year after the last day of February,*

FORM IV

(*See Rule 8*)

1.	Place of Publication	..	HUBLI
2.	Periodicity of its publication		Monthly (1st of every month)
3.	Printer's Name	..	H. R. Purohit, M. A.
	Nationality	..	Indian
	Address :	..	Post Box No. 30, Hubli
4.	Publisher's Name	..	H. R. Purohit M.A.
	Nationality	..	Indian
	Address :	..	Post Box No. 30, Hubli
5.	Editor's Name	..	R. R. Diwakar, M. A., LL. B.
	Nationality	..	Indian
	Address :	..	Post Box No. 30, Hubli
6.	Names and addresses of individuals who own the newspaper and partners or share-holders holding more than one per cent of the total capital.	..	Loka Shikshana Trust, Hubli Sole Trustees— R. R. Diwakar, M. A., LL.B.

I, H. R. Purohit, hereby declare that the particulars given above are true to the best of my knowledge and belief.

H. R. Purohit

Signature of Publisher

Dated 1–3–1962.

ರುಚಿಗೆ! ಗುಣಕ್ಕೆ!! ತೃಪ್ತಿಗೆ!!!

ಪ್ರತಿದಿನ ಒಂದಕ್ಕೆ

ಎರಡು ಕೋಟಿಗೂ

ಮೇಲ್ಪಟ್ಟು ಬೀಡಿಗಳ ತಯಾರಿಕೆಯಿಂದ ದಕ್ಷಿಣ ಭಾರತದಲ್ಲಿ

ಮೊದಲನೆಸ್ಥಾನವನ್ನು ಗಳಿಸಿರುವ ಭಾರತದ ಬೃಹತ್ ಉದ್ಯಮದ ಉತ್ಪನ್ನಗಳು



ಪ್ರಧಾನ ಕಚೇರಿ:

ಮಂಗಳೂರು ಗಣೇಶ ಬೀಡಿ ವರ್ಕ್ಸ್

ಸಂತೆಪೇಟೆ, ಮೈಸೂರು

TELEGRAM "AROMA" TELEPHONE 421

This Magazine owned by the Loka Shikshana Trust, Hubli is printed and published by Shri H. R. Purohit at the Samyukta Karnatak Press, Koppikar Road, Hubli.

ಹಿಮಾಲಯ ದರ್ಶನ

ಲೇ: ಭಾರತ ಸಂಚಾರಿ ಬೆಲೆ: ೩-೫೦

ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ ಹಾಗೂ ೨. ರೆಸಿಡೆನ್ಸಿರೋಡ ಬೆಂಗಳೂರು-೧



Regd. No. B

KASTU

A KANNAD
MONTHLY DI

Circulates throu
the Mysore S
and outside whe
Kannada is spe

Commands
the highest nu
of readers

Caters to all t

75nP.

A Loka Shiksh
Trust Publica